
ಶನಿವಾರ, ಸೆಪ್ಟೆಂಬರ್ 9, 2023 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶೃಂಗಸಭೆ
ಜಿ 20 ಶೃಂಗಸಭೆಯ ಅಂಗವಾಗಿ ನವದೆಹಲಿಯ ಅಂತರರಾಷ್ಟ್ರೀಯ ಮಾಧ್ಯಮ ಕೇಂದ್ರದ ಮುಂಭಾಗದಲ್ಲಿ ಸ್ಥಾಪಿಸಿರುವ ಕಲಾಕೃತಿ





ಜಗತ್ತಿನ ನೆಮ್ಮದಿ, ಸಾಮರಸ್ಯ ಮತ್ತು ಭರವಸೆಯ ಮೇಲೆ ಗಮನ

G20
भारत 2023 INDIA

वसुधैव कुटुम्बकम्
ONE EARTH • ONE FAMILY • ONE FUTURE

ಭಾರತದ ಜಿ-20 ಅಧ್ಯಕ್ಷತೆಯಡಿ, **60 ಸ್ಥಳಗಳಲ್ಲಿ 200 ಕ್ಕೂ ಹೆಚ್ಚು ಸಭೆಗಳನ್ನು ನಡೆಸಲಾಗಿದೆ,** ಅಭಿವೃದ್ಧಿಯನ್ನು ಜಾಗತಿಕ ಕಾರ್ಯಸೂಚಿಯಲ್ಲಿ ಮುಂಚೂಣಿಗೆ ತರಲಾಗಿದೆ.

ಈಗ, **20 ಸದಸ್ಯ ರಾಷ್ಟ್ರಗಳು, 9 ಅತಿಥಿ ರಾಷ್ಟ್ರಗಳು ಮತ್ತು 14 ಅಂತಾರಾಷ್ಟ್ರೀಯ ಸಂಸ್ಥೆಗಳ** ನಾಯಕರು ಮತ್ತು ನಿಯೋಗಗಳ ಮುಖ್ಯಸ್ಥರು ಜಗತ್ತಿನ ಉಜ್ವಲ ಭವಿಷ್ಯಕ್ಕಾಗಿ ಕೆಲಸ ಮಾಡಲು ನವದೆಹಲಿಯ ಜಿ-20 ಶೃಂಗಸಭೆಯಲ್ಲಿ ಒಟ್ಟುಗೂಡಿದ್ದಾರೆ.

- **ಒಂದು ಭೂಮಿಯಾಗಿ ಹಸಿರು ಉಪಕ್ರಮಗಳ ಉತ್ತೇಜನೆ**
- **ಒಂದು ಕುಟುಂಬವಾಗಿ ಎಲ್ಲರನ್ನು ಒಳಗೊಂಡ ಪ್ರಗತಿಗೆ ಪ್ರೋತ್ಸಾಹ**
- **ಒಂದು ಭವಿಷ್ಯಕ್ಕಾಗಿ ತಂತ್ರಜ್ಞಾನದ ಸಮನ್ವಯತೆ**

CBC 14126/13/0005/2324



"ಮಾನವ ಕೇಂದ್ರಿತ ಜಾಗತೀಕರಣದ ಹೊಸ ಮಾದರಿಯನ್ನು ರೂಪಿಸಲು ನಾವು ಒಟ್ಟಾಗಿ ಕೆಲಸ ಮಾಡೋಣ."

ಶ್ರೀ ನರೇಂದ್ರ ಮೋದಿ, ಭಾರತದ ಪ್ರಧಾನ ಮಂತ್ರಿ

ಸುಪ್ರೀಂ ಕೋರ್ಟ್ ತೀರ್ಪಿನ ಬಳಿಕ ಮುಂದಿನ ನಡೆಯ ರೂಪುರೇಷೆ ಸಿದ್ಧಪಡಿಸಲು ನಿರ್ಧಾರ: ಸುನಂದಾ ಜಯರಾಂ

ನೀರು ಬಂದ್: ಕಾವೇರಿ ಹೋರಾಟ ಅಂತ್ಯ

ಪ್ರಜಾವಾಣಿ ವಾರ್ತೆ

ಮಂಡ್ಯ: ಕೆಆರ್‌ಎಸ್ ಜಲಾಶಯದಿಂದ ತಮಿಳುನಾಡಿಗೆ ಹರಿಸಲಾಗುತ್ತಿದ್ದ ನೀರು ಸ್ಥಗಿತಗೊಳಿಸಿರುವ ಹಿನ್ನೆಲೆಯಲ್ಲಿ ಜಿಲ್ಲೆಯ ವಿವಿಧೆಡೆ ನಡೆಯುತ್ತಿದ್ದ ಕಾವೇರಿ ಹೋರಾಟ ಶುಕ್ರವಾರ ಅಂತ್ಯಗೊಂಡಿತು.

ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಆದೇಶದಂತೆ ತಮಿಳುನಾಡಿಗೆ ನಿತ್ಯ ಸರಾಸರಿ 6–7 ಸಾವಿರ ಕ್ಯೂಸೆಕ್ ನೀರು ಹರಿಸಲಾಗುತ್ತಿತ್ತು. ಅದನ್ನು ಖಂಡಿಸಿ ಜಿಲ್ಲೆಯ ವಿವಿಧೆಡೆ ಸಂಘಟನೆಗಳ ನೂರಾರು ಮಂದಿ ಅನಿರ್ದಿಷ್ಟಾವಧಿ ಧರಣಿ ನಡೆಸುತ್ತಿದ್ದರು. ಸೆ.12ರ ನಂತರ ತಮಿಳುನಾಡಿಗೆ ನೀರು ಹರಿಸಲು ಸಾಧ್ಯವಿಲ್ಲ ಎಂದು ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಪ್ರಮಾಣ ಪತ್ರ ಸಲ್ಲಿಸಿತ್ತು. ಈ ಎಲ್ಲಾ ಕಾರಣಗಳಿಂದಾಗಿ ಶುಕ್ರವಾರ ಬೆಳಿಗ್ಗೆ ನಿಲ್ಲಿಸಲಾಗಿದೆ.

‘ನೀರು ಸ್ಥಗಿತಗೊಳಿಸಿರುವುದರಿಂದ ತಾತ್ಕಾಲಿಕವಾಗಿ ಹೋರಾಟ ಕೈಬಿಡಲಾಗಿದೆ. ಸೆ.21ರಂದು ಸುಪ್ರೀಂ ಕೋರ್ಟ್ ತೀರ್ಪು ಬಂದ ನಂತರ ಹೋರಾಟದ ರೂಪುರೇಷೆ ರೂಪಿಸಲಾಗುವುದು’ ಎಂದು ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ಸಂಘಟನಾ ಕಾರ್ಯದರ್ಶಿ ಸುನಂದಾ ಜಯರಾಂ ತಿಳಿಸಿದರು.

ನಾಲೆಗಳಿಗೆ ನೀರು: ತಮಿಳುನಾಡಿಗೆ ಹರಿಯುತ್ತಿದ್ದ ನೀರು ನಿಲ್ಲಿಸಿರುವ ಕಾವೇರಿ ನೀರಾವರಿ ನಿಗಮವು ಕೆಆರ್‌ಎಸ್ ವ್ಯಾಪ್ತಿಯ ನಾಲೆಗಳಿಗೆ ಕಟ್ಟು ಪದ್ಧತಿಯಡಿ ನೀರು ಹರಿಸಿದೆ.

‘ಸದ್ಯ ನಾಲೆಗಳಿಗೆ 1,700 ಕ್ಯುಸೆಕ್ ನೀರನ್ನು ಹರಿಸಲಾಗುತ್ತಿದೆ. ಶುಕ್ರವಾರ ರಾತ್ರಿಯ ವೇಳೆಗೆ 3,500 ಕ್ಯೂಸೆಕ್‌ವರೆಗೆ ಹೆಚ್ಚಿಸಲಾಗುತ್ತದೆ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸದ್ಯ ಜಲಾಶಯದ ನೀರಿನ ಮಟ್ಟ 98.06 ಅಡಿ ಇದೆ, 3,178 ಕ್ಯೂಸೆಕ್ ಒಳಹರಿವು, 3,056 ಕ್ಯೂಸೆಕ್ ಹೊರಹರಿವು ಇದೆ.

‘ಜುಲೈ 7ರಿಂದ ಸೆ.6ರವರೆಗೂ ತಮಿಳುನಾಡಿಗೆ 35.53 ಟಿಎಂಸಿ ಅಡಿ ನೀರು ಹರಿದಿದೆ. ಒಂದು ವಾರದಿಂದ ಬೆಂಗಳೂರಿನ ಸುತ್ತಮುತ್ತ ಸುರಿದ ಮಳೆ ನೀರೂ ಹರಿದು ಹೋಗುತ್ತಿದೆ. ಈ ಹಿನ್ನೆಲೆಯಲ್ಲಿ ಕೆಆರ್‌ಎಸ್ ಜಲಾಶಯದಿಂದ ತಮಿಳುನಾಡಿಗೆ ನೀರು ನಿಲ್ಲಿಸಲಾಗಿದೆ. ಜಲಾಶಯದಲ್ಲಿರುವ ನೀರಿನ ಸಂಗ್ರಹದಲ್ಲಿ 2 ಕಟ್ಟು ನೀರು ನಾಲೆಗಳಿಗೆ ಹರಿಸಲು ಸಾಧ್ಯವಿದೆ. ನಂತರ ಕುಡಿಯುವುದಕ್ಕೆ ಮಾತ್ರ ಮೀಸಲಿರಿಸಲಾಗುವುದು’ ಎಂದು ಮೂಲಗಳು ತಿಳಿಸಿವೆ.

ಉಸ್ತುವಾರಿ ಸಚಿವ ಭೇಟಿ: ಸರ್ ಎಂ.ವಿ ಪ್ರತಿಮೆ ಎದುರು ನಡೆಯುತ್ತಿದ್ದ ಕಾವೇರಿ ಹೋರಾಟ ಸ್ಥಳಕ್ಕೆ ಭೇಡಿದ ಕೃಷಿ ಸಚಿವ ಎನ್.ಚಲುವರಾಯಸ್ವಾಮಿ, ‘ರೈತರ ಹಿತ ಕಾಯುವುದು ಸರ್ಕಾರದ ಜವಾಬ್ದಾರಿಯಾಗಿದ್ದು, ಸುಪ್ರೀಂ ಕೋರ್ಟ್ ಮುಂದೆ ಸಮರ್ಥವಾಗಿ ವಾದ ಮಂಡಿಸಲು ಕ್ರಮ ವಹಿಸಲಾಗುವುದು’ ಎಂದರು.

12ರ ನಂತರ ಕಾವೇರಿ ಯಾತ್ರೆ: ಬಸವರಾಜ ಬೊಮ್ಮಾಯಿ


ಶಾಸಕ ಬಸವರಾಜ ಬೊಮ್ಮಾಯಿ ನೇತೃತ್ವದಲ್ಲಿ ಬಿಜೆಪಿ ಮುಖಂಡರ ತಂಡ ಕೆಆರ್‌ಎಸ್ ಜಲಾಶಯ ವೀಕ್ಷಣೆಗೆ ತೆರಳಿತು

ಶ್ರೀರಂಗಪಟ್ಟಣ (ಮಂಡ್ಯ ಜಿಲ್ಲೆ): ‘ಕುಡಿಯುವ ನೀರಿಗೂ ತೊಂದರೆ ಇರುವಾಗ ತಮಿಳುನಾಡಿಗೆ ನೀರು ಹರಿಸಿ ಜನರಿಗೆ ದ್ರೋಹ ಬಗೆದಿರುವ ಕಾಂಗ್ರೆಸ್ ಸರ್ಕಾರದ ವಿರುದ್ಧ ಬಿಜೆಪಿಯಿಂದ ಇದೇ 12ರ ನಂತರ ಕಾವೇರಿ ಕೊಳ್ಳದಲ್ಲಿ ಕಾವೇರಿ ಯಾತ್ರೆ ನಡೆಸಲಾಗುವುದು’ ಎಂದು ಶಾಸಕ ಬಸವರಾಜ ಬೊಮ್ಮಾಯಿ ಅವರು ತಿಳಿಸಿದರು.

ಬಿಜೆಪಿ ನಿಯೋಗದೊಂದಿಗೆ ಶುಕ್ರವಾರ ಕೆಆರ್‌ಎಸ್ ಜಲಾಶಯ ವೀಕ್ಷಿಸಿದ ಅವರು, ‘ನ್ಯಾಯಾಲಯ ಆದೇಶಿಸದಿದ್ದರೂ ತಮಿಳುನಾಡಿಗೆ ನೀರು ಹರಿಸಿ ರಾಜ್ಯದಲ್ಲಿ ಕೃತಕ ಬರ ಸೃಷ್ಟಿಸಲಾಗಿದೆ. ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರಕ್ಕೆ ವಾಸ್ತವ ಸಂಗತಿಯನ್ನು ಮನವರಿಕೆ ಮಾಡಿಕೊಡುವಲ್ಲಿ ಸರ್ಕಾರ ವಿಫಲವಾಗಿದೆ. ಪರಿಸ್ಥಿತಿ ನಿಭಾಯಿಸಲು ವಿಫಲರಾಗಿರುವ ಸಚಿವ ಡಿ.ಕೆ. ಶಿವಕುಮಾರ್ ರೈತರ ಬಗ್ಗೆ ಲಘುವಾಗಿ ಮಾತನಾಡುತ್ತಿದ್ದಾರೆ’ ಎಂದು ಟೀಕಿಸಿದರು.

‘12ರ ನಂತರ ತಮಿಳುನಾಡಿಗೆ ನೀರು ಹರಿಸಲು ಸಾಧ್ಯವಿಲ್ಲ ಎಂದು ಪ್ರಮಾಣ ಪತ್ರ ಸಲ್ಲಿಸಿರುವ ಸರ್ಕಾರ ಆ ನಿಲುವಿಗೇ ಬದ್ಧವಾಗದಿದ್ದರೆ ಬಿಜೆಪಿ ಹೋರಾಟ ನಡೆಸಲಿದೆ. ಈ ವಿಚಾರವಾಗಿ ಸಂಸತ್ತಿನಲ್ಲಿ ಧ್ವನಿ ಎತ್ತುವಂತೆ ಸಂಸದರಿಗೂ ಸೂಚಿಸಲಾಗಿದೆ. ಸಂಕಷ್ಟ ಸೂತ್ರ ರಚನೆ, ಮೇಕೆದಾಟು ಯೋಜನೆ ಜಾರಿಗೂ ಹೋರಾಟ ನಡೆಯಲಿದೆ’ ಎಂದರು.

‘ಕಾವೇರಿ ಕೊಳ್ಳದ ಜಲಾಶಯಗಳ ನಿರ್ವಹಣೆಯಲ್ಲಿ ಸರ್ಕಾರ ಜವಾಬ್ದಾರಿ ಮರೆತಿದೆ. ಜೂನ್ ತಿಂಗಳಲ್ಲೇ ಮಳೆ ಕೊರತೆಯ ಮಾಹಿತಿ ಇದ್ದರೂ ಕೆರೆ, ಕಟ್ಟೆ ತುಂಬಿಸಿಲ್ಲ. ತಮಿಳುನಾಡಿಗೆ ಅಗತ್ಯಕ್ಕಿಂತ ಹೆಚ್ಚು ನೀರು ಹರಿಸಲಾಗಿದೆ. ಸುಪ್ರೀಂ ಕೋರ್ಟ್ ಆದೇಶದ ಬಳಿಕ ನೀರು ಬಿಟ್ಟಿದ್ದರೆ ಹೆಚ್ಚಿನ ನೀರು ಉಳಿಸಬಹುದಿತ್ತು. ವಾಸ್ತವಾಂಶ ಮರೆಮಾಚಿ ನೀರು ಹರಿಸಲಾಗಿದೆ’ ಎಂದರು.

‘ತಮಿಳುನಾಡಿನಲ್ಲಿ ವಾಸ್ತವವಾಗಿ 1.8 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಬೆಳೆಯಬೇಕು, ಆದರೆ ಅನಧಿಕೃತವಾಗಿ 4 ಲಕ್ಷ ಹೆಕ್ಟೇರ್‌ನಲ್ಲಿ ಬೆಳೆ ಬೆಳೆಯಲಾಗಿದೆ. ಈ ವಾಸ್ತವಾಂಶವನ್ನು ಪ್ರಾಧಿಕಾರಕ್ಕೆ ಮನವರಿಕೆ ಮಾಡುವಲ್ಲಿ ಕಾಂಗ್ರೆಸ್ ಸರ್ಕಾರ ಸೋತಿದೆ. ಕೆಆರ್‌ಎಸ್ ಜಲಾಶಯದಲ್ಲಿ ನೀರು ತಗ್ಗಿರುವುದನ್ನು ನೋಡಿದರೆ ಹೊಟ್ಟೆ ಉರಿಯುತ್ತಿದೆ’ ಎಂದರು.

ನಿಯೋಗದಲ್ಲಿ ಗೋವಿಂದ ಕಾರಜೋಳ, ಸಂಸದರಾದ ಸುಮಲತಾ ಅಂಬರೀಶ್, ಪ್ರತಾಪ್‌ಸಿಂಹ, ಶಾಸಕ ಶ್ರೀವತ್ಸ ಇದ್ದರು.

ಸುದ್ದಿ 2 ನಿಮಿಷ

ಸನಾತನ: ಖರ್ಗೆ, ಸೋನಿಯಾ ನಿಲುವು ಸ್ಪಷ್ಟಪಡಿಸಲಿ– ಕಟೀಲ್

ಮಂಗಳೂರು: ಸನಾತನ ಧರ್ಮವನ್ನು ಮಾರಕ ರೋಗಗಳಿಗೆ ಹೋಲಿಸಿ, ಅದನ್ನು ನಾಶ ಮಾಡಬೇಕು ಎಂದು ಹೇಳಿದ ತಮಿಳುನಾಡು ಕ್ರೀಡಾ ಸಚಿವ ಉದಯನಿಧಿ ಸ್ಟಾಲಿನ್ ವಿರುದ್ಧ ವಾಗ್ದಾಳಿ ನಡೆಸಿದ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ಸನಾತನ ಧರ್ಮದ ಬಗ್ಗೆ ‘ಇಂಡಿಯಾ’ ನಾಯಕರು ನಿಲುವು ಸ್ಪಷ್ಟಪಡಿಸಬೇಕು ಎಂದು ಆಗ್ರಹಿಸಿದರು.

ಶುಕ್ರವಾರ ಇಲ್ಲಿ ಮಾಧ್ಯಮದವರ ಜೊತೆ ಮಾತನಾಡಿದ ಅವರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ನಾಯಕರಾದ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ‘ಸನಾತನ’ದ ಕುರಿತ ಅಭಿಪ್ರಾಯ ಏನೆಂದು ದೇಶದ ಜನರ ಮುಂದೆ ಹೇಳಬೇಕು ಎಂದರು.

‘ಸನಾತನ ಧರ್ಮ ಮತ್ತು ಭಾರತದ ಸಂಸ್ಕೃತಿಯ ಅವಹೇಳನ ಮಾಡಿದ ಸಚಿವರಾದ ಜಿ.ಪರಮೇಶ್ವರ ಮತ್ತು ಪ್ರಿಯಾಂಕ್ ಖರ್ಗೆ ವಿರುದ್ಧ ಕೆಪಿಸಿಸಿ ಅಧ್ಯಕ್ಷ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಏನು ಕ್ರಮ ಕೈಗೊಳ್ಳಲಿದ್ದಾರೆ ಎಂಬುದನ್ನು ಸ್ಪಷ್ಟಪಡಿಸಬೇಕು’ ಎಂದು ಕೂಡ ನಳಿನ್ ಆಗ್ರಹಿಸಿದರು.

ತಮಿಳುನಾಡಿಗೆ ರಾಜ್ಯ ಸರ್ಕಾರ ನೀರು ಬಿಡುತ್ತಿದ್ದು ಬಸವರಾಜ ಬೊಮ್ಮಾಯಿ ನೇತೃತ್ವದಲ್ಲಿ ಬಿಜೆಪಿ ಮುಖಂಡರು ಶುಕ್ರವಾರ ಕೆಆರ್‌ಎಸ್‌ಗೆ ಭೇಟಿ ನೀಡಿದ್ದಾರೆ. ಅವರು ಒದಗಿಸುವ ಮಾಹಿತಿ ಆಧರಿಸಿ ಹೋರಾಟದ ರೂಪುರೇಷೆ ಸಿದ್ಧಗೊಳ್ಳಲಿದೆ. ಅಗತ್ಯವಿದ್ದರೆ ಪಾದಯಾತ್ರೆಯನ್ನು ಕೈಗೊಳ್ಳಲಾಗುವುದು ಎಂದು ನಳಿನ್ ಕುಮಾರ್ ತಿಳಿಸಿದರು.



‘ಲೋಕಸಭೆ ಚುನಾವಣೆಯಲ್ಲಿ ರಾಜ್ಯದ 28 ಕ್ಷೇತ್ರಗಳನ್ನು ಗೆಲ್ಲುವುದಕ್ಕೆ ರಣತಂತ್ರ ರೂಪಿಸುತ್ತಿದ್ದೇವೆ. ಸದ್ಯ ಪಕ್ಷದಿಂದ ಯಾರೂ ಬಿಟ್ಟುಹೋಗುತ್ತಿಲ್ಲ. ಜೆಡಿಎಸ್ ಜೊತೆ ಚರ್ಚೆಗಳು ಆರಂಭವಾಗಿದ್ದು ಮುಂದಿನ ದಿನಗಳಲ್ಲಿ ಸ್ಪಷ್ಟ ಚಿತ್ರಣ ಸಿಗಲಿದೆ’ ಎಂದು ಅವರು ಹೇಳಿದರು.

ಸ್ಪಷ್ಟತೆ ನೀಡುವ ಗಂಡಸುತನ ಸಿದ್ದರಾಮಯ್ಯಗಿಲ್ಲ: ಸಂಗಣ್ಣ

ಕೊಪ್ಪಳ: ‘ಸನಾತನ ಧರ್ಮದ ಕುರಿತು ತಮ್ಮ ನಿಲುವು ಏನು ಎಂದು ಸ್ಪಷ್ಟಪಡಿಸುವ ಗಂಡಸುತನ ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಇದೆಯೇ’ ಎಂದು ಸಂಸದ ಸಂಗಣ್ಣ ಕರಡಿ ಪ್ರಶ್ನಿಸಿದರು.

ನಗರದಲ್ಲಿ ಶುಕ್ರವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಸನಾತನ ಧರ್ಮದ ವಿಚಾರವಾಗಿ ಮುಖ್ಯಮಂತ್ರಿ ಪ್ರತಿಕ್ರಿಯೆ ನೀಡಿಲ್ಲ. ಆದರೆ, ಪ್ರಧಾನಿ ನರೇಂದ್ರ ಮೋದಿ ಅವರ ಹೇಳಿಕೆಯನ್ನು ಖಂಡಿಸಿ ಇನ್ನೊಬ್ಬರ ಹೆಗಲ ಮೇಲೆ ಬಂದೂಕು ಇಟ್ಟು ಹೊಡೆಯುವ ರೀತಿಯಲ್ಲಿ ಮಾತನಾಡಿದ್ದಾರೆ. ಸಿದ್ದರಾಮಯ್ಯ ಮೊದಲು ತಮ್ಮ ನಿಲುವು ಸ್ಪಷ್ಟಪಡಿಸಿ ಬಳಿಕ ಇನ್ನೊಬ್ಬರ ಹೇಳಿಕೆಗೆ ಪ್ರತಿಕ್ರಿಯೆ ನೀಡಬೇಕು’ ಎಂದರು.

‘ಅಸ್ತಿತ್ವಕ್ಕಾಗಿ ಬಿಜೆಪಿ ಜೊತೆ ಮೈತ್ರಿ ಅನಿವಾರ್ಯ’

ಪ್ರಜಾವಾಣಿ ವಾರ್ತೆ


ಜಿ.ಟಿ. ದೇವೇಗೌಡ

ಮೈಸೂರು: ‘ನಮ್ಮ ಅಸ್ತಿತ್ವ ಉಳಿಸಿಕೊಳ್ಳಲು ಬಿಜೆಪಿ ಜೊತೆ ಮೈತ್ರಿ ಅನಿವಾರ್ಯ’ ಎಂದು ಶಾಸಕ, ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷ ಜಿ.ಟಿ. ದೇವೇಗೌಡ ಪ್ರತಿಪಾದಿಸಿದರು.

ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ಮುಂದಿನ ದಿನಗಳಲ್ಲಿ ಏನಾದರೂ ಮಾಡಿಕೊಳ್ಳಿ, ಲೋಕಸಭೆ ಚುನಾವಣೆಯಲ್ಲಿ ಮಾತ್ರ ಹೊಂದಾಣಿಕೆ ಮಾಡಿಕೊಳ್ಳಲೇಬೇಕು ಎಂದು ವರಿಷ್ಠ ಎಚ್.ಡಿ. ದೇವೇಗೌಡರನ್ನು ಕೋರಿದ್ದೇನೆ’ ಎಂದರು.

‘ಸೆ.10ರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆಯಲಿರುವ ಪಕ್ಷದ ಸಮಾವೇಶದ ಬಗ್ಗೆ ಚರ್ಚಿಸಲು ಈಚೆಗೆ ನಡೆಸಿದ ಸಭೆಯಲ್ಲಿ, ಕಾಂಗ್ರೆಸ್‌ನ ದಬ್ಬಾಳಿಕೆಯ ಬಗ್ಗೆ ಪಕ್ಷದ ಶಾಸಕರು ಅಳಲು ತೋಡಿಕೊಂಡರು. ಪಿರಿಯಾಪಟ್ಟಣದಲ್ಲಿ ಕಾರ್ಯಕರ್ತರನ್ನು ಜೈಲಿಗೆ ಕಳುಹಿಸಲು ಎಫ್‌ಐಆರ್ ದಾಖಲಿಸಲಾಗುತ್ತಿದೆ. ಅಧಿಕಾರಿಗಳ ವರ್ಗಾವಣೆ ದಂಧೆ ನಡೆಯುತ್ತಿದೆ. ಕಾರ್ಯಕರ್ತರಿಗೆ ರಕ್ಷಣೆ ಸಿಗುತ್ತಿಲ್ಲ. ಗ್ಯಾರಂಟಿಗಳ ಕಾರಣದಿಂದಾಗಿ ಅಭಿವೃದ್ಧಿ ಕುಂಠಿತವಾಗುತ್ತಿದೆ. ಗುತ್ತಿಗೆದಾರರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಈ ಎಲ್ಲ ಕಾರಣಗಳಿಂದ ಒಂದುಗೂಡಿ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅನ್ನು ಸೋಲಿಸಬೇಕು. ಅದಕ್ಕಾಗಿ ಬಿಜೆಪಿ ಜೊತೆ ಮೈತ್ರಿ ಅಗತ್ಯ ಎಂಬ ಅಭಿಪ್ರಾಯ ವ್ಯಕ್ತವಾಯಿತು’ ಎಂದರು.

‘ಕಾಂಗ್ರೆಸ್ ಹೊಡೆತ ತಡೆಯಲಾಗುತ್ತಿಲ್ಲ. ಆ ಪಕ್ಷದೊಂದಿಗೆ ಹೋಗಲು ಇಷ್ಟವಿಲ್ಲ. ಎಚ್.ಡಿ.ಕುಮಾರಸ್ವಾಮಿ ಅವರನ್ನು ಮತ್ಸರದಿಂದ ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಿದರು ಎಂಬ ಅಭಿಪ್ರಾಯವೂ ಬಂದಿತ್ತು. ಅದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿದ್ದ ಎಚ್.ಡಿ. ದೇವೇಗೌಡರು ನಮಗೆ ಧೈರ್ಯ ತುಂಬಿದ್ದರು’ ಎಂದು ತಿಳಿಸಿದರು.

‘ಬೆಂಗಳೂರಿನ ಸಮಾವೇಶದ ಮೂಲಕ ಪಕ್ಷದ ಶಕ್ತಿ ಪ್ರದರ್ಶನ ನಡೆಯಲಿದೆ. ಕುಮಾರಸ್ವಾಮಿ ಅವರಿಗೆ ಬಿಜೆಪಿ ಬಗ್ಗೆ ಯಾವುದೇ ವಿರೋಧವಿಲ್ಲ. ನಾನು, ಕಾರ್ಯಕರ್ತರು ಹಾಗೂ ಮುಖಂಡರ ಅಭಿಪ್ರಾಯದ ಪರ ಇರುವೆ. ಹಿಂದೆ ಬಿಜೆಪಿಗೆ ಹೋಗಿದ್ದಕ್ಕೆ ಜನ ನನ್ನನ್ನು ಸೋಲಿಸಿದ್ದರು. ಈಗ ಪರಿಸ್ಥಿತಿ ಬದಲಾಗಿದೆ. ಮೈತ್ರಿಯನ್ನು ಯಾರೂ ವಿರೋಧಿಸುತ್ತಿಲ್ಲ. ಬದಲಿಗೆ ಕಾಂಗ್ರೆಸ್ ವಿರುದ್ಧ ಇದ್ದಾರೆ’ ಎಂದರು.

ಒಂದಾದರೆ ಇಬ್ಬರಿಗೂ ಅನುಕೂಲ: ಯೋಗೇಶ್ವರ್

ರಾಮನಗರ: ‘ಅಸ್ತಿತ್ವಕ್ಕಾಗಿ ನಾನು ಮತ್ತು ಎಚ್.ಡಿ. ಕುಮಾರಸ್ವಾಮಿ ನಾಯಿ–ನರಿಗಳಂತೆ ಕಿತ್ತಾಡಿಕೊಂಡಿದ್ದೇವೆ. ಅದರಿಂದಾಗಿ ಡಿ.ಕೆ ಸಹೋದರರಂತಹ ದುಷ್ಟರ ಕೈಗೆ ಸಿಲುಕಿದ್ದೆವು. ಕಿತ್ತಾಟ ನಿಲ್ಲಿಸಿ ಇಬ್ಬರೂ ಒಂದಾಗಲು ಈಗ ಕಾಲ ಕೂಡಿ ಬಂದಿದೆ’ ಎಂದು ವಿಧಾನ ಪರಿಷತ್ ಸದಸ್ಯ ಸಿ.ಪಿ. ಯೋಗೇಶ್ವರ್ ಹೇಳಿದ್ದಾರೆ.

ಬಿಜೆಪಿ ಮತ್ತು ಜೆಡಿಎಸ್ 25 ವರ್ಷಗಳಿಂದ ಪರಸ್ಪರ ಹೋರಾಟ ಮಾಡಿಕೊಂಡು ಬಂದಿದ್ದರೂ ಏನೂ ಪ್ರಯೋಜನವಾಗಿಲ್ಲ. ಇದರ ಲಾಭ ಪಡೆದು ಕಾಂಗ್ರೆಸ್ ಅಧಿಕಾರಕ್ಕೇರಿದೆ. ಕಾಂಗ್ರೆಸ್ ವಿರುದ್ಧ ಹುಟ್ಟಿರುವ ಎರಡೂ ಪಕ್ಷಗಳು ಅಣ್ಣ–ತಮ್ಮಂದಿರಂತೆ ಒಂದಾದರೆ ಇಬ್ಬರಿಗೂ ಅನುಕೂಲ ಎಂದು ಅಭಿಪ್ರಾಯಪಟ್ಟರು.

ಲೋಕಸಭೆ ಚುನಾವಣೆಯಲ್ಲಿ ಬಿಜೆಪಿ–ಜೆಡಿಎಸ್ ಮೈತ್ರಿ ಕುರಿತು ಶುಕ್ರವಾರ ಮಾಧ್ಯಮದವರಿಗೆ ಪ್ರತಿಕ್ರಿಯಿಸಿದ ಅವರು, ವಿಧಾನಸಭೆಯ ಚುನಾವಣೆ ಫಲಿತಾಂಶ ಲೋಕಸಭೆ ಚುನಾವಣೆಯಲ್ಲೂ ಪುನರಾವರ್ತನೆ ಆಗಬಾರದೆಂದರೆ ಮೈತ್ರಿ ಅಗತ್ಯ. ಕಾಂಗ್ರೆಸ್ ಎದುರಿಸಲು ಈ ಮೈತ್ರಿ ನೆರವಾಗುತ್ತದೆ ಎಂದರು.

‘ಸೀಟು ಹಂಚಿಕೆ ಮತ್ತು ಅಭ್ಯರ್ಥಿ ವಿಷಯಕ್ಕೆ ನಮ್ಮಲ್ಲಿ ಮನಸ್ತಾಪ ಬರುವುದಿಲ್ಲ. ಈ ವಿಷಯದಲ್ಲಿ ಎಚ್.ಡಿ. ದೇವೇಗೌಡ ಅವರು ಸ್ವಲ್ಪ ಹೊಂದಾಣಿಕೆ ಮಾಡಿಕೊಳ್ಳಬೇಕು. ಇದರಿಂದ, ಜೆಡಿಎಸ್‌ಗೂ ಅನುಕೂಲವಾಗಲಿದೆ. ಮೈತ್ರಿಗೆ ಸಂಬಂಧಿಸಿದಂತೆ ಇದು ಮೊದಲ ಹೆಜ್ಜೆಯಾಗಿದ್ದು, ಮುಂದೆ ಮತ್ತಷ್ಟು ಬೆಳವಣಿಗೆ ನಡೆಯಲಿವೆ’ ಎಂದರು.

ಜೆಡಿಎಸ್ ಹೆಣ್ಣು ಚೆನ್ನಾಗಿದೆ ಅಂತಾ ಗೊತ್ತಾಗಿದೆ: ‘ಈಗ ಬಿಜೆಪಿಯವರಿಗೆ ಜೆಡಿಎಸ್‌ನ ಹೆಣ್ಣು ಚೆನ್ನಾಗಿದೆ ಅಂತಾ ಗೊತ್ತಾಗಿದೆ. ಭಾನುವಾರ ಪಕ್ಷದ ಕಾರ್ಯಕರ್ತರ ಸಭೆ ಇದ್ದು ಅಲ್ಲಿ ಮೈತ್ರಿ ಕುರಿತು ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗುವುದು’ ಎಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ. ಇಬ್ರಾಹಿಂ, ಜೆಡಿಎಸ್–ಬಿಜೆಪಿ ಮೈತ್ರಿ ಕುರಿತು ಚನ್ನಪಟ್ಟಣದಲ್ಲಿ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು.

‘ಬೆಂಗಳೂರು ಗ್ರಾಮಾಂತರ ಕ್ಷೇತ್ರ ಯಾರಿಗೆ ಹಂಚಿಕೆಯಾಗಲಿದೆ ನೋಡಬೇಕು. ಒಂದು ವೇಳೆ ಜೆಡಿಎಸ್‌ಗೆ ಸಿಕ್ಕು, ಪಕ್ಷ ಅವಕಾಶ ಕೊಟ್ಟರೆ ನಾನೇ ಸ್ಪರ್ಧಿಸುವೆ. ಬಿಜೆಪಿಗೆ ಸಿಕ್ಕರೆ ಸಿ.ಪಿ. ಯೋಗೇಶ್ವರ್ ಸ್ಪರ್ಧಿಸುತ್ತಾರೆ’ ಎಂದು ಮಾಗಡಿ ಮಾಜಿ ಶಾಸಕ, ಜೆಡಿಎಸ್‌ನ ಎ. ಮಂಜುನಾಥ್ ಹೇಳಿದ್ದಾರೆ.

‘ಯಾರೆಲ್ಲಾ ಒಂದಾದರೂ ಕಾಂಗ್ರೆಸ್‌ಗೆ ಭಯ ಇಲ್ಲ’

ಗದಗ: ‘ಜೆಡಿಎಸ್ ಮತ್ತು ಬಿಜೆಪಿ ಮೈತ್ರಿ ವಿಚಾರ ಅವರಿಗೆ ಬಿಟ್ಟಿದ್ದು. ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಮತ್ತು ಗೃಹ ಸಚಿವ ಅಮಿತ್ ಶಾ ಭೇಟಿಯಿಂದ ನಮ್ಮ ಪಕ್ಷಕ್ಕೇನೂ ಆಗಲ್ಲ’ ಎಂದು ಗೃಹ ಸಚಿವ ಜಿ.ಪರಮೇಶ್ವರ ತಿಳಿಸಿದರು.

‘ಯಾರೆಲ್ಲಾ ಒಂದಾದರೂ ಕಾಂಗ್ರೆಸ್ ಪಕ್ಷಕ್ಕೆ ಭಯವಿಲ್ಲ. ಬದಲಾಗಿ ನಾವು ಇನ್ನಷ್ಟು ಬಲಿಷ್ಠರಾಗುತ್ತೇವೆ’ ಎಂದು ಅವರು ಶುಕ್ರವಾರ ಸುದ್ದಿಗಾರರಿಗೆ ತಿಳಿಸಿದರು.

ಬಿಜೆಪಿಗೆ ಒಳ್ಳೆಯದಾಗಲ್ಲ: ಸಂಸದ ಬಿ.ಎನ್. ಬಚ್ಚೇಗೌಡ

ಚಿಕ್ಕಬಳ್ಳಾಪುರ: ‘ಎಚ್.ಡಿ. ದೇವೇಗೌಡ ಜೀವಂತ ಇರುವವರೆಗೂ ಬಿಜೆಪಿಯೊಂದಿಗೆ ಜೆಡಿಎಸ್ ಮೈತ್ರಿ ಮಾಡಿಕೊಳ್ಳುವುದಿಲ್ಲ ಎಂದುಕೊಂಡಿದ್ದೆ. ಜಾತ್ಯತೀತ ತತ್ವದ ಜೆಡಿಎಸ್, ಕೋಮುವಾದಿ ಬಿಜೆಪಿ ಜೊತೆ ಕೈಜೋಡಿಸಿರುವುದು ನಿಜಕ್ಕೂ ಅಚ್ಚರಿ ತರಿಸಿದೆ’ ಎಂದು ಬಿಜೆಪಿ ಸಂಸದ ಬಿ.ಎನ್.ಬಚ್ಚೇಗೌಡ ಪ್ರತಿಕ್ರಿಯಿಸಿದ್ದಾರೆ.

ಜೆಡಿಎಸ್ ಮತ್ತು ಬಿಜೆಪಿ ಒಂದಾಗಿವೆ ಎನ್ನುವುದು ಇಲ್ಲಿಯವರೆಗೆ ಗೋಪ್ಯವಾಗಿತ್ತು. ಆದರೆ ಈಗ ಜನರಿಗೆ ಸ್ಪಷ್ಟವಾಗಿ ಗೊತ್ತಾಗಿದೆ. ಜೆಡಿಎಸ್ ಜೊತೆ ಮೈತ್ರಿ ಮಾಡಿಕೊಂಡರೆ ಬಿಜೆಪಿಗೆ ಖಂಡಿತಾ ಒಳ್ಳೆಯದಾಗುವುದಿಲ್ಲ. ಪಕ್ಷದ ಶಕ್ತಿ ಕ್ಷೀಣಿಸುತ್ತದೆ ಎಂದು ಅವರು ಅಭಿಪ್ರಾಯಪಟ್ಟರು.

‘ಜೆಡಿಎಸ್ ಜತೆ ಕೈಜೋಡಿಸುವ ಉದ್ದೇಶದಿಂದಲೇ ಬಿಜೆಪಿ ಹೈಕಮಾಂಡ್ ವಿಧಾನಸಭೆ ಪ್ರತಿಪಕ್ಷದ ನಾಯಕ ಮತ್ತು ರಾಜ್ಯ ಘಟಕದ ಅಧ್ಯಕ್ಷ ಹುದ್ದೆಗಳಿಗೆ ನೇಮಕ ತಡ ಮಾಡಿದೆ. ಮೈತ್ರಿ ತೀರ್ಮಾನದ ನಂತರ ಈ ಹುದ್ದೆಗಳ ಆಯ್ಕೆ ಪ್ರಕ್ರಿಯೆ ನಡೆಯುತ್ತದೆ ಎಂದು ನನಗೆ ಅನ್ನಿಸುತ್ತಿದೆ’ ಎಂದರು.

ಹೊಂದಾಣಿಕೆಗೆ ಸಹಮತ: ಬಿಎಸ್‌ವೈ


ಯಡಿಯೂರಪ್ಪ

‘ಲೋಕಸಭಾ ಚುನಾವಣೆಗೆ ಬಿಜೆಪಿ– ಜೆಡಿಎಸ್ ಮೈತ್ರಿ ಬಗ್ಗೆ ನನಗೆ ಒಪ್ಪಿಗೆ ಇದೆ. ಮೈತ್ರಿಯಿಂದ ಲೋಕಸಭಾ ಚುನಾವಣೆಯಲ್ಲಿ ಪಕ್ಷಕ್ಕೆ ಹೆಚ್ಚು ಶಕ್ತಿ ಬರಲಿದೆ. ಸೀಟು ಹಂಚಿಕೆಯ ವಿಚಾರದಲ್ಲಿ ಪಕ್ಷದ ವರಿಷ್ಠರ ನಿರ್ಧಾರವೇ ಅಂತಿಮ’ ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಹೇಳಿದರು.

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು, ‘ಮಾತುಕತೆ ಪೂರ್ಣ ಆದ ಮೇಲೆ ದೇವೇಗೌಡರನ್ನು ಭೇಟಿ ಮಾಡುತ್ತೇನೆ. ಅವರು ಈಗಾಗಲೇ ಪ್ರಧಾನಿ ಮೋದಿ ಮತ್ತು ಅಮಿತ್ ಶಾ ಜತೆ ಮಾತುಕತೆ ನಡೆಸಿದ್ದಾರೆ. ಮೈತ್ರಿಯಿಂದ ಒಟ್ಟು 26 ಸ್ಥಾನಗಳನ್ನು ಗೆಲ್ಲುವ ವಿಶ್ವಾಸವಿದೆ’ ಎಂದರು.

ಈ ಮೈತ್ರಿ ಮಹತ್ವದ್ದು: ‘ಈ ಮೈತ್ರಿ ಮಾತುಕತೆ ಬಹಳ ಅವಶ್ಯಕ ಮತ್ತು ಮಹತ್ವಾದ್ದಾಗಿದೆ. ಭ್ರಷ್ಟ ಕಾಂಗ್ರೆಸ್ ಸರ್ಕಾರದ ವಿರುದ್ಧ ಹೋರಾಡಲು ವಿರೋಧಪಕ್ಷಗಳು ಒಂದಾಗುವುದು ಅತಿ ಮುಖ್ಯ. ಆದ್ದರಿಂದ ನಾವು ಒಗ್ಗಟ್ಟಾಗಿ ಸರ್ಕಾರದ ವಿರುದ್ಧ ಹೋರಾಡುತ್ತೇವೆ. ಮೈತ್ರಿ ಸ್ಥಾನಗಳ ಬಗ್ಗೆ ನಮ್ಮ ಹೈಕಮಾಂಡ್ ಮುಂದೆ ತೀರ್ಮಾನ ಮಾಡುತ್ತದೆ’ ಎಂದು ಶಾಸಕ ಬಸವರಾಜ ಬೊಮ್ಮಾಯಿ ಹೇಳಿದರು.

‘ತಲೆ ಕೆಡಿಸಿಕೊಳ್ಳುವುದಿಲ್ಲ’


ಸಿದ್ದರಾಮಯ್ಯ

‘ಲೋಕಸಭಾ ಚುನಾವಣೆಯಲ್ಲಿ ಯಾರು ಮೈತ್ರಿ ಮಾಡಿಕೊಳ್ಳುತ್ತಾರೆ? ಯಾರು ಸ್ವತಂತ್ರ ಸ್ಪರ್ಧೆ ಮಾಡುತ್ತಾರೆ ಎಂಬುದರ ಕುರಿತು ತಲೆ ಕೆಡಿಸಿಕೊಳ್ಳುವುದಿಲ್ಲ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು. ಬಿಜೆಪಿ– ಜೆಡಿಎಸ್ ಮೈತ್ರಿ ಕುರಿತು ಸುದ್ದಿಗಾರರಿಗೆ ಶುಕ್ರವಾರ ಪ್ರತಿಕ್ರಿಯಿಸಿದ ಅವರು, ‘ನಾವು ಜನರ ಬಳಿ ಮತ ಕೇಳುತ್ತೇವೆ. ರಾಜ್ಯದ ಜನರು ನಮ್ಮ ಪರವಾಗಿ ಇದ್ದಾರೆ’ ಎಂದರು.

‘ಬಿಜೆಪಿಗೂ ಅನುಭವ ಆಗಲಿ’


ಶಿವಕುಮಾರ್

‘ಲೋಕಸಭಾ ಚುನಾವಣೆಯಲ್ಲಿ ಮೈತ್ರಿ ಮಾಡಿಕೊಳ್ಳುವುದು ಬಿಜೆಪಿ ಮತ್ತು ಜೆಡಿಎಸ್‌ನವರ ಆಯ್ಕೆ. ಯಾರು ಯಾರ ಜತೆಗಾದರೂ ಹೋಗಲಿ. ನಾವು ಆ ಬಗ್ಗೆ ಯೋಚಿಸುವುದಿಲ್ಲ’ ಎಂದು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಜೆಡಿಎಸ್ ಪಕ್ಷದ ಜತೆ ಹಿಂದೆ ನಾವು ಮೈತ್ರಿ ಮಾಡಿಕೊಂಡಿದ್ದೆವು. ಈಗ ಬಿಜೆಪಿಯವರಿಗೂ ಅನುಭವ ಆಗಲಿ. ನಮಗೆ ಯಾವ ತೊಂದರೆಯೂ ಇಲ್ಲ’ ಎಂದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	98.06	3,178	3,056
ಹಾರಂಗಿ	2,859	2,855.86	2,045	700
ಕಬಿನಿ	2284.00	2,274.28	4,309	1,100
ಹೇಮಾವತಿ	2,922	2,902.38	709	6,090
ಲಿಂಗನಮಕ್ಕಿ	1,819	1,787.15	2,563	3,949
ಸೂಪಾ (ಮೀ)	564	545.50	1,560	185
ಮಾಣಿ	595	579.42	908	00
ತುಂಗಭದ್ರಾ	1,633	1,623.38	1,647	9,877
ಮಲಪ್ರಭಾ	2079.50	2,065.80	1,134	694
ಘಟಪ್ರಭಾ	2175	2,162.80	605	184
ಭದ್ರಾ	186	162.6	524	3,070
ಆಲಮಟ್ಟಿ (ಮೀ)	519.60	519.26	242	10,022
ನಾರಾಯಣಪುರ (ಮೀ)	492.25	490.42	8,814	8,703

* ನೆಲಮಟ್ಟದಿಂದ

ದುರ್ಬಲರಿಗೆ ಮೈತ್ರಿ ಅನಿವಾರ್ಯ: ಶೆಟ್ಟರ್

ಹುಬ್ಬಳ್ಳಿ: ‘ಅಸಹಾಯಕರು ಒಂದಾಗುವುದು ಸಾಮಾನ್ಯ. ಅದೇ ರೀತಿ, ಬಿಜೆಪಿ– ಜೆಡಿಎಸ್ ಎರಡೂ ಪಕ್ಷಗಳು ದುರ್ಬಲವಾಗಿದ್ದು, ಮೈತ್ರಿ ಅನಿವಾರ್ಯವಾಗಿದೆ’ ಎಂದು ವಿಧಾನ ಪರಿಷತ್ ಸದಸ್ಯ ಜಗದೀಶ ಶೆಟ್ಟರ್ ತಿಳಿಸಿದರು.

‘ಮೈತ್ರಿ ವಿಚಾರ ಅವರಿಗೆ ಬಿಟ್ಟದ್ದು. ಎರಡೂ ಪಕ್ಷಗಳ ನಡುವೆ ಪೈಪೋಟಿ ಇತ್ತು. ಈಗ ಸ್ವಯಂ ಅನುಕೂಲಕ್ಕೆ ಮೈತ್ರಿ ಮಾಡಿಕೊಳ್ಳುತ್ತಿವೆ. ಆ ಪಕ್ಷಗಳ ಮೇಲೆ ಜನರಿಗೆ ವಿಶ್ವಾಸ ಮತ್ತು ನಂಬಿಕೆ ಹೋಗಿದೆ’ ಎಂದು ಅವರು ಶುಕ್ರವಾರ ಸುದ್ದಿಗಾರರಿಗೆ ತಿಳಿಸಿದರು.

‘ರಾಜ್ಯದಲ್ಲಿ ಕಾಂಗ್ರೆಸ್ ಬಲಗೊಂಡಿದೆ. ಅದಕ್ಕಾಗಿ ಹಲವು ನಾಯಕರು ಬರಲು ಸಿದ್ಧರಾಗಿದ್ದಾರೆ. ಯಾರೆಲ್ಲ ಸೇರ್ಪಡೆ ಆಗುವರು ಎಂಬುದನ್ನು ಈಗಲೇ ಹೇಳಲು ಆಗುವುದಿಲ್ಲ. ಕರ್ನಾಟಕದಲ್ಲಿ ಅಷ್ಟೇ ಅಲ್ಲ, ಇತರ ರಾಜ್ಯಗಳಲ್ಲೂ ಕಾಂಗ್ರೆಸ್ ಬಲಗೊಳ್ಳುತ್ತಿದೆ’ ಎಂದರು.

ಪರಿಷತ್ ಚುನಾವಣೆ: ಆಕಾಂಕ್ಷಿಗಳ ಜತೆ ‘ಕೈ’ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2024ರ ಜೂನ್‌ನಲ್ಲಿ ನಡೆಯಲಿರುವ ವಿಧಾನ ಪರಿಷತ್‌ನ ಪದವೀಧರರ ಮತ್ತು ಶಿಕ್ಷಕರ ಕ್ಷೇತ್ರಗಳ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಗಳ ಜತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಶುಕ್ರವಾರ ಮೊದಲ ಸುತ್ತಿನ ಸಭೆ ನಡೆಸಿದರು.

ಎಲ್ಲ ಆಕಾಂಕ್ಷಿಗಳ ಜತೆ ಮುಖ್ಯಮಂತ್ರಿ, ಕೆಪಿಸಿಸಿ ಅಧ್ಯಕ್ಷರು ಮತ್ತು ಇತರ ಪ್ರಮುಖರು ಚರ್ಚಿಸಿದರು. ಸಚಿವರಾದ ರಾಮಲಿಂಗಾರೆಡ್ಡಿ, ಪ್ರಿಯಾಂಕ್ ಖರ್ಗೆ, ಕೆಪಿಸಿಸಿ ಕಾರ್ಯಾಧ್ಯಕ್ಷರಾದ ಬಿ.ಎನ್. ಚಂದ್ರಪ್ಪ, ಸಲೀಂ ಅಹ್ಮದ್ ಕೂಡ ಸಭೆಯಲ್ಲಿದ್ದರು.

ಟಿಕೆಟ್ ಆಕಾಂಕ್ಷಿಗಳ ಸಿದ್ಧತೆ, ಅವರು ಹೊಂದಿರುವ ಬೆಂಬಲದ ಕುರಿತು ಮಾಹಿತಿ ಪಡೆದರು. ಮತದಾರರ ನೋಂದಣಿ ಪ್ರಕ್ರಿಯೆ ಮುಕ್ತಾಯವಾದ ಬಳಿಕ ಮತ್ತೊಂದು ಸುತ್ತಿನ ಸಭೆ ನಡೆಸಿ ಸಂಭವನೀಯ ಅಭ್ಯರ್ಥಿಗಳ ಪಟ್ಟಿಯನ್ನು ಅಂತಿಮಗೊಳಿಸಲು ನಿರ್ಧರಿಸಿದರು ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಬೆಂಗಳೂರು ಪದವೀಧರರ ಕ್ಷೇತ್ರಕ್ಕೆ ಪುಟ್ಟಣ್ಣ ಅವರನ್ನೇ ಕಣಕ್ಕಿಳಿಸುವ ಕುರಿತು ಚರ್ಚೆ ನಡೆದಿದೆ. ಜೆಡಿಎಸ್ ತೊರೆದು ಕಾಂಗ್ರೆಸ್ ಸೇರಲು ಸಜ್ಜಾಗಿರುವ ಮರಿತಿಬ್ಬೇಗೌಡ ಅವರ ಹೆಸರನ್ನು ದಕ್ಷಿಣ ಶಿಕ್ಷಕರ ಕ್ಷೇತ್ರಕ್ಕೆ ಪರಿಗಣಿಸಲು ಒಲವು ವ್ಯಕ್ತವಾಗಿದೆ. ಕೆಪಿಸಿಸಿ ವಕ್ತಾರ ರಮೇಶ್ ಬಾಬು ಅವರನ್ನು ಬೆಂಗಳೂರು ಪದವೀಧರರ ಕ್ಷೇತ್ರದಿಂದ ಕಣಕ್ಕಿಳಿಸುವ ಬಗ್ಗೆ ಚರ್ಚೆ ನಡೆದಿದೆ ಎಂಬ ಮಾಹಿತಿ ಲಭ್ಯವಾಗಿದೆ.

ಈಶಾನ್ಯ ಪದವೀಧರರ ಕ್ಷೇತ್ರದಲ್ಲಿ ಹಾಲಿ ಸದಸ್ಯ ಚಂದ್ರಶೇಖರ ಪಾಟೀಲ ಅವರಿಗೆ ಟಿಕೆಟ್ ನೀಡಲು ನಾಯಕರು ಆಸಕ್ತಿ ವ್ಯಕ್ತಪಡಿಸಿದ್ದಾರೆ. ನೈರುತ್ಯ ಪದವೀಧರರ ಕ್ಷೇತ್ರದಲ್ಲಿ ಆಯನೂರು ಮಂಜುನಾಥ್, ಹಿಂದಿನ ಕಾಂಗ್ರೆಸ್ ಅಭ್ಯರ್ಥಿ ಎಸ್.ಪಿ. ದಿನೇಶ್, ಚಿಕ್ಕಮಗಳೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ವಿಜಯಕುಮಾರ್ ಟಿಕೆಟ್ ಬಯಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

‘ಅನುಕೂಲಕರ ಪರಿಸ್ಥಿತಿ ಇದೆ’: ಸಭೆಯಲ್ಲಿ ಮಾತನಾಡಿದ ಸಿದ್ದರಾಮಯ್ಯ, ‘ಶಿಕ್ಷಕರು ಮತ್ತು ಪದವೀಧರರು ನಾಡಿನ ಅಭಿವೃದ್ಧಿ ಪರವಾಗಿ ಇದ್ದಾರೆ. ಆದ್ದರಿಂದ ಇವರೆಲ್ಲಾ ನಮ್ಮ ಪರವಾಗಿ ಇರುವುದರಿಂದ ವಿಧಾನಪರಿಷತ್ ಚುನಾವಣೆಯಲ್ಲಿ ಅನುಕೂಲಕರ ವಾತಾವರಣವಿದೆ’ ಎಂದರು.

‘ಟಿಕೆಟ್ ಆಕಾಂಕ್ಷಿಗಳು ಶಿಕ್ಷಕರು ಮತ್ತು ಪದವೀಧರ ಸದಸ್ಯರ ಜತೆ ನಿರಂತರ ಸಂಪರ್ಕದಲ್ಲಿದ್ದು ಅವರ ಮಾತು ಮತ್ತು ಬೇಡಿಕೆಗಳನ್ನು ಕೇಳಿ ನಮಗೆ ತಿಳಿಸಬೇಕು. ಟಿಕೆಟ್ ಆಕಾಂಕ್ಷಿಗಳು ಮತ್ತು ಎಲ್ಲ ಶಾಸಕರು ಮತ್ತು ಜಿಲ್ಲಾ ಪದಾಧಿಕಾರಿಗಳ ಅಭಿಪ್ರಾಯ ಪಡೆದು ಅಭ್ಯರ್ಥಿಗಳ ಹೆಸರನ್ನು ಘೋಷಿಸುತ್ತೇವೆ. ಟಿಕೆಟ್ ಯಾರಿಗೇ ಸಿಕ್ಕರೂ ಒಗ್ಗಟ್ಟಿನಿಂದ ಕೆಲಸ ಮಾಡಿ’ ಎಂದು ಹೇಳಿದರು.

ಸಿದ್ದರಾಮಯ್ಯ ವಿರುದ್ಧದ ಕ್ರಿಮಿನಲ್ ಪ್ರಕರಣಕ್ಕೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭ್ರಷ್ಟಾಚಾರದ ಆರೋಪದಡಿ ಅಂದಿನ ಸಚಿವ ಕೆ.ಎಸ್. ಈಶ್ವರಪ್ಪ ರಾಜೀನಾಮೆಗೆ ಆಗ್ರಹಿಸಿ ಕಾಂಗ್ರೆಸ್ ಪಕ್ಷ ನಡೆಸಿದ ಪ್ರತಿಭಟನೆಗೆ ಸಂಬಂಧಿಸಿದಂತೆ ಅಂದಿನ ವಿರೋಧ ಪಕ್ಷದ ನಾಯಕರಾಗಿದ್ದ ಸಿದ್ದರಾಮಯ್ಯ ವಿರುದ್ಧ ದಾಖಲಿಸಲಾಗಿದ್ದ ಪ್ರಕರಣಕ್ಕೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ಕ್ರಿಮಿನಲ್ ಪ್ರಕರಣ ರದ್ದು ಕೋರಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸಲ್ಲಿಸಿದ್ದ ಅರ್ಜಿಯನ್ನು, ‘ಸಂಸದರು-ಶಾಸಕರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ಮೇಲ್ಮನವಿ ವಿಚಾರಣೆ’ಯ ಹೈಕೋರ್ಟ್‌ನ ವಿಶೇಷ ನ್ಯಾಯಪೀಠದ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಧಾರವಾಡ ಪೀಠದಲ್ಲಿ ಶುಕ್ರವಾರ ವಿಚಾರಣೆ ನಡೆಸಿದರು.

ಅರ್ಜಿದಾರರ ಪರ ವಕೀಲ ಶತಭಿಷ ಶಿವಣ್ಣ ಅವರ ವಾದ ಆಲಿಸಿದ ನ್ಯಾಯಪೀಠ, ಮುಂದಿನ ವಿಚಾರಣೆವರೆಗೆ ಪ್ರಕರಣಕ್ಕೆ ತಡೆ ನೀಡಿತು. ಸರ್ಕಾರಿ ವಕೀಲರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ಆಕ್ಷೇಪಣೆ ಸಲ್ಲಿಸುವಂತೆ ಸೂಚಿಸಲಾಯಿತು. ವಿಚಾರಣೆಯನ್ನು ಇದೇ 15ಕ್ಕೆ ಮುಂದೂಡಲಾಗಿದೆ.

ಪ್ರಕರಣವೇನು?: ‘ಗುತ್ತಿಗೆದಾರ ಸಂತೋಷ್ ಪಾಟೀಲ್ ಆತ್ಮಹತ್ಯೆಗೆ ಕೆ.ಎಸ್. ಈಶ್ವರಪ್ಪ ಕಾರಣ’ ಎಂದು ಆರೋಪಿಸಿ ಅವರ ರಾಜೀನಾಮೆಗೆ ಆಗ್ರಹಿಸಿ ಕಾಂಗ್ರೆಸ್ ಪಕ್ಷದ ವತಿಯಿಂದ 2022ರ ಏಪ್ರಿಲ್ 14ರಂದು ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು. ಈ ಕುರಿತು ಹೈ ಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿತ್ತು.

ಅತಿ ಹಿಂದುಳಿದವರ ಹೋರಾಟ ಇಂದು ಪೂರ್ವಭಾವಿ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದುಳಿದ ವರ್ಗಗಳ ಪಟ್ಟಿಯಲ್ಲಿರುವ ಅತಿ ಹಿಂದುಳಿದ ಸಮುದಾಯಗಳಿಗೆ ಸಾಮಾಜಿಕ ನ್ಯಾಯಕ್ಕೆ ಆಗ್ರಹಿಸಿ ಪ್ರಬಲ ಹೋರಾಟ ರೂಪಿಸುವ ಉದ್ದೇಶದಿಂದ ನಗರದ ಅರಮನೆ ಮೈದಾನದಲ್ಲಿ ಶನಿವಾರ ಈಡಿಗ ಮತ್ತು ಅತಿ ಹಿಂದುಳಿದ ವರ್ಗಗಳ ಸಮಾನ ಮನಸ್ಕರ ಪೂರ್ವಭಾವಿ ಸಭೆ ನಡೆಯಲಿದೆ.

ಹಿಂದುಳಿದ ವರ್ಗಗಳ ಪಟ್ಟಿಯಲ್ಲಿರುವ ಹಲವು ಸಮುದಾಯಗಳ ಮಠಾಧೀಶರು, ಮುಖಂಡರು ಈ ಸಭೆಯಲ್ಲಿ ಭಾಗವಹಿಸಲಿದ್ದಾರೆ.

ಈ ಸಭೆಗೂ ಮುನ್ನ ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ನೇತೃತ್ವದಲ್ಲಿ ರಾಜ್ಯದಾದ್ಯಂತ ಹಲವು ಸಭೆಗಳನ್ನು ನಡೆಸಲಾಗಿದೆ. ಸಿದ್ದರಾಮಯ್ಯ ಅವರು ಜೆಡಿಎಸ್ ತೊರೆದು ಕಾಂಗ್ರೆಸ್ ಸೇರುವ ಮುನ್ನ ‘ಅಹಿಂದ’ ಚಳವಳಿ ನಡೆಸಿದ್ದರು. ಅದೇ ಮಾದರಿಯಲ್ಲಿ ಅತಿ ಹಿಂದುಳಿದ ವರ್ಗಗಳ ಹೋರಾಟಕ್ಕೆ ಸಿದ್ಧತೆ ನಡೆಸುತ್ತಿದ್ದು, ಪೂರ್ವಭಾವಿ ಸಭೆಯು ರಾಜ್ಯ ರಾಜಕಾರಣದಲ್ಲಿನ ಸಮಕಾಲೀನ ಬೆಳವಣಿಗೆಗಳ ಕುರಿತೂ ಚರ್ಚೆಗೆ ವೇದಿಕೆಯಾಗುವ ಸಾಧ್ಯತೆ ಇದೆ.

ವಿಧಾನ ಪರಿಷತ್‌ನ ಮಾಜಿ ಸದಸ್ಯ ಎಚ್.ಆರ್. ಶ್ರೀನಾಥ್ ಸಭೆಯ ಅಧ್ಯಕ್ಷತೆ ವಹಿಸಲಿದ್ದಾರೆ. ಆಂಧ್ರ ಪ್ರದೇಶದ ವಸತಿ ಸಚಿವ ಜೋಗಿ ರಮೇಶ್, ವಿಧಾನ ಪರಿಷತ್ ಸದಸ್ಯರಾದ ಕೋಟ ಶ್ರೀನಿವಾಸ ಪೂಜಾರಿ ಸೇರಿದಂತೆ ಹಲವು ರಾಜಕೀಯ ಮುಖಂಡರು ಭಾಗವಹಿಸಲಿದ್ದಾರೆ. ಕಾಂಗ್ರೆಸ್, ಬಿಜೆಪಿಯಲ್ಲಿರುವ ಹಿಂದುಳಿದ ವರ್ಗಗಳ ಪ್ರಮುಖ ಮುಖಂಡರಿಗೆ ಆಹ್ವಾನ ನೀಡಲಾಗಿದೆ.

ರಾಜ್ಯದ ವಿವಿಧ ಜಿಲ್ಲೆಗಳಿಂದ ಸಾವಿರಾರು ಮಂದಿ ಈ ಸಭೆಗೆ ಬರುವ ಸಾಧ್ಯತೆ ಇದೆ. ಅರಮನೆ ಮೈದಾನದಲ್ಲಿ ಸಭೆಗೆ ಸಿದ್ಧತೆಗಳು ಪೂರ್ಣಗೊಂಡಿವೆ.

ಜಮೀನು ಮಂಜೂರಿಗೆ ಆ್ಯಪ್

ತುಮಕೂರು: ಬಗರ್‌ಹುಕಂ ಸಾಗುವಳಿದಾರರಿಗೆ ಜಮೀನು ಮಂಜೂರು ಮಾಡಲು ಮೊಬೈಲ್ ಆ್ಯಪ್ ಸಿದ್ಧಪಡಿಸಲಾಗುತ್ತಿದೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಇಲ್ಲಿ ಶುಕ್ರವಾರ ತಿಳಿಸಿದರು.

ಕಂದಾಯ ಇಲಾಖೆ ಪ್ರಗತಿ ಪರಿಶೀಲನೆ ನಡೆಸಿದ ಅವರು, ‘ಸಾಗುವಳಿ ಮಾಡುತ್ತಿರುವ ಅರ್ಹರಿಗೆ ಮಾತ್ರ ಜಮೀನು ಮಂಜೂರು ಮಾಡುವ ಸಲುವಾಗಿ ಈ ಆ್ಯಪ್ ಸಿದ್ಧಪಡಿಸಲಾಗುತ್ತಿದೆ. ಆ್ಯಪ್ ಜತೆಗೆ ಹಿಂದಿನ ಐದು ವರ್ಷಗಳಲ್ಲಿ ಜಮೀನಿನಲ್ಲಿ ಸಾಗುವಳಿ ಮಾಡುತ್ತಿರುವ ಬಗ್ಗೆ ಮಾಹಿತಿ ಲಭ್ಯವಾಗುವಂತೆ ಮಾಡಲಾಗುತ್ತದೆ. ಅದನ್ನು ಪರಿಶೀಲಿಸಿ ಅರ್ಹರಿಗೆ ಮಂಜೂರು ಮಾಡಲು ಸಾಧ್ಯವಾಗಲಿದೆ’ ಎಂದರು.

ಸಾಗುವಳಿ ಮಾಡದೆ ಸುಳ್ಳು ಹೇಳಿ ಅರ್ಜಿ ಹಾಕಿದ್ದರೆ ತಿರಸ್ಕರಿಸಿ ಅಂತಹ ಜಮೀನನ್ನು ಸರ್ಕಾರದ ವಶಕ್ಕೆ ಪಡೆದುಕೊಳ್ಳಬೇಕು ಎಂದು ಸೂಚಿಸಿದರು.

ಪ್ರತಿಭಟನೆ ವೇಳೆ ಸಂಸದ ಮುನಿಸ್ವಾಮಿ ಸೇರಿ ಹಲವರಿಗೆ ಗಾಯ

ಬಿಜೆಪಿ ಕಾರ್ಯಕರ್ತರ ಮೇಲೆ ಹೆಜ್ಜೇನು ದಾಳಿ

ಪ್ರಜಾವಾಣಿ ವಾರ್ತೆ

ಕೋಲಾರ: ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ಶುಕ್ರವಾರ ನಗರ ಹೊರವಲಯದ ಜಿಲ್ಲಾಧಿಕಾರಿ ಕಚೇರಿ ಮುಂದೆ ಪ್ರತಿಭಟನೆ ನಡೆಸುತ್ತಿದ್ದ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರ ಮೇಲೆ ಹೆಜ್ಜೇನು ದಾಳಿ ನಡೆಸಿದ್ದು, ಪ್ರತಿಭಟನೆ ಕೈಬಿಟ್ಟ ಕಾರ್ಯಕರ್ತರು ದಿಕ್ಕಾಪಾಲಾಗಿ ಓಡಿದರು.

ಬಿಜೆಪಿ ರೈತ ಮೋರ್ಚಾದಿಂದ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಭಾಗವಹಿಸಿದ್ದ 500ಕ್ಕೂ ಬಿಜೆಪಿ ಕಾರ್ಯಕರ್ತರು, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕಾಂಗ್ರೆಸ್ ಸರ್ಕಾರದ ವಿರುದ್ಧ ಜೋರಾಗಿ ಧಿಕ್ಕಾರ ಕೂಗಿದರು. ಈ ಸದ್ದಿಗೆ ಜಿಲ್ಲಾಡಳಿತ ಭವನದ ಕಚೇರಿ ಗೋಡೆ ಹಾಗೂ ಕಿಟಕಿಗಳ ಮೇಲೆ ಗೂಡು ಕಟ್ಟಿದ್ದ ಹೆಜ್ಜೇನು ದಾಳಿ ನಡೆಸಿವೆ. ಕೆಲಸದ ನಿಮಿತ್ತ ಜಿಲ್ಲಾಧಿಕಾರಿ ಕಚೇರಿಗೆ ಬಂದಿದ್ದ ಸಾರ್ವಜನಿಕರು ಜೇನುನೊಣಗಳ ದಾಳಿಯಿಂದ ಹೆದರಿ ಓಟ ಕಿತ್ತರು.


ಕೋಲಾರದಲ್ಲಿ ಶುಕ್ರವಾರ ಬಿಜೆಪಿ ಪ್ರತಿಭಟನೆ ವೇಳೆ ಹೆಜ್ಜೇನು ದಾಳಿ ನಡೆಸಿದಾಗ ದಿಕ್ಕಾಪಾಲಾಗಿ ಓಡಿದ ಕಾರ್ಯಕರ್ತರು

ಕಾರ್ಯಕರ್ತರೊಬ್ಬರನ್ನು ಜೇನು ಹುಳು ಮುತ್ತಿಕೊಳ್ಳುತ್ತಿದ್ದಂತೆ ಸಂಸದ ಎಸ್.ಮುನಿಸ್ವಾಮಿ ಸೇರಿದಂತೆ ಎಲ್ಲಾ ನಾಯಕರು ಹಾಗೂ ಕಾರ್ಯಕರ್ತರು ಗಾಬರಿಯಿಂದ ಓಡಿದರು. ಅಷ್ಟರಲ್ಲಿ ಮುನಿಸ್ವಾಮಿ ಸೇರಿದಂತೆ ಕೆಲ ಮುಖಂಡರು, ಕಾರ್ಯಕರ್ತರು, ಪೊಲೀಸರು ಹಾಗೂ ಪತ್ರಕರ್ತರ ಮೇಲೆ ಜೇನು ನೊಣಗಳು ದಾಳಿ ನಡೆಸಿದವು.

ಕೆಲವರು ಕಾರು, ದ್ವಿಚಕ್ರ ವಾಹನ ಹತ್ತಿ ಬಚಾವ್ ಆದರು. ಉಳಿದವರು ರಾಷ್ಟ್ರೀಯ ಹೆದ್ದಾರಿಯ ಎರಡೂ ದಿಕ್ಕುಗಳಲ್ಲಿ ಕಿ.ಮೀ.ಗಟ್ಟಲೇ ದೂರ ಓಡಿದರೂ ಜೇನುನೊಣಗಳು ಬಿಡಲಿಲ್ಲ. ಕೆಲವರು ದಾರಿ ಬದಿಯಲ್ಲಿ ಬೆಂಕಿ ಹಾಕಿ ಓಡಿಸಲು ಪ್ರಯತ್ನಿಸಿದರು. ಟವೆಲ್, ಕರವಸ್ತ್ರ ಮುಖಕ್ಕೆ ಕಟ್ಟಿಕೊಂಡು, ಗಿಡದ ಕಂಟಿ ಹಿಡಿದು ರಕ್ಷಿಸಿಕೊಳ್ಳಲು ಪ್ರಯತ್ನಿಸಿದರು. ತಕ್ಷಣವೇ ಸ್ಥಳಕ್ಕೆ ಆಂಬುಲೆನ್ಸ್ ತರಿಸಲಾಯಿತು.

ಜೇನುಹುಳು ಕಚ್ಚಿ ಗಾಯಗೊಂಡ ಏಳು ಮಂದಿಯನ್ನು ಸಮೀಪದ ಆರ್.ಎಲ್.ಜಾಲಪ್ಪ ಆಸ್ಪತ್ರೆ, ಕೆಲವರನ್ನು ಎಸ್‌ಎನ್‌ಆರ್ ಜಿಲ್ಲಾ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಯಿತು. ಸಂಸದ ಮುನಿಸ್ವಾಮಿ ಕೂಡ ಚಿಕಿತ್ಸೆ ಪಡೆದರು.

‘ಪ್ರತಿಭಟನೆ ವಿಫಲಗೊಳಿಸಲು ಕಾಂಗ್ರೆಸ್‌ನ ಕೆಲವರು ಜೇನುಗೂಡಿಗೆ ಕಲ್ಲೆಸೆದಿದ್ದಾರೆ’ ಎಂದು ಬಿಜೆಪಿಯ ಕೆಲ ಮುಖಂಡರು ಆರೋಪಿಸಿದರು.

‘ಪ್ರತಿಭಟನೆ ವೇಳೆ ಪ್ರತಿಭಟನಕಾರರು ಕೂಗುವ ಶಬ್ದಕ್ಕೆ ಗೂಡಿನಿಂದ ಹೊರಬಂದು ಜೇನುನೊಣಗಳು ಒಂದಿಷ್ಟು ಜನರಿಗೆ ಕಚ್ಚಿವೆ. ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗಿದೆ. ಎಲ್ಲರೂ ಅಪಾಯದಿಂದ ಪಾರಾಗಿದ್ದಾರೆ. ಯಾರಿಗೂ ಹೆಚ್ಚು ತೊಂದರೆ ಆಗಿಲ್ಲ’ ಎಂದು ಮುನಿಸ್ವಾಮಿ ಹೇಳಿದರು.

ಶನಿವಾರ, ಸೆಪ್ಟೆಂಬರ್ 9, 2023 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ @75


ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಗಜಲ್ ಕಮಾಲ್
ಮುಂಬೈನಲ್ಲಿ ಶುಕ್ರವಾರ ನಡೆದ ಗಜಲ್ ಉತ್ಸವದಲ್ಲಿ ಗಾಯಕಿ ರಿಚಾ ಶರ್ಮಾ ಗಾಯನ ಮೋಡಿ



Sleepwell

ಮೆಮೊರಿ ಫೋಮ್ ನ ದಿನಗಳು ಮುಗಿದಿವೆ.
ಈಗ ಸ್ಲೀಪ್‌ವೆಲ್ ಪ್ರೊ ನೆಕ್ಸಾ 2024 ಅನ್ನು ಪರಿಚಯಿಸಲಾಗುತ್ತಿದೆ



ಇದರ ಸ್ಮಾರ್ಟ್ ರಿಕವರಿ ಪ್ರೊ ನೆಕ್ಸಾ ತಂತ್ರಜ್ಞಾನವು ಸುಲಭವಾಗಿ ದೇಹದ ಚಲನೆಗೆ ಅವಕಾಶ ನೀಡುತ್ತದೆ,
ಇದರಿಂದ ನೀವು ಹಿಂದೆಂದಿಗಿಂತಲೂ ಉತ್ತಮ ನಿದ್ರೆಯನ್ನು ಹೊಂದಬಹುದು.

ಈಗಲೇ ನಿಮ್ಮ ಹತ್ತಿರದ ಅಂಗಡಿಯಲ್ಲಿ ನಿಮ್ಮ ಮ್ಯಾಟ್ರೆಸ್ ಅನ್ನು ಪ್ರಿ-ಬುಕ್ ಮಾಡಿ
ಅಥವಾ ನಮಗೆ 7834944445 ಗೆ ಮಿಸ್ಡ್ ಕಾಲ್ ನೀಡಿ.

₹22,485/-* ರಿಂದ ಪ್ರಾರಂಭ

*ನಿಯಮಗಳು & ಷರತ್ತುಗಳು ಅನ್ವಯಿಸುತ್ತವೆ. 78"x60"x5" ಗಾತ್ರದ ಮ್ಯಾಟ್ರೆಸ್ ಗೆ ಮಾತ್ರ ಈ ಎಂಆರ್‌ಪಿ ಅನ್ವಯಿಸುತ್ತದೆ.


EXCLUSIVE OUTLETS: **Rajajinagar:** 9880715814/15, **Nagarbhavi:** 9986528988, **Kanakapura Road:** 9845007572, **Infantry Road:** 22861888, **Indiranagar:** 8867708766, **JC Road/Lalbagh Fort Road:** 9341264330, **ITPL:** 9845164788, **Vijayanagar:** 9886327712, **JP Nagar:** 9880933913, **Banaswadi:** 9880247052, **Maratahalli:** 8553488888, **Sarjapur Road:** 8904740310, **Peenya/Dasarahalli:** 9845211899, **Whitefield Road/Siddapura:** 9916534634, **Bannerghatta Road:** 9341959250, **K S Town:** 9886661666, **Nagavara:** 9929946846, **Koramangala:** 9845680908, 9929946846, 9844057462, **Hosakote Main Road:** 9611136765, **Maratahalli:** 41646944, **Rajajinagar:** 23304579, **Malleshwaram:** 9844533370, **HSR Layout:** 9972340059, **Banaswadi:** 8880999303, 9845552498, **Yashwanthpur:** 9448515924, **JP Nagar:** 9844032858, **R.R. Nagar:** 9945516078, **Hanumanthnagar:** 9880832091, **Whitefield Main Road:** 9019223227, **Whitefield:** 40907273, 9845367679, **Electronic City:** 9880081722, **Hessarghatta Main Road:** 9845211899, **TC Palya Main Road:** 9945687572, 8055074980, **Sarjapur:** 8483053451, **Mathikere:** 9448788296, **Hebbal:** 9463542155, **MS Palya:** 9738225154, **KR Puram:** 6361433071, **Kadugodi:** 8147946539, **Yelhanka:** 8880666573, 9743573558, 9743550777, 7619180863, **New BEL Road:** 9845034445, **Dommasandra:** 7760152347, **Basaveshwaranagar:** 9738501974, **Horamavu/Babusapalya:** 8892071681, **Tippasandra:** 9845682879, **Old Airport Road:** 9886742968, **Malleshpalya:** 9448265250, **Kaggadasapura:** 7892911207, **Dispensary Road:** 9844006868, **Sanjay Nagar:** 9886536925, **Kammanahalli:** 41538844, **Varthur:** 8866600184, 9844759547, **Jayanagar:** 9845023561, **Malleshwaram:** 9845553040, **Maratahalli:** 9972514147, 9929946846, **JP Nagar:** 41147835, **BSK:** 26669471, **Chandra Layout:** 9538666917, **Moodalapalya:** 9628771941, **Laggere:** 9535354019, 9448089148, **Balepet:** 41476999, **Cottonpet/Chamrajpet:** 9844119893, **Magadi Road:** 9742119897, **Vidyaranyapura:** 7022510752, **Gunjur Main Road:** 9880577132, **Thuberahalli:** 8050863010, **Subbanapalya:** 9845790803, **Hoskote:** 9743209899, **Timberya Road Layout/Mysore Road:** 9341234793, **Hennur Main Road:** 8553616433, **Baglur Cross:** 9886195957, **Begur:** 6362400205, **Muddinapalya:** 7829390775, **E-City:** 7204413141, **Channasandra:** 9686130765, **Nelamangala:** 9880572408, **Kunigal:** 9379114251, **Tumkur:** 9986853239, 9535366673, 9448661256 **For Trade Enquiries and Showrooms:** 9449037506, 9980851125, 9343152319.



ಸುಸಜ್ಜಿತ ಮಳಿಗೆಗಳಿಗೆ ಬೀಗ, ತ್ರಿಶಂಕು ಸ್ಥಿತಿಯಲ್ಲಿ ದಾಸನಪುರ ವರ್ತಕರು

ಸ್ಥಳಾಂತರದ ಗೊಂದಲ ಸೊರಗಿದ ಹೊಸ ಮಾರುಕಟ್ಟೆ





1 ಬಾಗಿಲು ಮುಚ್ಚಿರುವ ದಾಸನಪುರ ಎಪಿಎಂಸಿ ಯಾರ್ಡ್ ಪೊಲೀಸ್ ಠಾಣೆ.

2 ನಗರದ ದಾಸನಪುರ ಎಪಿಎಂಸಿ ಪ್ರಾಂಗಣದ ನೋಟ.

ಪ್ರಜಾವಾಣಿ ಚಿತ್ರಗಳು: ಎಂ.ಎಸ್.ಮಂಜುನಾಥ್

ಖಾಲಿ ಖಾಲಿ... ವಹಿವಾಟು ನಡೆಯದೆಯೇ ಖಾಲಿ ಉಳಿದಿರುವ ದಾಸನಪುರದ ಎಪಿಎಂಸಿ ಯಾರ್ಡ್.

• ಆದಿತ್ಯ ಕೆ.ಎ.

ಬೆಂಗಳೂರು: ದಾಸನಪುರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ(ಎಪಿಎಂಸಿ) ಇನ್ನೂ ಖಾಲಿ, ಖಾಲಿಯಾಗಿಯೇ ಉಳಿದಿದೆ.

ಈರುಳ್ಳಿ, ಶುಂಠಿ, ಬೆಳ್ಳುಳ್ಳಿ ಹಾಗೂ ಆಲೂಗಡ್ಡೆಯ (ನಾಲ್ಕು ಪದಾರ್ಥಗಳು) ವಹಿವಾಟು, ಯಶವಂತಪುರ ಎಪಿಎಂಸಿ ಆವರಣದಿಂದ ಪೂರ್ಣ ಪ್ರಮಾಣದಲ್ಲಿ ಬೆಂಗಳೂರು ಉತ್ತರ ತಾಲ್ಲೂಕಿನ ದಾಸನಪುರದ ಸುಸಜ್ಜಿತ ಎಪಿಎಂಸಿಗೆ ಸ್ಥಳಾಂತರಗೊಳ್ಳುವ ನಿರೀಕ್ಷೆಯಲ್ಲಿ ತೆರಳಿದ್ದ ಕೆಲವು ವರ್ತಕರೀಗ 'ತ್ರಿಶಂಕು ಸ್ಥಿತಿ'ಗೆ ತಲುಪಿದ್ದಾರೆ.

ಅತ್ತ ವಹಿವಾಟು ಇಲ್ಲ. ರೈತರೂ ಪ್ರಾಂಗಣಕ್ಕೆ ಕೃಷಿ ಉತ್ಪನ್ನಗಳನ್ನು ತರುತ್ತಿಲ್ಲ. ಮತ್ತೊಂದೆಡೆ ಯಶವಂತಪುರ ಮಾರುಕಟ್ಟೆಗೂ ವಾಪಸ್ ಬರಲು ಅವಕಾಶವಿಲ್ಲದೇ ಶೋಚನೀಯ ಸ್ಥಿತಿಗೆ ತಲುಪಿದ್ದಾರೆ. ಕೋವಿಡ್ ವೇಳೆಯಲ್ಲಿ ಕಳೆಗಟ್ಟಿದ್ದ ಮಾರುಕಟ್ಟೆಯಲ್ಲಿ ಈಗ ನಿರೀಕ್ಷಿತ ವಹಿವಾಟು ನಡೆಯುತ್ತಿಲ್ಲ.

ಅತ್ಯಾಧುನಿಕ ವ್ಯವಸ್ಥೆಯುಳ್ಳ ಮಾರುಕಟ್ಟೆಯೊಂದು ವರ್ತಕರು, ರೈತರು, ಕಾರ್ಮಿಕರಿಲ್ಲದೆ ಸೊರಗುತ್ತಿದೆ. ಆವಕ ಹೊತ್ತು ತರುವ ಲಾರಿಗಳ ಸಂಚಾರವೂ ಅಪರೂಪವಾಗಿದೆ.

ನಾಲ್ಕು ಪದಾರ್ಥಗಳ ವಹಿವಾಟು ನಡೆಸುವ ವರ್ತಕರು ದಾಸನಪುರಕ್ಕೆ ಸ್ಥಳಾಂತರಗೊಳ್ಳುವಂತೆ 2017ರಲ್ಲಿ ಎಪಿಎಂಸಿ ಆದೇಶ ಹೊರಡಿಸಿತ್ತು. ಅದರಂತೆ ಯಶವಂತಪುರದಲ್ಲಿ ಮಳಿಗೆಯಿಲ್ಲದ ಹಾಗೂ ಬಾಡಿಗೆದಾರ ವರ್ತಕರು, ಅದೇ ವರ್ಷ ಅಲ್ಲಿಗೆ ತೆರಳಿದ್ದರು. ಯಶವಂತಪುರದಲ್ಲಿ ಸ್ವಂತ ಮಳಿಗೆ ಇದ್ದವರು ಯಾರೂ ಅಲ್ಲಿಗೆ ತೆರಳಲಿಲ್ಲ. ಆದರೆ, ಕೋವಿಡ್ ವೇಳೆ ಅನಿವಾರ್ಯವಾಗಿ ಸ್ಥಳಾಂತರಗೊಂಡಿದ್ದರೂ ಮತ್ತೆ ಹಿಂತಿರುಗಿದ್ದರು. ಈಗ ಆ ಎಲ್ಲ ಮಳಿಗೆಗಳಿಗೂ ಬೀಗ ಬಿದ್ದಿದೆ.

ಸೆ.15ರ ಗಡುವು: ನಾಲ್ಕು ಪದಾರ್ಥಗಳ ವಹಿವಾಟನ್ನು ಪೂರ್ಣ ಪ್ರಮಾಣದಲ್ಲಿ ಸ್ಥಳಾಂತರ ಮಾಡಬೇಕು. ಇಲ್ಲದಿದ್ದರೆ ದಾಸನಪುರದಲ್ಲಿ ಸೆ.15ರ ಬಳಿಕ ವಹಿವಾಟು ಸ್ಥಗಿತಗೊಳಿಸಲಾಗುವುದು ಎಂದು ದಾಸನಪುರ ಎಪಿಎಂಸಿ ವರ್ತಕರ ಸಂಘ ಎಚ್ಚರಿಸಿದೆ. ಇದರಿಂದಾಗಿ, ಎರಡು ಕಡೆಯ ವರ್ತಕರ ನಡುವೆ ನಡೆಯುತ್ತಿರುವ ಹೋರಾಟಕ್ಕೆ ಅಂತಿಮ ವೇದಿಕೆ ಸಜ್ಜಾಗಿದೆ.

ಯಶವಂತಪುರ ಕೃಷಿ ಉತ್ಪನ್ನ ಮಾರುಕಟ್ಟೆ ಮತ್ತು ನಗರದಲ್ಲಿ ಸಂಚಾರ ದಟ್ಟಣೆ ಕಡಿಮೆ ಮಾಡುವ ಉದ್ದೇಶದಿಂದ ನಗರದ ಹೊರವಲಯದಲ್ಲಿ ಕೋಟ್ಯಂತರ ರೂಪಾಯಿ ವೆಚ್ಚದಲ್ಲಿ ಮಾರುಕಟ್ಟೆ ನಿರ್ಮಿಸಲಾಗಿತ್ತು.

67 ಎಕರೆಯಲ್ಲಿ ಎ.ಬಿ.ಸಿ. ಬ್ಲಾಕ್‌ಗಳಿವೆ. ಈ ಎಲ್ಲ ಬ್ಲಾಕ್‌ಗಳೂ ಪೂರ್ಣ ಪ್ರಮಾಣದಲ್ಲಿ ನಿರ್ಮಾಣವಾಗಿವೆ. ಸೊಪ್ಪು- ತರಕಾರಿ ಪ್ರಾಂಗಣ ಹೊರತುಪಡಿಸಿ ಆಲೂಗಡ್ಡೆ, ಶುಂಠಿ, ಬೆಳ್ಳುಳ್ಳಿ, ಈರುಳ್ಳಿ ಮಾರುಕಟ್ಟೆ ಪೂರ್ಣ ಆರಂಭವಾಗಿಲ್ಲ. ಶೇ 95ರಷ್ಟು ಮಳಿಗೆಗಳಿಗೆ ಬೀಗ ಬಿದ್ದಿದೆ. ಮಾರುಕಟ್ಟೆ ಆರಂಭಗೊಳ್ಳುವ ನಿರೀಕ್ಷೆಯಲ್ಲಿ ಪೊಲೀಸ್ ಇಲಾಖೆ ಹೊಸ ಠಾಣೆ ಮಂಜೂರು ಮಾಡಿ ಕಟ್ಟಡ ನಿರ್ಮಿಸಿತ್ತು. ಅದಕ್ಕೂ ಬೀಗ ಹಾಕಲಾಗಿದೆ.

'ಅಂದಾಜು ₹ 400 ಕೋಟಿ ಖರ್ಚು ಮಾಡಿದ್ದರೂ ಅಧಿಕಾರಿಗಳ ದ್ವಂದ್ವ ನಿಲುವಿನಿಂದ ಮಾರುಕಟ್ಟೆ ಬಳಕೆಗೆ ಬರುತ್ತಿಲ್ಲ' ಎಂದು ಸಂಘದ ಅಧ್ಯಕ್ಷ ಬಿ.ಆರ್. ಶ್ರೀರಾಮರೆಡ್ಡಿ ದೂರಿದರು.



ಮಾರುಕಟ್ಟೆ ಕಷ್ಟ ಸಿಕ್ಕಾಪಟ್ಟೆ

ದಾಸನಪುರ ಮಾರುಕಟ್ಟೆ ಪೂರ್ಣ ಪ್ರಮಾಣದಲ್ಲಿ ಕಾರ್ಯಾರಂಭ ಮಾಡಿದರೆ ಕೃಷಿ ಉತ್ಪನ್ನಗಳ ಮಾರಾಟ ಪ್ರಕ್ರಿಯೆಗೆ ಬಳಕೆಯಾಗುವ ಸುಮಾರು 3 ಸಾವಿರ ವಾಹನಗಳ ಪೈಕಿ 2 ಸಾವಿರ ವಾಹನಗಳು ಬೆಂಗಳೂರು ನಗರವನ್ನು ಪ್ರವೇಶಿಸುವ ಅಗತ್ಯವೇ ಇರುವುದಿಲ್ಲ. ಹೊರವಲಯಕ್ಕೆ ಬಂದು ವಾಪಸ್ ತೆರಳುತ್ತವೆ. ದಾಸರಹಳ್ಳಿ, 8ನೇ ಮೈಲಿ, ಜಾಲಹಳ್ಳಿ, ಪೀಣ್ಯ, ಗೊರಗುಂಟೆಪಾಳ್ಯ ಹಾಗೂ ಯಶವಂತಪುರದಲ್ಲಿ ದಟ್ಟಣೆ ತಗ್ಗಲಿದೆ ಎಂದು ಹೇಳುತ್ತಾರೆ ಅವರು.

ಎರಡು ಕಡೆಗೂ ಪೂರೈಕೆಯಾಗುವ ಉತ್ಪನ್ನಕ್ಕೆ ಸಾಕಷ್ಟು ವ್ಯತ್ಯಾಸವಿದೆ. ಪ್ರತಿ ತಿಂಗಳು ಯಶವಂತಪುರಕ್ಕೆ ಈರುಳ್ಳಿ ಹಾಗೂ ಆಲೂಗಡ್ಡೆಯ ಸರಾಸರಿ 14 ಲಕ್ಷ ಚೀಲಗಳು ಬಂದರೆ, ದಾಸನಪುರಕ್ಕೆ ಬರೀ 84 ಸಾವಿರ ಚೀಲಗಳಷ್ಟೇ ಬರುತ್ತಿವೆ. 400 ಮಳಿಗೆಗಳಿವೆ. ಅದರಲ್ಲಿ 10ರಿಂದ 12 ಮಂದಿಯಷ್ಟೇ ವಹಿವಾಟು ನಡೆಸುತ್ತಿದ್ದಾರೆ ಎಂದು ರೆಡ್ಡಿ ಹೇಳುತ್ತಾರೆ.

'ಯಶವಂತಪುರದಲ್ಲಿ ಮಳಿಗೆ ಇಲ್ಲದವರಿಗೆ ದಾಸನಪುರದಲ್ಲಿ ವ್ಯವಸ್ಥೆ ಮಾಡಿಕೊಡಲಾಗಿದೆ. ನಾವು ಅದೇ ಮಳಿಗೆಯಲ್ಲಿ ಹೇಗೆ ವಹಿವಾಟು ನಡೆಸುವುದು? ಬೇಕಿದ್ದರೆ ಮಳಿಗೆ ಮರು ಹಂಚಿಕೆ ನಡೆಸಲಿ' ಎಂಬುದು ಯಶವಂತಪುರ ವರ್ತಕರ ಆಗ್ರಹ.

ಈ ತಿಕ್ಕಾಟ, ಗೊಂದಲದ ನಡುವೆ ಹೊಸ ಮಾರುಕಟ್ಟೆಗೆ ತೆರಳಿರುವ ಕಾರ್ಮಿಕರಿಗೆ ದುಡಿಮೆ ಇಲ್ಲವಾಗಿದೆ. ಅಪರೂಪಕ್ಕೆ ಒಮ್ಮೆ ಬರುವ ಲಾರಿಗಳನ್ನೇ ಕಾರ್ಮಿಕರು ಎದುರು ನೋಡುವ ಪರಿಸ್ಥಿತಿಯಿದೆ.



ಖಾಲಿ ಪ್ರಾಂಗಣ.

ಸಮಸ್ಯೆ ಸುಳಿಯಲ್ಲಿ ಕಾರ್ಮಿಕರು

'ದುಡಿಮೆಯೂ ಇಳಿಕೆ'



ದಾಸನಪುರಕ್ಕೆ ಬಂದು ನಾಲ್ಕು ವರ್ಷಗಳು ಕಳೆದಿವೆ. ನಿತ್ಯದ ದುಡಿಮೆಗೂ ಕುತ್ತು ಬಂದಿದೆ. ದುಡಿಮೆ ₹ 700ರಿಂದ ₹ 300ಕ್ಕೆ ಇಳಿಕೆಯಾಗಿದೆ. ಹೀಗಾದರೆ ಬದುಕುವುದು ಕಷ್ಟ. ಪೂರ್ಣ ಪ್ರಮಾಣದಲ್ಲಿ ಮಾರುಕಟ್ಟೆ ಸ್ಥಳಾಂತರವಾದರೆ ಮಾತ್ರ ಕಾರ್ಮಿಕರಿಗೆ ಅನುಕೂಲ. ಇಲ್ಲದಿದ್ದರೆ ಎಪಿಎಂಸಿ ಕಾರ್ಮಿಕ ವರ್ಗಕ್ಕೆ ಸರ್ಕಾರವೇ ಪರ್ಯಾಯ ವ್ಯವಸ್ಥೆ ಕಲ್ಪಿಸಬೇಕು.

ಸುಮಾ, ಕಾರ್ಮಿಕರು

'ಪಾಳು ಬಿದ್ದಿರುವ ಕಟ್ಟಡ ನೋಡಲು ಆಗದು'



ಬೇರ್ಪಡಿಸಿದ ಬೆಳ್ಳುಳ್ಳಿಯನ್ನು ಯಶವಂತಪುರದಲ್ಲಿ ಒಂದೇ ದಿನದಲ್ಲಿ ಮಾರಾಟ ಮಾಡುತ್ತಿದ್ದೆವು. ಅಷ್ಟೇ ಪ್ರಮಾಣದ ಬೆಳ್ಳುಳ್ಳಿಯನ್ನು ಇಲ್ಲಿ ಮಾರಾಟ ಮಾಡುವುದಕ್ಕೆ ನಾಲ್ಕು ದಿನಗಳು ಬೇಕಿದೆ. ಹೋಟೆಲ್‌ನವರು, ಗ್ರಾಹಕರು ಬರುವುದಿಲ್ಲ. ವಿಶಾಲ ಪ್ರದೇಶದಲ್ಲಿ ನಿರ್ಮಿಸಿರುವ ಎಲ್ಲ ಮಳಿಗೆಗಳೂ ಪಾಳು ಬಿದ್ದಿವೆ. ಅದನ್ನು ನೋಡಲು ಆಗುತ್ತಿಲ್ಲ.

ರಂಗಮ್ಮ, ಕಾರ್ಮಿಕರು

'ಹೋಟೆಲ್‌ಗಳಿಗೂ ಗ್ರಾಹಕರ ಬರ'



ಕೋವಿಡ್ ವೇಳೆ ವರ್ತಕರು, ರೈತರು ಹಾಗೂ ಕಾರ್ಮಿಕರು ಬರುತ್ತಿದ್ದರು. ಅದಾದ ಮೇಲೆ ಮತ್ತೆ ಯಶವಂತಪುರಕ್ಕೆ ವಾಪಸ್ಸಾದರು. ಈಗ ಗೇಟ್‌ಗಳಿಗೆ ಬೀಗ ಹಾಕಿರುವುದನ್ನೇ ನೋಡುತ್ತಿದ್ದೇವೆ. ಮಾರುಕಟ್ಟೆ ಸ್ಥಾಪನೆಯಾದ ಮೇಲೆ ಹೋಟೆಲ್‌ಗಳು ಆರಂಭವಾಗಿದ್ದವು. ಹೋಟೆಲ್‌ಗೂ ಗ್ರಾಹಕರು ಇಲ್ಲ. ಮಾಲೀಕರು ನಷ್ಟ ಅನುಭವಿಸುತ್ತಿದ್ದಾರೆ.

ಪ್ರದೀಪ್, ಕಾರ್ಮಿಕರು


'ವರ್ತಕರ ನೋವು...'



ಹೊಸ ಮಾರುಕಟ್ಟೆಯಲ್ಲಿ ಕ್ಯಾಂಟೀನ್, ಕುಡಿಯುವ ನೀರು, ನಿರಂತರ ವಿದ್ಯುತ್ ಪೂರೈಕೆ, ರೈತ ಭವನ... ಹೀಗೆ ಸಕಲ ವ್ಯವಸ್ಥೆಯೂ ಇದೆ. ವಾಹನ ದಟ್ಟಣೆ ಸಮಸ್ಯೆಯೂ ಇರುವುದಿಲ್ಲ. ದೊಡ್ಡ ಸಂಖ್ಯೆಯಲ್ಲಿ ಲಾರಿಗಳು ಕೃಷಿ ಉತ್ಪನ್ನಗಳನ್ನು ಹೊತ್ತು ತಂದರೂ ಸ್ಥಳಾವಕಾಶವಿದೆ. ಸಗಟು ಮಾರುಕಟ್ಟೆ ಒಂದೇ ಆಗಬೇಕು ಎಂಬುದು ನಮ್ಮ ಬೇಡಿಕೆ. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೂ ಮನವಿ ಸಲ್ಲಿಸಿದ್ದೇವೆ. ಅವರು ಸಕಾರಾತ್ಮವಾಗಿ ಸ್ಪಂದಿಸಿದ್ದಾರೆ.

ಬಿ.ಆರ್.ಶ್ರೀರಾಮರೆಡ್ಡಿ, ಅಧ್ಯಕ್ಷ, ದಾಸನಪುರ ಎಪಿಎಂಸಿ ವರ್ತಕರ ಸಂಘ


'ಮಳಿಗೆಗೆ ಬಾಡಿಗೆ ಪಾವತಿಸಲು ಆಗಿಲ್ಲ'



ವಹಿವಾಟು ಇಲ್ಲದೆ ಬಾಡಿಗೆ ಪಾವತಿಸಲು ಸಾಧ್ಯವಾಗಿಲ್ಲ. ಎಪಿಎಂಸಿಯಿಂದ ಮೂರು ಬಾರಿ ನೋಟಿಸ್ ಬಂದಿದೆ. ಎಲ್ಲರನ್ನೂ ಸ್ಥಳಾಂತರಿಸಿದರೆ ಬಾಡಿಗೆ ಪಾವತಿಸುತ್ತೇವೆ.

ಜಿ.ಕೆ.ಟಿ.ಗೌಡ, ವರ್ತಕ

'ಶೇ 5ರಷ್ಟು ವಹಿವಾಟು ಇಲ್ಲ'



ದಾಸನಪುರಕ್ಕೆ ಬಂದರೆ ಹರಾಜು ಕೂಗುವವರ ಸಂಖ್ಯೆ ಕಡಿಮೆಯಿದೆ ಎನ್ನುವ ಕಾರಣಕ್ಕೆ ರೈತರು ಯಶವಂತಪುರದ ಎಪಿಎಂಸಿಯತ್ತಲೇ ಮುಖ ಮಾಡಿದ್ದಾರೆ. ಇಲ್ಲೀಗ ಶೇ 5ರಷ್ಟು ವಹಿವಾಟೂ ನಡೆಯುತ್ತಿಲ್ಲ.

ಎಸ್.ಎಚ್.ಚಂದ್ರಶೇಖರ್ ರೆಡ್ಡಿ, ವರ್ತಕ

'ನಮಗೂ ಗೇಟ್‌ಪಾಸ್ ವ್ಯವಸ್ಥೆ ಮಾಡಿ'



ಹಿಂದಿನ ತೀರ್ಮಾನದಂತೆ ನಾಲ್ಕು ಪದಾರ್ಥಗಳ ವಹಿವಾಟು ನಡೆಸುವ ಎಲ್ಲರನ್ನೂ ಹೊಸ ಮಾರುಕಟ್ಟೆಗೆ ಸ್ಥಳಾಂತರಿಸಬೇಕು. ಇಲ್ಲದಿದ್ದರೆ ಯಶವಂತಪುರದಲ್ಲೇ ವಹಿವಾಟು ನಡೆಸಲು ನಮಗೂ ಗೇಟ್‌ಪಾಸ್ (ವಾಹನ ಪ್ರವೇಶಕ್ಕೆ) ವ್ಯವಸ್ಥೆ ಕಲ್ಪಿಸಬೇಕು.

ಟಿ. ರಾಜೇಶ್‌ಗೌಡ, ವರ್ತಕ

ಉರುಳಿಬಿದ್ದ ಒಮ್ನಿ: ಚಾಲಕ ಶಾಲೆ ಬಾಲಕಿಗೆ ಗಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬನಶಂಕರಿ ಬಳಿಯ ದೇವೇಗೌಡ ಪೆಟ್ರೋಲ್ ಬಂಕ್ ಸಮೀಪದಲ್ಲಿ ಒಮ್ನಿ ವಾಹನ ಉರುಳಿಬಿದ್ದು ಅಪಘಾತ ಸಂಭವಿಸಿದ್ದು, ಚಾಲಕ ಹಾಗೂ ಬಾಲಕಿ ಗಾಯಗೊಂಡಿದ್ದಾರೆ.

'ಶಾಲಾ ಮಕ್ಕಳನ್ನು ಒಮ್ನಿ ವಾಹನದಲ್ಲಿ ಕರೆದೊಯ್ಯುತ್ತಿದ್ದ ವೇಳೆ ಈ ಅವಘಡ ಸಂಭವಿಸಿದೆ. ಚಾಲಕ ಹಾಗೂ ಬಾಲಕಿಗೆ ಸಣ್ಣ–ಪುಟ್ಟ ಗಾಯಗಳಾಗಿದ್ದು, ಚಿಕಿತ್ಸೆ ಪಡೆದುಕೊಂಡಿದ್ದಾರೆ' ಎಂದು ಬನಶಂಕರಿ ಸಂಚಾರ ಠಾಣೆ ಪೊಲೀಸರು ಹೇಳಿದರು.

'ಶುಕ್ರವಾರ ಬೆಳಿಗ್ಗೆ ಕಾಮಾಕ್ಯ ಕಡೆಯಿಂದ ಪದ್ಮನಾಭನಗರದಲ್ಲಿರುವ ಶಾಲೆಯತ್ತ ಒಮ್ನಿ ಹೊರಟಿತ್ತು. ದೇವೇಗೌಡ ಪೆಟ್ರೋಲ್ ಬಂಕ್ ಸಮೀಪದ ವೃತ್ತದಲ್ಲಿ ಚಾಲಕ ಯೂಟರ್ನ್‌ನಲ್ಲಿ ಒಮ್ನಿ ಚಲಾಯಿಸಿದ್ದ. ಇದೇ ಸಂದರ್ಭ ರಸ್ತೆ ವಿಭಜಕದ ಮೇಲೆ ಚಕ್ರ ಹತ್ತಿತ್ತು. ಒಮ್ನಿ ಉರುಳಿಬಿದ್ದಿತ್ತು.'

'ಅಪಘಾತದಿಂದ ಮಕ್ಕಳು ಒಮ್ನಿಯಲ್ಲಿ ಸಿಲುಕಿ ಚೀರಾಡುತ್ತಿದ್ದರು. ಸ್ಥಳೀಯರೇ ಎಲ್ಲರನ್ನೂ ರಕ್ಷಿಸಿದ್ದಾರೆ. ನಿರ್ಲಕ್ಷ್ಯದ ಚಾಲನೆ ಆರೋಪದಡಿ ಚಾಲಕನ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸರು ತಿಳಿಸಿದರು.

ಡ್ರಗ್ಸ್ ಮಾರಾಟ: ಇಬ್ಬರ ಬಂಧನ

ಅಪರಾಧ ಸುದ್ದಿ

ಬೆಂಗಳೂರು: ನಗರದ ಹಲವೆಡೆ ಡ್ರಗ್ಸ್ ಮಾರುತ್ತಿದ್ದ ಆರೋಪದಡಿ ಇಬ್ಬರು ವಿದೇಶಿಯರನ್ನು ಬಾಗಲಗುಂಟೆ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಮಲ್ಲಸಂದ್ರದಲ್ಲಿ ಸೆ. 6ರಂದು ಸುತ್ತಾಡುತ್ತಿದ್ದ ಇಬ್ಬರು, ಪರಿಚಯಸ್ಥ ಗ್ರಾಹಕರಿಗೆ ಡ್ರಗ್ಸ್ ಮಾರುತ್ತಿದ್ದರು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ದಾಳಿ ಮಾಡಿ ಆರೋಪಿಗಳನ್ನು ಸೆರೆ ಹಿಡಿಯಲಾಗಿದೆ. ₹ 21 ಗ್ರಾಂ ಎಂಡಿಎಂಎ ಮಾತ್ರೆಗಳು, ₹2 ಸಾವಿರ ನಗದು ಹಾಗೂ ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಒಬ್ಬ ಆರೋಪಿ, ದಕ್ಷಿಣ ಆಫ್ರಿಕಾದವ. ಇನ್ನೊಬ್ಬ, ನೈಜೀರಿಯಾದವ. ಬಟ್ಟೆ ವ್ಯಾಪಾರಕ್ಕಾಗಿ ಇಬ್ಬರೂ ನಗರಕ್ಕೆ ಬಂದಿದ್ದರು. ಪೆಡ್ಲರ್‌ಗಳಿಂದ ಡ್ರಗ್ಸ್ ಖರೀದಿಸಿ ಮಾರುತ್ತಿದ್ದರು' ಎಂದರು.

ಕಳವು, ಸುಲಿಗೆ: ಮೂವರ ಸೆರೆ

ಬೆಂಗಳೂರು: ದ್ವಿಚಕ್ರ ವಾಹನ ಕಳ್ಳತನ ಹಾಗೂ ಸುಲಿಗೆ ಪ್ರಕರಣದ ಮೂವರು ಆರೋಪಿಗಳನ್ನು ಹಲಸೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

'ವಿನೋದ್ (22), ಪ್ರಶಾಂತ್ (19) ಹಾಗೂ ರಾಜೀವ್ ಕುಮಾರ್ ಗುಪ್ತ ಬಂಧಿತರು. ಅವರಿಂದ ₹ 5 ಲಕ್ಷ ನಗದು, 46 ಗ್ರಾಂ ಚಿನ್ನಾಭರಣ, 250 ಗ್ರಾಂ ಬೆಳ್ಳಿ ಸಾಮಗ್ರಿ ಹಾಗೂ ಮೂರು ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಮೂವರು ಆರೋಪಿಗಳು, ಅಪರಾಧ ಹಿನ್ನೆಲೆಯುಳ್ಳವರು. ಅಶೋಕನಗರ, ಆಡುಗೋಡಿ, ಪುಲಿಕೇಶಿನಗರ ಠಾಣೆ ವ್ಯಾಪ್ತಿಯಲ್ಲೂ ಕೃತ್ಯ ಎಸಗಿದ್ದರು. ಕೆಲ ತಿಂಗಳು ಜೈಲಿನಲ್ಲಿದ್ದು ಜಾಮೀನು ಮೇಲೆ ಹೊರ ಬಂದಿದ್ದ ಆರೋಪಿಯೊಬ್ಬ ವಿಚಾರಣೆಗೆ ಹಾಜರಾಗದೇ ತಲೆಮರೆಸಿಕೊಂಡಿದ್ದ. ಈತನ ಬಂಧನಕ್ಕೆ ವಾರಂಟ್ ಜಾರಿಯಲ್ಲಿತ್ತು' ಎಂದರು.

ಬ್ರ್ಯಾಂಡ್ ಬೆಂಗಳೂರು: ವರದಿ ಸಲ್ಲಿಸಲು ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬ್ರ್ಯಾಂಡ್ ಬೆಂಗಳೂರು' ಪರಿಕಲ್ಪನೆಯಡಿ 8 ವಿಷಯಗಳ ಕುರಿತು ಸಿದ್ದಪಡಿಸಿರುವ ವರದಿಗಳನ್ನು ಕೂಡಲೇ ಸಲ್ಲಿಸಲು ಬ್ರ್ಯಾಂಡ್ ಬೆಂಗಳೂರು ಸಮಾವೇಶ ಸಮಿತಿ ಅಧ್ಯಕ್ಷ ಜಯರಾಂ ರಾಯಪುರ ಅವರು ನೋಡಲ್ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಬ್ರ್ಯಾಂಡ್ ಬೆಂಗಳೂರು ಸಮಾವೇಶವನ್ನು ಆಯೋಜಿಸಲು ನಡೆದ ಉನ್ನತ ಮಟ್ಟದ ಸಭೆಯಲ್ಲಿ ಅವರು ಮಾತನಾಡಿದರು.

ಯೋಜನೆಯ ಅನುಷ್ಠಾನಕ್ಕಾಗಿ ಈಗಾಗಲೇ ಸಾಕಷ್ಟು ಸಿದ್ದತೆಗಳನ್ನು ಮಾಡಿಕೊಳ್ಳಲಾಗಿದೆ. ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅಧ್ಯಕ್ಷತೆಯಲ್ಲಿ ಈಗಾಗಲೇ ಸರ್ವಪಕ್ಷಗಳ ಶಾಸಕರು, ಸಂಸದರು ಹಾಗೂ ಜನಪ್ರತಿನಿಧಿಗಳ ಸಭೆ ನಡೆಸಲಾಗಿದೆ. ಅಲ್ಲದೆ ವಿವಿಧ ಕ್ಷೇತ್ರಗಳ ಗಣ್ಯರು, ಸ್ಥಳೀಯ ನಾಗರಿಕ ಸಂಘ ಸಂಸ್ಥೆಗಳ ಪ್ರತಿನಿಧಿಗಳು, ನಿವಾಸಿ ಕ್ಷೇಮಾಭಿವೃದ್ಧಿ ಸಂಘಟನೆಗಳ ಪ್ರತಿನಿಧಿಗಳೊಂದಿಗೆ ಸಭೆ ನಡೆಸಿ ಸಲಹೆ/ ಅಭಿಪ್ರಾಯಗಳನ್ನು ಪಡೆಯಲಾಗಿದೆ ಎಂದು ಮಾಹಿತಿ ನೀಡಿದರು.

ಸಾರ್ವಜನಿಕರಿಂದಲೂ ವೆಬ್ ಪೋರ್ಟಲ್ ಮೂಲಕ ಬೆಂಗಳೂರಿನ ಅಭಿವೃದ್ಧಿಗಾಗಿ 7 ವಿಷಯಗಳಾದ ಸಂಚಾರಯುಕ್ತ ಬೆಂಗಳೂರು, ಹಸಿರು ಬೆಂಗಳೂರು, ಸ್ವಚ್ಛ ಬೆಂಗಳೂರು, ಜನಹಿತ ಬೆಂಗಳೂರು, ಆರೋಗ್ಯಕರ ಬೆಂಗಳೂರು, ಟೆಕ್ ಬೆಂಗಳೂರು ಹಾಗೂ ಜಲಸುರಕ್ಷಾ ಬೆಂಗಳೂರು ಕುರಿತು 70 ಸಾವಿರಕ್ಕೂ ಹೆಚ್ಚು ಅಭಿಪ್ರಾಯ ಮತ್ತು ಸಲಹೆಗಳನ್ನು ಸ್ವೀಕರಿಸಲಾಗಿದೆ. ಬೆಂಗಳೂರನ್ನು ಜ್ಞಾನದ ನಗರವನ್ನಾಗಿಸುವ ನಿಟ್ಟಿನಲ್ಲಿ 'ಶೈಕ್ಷಣಿಕ ಬೆಂಗಳೂರು' ವಿಷಯದ ಬಗ್ಗೆ ಶಿಕ್ಷಣ ತಜ್ಞರ ಸಲಹೆ ಪಡೆಯಲಾಗಿದೆ. ಒಟ್ಟಾರೆ 8 ಪ್ರಮುಖ ವಿಷಯಗಳ ಕುರಿತು ಸಿದ್ದಪಡಿಸಿರುವ ವರದಿಗಳನ್ನು ಸಂಬಂಧಿಸಿದ ಶೈಕ್ಷಣಿಕ ಪಾಲುದಾರ ಸಂಸ್ಥೆಗಳು ಕೂಡಲೇ ಸಲ್ಲಿಸಲು ಸೂಚನೆ ನೀಡಲಾಯಿತು.



ಬ್ರ್ಯಾಂಡ್ ಬೆಂಗಳೂರು ಸಮಾವೇಶ ಸಮಿತಿ ಅಧ್ಯಕ್ಷ ಜಯರಾಂ ರಾಯಪುರ ಅವರ ನೇತೃತ್ವದಲ್ಲಿ ನೋಡಲ್ ಅಧಿಕಾರಿಗಳ ಸಭೆ ಶುಕ್ರವಾರ ನಡೆಯಿತು

ಬ್ರ್ಯಾಂಡ್ ಬೆಂಗಳೂರು ಪರಿಕಲ್ಪನೆಯ 8 ವಿಷಯಗಳ ಕುರಿತಾಗಿ ಸಿದ್ದಪಡಿಸಿರುವ ವರದಿಗಳ ಆಧಾರದ ಮೇಲೆ 8 ಪ್ರತ್ಯೇಕ ಪ್ರಾತ್ಯಕ್ಷಿಕೆಗಳನ್ನು ಸಿದ್ದಪಡಿಸಿಕೊಳ್ಳಬೇಕು. ಸಾರ್ವಜನಿಕರಿಂದ ಸ್ವೀಕೃತಿಗೊಂಡಿರುವ ಅಭಿಪ್ರಾಯಗಳ ಬಗ್ಗೆ ಹಾಗೂ ತಜ್ಞರೊಂದಿಗೆ ವಿಚಾರ ವಿನಿಮಯ ನಡೆಸುವ ಬಗ್ಗೆ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಸಮಾವೇಶ ಏರ್ಪಡಿಸಲಾಗುವುದು. ಈ ಸಂಬಂಧ ಅಗತ್ಯವಿರುವ ಎಲ್ಲಾ ರೀತಿಯ ಸಿದ್ದತೆಗಳನ್ನು ಮಾಡಿಕೊಳ್ಳಲು ಬಿಬಿಎಂಪಿ ಆಡಳಿತ ವಿಭಾಗದ ಉಪ ಆಯುಕ್ತರಿಗೆ ಜಯರಾಂ ಸೂಚನೆ ನೀಡಿದರು.

ಸಭೆಯಲ್ಲಿ ಬ್ರ್ಯಾಂಡ್ ಬೆಂಗಳೂರು ಸಮಾವೇಶ ಸಮಿತಿಯ ಸದಸ್ಯರಾದ ಡಾ. ತ್ರಿಲೋಕ್ ಚಂದ್ರ, ಡಾ. ಕೆ. ಹರೀಶ್ ಕುಮಾರ್ ಇದ್ದರು.

382 ರೈಲು ಬೋಗಿಗಳಲ್ಲಿ ಸರಕು ಸಾಗಣೆ: ಐತಿಹಾಸಿಕ ದಾಖಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೈರುತ್ಯ ರೈಲ್ವೆ ವಲಯದ ಬೆಂಗಳೂರು ವಿಭಾಗದಲ್ಲಿ ಗುರುವಾರ ಒಂದೇ ದಿನದಲ್ಲಿ 382 ಬೋಗಿಗಳಲ್ಲಿ ಸರಕು ತುಂಬಿ ಸಾಗಿಸಲಾಗಿದೆ.

'ಇದೇ ಮೊದಲ ಬಾರಿಗೆ ಹೆಚ್ಚು ಪ್ರಮಾಣದಲ್ಲಿ ಸರಕು ಸಾಗಿಸಲಾಗಿದ್ದು, ಇತಿಹಾಸದಲ್ಲಿ ಇದೊಂದು ದಾಖಲೆ' ಎಂದು ಸಾರ್ವಜನಿಕ ಸಂಪರ್ಕ ಅಧಿಕಾರಿ ತಿಳಿಸಿದ್ದಾರೆ.

'ಪೆಟ್ರೋಲಿಯಂ ತೈಲ, ಆಟೊಮೊಬೈಲ್, ಗ್ರಾನೈಟ್ ಹಾಗೂ ಇತರೆ ಸರಕುಗಳನ್ನು ಬೋಗಿಯಲ್ಲಿ ತುಂಬಲಾಗಿತ್ತು.'

'ಸರಕು ಸಾಗಣೆ ಪ್ರಮಾಣ ದ್ವಿಗುಣಗೊಳಿಸಲು ಹಾಗೂ ಸರಕು ಸಾಗಣೆ ಉತ್ತೇಜಿಸಲು ವ್ಯಾಪಾರ ಅಭಿವೃದ್ಧಿ ಘಟಕಗಳನ್ನು ತೆರೆಯಲಾಗಿದೆ. ಇದಕ್ಕೆ ವ್ಯಾಪಾರಿಗಳಿಂದಲೂ ಉತ್ತಮ ಸ್ಪಂದನೆ ಸಿಕ್ಕಿದೆ. 2023ರ ಮಾರ್ಚ್ 31ರಂದು ಒಂದೇ ದಿನ 354 ಬೋಗಿಗಳನ್ನು ಸರಕು ತುಂಬಲಾಗಿತ್ತು. ಗುರುವಾರದಂದು (ಸೆ. 7) 382 ಬೋಗಿಗಳಲ್ಲಿ ಸರಕು ತುಂಬಲಾಗಿದ್ದು, ಹೊಸ ದಾಖಲೆ ನಿರ್ಮಾಣವಾಗಿದೆ' ಎಂದೂ ತಿಳಿಸಿದ್ದಾರೆ.

ಎಲೆಕ್ಟ್ರಿಕ್ ಬಸ್ ಗುತ್ತಿಗೆ: ವಿರೋಧ

ಬೆಂಗಳೂರು: ₹ 150 ಕೋಟಿ ವೆಚ್ಚದಲ್ಲಿ 320 ಎಲೆಕ್ಟ್ರಿಕ್ ಬಸ್‌ಗಳನ್ನು ಗುತ್ತಿಗೆ ಆಧಾರದಲ್ಲಿ ಬಿಎಂಟಿಸಿ ಪಡೆಯಲು ಸಚಿವ ಸಂಪುಟವು ಒಪ್ಪಿಗೆ ನೀಡಿದ್ದು ಈ ಕ್ರಮವನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ನೌಕರರ ಫೆಡರೇಷನ್ ಖಂಡಿಸಿದೆ.

'ಎಲೆಕ್ಟ್ರಿಕ್ ಬಸ್‌ಗಳನ್ನು 'ಫೇಮ್' ಯೋಜನೆಯ ಹಣ ಪಡೆದು ಬಿಎಂಟಿಸಿಯೇ ನಡೆಸಬೇಕು. ಗುತ್ತಿಗೆ ಆಧಾರಿತ ಬಸ್‌ಗಳು ಬಂದರೆ ಕಾರ್ಮಿಕರ ಉದ್ಯೋಗ ಕಡಿತವಾಗುತ್ತದೆ. ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಸರ್ಕಾರವೇ ನಿಗಮಗಳ ಮೂಲಕ ಒದಗಿಸಬೇಕು' ಎಂದು ಅಧ್ಯಕ್ಷ ಎಚ್. ಡಿ.ರೇವಪ್ಪ ಆಗ್ರಹಿಸಿದ್ದಾರೆ.

'ಗುತ್ತಿಗೆ ಪಡೆದ ಬಸ್‌ಗೆ ಪ್ರತಿ ಕಿ.ಮೀಗೆ ₹ 51ರಂತೆ ಹಣ ಪಾವತಿಸಬೇಕು. ಗುತ್ತಿಗೆ ಬಸ್ ಓಡುವ ಮಾರ್ಗದಲ್ಲಿ ನಿರೀಕ್ಷಿತ ಆದಾಯ ಗಳಿಕೆ ಆಗದಿದ್ದರೆ ನಿಗಮವೇ ಭರಿಸಬೇಕು. ಒಪ್ಪಂದದ ಪ್ರಕಾರ ಗುತ್ತಿಗೆದಾರನಿಗೆ ಹಣ ಕೊಡಲೇಬೇಕು. ಬಿಎಂಟಿಸಿ ಸಾವಿರಾರು ಕೋಟಿ ಹಣದ ಕೊರತೆಯಿಂದ ಬಳಲುತ್ತಿದೆ. ಇನ್ನಷ್ಟು ತೀವ್ರ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದರೆ ಒಂದೊಂದೇ ಘಟಕಗಳನ್ನು ಖಾಸಗಿಯವರಿಗೆ ವಹಿಸುವ ದಿನಗಳು ದೂರವಿಲ್ಲ' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗೋಮಾಂಸ ತ್ಯಾಜ್ಯ ಸಾಗಣೆ ಎಫ್‌ಐಆರ್‌ಗೆ ಹಿಂದೇಟು– ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗೋವು ಮಾಂಸದ ತ್ಯಾಜ್ಯವನ್ನು ಅಕ್ರಮವಾಗಿ ಸಾಗಣೆ ಮಾಡಲಾಗುತ್ತಿದ್ದು, ಈ ಕೃತ್ಯದ ಬಗ್ಗೆ ಎಫ್‌ಐಆರ್ ದಾಖಲಿಸಿ ತನಿಖೆ ನಡೆಸಲು ಪೊಲೀಸರು ಹಿಂದೇಟು ಹಾಕುತ್ತಿದ್ದಾರೆ' ಎಂದು ನಟಿ ಐಂದ್ರಿತಾ ರೈ ಆರೋಪಿಸಿದ್ದಾರೆ.

'ಎಕ್ಸ್ (ಟ್ವಿಟರ್)' ಸಾಮಾಜಿಕ ಮಾಧ್ಯಮದಲ್ಲಿ ಗೋವು ಮಾಂಸ ತ್ಯಾಜ್ಯದ ಫೋಟೊ ಸಮೇತ ಪೋಸ್ಟ್ ಪ್ರಕಟಿಸಿರುವ ಐಂದ್ರಿತಾ, 'ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ನಡೆಸಬೇಕು' ಎಂದು ಪೊಲೀಸ್ ಕಮಿಷನರ್ ಹಾಗೂ ಡಿಸಿಪಿ ಅವರನ್ನು ಒತ್ತಾಯಿಸಿದ್ದಾರೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರಿಗೂ ಪೋಸ್ಟ್ ಟ್ಯಾಗ್ ಮಾಡಿದ್ದಾರೆ.

'ಗೋವುಗಳನ್ನು ಹತ್ಯೆ ಮಾಡಿ, ಅದರ ಮಾಂಸ ಹಾಗೂ ಅದರ ತ್ಯಾಜ್ಯವನ್ನು ಟ್ರಕ್‌ನಲ್ಲಿ ಸಾಗಿಸಲಾಗುತ್ತಿತ್ತು. ಬೊಮ್ಮನಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ಟ್ರಕ್ ಹೊರಟಿದ್ದ ಸಂದರ್ಭದಲ್ಲಿ ಪೊಲೀಸರಿಗೆ ಮಾಹಿತಿ ಇತ್ತು. ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ನಡೆಸಲು ಪೊಲೀಸರು ಹಿಂದೇಟು ಹಾಕಿದರು' ಎಂದು ನಟಿ ದೂರಿದ್ದಾರೆ.

ಪೋಸ್ಟ್ ಹಂಚಿಕೊಂಡಿರುವ ಹಲವರು, 'ಗೋವುಗಳ ಹತ್ಯೆಯನ್ನು ನಿಷೇಧಿಸಲಾಗಿದೆ. ಇಂಥ ಸಂದರ್ಭದಲ್ಲಿಯೇ ಸಾಕಷ್ಟು ಗೋವುಗಳನ್ನು ಹತ್ಯೆ ಮಾಡಿ ಮಾಂಸದ ತ್ಯಾಜ್ಯವನ್ನು ಸಾಗಿಸಲಾಗುತ್ತಿದೆ. ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಜರುಗಿಸಿ' ಎಂದು ಒತ್ತಾಯಿಸಿದ್ದಾರೆ.

ಆರೋಪದ ಬಗ್ಗೆ ಪ್ರತಿಕ್ರಿಯಿಸಿರುವ ಆಗ್ನೇಯ ವಿಭಾಗದ ಡಿಸಿಪಿ ಸಿ.ಕೆ.ಬಾಬಾ, 'ಮಾಹಿತಿ ಬರುತ್ತಿದ್ದಂತೆ ವೈದ್ಯ ಸಮೇತ ಸ್ಥಳಕ್ಕೆ ಹೋಗಿ ಟ್ರಕ್‌ನಲ್ಲಿ ಪರಿಶೀಲನೆ ನಡೆಸಲಾಗಿದೆ. ಟ್ರಕ್‌ನಲ್ಲಿ ಗೋವಿನ ಮಾಂಸದ ತ್ಯಾಜ್ಯವಿರುವುದು ವೈದ್ಯರ ತಪಾಸಣೆಯಿಂದ ತಿಳಿದುಬಂದಿದೆ. ಆದರೆ, ಈ ತ್ಯಾಜ್ಯ ಸಾಗಣೆಗೆ ಬಿಬಿಎಂಪಿ ಪರವಾನಗಿ ಇರುವುದು ಗೊತ್ತಾಗಿದೆ' ಎಂದಿದ್ದಾರೆ.

'ಸುಸೈಡ್ ಲಾಸ್ ಸರ್ವೈವರ್ಸ್ ಫೋರಂ' ಆಯೋಜಿಸಿದ ಸಂವಾದದಲ್ಲಿ ಮನೋವೈದ್ಯರು ಕಳವಳ

'ಪ್ರತಿ ವರ್ಷ ಎಂಟು ಲಕ್ಷ ಜನ ಆತ್ಮಹತ್ಯೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ ಜಗತ್ತಿನಲ್ಲಿ ಪ್ರತಿ ವರ್ಷ ಸುಮಾರು 8 ಲಕ್ಷ ಜನರು ಆತ್ಮಹತ್ಯೆಯಿಂದ ಮೃತಪಡುತ್ತಾರೆ. ಈ ರೀತಿ ಆತ್ಮಹತ್ಯೆ ಪ್ರಕರಣದಿಂದ ಇನ್ನಷ್ಟು ಮಂದಿ ಪ್ರಭಾವಿತರಾಗುತ್ತಾರೆ' ಎಂದು ಮನೋವೈದ್ಯರು ಹಾಗೂ ಪ್ರಾಧ್ಯಾಪಕರು ಕಳವಳ ವ್ಯಕ್ತಪಡಿಸಿದರು.

ವಿಶ್ವ ಆತ್ಮಹತ್ಯೆ ತಡೆಗಟ್ಟುವ ದಿನದ ಪ್ರಯುಕ್ತ ರಾಷ್ಟ್ರೀಯ ಮಾನಸಿಕ ಆರೋಗ್ಯ ಹಾಗೂ ನರವಿಜ್ಞಾನ ಸಂಸ್ಥೆಯ (ನಿಮ್ಹಾನ್ಸ್) ಸುಸೈಡ್ ಲಾಸ್ ಸರ್ವೈವರ್ಸ್ ಫೋರಂ ನಗರದಲ್ಲಿ ಶುಕ್ರವಾರ ಆಯೋಜಿಸಿದ ಸಂವಾದದಲ್ಲಿ ವಿಷಯ ತಜ್ಞರು ಆತ್ಮಹತ್ಯೆ ತಡೆ ಬಗ್ಗೆ ಚರ್ಚಿಸಿದರು.



ಸಂವಾದದಲ್ಲಿ ಡಾ. ಶೇಖರ್ ಪಿ. ಶೇಷಾದ್ರಿ, ಸ್ನೇಹಾ ರಾವ್, ಡಾ. ರಜನಿ ಪಿ. ಹಾಗೂ ಡಾ. ನಂದಿನಿ ಮುರಳಿ ಇದ್ದಾರೆ.

ನಿಮ್ಹಾನ್ಸ್‌ನ ಮಕ್ಕಳ ಮತ್ತು ಹದಿಹರೆಯದವರ ಮನೋವೈದ್ಯಕೀಯ ವಿಭಾಗದ ನಿವೃತ್ತ ಪ್ರಾಧ್ಯಾಪ ಡಾ. ಶೇಖರ್ ಪಿ. ಶೇಷಾದ್ರಿ, 'ಆತ್ಮೀಯರನ್ನು ಕಳೆದುಕೊಂಡಾಗ ಉಂಟಾಗುವ ಭಾವನೆಗಳು, ಗೊಂದಲ, ಅಪರಾಧ, ಕಳಂಕ, ಅವಮಾನ ಸೇರಿದಂತೆ ವಿವಿಧ ಸಂದರ್ಭದಲ್ಲಿ ಆತ್ಮಹತ್ಯೆಯ ಆಲೋಚನೆಗಳು ಸುಳಿದಾಡುತ್ತವೆ. ಆತ್ಮಹತ್ಯೆಯನ್ನು ತಡೆಯಲು ಆತ್ಮಹತ್ಯೆ ಪ್ರಯತ್ನದಿಂದ ಬದುಕುಳಿದವರ ಧ್ವನಿಗಳು ಅತ್ಯಗತ್ಯ. ಆತ್ಮಹತ್ಯೆ ತಡೆಗೆ ಜನರಲ್ಲಿ ಜಾಗೃತಿ ಮೂಡಿಸಿ, ಸೂಕ್ತ ಮಾರ್ಗದರ್ಶನ ನೀಡಬೇಕು' ಎಂದು ಹೇಳಿದರು.

'ಸುಸೈಡ್ ಲಾಸ್ ಸರ್ವೈವರ್ಸ್ ಫೋರಂ' ಸಂಘಟಕ ಡಾ. ಅನೀಶ್ ವಿ. ಚೆರಿಯನ್, 'ಆತ್ಮಹತ್ಯೆ ಪ್ರಯತ್ನದ ಬಳಿಕ ಅವಮಾನದ ಜತೆಗೆ ಕಳಂಕದ ಭಾವನೆ ಕೆಲವರಲ್ಲಿ ಇರುತ್ತದೆ. ನಮ್ಮ ವೇದಿಕೆಯು ಅಂತಹವರನ್ನು ಸಹಜ ಸ್ಥಿತಿಗೆ ತರಲು ಶ್ರಮಿಸಲಿದೆ. ಈ ನಿಟ್ಟಿನಲ್ಲಿ ಅಗತ್ಯ ಮಾರ್ಗದರ್ಶನ ನೀಡಲಾಗುತ್ತದೆ' ಎಂದರು.

ಅನನ್ಯಾ–ಎ ಫೌಂಡೇಶನ್‌ನ ಸಂಸ್ಥಾಪಕಿ ಸ್ನೇಹಾ ರಾವ್, 'ನಾನು ಮಗಳನ್ನು ಕಳೆದುಕೊಂಡಾಗ ಮೊದಲಿನ ಸ್ಥಿತಿಗೆ ಮರಳುತ್ತೇನೆ ಅಂದುಕೊಂಡಿರಲಿಲ್ಲ. ಆ ವೇಳೆ ನನ್ನ ಕುಟುಂಬ, ಸ್ನೇಹಿತರು ಮತ್ತು ಸಹೋದ್ಯೋಗಿಗಳು ನನ್ನ ಜತೆಗೆ ನಿಂತರು. ನೋವಿನಿಂದ ಹೊರಬರಲು ಬೆಂಬಲ ನೀಡಿದರು. ಆತ್ಮಹತ್ಯೆ ತಡೆಯಲು ನಾವು ಒಟ್ಟಾಗಿ ಕೆಲಸ ಮಾಡಬೇಕು' ಎಂದು ಹೇಳಿದರು.

ಹಿರಿಯ ಪ್ರಾಧ್ಯಾಪಕ ಡಾ. ಪ್ರಭಾಚಂದ್ರ, 'ಆತ್ಮಹತ್ಯೆ ಜಾಗೃತಿ ಕಾರ್ಯಕ್ರಮಗಳನ್ನು ಶಾಲೆ–ಕಾಲೇಜು, ಕೆಲಸದ ಸ್ಥಳ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಕಡ್ಡಾಯಗೊಳಿಸಬೇಕು' ಎಂದರು.

'ಬರ: ಕೇಂದ್ರಕ್ಕೆ ವರದಿ ಶೀಘ್ರ'

ಹುಬ್ಬಳ್ಳಿ: 'ರಾಜ್ಯದಲ್ಲಿರುವ ಬರ ಪರಿಸ್ಥಿತಿ ಬಗ್ಗೆ ಕೇಂದ್ರ ಸರ್ಕಾರಕ್ಕೆ ಸದ್ಯದಲ್ಲೇ ವರದಿ ನೀಡುತ್ತೇವೆ. ಸಚಿವ ಸಂಪುಟ ಉಪಸಮಿತಿಯು ಈಗಾಗಲೇ ಕೆಲ ತಾಲ್ಲೂಕುಗಳನ್ನು ಬರಪೀಡಿತವೆಂದು ಘೋಷಿಸಲು ಶಿಫಾರಸು ಮಾಡಿದೆ. ಇನ್ನುಳಿದ ತಾಲ್ಲೂಕುಗಳ ಬಗ್ಗೆ ನಿರ್ಧರಿಸಲಾಗುವುದು' ಎಂದು ಗೃಹ ಸಚಿವ ಜಿ.ಪರಮೇಶ್ವರ್ ತಿಳಿಸಿದರು.

'ಹಿಂದೂ ಹಾಗೂ ಸನಾತನ ಧರ್ಮದ ಬಗ್ಗೆ ಹಲವರು ಹಲವು ರೀತಿ ಮಾತನಾಡಿದ್ದಾರೆ. ಎಲ್ಲದಕ್ಕೂ ಉತ್ತರ ಕೊಡುತ್ತ ಕೂರಲು ಆಗಲ್ಲ' ಎಂದು ಅವರು ಶುಕ್ರವಾರ ಸುದ್ದಿಗಾರರಿಗೆ ತಿಳಿಸಿದರು.

'ಭ್ರಷ್ಟಾಚಾರದ ವಿರುದ್ಧ ಬಿಜೆಪಿ ಹೋರಾಟ ಮಾಡಲಿ. ನಾವು ಉತ್ತರ ನೀಡುತ್ತೇವೆ. ಜನರೂ ಉತ್ತರ ಕೊಟ್ಟಿದ್ದಾರೆ. ಬಿಜೆಪಿ ಇನ್ನೂ ಎಚ್ಚೆತ್ತುಕೊಳ್ಳದಿದ್ದರೆ, ಮುಂಬರುವ ಲೋಕಸಭಾ ಚುನಾವಣೆಯಲ್ಲೂ ಜನ ತಕ್ಕ ಉತ್ತರ ಕೊಡುವರು' ಎಂದರು.

ಶನಿವಾರ, ಸೆಪ್ಟೆಂಬರ್ 9, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 251 | ಪುಟ 20

www.prajavani.net

prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ

ಮಹಿಳೆಯರು, ಮಕ್ಕಳು ಎಂಥ ಪೌಷ್ಟಿಕ ಆಹಾರ ಸೇವನೆ ಮಾಡಿದರೆ ಸೂಕ್ತ? ಇಲ್ಲಿದೆ ಸಂಕ್ಷಿಪ್ತ ಮಾಹಿತಿ



ಚರ್ಚೆ ಲೋಕಸಭೆ, ರಾಜ್ಯ ವಿಧಾನಸಭೆಗಳಿಗೆ ಏಕಕಾಲದಲ್ಲಿ ಚುನಾವಣೆ...

‘ಪ್ರಜಾಪ್ರಭುತ್ವ ಸಂಸ್ಥೆಗಳ ಮೇಲೆ ದಾಳಿ’ 8

ಹಟ್ಟಿ: 30ಗಳಲ್ಲಿ 110 ಕೆ.ಜಿ. ಚಿನ್ನ ಉತ್ಪಾದನೆ 8

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
66,598 ▲	19,819 ▲	₹60,950 (ಬೆಂಗಳೂರು) ▼	₹72,900 (ಬೆಂಗಳೂರು) ▼	83.02 ▲

ಉಪಚುನಾವಣೆ ಬಿಜೆಪಿಗೆ ಮೂರು, ‘ಇಂಡಿಯಾ’ಗೆ 4 ಸ್ಥಾನ

ನವದೆಹಲಿ: ಆರು ರಾಜ್ಯಗಳಲ್ಲಿನ ಏಳು ವಿಧಾನಸಭಾ ಕ್ಷೇತ್ರಗಳಿಗೆ ನಡೆದ ಉಪಚುನಾವಣೆಯ ಫಲಿತಾಂಶ ಶುಕ್ರವಾರ ಪ್ರಕಟಗೊಂಡಿದೆ. ಬಿಜೆಪಿ ಮೂರು ಕ್ಷೇತ್ರಗಳಲ್ಲಿ ಹಾಗೂ ‘ಇಂಡಿಯಾ’ ಮೈತ್ರಿಕೂಟದಲ್ಲಿ ಗುರುತಿಸಿಕೊಂಡಿರುವ ಪಕ್ಷಗಳು ನಾಲ್ಕು ಕ್ಷೇತ್ರಗಳಲ್ಲಿ ಜಯ ಗಳಿಸಿವೆ.

‘ಇಂಡಿಯಾ’ ಮೈತ್ರಿಕೂಟದ ಸಮಾಜವಾದಿ ಪಕ್ಷವು ಉತ್ತರಪ್ರದೇಶದ ಘೋಸಿ ಹಾಗೂ ಜಾರ್ಖಂಡ್ ಮುಕ್ತಿ ಮೋರ್ಚಾವು ಜಾರ್ಖಂಡ್‌ನ ಡುಮ್ರಿ ಕ್ಷೇತ್ರದಲ್ಲಿ ಗೆಲುವು ಸಾಧಿಸಿವೆ. ಪಶ್ಚಿಮ ಬಂಗಾಳದ ಧುಪ್ಗುರಿಯಲ್ಲಿ ತೃಣಮೂಲ ಕಾಂಗ್ರೆಸ್ ಪಕ್ಷವು (ಟಿಎಂಸಿ) ಜಯ ಗಳಿಸಿದೆ. ತ್ರಿಪುರದ ಬೊಕ್ಸಾನಗರ ಹಾಗೂ ಧನ್‌ಪುರ ಕ್ಷೇತ್ರಗಳಲ್ಲಿ ಸಿಪಿಎಂ ಕಳಪೆ ಪ್ರದರ್ಶನ ನೀಡಿದೆ. ಇಲ್ಲಿ ಸಿಪಿಎಂಗೆ ಕಾಂಗ್ರೆಸ್ ಬೆಂಬಲ ನೀಡಿತ್ತು. ಈ ಎರಡೂ ಕ್ಷೇತ್ರಗಳಲ್ಲಿ ಬಿಜೆಪಿ ಜಯಭೇರಿ ಬಾರಿಸಿದೆ. ಕೇರಳದ ಪುತ್ತುಪಲ್ಲಿಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯು ಸಿಪಿಎಂ ಅಭ್ಯರ್ಥಿ ವಿರುದ್ಧ ವಿಜಯ ಸಾಧಿಸಿದ್ದಾರೆ. ಉತ್ತರಾಖಂಡದ ಬಾಗೇಶ್ವರ ಕ್ಷೇತ್ರದಲ್ಲಿ ಬಿಜೆಪಿ ತನ್ನ ಸ್ಥಾನವನ್ನು ಉಳಿಸಿಕೊಂಡಿದೆ.

ಇಂದು, ನಾಳೆ ನವದೆಹಲಿಯಲ್ಲಿ ಶೃಂಗಸಭೆ • ವಿಶ್ವದ ಹಲವು ನಾಯಕರು ಭಾಗಿ

ಜಿ20: ಸಹಮತದ ವಿಶ್ವಾಸ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಜಿ20 ಶೃಂಗಸಭೆಗೆ ಕ್ಷಣಗಣನೆ ಆರಂಭವಾಗಿರುವ ನಡುವೆಯೇ, ಈ ಸಮಾವೇಶದ ಕೊನೆ ದಿನವಾದ ಭಾನುವಾರ ಅಂಗೀಕರಿಸಲಿರುವ ಉದ್ದೇಶಿತ ‘ನವದೆಹಲಿ ಘೋಷಣೆ’ ಕುರಿತು ವಿಶ್ವ ನಾಯಕರಲ್ಲಿ ಒಮ್ಮತ ಮೂಡಲಿದೆ ಎಂಬ ವಿಶ್ವಾಸವನ್ನು ಭಾರತ ಶುಕ್ರವಾರ ವ್ಯಕ್ತಪಡಿಸಿದೆ.

ರಷ್ಯಾ–ಉಕ್ರೇನ್ ಬಿಕ್ಕಟ್ಟು, ಹವಾಮಾನ ಬದಲಾವಣೆಗೆ ಸಂಬಂಧಿಸಿದ ವಿಷಯಗಳು ‘ನವದೆಹಲಿ ಘೋಷಣೆ’ಯ ಭಾಗವಾಗಿರಲಿವೆ ಎಂಬ ನಿರೀಕ್ಷೆ ಇದೆ. ಆದರೆ, ಈ ಕುರಿತು ನಿರ್ದಿಷ್ಟ ಮಾಹಿತಿ ನೀಡಲು ಜಿ20ಗೆ ಸಂಬಂಧಿಸಿದ ಉನ್ನತ ಅಧಿಕಾರಿಗಳು ನಿರಾಕರಿಸಿದ್ದಾರೆ.

‘ನವದೆಹಲಿ ಘೋಷಣೆ’ ಬಹುತೇಕ ಸಿದ್ಧವಾಗಿದೆ. ಕರಡು ಘೋಷಣೆಯನ್ನು ಜಿ20 ಸದಸ್ಯ ರಾಷ್ಟ್ರಗಳ ನಾಯಕರಿಗೆ ಸಲ್ಲಿಸಲಾಗಿದ್ದು, ಶೃಂಗಸಭೆಯಲ್ಲಿ ಅವರು ಈ ಕುರಿತು ನಿರ್ಧಾರ ಕೈಗೊಳ್ಳುವರು’ ಎಂದಿರುವ ಜಿ20ಯ ಭಾರತದ ಶೆರ್ಪಾ ಅಮಿತಾಭ್ ಕಾಂತ್, ಯಾವೆಲ್ಲ ಅಂಶಗಳನ್ನು ಈ ಘೋಷಣೆಯು ಒಳಗೊಂಡಿರಲಿದೆ ಎಂಬ ವಿವರ ನೀಡಿಲ್ಲ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಈ ಘೋಷಣೆ ಬಗ್ಗೆ ಜಿ20 ಸದಸ್ಯ ರಾಷ್ಟ್ರಗಳ ನಾಯಕರು ಒಮ್ಮತ ವ್ಯಕ್ತಪಡಿಸಿದ ಬಳಿಕ ಅಧಿಕೃತ ಜಂಟಿ ಹೇಳಿಕೆ ಹೊರಬೀಳುವ ವಿಶ್ವಾಸ ಇದೆ’ ಎಂದು ಹೇಳಿದ್ದಾರೆ.

‘ನವದೆಹಲಿ ಘೋಷಣೆ’ಯು ಅಭಿವೃದ್ಧಿ ಹೊಂದುತ್ತಿರುವ ದೇಶಗಳು ಹಾಗೂ ಭೌಗೋಳಿಕವಾಗಿ ದಕ್ಷಿಣದಲ್ಲಿರುವ ರಾಷ್ಟ್ರಗಳ ಧ್ವನಿಯಾಗಿರಲಿದೆ.



ನವದೆಹಲಿಗೆ ಶುಕ್ರವಾರ ತಲುಪಿದ ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರೊಂದಿಗೆ ಪ್ರಧಾನಿ ನರೇಂದ್ರ ಮೋದಿ ಸಮಾಲೋಚನೆ ನಡೆಸಿದರು —ಪಿಟಿಐ ಚಿತ್ರ

ಮುಖ್ಯಾಂಶಗಳು

- ಅಮೆರಿಕ ಅಧ್ಯಕ್ಷ ಜೋ ಬೈಡನ್ ಜೊತೆ ಮೋದಿ ಚರ್ಚೆ
- ಹಸೀನಾ, ಪ್ರವಿಂದ್ ಜಗನ್ನಾಥ್ ಜೊತೆ ದ್ವಿಪಕ್ಷೀಯ ಮಾತುಕತೆ

ಆಫ್ರಿಕಾ ಒಕ್ಕೂಟವನ್ನು ಜಿ20ಕ್ಕೆ ಸೇರಿಸಿಕೊಳ್ಳುವ ಕುರಿತು ಶನಿವಾರ ನಿರ್ಧಾರ ಕೈಗೊಳ್ಳುವ ಸಾಧ್ಯತೆ ಇದೆ

ವಿನಯಮೋಹನ್ ಕ್ವಾತ್ರಾ
ವಿದೇಶಾಂಗ ಕಾರ್ಯದರ್ಶಿ

ಭಾರತದ ಅಧ್ಯಕ್ಷತೆಯು ಒಳಗೊಳ್ಳುವಿಕೆ, ಮಹತ್ವಾಕಾಂಕ್ಷೆ ಹಾಗೂ ನಿರ್ಣಾಯಕವಾಗಿರಲಿದೆ ಎಂಬುದಾಗಿ ಪ್ರಧಾನಿ ಮೋದಿ ಅವರು ಸ್ಪಷ್ಟಮಾತುಗಳಲ್ಲಿ ಹೇಳಿದ್ದಾರೆ’ ಎಂದು ಕಾಂತ್ ತಿಳಿಸಿದ್ದಾರೆ.

9ನೇ ಪುಟ ನೋಡಿ



ರಾಜ್ಯ ಸರ್ಕಾರದ ನೀತಿಗಳ ವಿರುದ್ಧ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಬಿಜೆಪಿ ನಾಯಕರು ಪ್ರತಿಭಟನೆ ನಡೆಸಿದರು —ಪ್ರಜಾವಾಣಿ ಚಿತ್ರ

ಒಂದು ಕಾಳೂ ಅಕ್ಕಿ ನೀಡದ ನೀಚ ಸರ್ಕಾರ: ಬೊಮ್ಮಾಯಿ

‘ಕೈ’ ವಿರುದ್ಧ ‘ರಣಕಹಳೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದ ಕಾಂಗ್ರೆಸ್ ಸರ್ಕಾರ ವರ್ಗಾವಣೆ ದಂಧೆಯಲ್ಲಿ ಮುಳುಗಿದೆ. ಜನ ವಿರೋಧಿ ನೀತಿಗಳ ಮೂಲಕ ರಾಜ್ಯವನ್ನು ಆರ್ಥಿಕ ದಿವಾಳಿಯತ್ತ ಒಯ್ಯುತ್ತಿದೆ. ಈ ಸರ್ಕಾರದ ವಿರುದ್ಧ ಇಂದು ರಣಕಹಳೆ ಮೊಳಗಿಸಿದ್ದೇವೆ. ಇನ್ನು ಒಂದು ವರ್ಷ ಮನೆ– ಮನೆಗೆ ಹೋಗಿ ಸರ್ಕಾರದ ಬಣ್ಣ ಬಯಲು ಮಾಡುತ್ತೇವೆ’ ಎಂದು ಬಿಜೆಪಿ ನಾಯಕರು ಗುಡುಗಿದರು.

ರಾಜ್ಯ ಸರ್ಕಾರದ ನೀತಿಗಳನ್ನು ವಿರೋಧಿಸಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಶುಕ್ರವಾರ ಬಿಜೆಪಿ ಬೃಹತ್ ಪ್ರತಿಭಟನೆ ಹಮ್ಮಿಕೊಂಡಿತ್ತು. ಪ್ರತಿಭಟನೆಯಲ್ಲಿ ಬಿ.ಎಸ್.ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ, ಡಿ.ವಿ. ಸದಾನಂದಗೌಡ, ಗೋವಿಂದ ಕಾರಜೋಳ, ಆರ್.ಅಶೋಕ, ಡಾ.ಸಿ. ಎನ್.ಅಶ್ವತ್ಥನಾರಾಯಣ, ಇನ್ನೂ ಹಲವು ಶಾಸಕರು ಭಾಗವಹಿಸಿದ್ದರು.

ಬಸವರಾಜ ಬೊಮ್ಮಾಯಿ ಮಾತನಾಡಿ, ‘ರಾಜ್ಯದಲ್ಲಿ 200 ಯೂನಿಟ್ ವಿದ್ಯುತ್ ಕೊಡುವುದಾಗಿ ಹೇಳಿ ಈಗ ಲೋಡ್‌ಶೆಡ್ಡಿಂಗ್ ಮಾಡುತ್ತಿದ್ದಾರೆ. ರೈತರ ಪಂಪ್‌ಸೆಟ್‌ಗಳಿಗೆ ಎರಡರಿಂದ ಮೂರು ಗಂಟೆ ಮಾತ್ರ ವಿದ್ಯುತ್ ಪೂರೈಕೆ ಮಾಡಿ ಸಂಕಷ್ಟಕ್ಕೆ ಸಿಲುಕಿಸಿದ್ದಾರೆ. ನವೆಂಬರ್ ವೇಳೆ ‘ಝೀರೊ ಕರೆಂಟ್ ಝೀರೊ ಬಿಲ್’ ಯೋಜನೆ ಜಾರಿ ಬರುತ್ತದೆ. ನವೆಂಬರ್‌ನಿಂದಲೇ ರಾಜ್ಯದಲ್ಲಿ ಕತ್ತಲೆ ಆವರಿಸುತ್ತದೆ’ ಎಂದು ಎಚ್ಚರಿಸಿದರು.

‘ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜ್ಯ ಸರ್ಕಾರದ ವತಿಯಿಂದ ಒಂದು ಕಾಳೂ ಅಕ್ಕಿಯನ್ನು ಕೊಟ್ಟಿಲ್ಲ. ಈಗ ವಿತರಣೆ ಆಗುತ್ತಿರುವುದು ಮೋದಿ ನೇತೃತ್ವದ ಕೇಂದ್ರ ಸರ್ಕಾರದ ಅಕ್ಕಿ. ಬಿಜೆಪಿಯವರನ್ನು ನೀಚರು ಎಂದು ಸಿದ್ದರಾಮಯ್ಯ ಕರೆದಿದ್ದರು, ಒಂದು ಕಾಳೂ ಅಕ್ಕಿ ಕೊಡದ ಇವರೇ ನೀಚರು’ ಎಂದು ಹರಿಹಾಯ್ದರು.

5ನೇ ಪುಟ ನೋಡಿ

‘ಬರ ಘೋಷಿಸಲು ಮೀನಮೇಷ ಏಕೆ’

‘ರಾಜ್ಯದಲ್ಲಿ ಕಿತ್ತು ತಿನ್ನುವ ಬರ ಇದೆ. ಆದರೆ, ರಾಜ್ಯ ಸರ್ಕಾರ ಬರ ಘೋಷಿಸಿ ಪರಿಹಾರ ಕಾರ್ಯಕ್ಕೆಗೆತ್ತಿಕೊಳ್ಳಲು ಮೀನಮೇಷ ಎಣಿಸುತ್ತಿದೆ’ ಎಂದು ಬಿಜೆಪಿಯ ರಾಷ್ಟ್ರೀಯ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಕಿಡಿಕಾರಿದರು.

ಪ್ರತಿಭಟನೆಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಕುಡಿಯುಲು ಶುದ್ಧ ನೀರು ಸಿಗುತ್ತಿಲ್ಲ. ಕಾವೇರಿ ನೀರನ್ನು ತಮಿಳುನಾಡಿಗೆ ಬಿಟ್ಟು ಖಾಲಿ ಮಾಡಿದ್ದಾರೆ. ವಿದ್ಯುತ್ ಇಲ್ಲದೇ ಪಂಪ್‌ಸೆಟ್ ಕೂಡಾ ಹಾಳಾಗಿ ಹೋಗಿವೆ ಎಂದರು.

ಸರ್ಕಾರದ ಜನ ವಿರೋಧಿ ಮತ್ತು ರೈತ ವಿರೋಧಿ ನೀತಿಯ ವಿರುದ್ಧ ಜನಜಾಗೃತಿಗಾಗಿ ಅ. 16 ರಿಂದ ಕೋಲಾರದ ಕುರುಡುಮಲೆ ವಿನಾಯಕ ದೇವಸ್ಥಾನದಿಂದ ಪಕ್ಷದ ಇತರ ಮುಖಂಡರ ಜತೆ ರಾಜ್ಯ ಪ್ರವಾಸ ಮಾಡುವುದಾಗಿಯೂ ತಿಳಿಸಿದರು.

ಚಿನಕುರಳಿ

ಪ್ರಕಾಶ್ ಶೆಟ್ಟಿ



ಲೋಕಸಭೆ ಚುನಾವಣೆ: ಸದ್ಯವೇ ಸೀಟು ಹಂಚಿಕೆ ಘೋಷಣೆ

ಬಿಜೆಪಿ- ಜೆಡಿಎಸ್ ಮೈತ್ರಿ ಖಚಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಮೈತ್ರಿ ಮಾಡಿಕೊಳ್ಳಲು ಬಿಜೆಪಿ–ಜೆಡಿಎಸ್ ನಿರ್ಧರಿಸಿದ್ದು, ಕೆಲವೇ ದಿನಗಳಲ್ಲಿ ಸೀಟು ಹಂಚಿಕೆ ಕುರಿತು ಘೋಷಣೆ ಮಾಡುವ ಸಾಧ್ಯತೆ ಇದೆ. ಎರಡೂ ಪಕ್ಷಗಳ ವರಿಷ್ಠರ ಹಂತದಲ್ಲೇ ಮೈತ್ರಿಯ ನಿರ್ಧಾರ ಅಂತಿಮಗೊಂಡಿದೆ.

ಜೆಡಿಎಸ್ ನಾಯಕರು ಮೈತ್ರಿ ವಿಚಾರವನ್ನು ಅಧಿಕೃತವಾಗಿ ಬಹಿರಂಗಪಡಿಸಿಲ್ಲ. ಆದರೆ, ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಸೇರಿದಂತೆ ಆ ಪಕ್ಷದ ಕೆಲವು ಮುಖಂಡರು ಜೆಡಿಎಸ್ ಜತೆಗಿನ ಮೈತ್ರಿಯನ್ನು ಖಚಿತಪಡಿಸಿದ್ದಾರೆ.

ವಿಧಾನಸಭಾ ಚುನಾವಣಾ ಫಲಿತಾಂಶ ಪ್ರಕಟವಾದ ಬೆನ್ನಲ್ಲೇ ಉಭಯ ಪಕ್ಷಗಳ ಮಧ್ಯೆ ಮೈತ್ರಿಯ ಕುರಿತು ಚರ್ಚೆ ಆರಂಭವಾಗಿತ್ತು. ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ದೆಹಲಿಗೆ ತೆರಳಿ ಬಿಜೆಪಿ ವರಿಷ್ಠರ ಜತೆ ಚರ್ಚಿಸಿದ್ದರು.

5ನೇ ಪುಟ ನೋಡಿ

ಜೆಡಿಎಸ್‌ಗೆ ನಾಲ್ಕು ಕ್ಷೇತ್ರ?

ಜೆಡಿಎಸ್‌ಗೆ ನಾಲ್ಕು ಲೋಕಸಭಾ ಕ್ಷೇತ್ರಗಳನ್ನು ಬಿಟ್ಟುಕೊಡಲು ಬಿಜೆಪಿ ವರಿಷ್ಠರು ಒಪ್ಪಿದ್ದಾರೆ. ಹಾಸನ, ಕೋಲಾರ, ತುಮಕೂರು ಮತ್ತು ಮಂಡ್ಯ ಕ್ಷೇತ್ರಗಳನ್ನು ಬಿಟ್ಟುಕೊಡುವ ಸಾಧ್ಯತೆ ಇದೆ ಎಂಬ ಮಾಹಿತಿ ಲಭ್ಯವಾಗಿದೆ.

‘ಕ್ಷೇತ್ರ ಹಂಚಿಕೆಯ ನಿರ್ಧಾರ ಇನ್ನೂ ಅಂತಿಮ ಆಗಬೇಕಿದೆ. ಜೆಡಿಎಸ್ ಪ್ರಾಬಲ್ಯ ಆಧರಿಸಿ ಇನ್ನಷ್ಟು ಕ್ಷೇತ್ರಗಳಲ್ಲಿ ಅವಕಾಶ ದೊರಕಲೂಬಹುದು. ಅದು ಮುಂದಿನ ದಿನಗಳಲ್ಲಿ ನಿರ್ಧಾರ ಆಗಲಿದೆ’ ಎನ್ನುತ್ತಾರೆ ಜೆಡಿಎಸ್ ಮುಖಂಡರು.

ಮಂಡ್ಯದಲ್ಲಿ ಪಕ್ಷೇತರರಾಗಿ ಸ್ಪರ್ಧಿಸಿ ಆಯ್ಕೆಯಾಗಿರುವ ಸುಮಲತಾ ಅಂಬರೀಷ್, ಈಗ ಬಿಜೆಪಿ ಜತೆಗೆ ಉತ್ತಮ ಬಾಂಧವ್ಯ ಹೊಂದಿದ್ದಾರೆ. ಅವರನ್ನೇ, ಬಿಜೆಪಿ ಅಭ್ಯರ್ಥಿಯಾಗಿಸುವ ಲೆಕ್ಕಾಚಾರವೂ ಆ ಪಕ್ಷದ ನಾಯಕರಲ್ಲಿದೆ.

5ನೇ ಪುಟ ನೋಡಿ

SBI card

ಯುಪಿಐ ಪಾವತಿಗಳನ್ನು ಮಾಡುವುದು ಮತ್ತು ರಿವಾರ್ಡ್ಸ್ ಪಡೆಯುತ್ತಿಲ್ಲವೇ?

ರಿವಾರ್ಡ್ ಪಾಯಿಂಟ್‌ಗಳನ್ನು ಗಳಿಸಲು ನಿಮಗೆ ಹೊಸ ಮಾರ್ಗವನ್ನು ಪರಿಚಯಿಸಲಾಗುತ್ತಿದೆ. ನಿಮ್ಮ ರುಪೇ ಎಸ್‌ಬಿಐ ಕ್ರೆಡಿಟ್ ಕಾರ್ಡ್ ಅನ್ನು ಯಾವುದೇ ಯುಪಿಐ ಆ್ಯಪ್‌ನೊಂದಿಗೆ ಲಿಂಕ್ ಮಾಡಿ ಮತ್ತು ಪಾವತಿಗಳ ಮೇಲೆ ಅತ್ಯಾಕರ್ಷಕ ರಿವಾರ್ಡ್ಸ್ ಅನ್ನು ಗಳಿಸಿ.



ಯುಪಿಐ ಮೂಲಕ ಕ್ರೆಡಿಟ್ ಕಾರ್ಡ್ ಬಳಸಿ ಪಾವತಿಗಳನ್ನು ಮಾಡಲು: ಯಾವುದೇ ಯುಪಿಐ ಆ್ಯಪ್‌ಗೆ ಲಾಗ್ ಇನ್ ಮಾಡಿ | ಕ್ರೆಡಿಟ್ ಕಾರ್ಡ್ ಅನ್ನು ಲಿಂಕ್ ಮಾಡಲು ಸೆಟ್ಟಿಂಗ್‌ಗಳಿಗೆ ಹೋಗಿ | ರುಪೇ ಎಸ್‌ಬಿಐ ಕ್ರೆಡಿಟ್ ಕಾರ್ಡ್ ಅನ್ನು ಆಯ್ಕೆಮಾಡಿ | ಪಾವತಿ ಮಾಡಲು ಯುಪಿಐ ಪಿನ್ ಅನ್ನು ಹೊಂದಿಸಿ

ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ.

ರುಪೇ ಎಸ್‌ಬಿಐ ಕಾರ್ಡ್‌ಗೆ ಅರ್ಜಿ ಸಲ್ಲಿಸಿ.

RuPay Credit on UPI UNIFIED PAYMENTS INTERFACE

ಸುಧಾ, ಮಯೂರ ಓದಿರಿ





ದಂಡಕ್ಕೆ ರಿಯಾಯಿತಿ : ಇಂದು ಕೊನೆ ದಿನ

ಬೆಂಗಳೂರು: ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳ ದಂಡ ಪಾವತಿ ಮೇಲೆ ಶೇ 50ರಷ್ಟು ರಿಯಾಯಿತಿ ಘೋಷಿಸಲಾಗಿದ್ದು, ಜುಲೈ 6ರಿಂದ ಸೆ. 8ರವರೆಗೆ ₹ 8.07 ಕೋಟಿ ದಂಡ ಸಂಗ್ರಹವಾಗಿದೆ.

2023ರ ಫೆಬ್ರುವರಿ 11ರೊಳಗಿನ ಪ್ರಕರಣಗಳಿಗೆ ರಿಯಾಯಿತಿ ಸೌಲಭ್ಯ ನೀಡಲಾಗಿದೆ. ಮೊದಲ ದಿನದಿಂದಲೂ ಜನರಿಂದ ಉತ್ತಮ ಸ್ಪಂದನೆ ವ್ಯಕ್ತವಾಗುತ್ತಿದೆ. ಆನ್‌ಲೈನ್ ಹಾಗೂ ಆಫ್‌ಲೈನ್ ಮೂಲಕ ಜನರು ದಂಡ ತುಂಬುತ್ತಿದ್ದಾರೆ.

'ಈ ವರೆಗೆ 2.53 ಲಕ್ಷ ಪ್ರಕರಣಗಳು ಇತ್ಯರ್ಥಗೊಂಡಿವೆ. ರಿಯಾಯಿತಿ ಸೌಲಭ್ಯ ಪಡೆಯಲು ಸೆಪ್ಟೆಂಬರ್ 9 ಕೊನೆ ದಿನವಾಗಿದೆ' ಎಂದು ಜಂಟಿ ಕಮಿಷನರ್ ಎಂ.ಎನ್. ಅನುಚೇತ್ ತಿಳಿಸಿದ್ದಾರೆ.

ಪೊಲೀಸರಿಂದ 'ಸಂಚಾರ ಸಂಪರ್ಕ ದಿನ' ಇಂದು

ಬೆಂಗಳೂರು: ನಗರದ ಸಂಚಾರ ವ್ಯವಸ್ಥೆಗೆ ಸಂಬಂಧಪಟ್ಟಂತೆ ಸಮಸ್ಯೆಗಳನ್ನು ಆಲಿಸಲು ಪೊಲೀಸರು 'ಸಂಚಾರ ಸಂಪರ್ಕ ದಿನ' ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ.

ಶಿವಾನಂದ ವೃತ್ತ ಬಳಿಯ ಗಾಂಧಿಭವನದಲ್ಲಿ ಶನಿವಾರ ಬೆಳಿಗ್ಗೆ 11 ಗಂಟೆಗೆ ಕಾರ್ಯಕ್ರಮ ಆರಂಭವಾಗಲಿದೆ. ಕಮಿಷನರ್ ಬಿ. ದಯಾನಂದ್, ಜಂಟಿ ಕಮಿಷನರ್ ಎಂ.ಎನ್. ಅನುಚೇತ್ ಹಾಗೂ ಸಂಚಾರ ವಿಭಾಗದ ಪೊಲೀಸ್ ಅಧಿಕಾರಿಗಳು ಭಾಗವಹಿಸಲಿದ್ದಾರೆ.

'ಸುಗಮ ಸಂಚಾರ ವ್ಯವಸ್ಥೆ ಕಲ್ಪಿಸಲು ಪೊಲೀಸರು ಕೆಲಸ ಮಾಡುತ್ತಿದ್ದಾರೆ. ವ್ಯವಸ್ಥೆಯಲ್ಲಿ ಯಾವುದಾದರೂ ಸಮಸ್ಯೆ ಗಳಿದ್ದರೆ ಕಾರ್ಯಕ್ರಮದಲ್ಲಿ ಭಾಗವಹಿಸಿ ತಿಳಿಸಬಹುದು' ಎಂದು ಪೊಲೀಸರು ಕೋರಿದ್ದಾರೆ.

ನಗರದಲ್ಲಿ ಇಂದು

ಪವರ್ ಸ್ಟಾರ್ ಅಪ್ಪು ಕರ್ನಾಟಕ ಚಾಂಪಿಯನ್ ಡಾನ್ಸ್ ಸಾಮೂಹಿಕ ನೃತ್ಯ ಸ್ಪರ್ಧೆ: ಆಯೋಜನೆ: ವಿನಾಯಕ ನಕ್ಷತ್ರ ಮಂಡಳಿ ಸಾಂಸ್ಕೃತಿಕ ಸಂಸ್ಥೆ, ವರನಟ ರಾಜ್‌ಕುಮಾರ್ ನಕ್ಷತ್ರ ಮಂಡಳಿ ಸಾಂಸ್ಕೃತಿಕ ಸಂಸ್ಥೆ, ಸ್ಥಳ: ಕೃಷ್ಣರಾಜ ಪರಿಷತ್ತಿನ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 9

10 ಕೃತಿಗಳ ಲೋಕಾರ್ಪಣೆ: ಕೃತಿಗಳು: 'ಸ್ನೇಹಗ್ರಾಮದ ಸಂಸತ್ತು', 'ನಂದಿನಿ ಎಂಬ ಜಾಣೆ', 'ಮರಳಿ ಮನೆಗೆ', 'ಟಿಕೆಟ್ ಇಲ್ಲ, ಪ್ರಯಾಣ ನಿಲ್ಲಲ್ಲ', 'ಗೆದ್ದೇ ಬಿಟ್ಟೆ..!', 'ಲೇಡಿ ಟಾರ್ಜಾನ್!', 'ಸೀರೆ ಉಡುವ ರಾಕ್‌ಸ್ಟಾರ್', 'ಈ ಪಿಕ್ ಯಾರ ಕ್ಲಿಕ್?', 'ಸುಂದರಬಾಗ್ ಬೀದಿಯಲ್ಲಿ ನಡಿಯಿತೊಂದು ವಿಸ್ಮಯ', 'ಮರ ಏರಲಾಗದ ಗುಮ್ಮ', ಅತಿಥಿಗಳು: ಕೋಟಗಾನಹಳ್ಳಿ ರಾಮಯ್ಯ, ಎಂ.ಡಿ. ಪಲ್ಲವಿ, ನಾಗೇಶ ಹೆಗಡೆ, ವಿ. ಗಾಯತ್ರಿ, ಲಕ್ಷ್ಮಿ ಕರುಣಾಕರನ್, ಜಿ.ಎನ್. ಮೋಹನ್, ಸಂವಾದ: 'ಮಕ್ಕಳ ಸಾಹಿತ್ಯಕ್ಕೆ ಸಮಕಾಲೀನ ಸ್ಪರ್ಶ: ಅನುವಾದದ ಮಹತ್ವ', ಆಯೋಜನೆ: ಬಹುರೂಪಿ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಪಾರ್ಕ್, ಬೆಳಿಗ್ಗೆ 10

ಈಡಿಗ, ಬಿಲ್ಲವ, ನಾಮಧಾರಿ, ದೀವರು ಮತ್ತು ಅತೀ ಹಿಂದುಳಿದ ವರ್ಗಗಳ ಸಮಾನ ಮನಸ್ಕರ ಪೂರ್ವಭಾವಿ ಸಭೆ: ಉದ್ಘಾಟನೆ: ಜ್ಞಾನ ಪ್ರಕಾಶ ಸ್ವಾಮೀಜಿ, ಅಧ್ಯಕ್ಷತೆ: ಎಚ್. ಆರ್. ಶ್ರೀನಾಥ್, ಪ್ರಾಸ್ತಾವಿಕ ನುಡಿ: ಪ್ರಣವಾನಂದ ಸ್ವಾಮೀಜಿ, ಆಯೋಜನೆ: ರಾಷ್ಟ್ರೀಯ ಈಡಿಗ ಬಿಲ್ಲವ ಮಹಾಮಂಡಳಿ, ಸ್ಥಳ: ವೈಟ್ ಪೆಟಲ್ಸ್, ಗೇಟ್ ನಂ.3, ಅರಮನೆ ಮೈದಾನ, ಬಳ್ಳಾರಿ ರಸ್ತೆ, ಬೆಳಿಗ್ಗೆ 10


ಜ್ಞಾನಪ್ರಕಾಶ ಸ್ವಾಮೀಜಿ

ಉಪನ್ಯಾಸ ಹಾಗೂ ಭರತನಾಟ್ಯ ಕಾರ್ಯಕ್ರಮ: 'ವೈದಿಕ, ಪೌರಾಣಿಕ, ಐತಿಹಾಸಿಕ ಭಾರತೀಯತೆ': ಸದ್ಯೋಜಾತ ಭಟ್, ಭರತನಾಟ್ಯ: ಅನುರಾಧಾ ಹೆಗಡೆ, ಶಾರದಾ ವೆಂಕಟ್, ಮಂದಸ್ಮಿತ ಜಗದೀಶ್, ಜಯಶ್ರೀ ಹೆಗಡೆ, ಅಧ್ಯಕ್ಷತೆ: ಶ್ರೀಧರ್, ಆಯೋಜನೆ ಹಾಗೂ ಸ್ಥಳ: ಬೆಳ್ಳಿ ಭವನ, ಕ.ವಿ.ಪ್ರ.ನಿ.ನಿ. ಲೆಕ್ಕಾಧಿಕಾರಿಗಳ ಸಂಘ, ಆನಂದರಾವ್ ವೃತ್ತ, ಬೆಳಿಗ್ಗೆ 10

'ಪುಸ್ತಕ ಓದು-ಜ್ಞಾನವ ಗಳಿಸಿ' ಉಪನ್ಯಾಸ ಕಾರ್ಯಕ್ರಮ ಹಾಗೂ ಕನ್ನಡ ಪುಸ್ತಕಗಳ ಉಚಿತ ಹಂಚಿಕೆ: ಉದ್ಘಾಟನೆ: ಎಂ. ಪ್ರಕಾಶಮೂರ್ತಿ, ಉಪನ್ಯಾಸ: ಎಲ್. ಎನ್. ಮುಕುಂದರಾಜ್, ಮುಖ್ಯ ಅತಿಥಿ: ಕುಸುಮಾ ಸಿ.ಆರ್., ಅಧ್ಯಕ್ಷತೆ: ನಾಗನಾಯ್ಕ್, ಆಶಯ ನುಡಿ: ಗೌಡಗೆರೆ ಮಾಯುಶ್ರೀ, ಉಪಸ್ಥಿತಿ: ಚಿಕ್ಕರಾಮು ಎಸ್., ಆಯೋಜನೆ: ಗಾಂಧಿನಗರ ವಿಧಾನಸಭಾ ಕ್ಷೇತ್ರ ಕನ್ನಡ ಸಾಹಿತ್ಯ ಪರಿಷತ್ತು, ಸ್ಥಳ: ಬಾಪೂಜಿ ಪದವಿಪೂರ್ವ ಕಾಲೇಜು, ಮಾಗಡಿ ರಸ್ತೆ, ಬೆಳಿಗ್ಗೆ 10

ಆನಂದ ಕುಮಾರಸ್ವಾಮಿ ಅವರ ಜೀವನ ಮತ್ತು ಕೃತಿ ಕುರಿತು ಸಮ್ಮೇಳನ: ಉದ್ಘಾಟನೆ: ಶತಾವಧಾನಿ ಆರ್. ಗಣೇಶ್, ಮುಖ್ಯ ಭಾಷಣ: ಚೂಡಾಮಣಿ ನಂದಗೋಪಾಲ್, ಅಧ್ಯಕ್ಷತೆ: ಕೆ. ನರಹರಿ, ಉಪಸ್ಥಿತಿ: ವಿ.ನಾಗರಾಜ್, ಡಿ. ಮಹೇಂದ್ರ, ಆಯೋಜನೆ: ಇಂದಿರಾಗಾಂಧಿ ರಾಷ್ಟ್ರೀಯ ಕಲಾಕೇಂದ್ರದ ಪ್ರಾದೇಶಿಕ ಕೇಂದ್ರ, ದಿ ಮಿಥಿಕ್ ಸೊಸೈಟಿ, ಸ್ಥಳ: ದಿ ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಬೆಳಿಗ್ಗೆ 10


ರಾಜ್ಯ ಮಟ್ಟದ ಶಿಕ್ಷಕರ ದಿನಾಚರಣೆ ಮತ್ತು ರಾಜ್ಯ ಸಮಾವೇಶ: ಸಾನ್ನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ, ಉದ್ಘಾಟನೆ: ಡಿ.ಕೆ. ಶಿವಕುಮಾರ್, ಪದಾಧಿಕಾರಿಗಳಿಗೆ ಸನ್ಮಾನ: ರಾಮಲಿಂಗಾರೆಡ್ಡಿ, ಅಧ್ಯಕ್ಷತೆ: ದಿನೇಶ್ ಗುಂಡೂರಾವ್, ರಾಜ್ಯ ಪ್ರಶಸ್ತಿ ವಿತರಣೆ: ಮಧು ಬಂಗಾರಪ್ಪ, ಆಯೋಜನೆ: ಕರ್ನಾಟಕ ರಾಜ್ಯ ಅನುದಾನಿತ ಪ್ರಥಮಿಕ ಶಾಲಾ ಶಿಕ್ಷಕರ ಸಂಘ, ಸ್ಥಳ: ಶಿಕ್ಷಕರ ಸದನ, ಕೆಂಪೇಗೌಡ ರಸ್ತೆ, ಬೆಳಿಗ್ಗೆ 11


ನಿರ್ಮಲಾ ನಂದನಾಥ ಸ್ವಾಮೀಜಿ

ಎ. ಮುನಿಕೃಷ್ಣಮೂರ್ತಿ ಅವರ ಸವಿ ನೆನಪಿನೊಂದಿಗೆ ಸಾಂಸ್ಕೃತಿಕ ಸಂಭ್ರಮ ಪ್ರಥಮ ವಾರ್ಷಿಕೋತ್ಸವ: ಸಾನ್ನಿಧ್ಯ: ಪ್ರಕಾಶ್ ಯೋಗಿ ಗುರೂಜಿ, ಅಧ್ಯಕ್ಷತೆ: ಆನಂದ್ ಕುಮಾರ್, ಮುಖ್ಯ ಅತಿಥಿ: ಶಶಿಧರ್ ಕೋಟೆ, ಆಯೋಜನೆ: ಹಿರಣ್ಮಯಿ ಕಲಾ ಕುಟೀರ, ಸ್ಥಳ: ಕಟ್ಟಣಗಿರಿ ಆಂಜನೇಯಸ್ವಾಮಿ ದೇವಸ್ಥಾನ ಹತ್ತಿರ, ಬಿಳೇಶಿವಾಲೆ, ಹನುಮಂತನಗರ ಮುಖ್ಯ ರಸ್ತೆ, ಬೆಳಿಗ್ಗೆ 10.30

ಸಂಸ್ಥಾಪಕ ದಿನಾಚರಣೆ ಹಾಗೂ 'ಸಾವಿತ್ರಮ್ಮ ಪ್ರೊ.ಎಂ.ವಿ. ಸೀತಾರಾಮಯ್ಯ ಸಾಹಿತ್ಯ ಪುರಸ್ಕಾರ' ಪ್ರದಾನ: ಪಿ.ವಿ. ನಾರಾಯಣ, ಪುರಸ್ಕೃತರು: ಸುನಂದಾ ಕಡಮೆ, ಮುಖ್ಯ ಅತಿಥಿಗಳು: ಎಚ್.ಎಲ್. ಪುಷ್ಪ, ಶಾಂತಾ ರಾಧಾಕೃಷ್ಣ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ: ಬಿ.ಎಂ.ಶ್ರೀ. ಪ್ರತಿಷ್ಠಾನ, ಸ್ಥಳ: ಎಂ.ವಿ.ಸೀ. ಸಭಾಂಗಣ, ಬಿ.ಎಂ.ಶ್ರೀ. ಕಲಾಭವನ, ಎನ್.ಆರ್. ಕಾಲೊನಿ, ಬೆಳಿಗ್ಗೆ 10.30

'ಬಿ.ಆರ್.ಎಲ್-77' ಅಭಿನಂದನಾ ಪುಸ್ತಕ ಲೋಕಾರ್ಪಣೆ ಹಾಗೂ ಗೀತ ಗಾಯನ: ಬಿ.ಆರ್. ಲಕ್ಷ್ಮಣರಾವ್ ಅವರ 'ಬಿನ್ನಹಕೆ ಬಾಯಿಲ್ಲವಯ್ಯ', 'ಬೆಳದಿಂಗಳ ಬಾಲೆ' ಪುಸ್ತಕಗಳ ಲೋಕಾರ್ಪಣೆ: ಶ್ರೀನಿವಾಸ ಪ್ರಭು, ಡುಂಡಿರಾಜ್, ಅಭಿನಂದನೆ: ಎಚ್.ಎಸ್. ವೆಂಕಟೇಶಮೂರ್ತಿ, ಮುಖ್ಯ ಅತಿಥಿ: ಪಿ.ಎಲ್. ವೆಂಕಟರಾಮರೆಡ್ಡಿ, ಆಯೋಜನೆ: ತೇಜು ಪಬ್ಲಿಕೇಷನ್ಸ್, ಸಿ.ವಿ. ಜಿ. ಪ್ರಕಾಶನ, ಸ್ಥಳ: ಡಾ.ಸಿ. ಅಶ್ವತ್ಥ್ ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 5.30



ಬಿ.ಆರ್. ಲಕ್ಷ್ಮಣರಾವ್

ಸಿ.ವಿ. ಶಿವಶಂಕರ್ ಅವರಿಗೆ ನುಡಿ ನಮನ: ದೊಡ್ಡರಂಗೇಗೌಡ, ಭಾ.ಮ. ಹರೀಶ್, ಗಿರಿಜಾ ಲೋಕೇಶ್, ಕೆ.ವಿ. ನಾಗರಾಜಮೂರ್ತಿ, ಮಹೇಂದ್ರ ಮುನ್ನೋತ್, ಸಿ.ಕೆ. ರಾಮೇಗೌಡ, ಪರಮ ಗುಬ್ಬಿ, ಗುರುರಾಜ್, ಆಯೋಜನೆ: ಉದ್ಭವ ಕಲಾವಿದರು, ಸ್ಥಳ: ನಯನ ಸಭಾಂಗಣ, ಜೆ.ಸಿ. ರಸ್ತೆ, ಸಂಜೆ 4.30

ತ್ರಿವೇಣಿ ಸ್ಮೃತಿ: ಉದ್ಘಾಟನೆ: ವಿ. ನಾಗೇಂದ್ರ ಪ್ರಸಾದ್, ತ್ರಿವೇಣಿಯವರ ಕೃತಿಗಳ ಬಗ್ಗೆ ಉಪನ್ಯಾಸ: ವಿಜಯಾ ಸುಬ್ಬರಾಜ್, ಪ್ರಾಸ್ತಾವಿಕ ನುಡಿ: ಶೈಲಜಾ ಸುರೇಶ್, ಅಧ್ಯಕ್ಷತೆ: ಎನ್.ಎಸ್. ಸತೀಶ್, ಆಯೋಜನೆ: ಲೇಖಿಕಾ ಸಾಹಿತ್ಯ ವೇದಿಕೆ, ಸ್ಥಳ: ಶೇಷಾದ್ರಿಪುರಂ ಸಂಜೆ ಕಾಲೇಜು ಸಭಾಂಗಣ, ಶೇಷಾದ್ರಿಪುರ, ಸಂಜೆ 4.30

ಗಾನ ಕಲಾಭೂಷಣ ಎ. ವೀರಭದ್ರಯ್ಯನವರ ಜನ್ಮ ಶತಮಾನೋತ್ಸವ ಸಮಾರಂಭ: ಉದ್ಘಾಟನೆ: ಎ.ವಿ. ಆನಂದ್, ಮುಖ್ಯ ಅತಿಥಿಗಳು: ನಾಗಮಣಿ ಶ್ರೀನಾಥ್, ಎಚ್.ಕೆ. ವೆಂಕಟರಾಮ್, ಶಾಸ್ತ್ರೀಯ ಸಂಗೀತ ಕಾರ್ಯಕ್ರಮ: ಎಸ್. ಶೇಷಗಿರಿ ರಾವ್, ರಾಜೀವಲೋಚನ, ಎಚ್.ಎಸ್. ಸುಧೀಂದ್ರ, ನಾರಾಯಣಮೂರ್ತಿ, ಕರ್ನಾಟಕ ಶಾಸ್ತ್ರೀಯ ಸಂಗೀತ ಆಧಾರಿತ ಚಲನಚಿತ್ರಗೀತೆಗಳ ಕಾರ್ಯಕ್ರಮ: ಪಾವನಿ ಭಾರದ್ವಾಜ್, ಭರತ್ ಆತ್ರೇಯಸ್, ಹರ್ಷವರ್ಧನರಾಜ್, ಆನೂರು ವಿನೋದ್ ಶ್ಯಾಮ್, ಅಮೋಘವರ್ಷ, ಆಯೋಜನೆ: ಕೃಷ್ಣ ಸಂಗೀತ ಸಭಾ, ಸಮನ್ವಯ ಕಲಾಕೇಂದ್ರ, ಜಯರಾಮ ಸೇವಾ ಮಂಡಳಿ, ಆನೂರು ಅನಂತಕೃಷ್ಣ ಶರ್ಮ ಫೌಂಡೇಶನ್ ಫಾರ್ ಮ್ಯೂಸಿಕ್, ಅನನ್ಯ ಜಿಎಂಎಲ್ ಕಲ್ಚರಲ್ ಅಕಾಡೆಮಿ, ಗಾನಕಲಾಭೂಷಣ ಎ. ವೀರಭದ್ರಯ್ಯನವರ ಕುಟುಂಬ, ಸ್ಥಳ: ಜಯರಾಮಸೇವಾ ಮಂಡಳಿ, ಜಯನಗರ 8ನೇ ಹಂತ, ಸಂಜೆ 4.30

ವಚನ ಶ್ರಾವಣ: ವಚನ ವಾಚನ: ಪ್ರದ್ವಿತ್, ದಿಶಾ, ಉದ್ವಿತ್, ವಚನ ಗಾಯನ: ವಿದ್ಯಾರ್ಥಿಗಳು, ವಚನ ಚಿಂತನ: ಎಸ್. ಪಿನಾಕಪಾಣಿ, ಅಧ್ಯಕ್ಷತೆ: ಓ.ಎಂ. ಬಸವರಾಜು, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಪದ್ಮಜ ಪ್ರಸನ್ನರವರ ಮನೆಯಂಗಳ, 533, 7ನೇ ಮುಖ್ಯರಸ್ತೆ, ಕಲ್ಯಾಣ ಗೃಹನಿರ್ಮಾಣ ಸಹಕಾರ ಸಂಘ, ನಾಗದೇವನಹಳ್ಳಿ, ಸಂಜೆ 5


ಕೃಷ್ಣ ಸೆಟ್ಟಿ

ಕೃಷ್ಣ ಸೆಟ್ಟಿ 70 ಹಾಗೂ ಕಲಾ ಪ್ರದರ್ಶನ: ಉದ್ಘಾಟನೆ: ಚಿರಂಜೀವಿ ಸಿಂಘ್, ಅಧ್ಯಕ್ಷತೆ: ಪ.ಸ. ಕುಮಾರ್, ಮುಖ್ಯ ಅತಿಥಿ: ಎಚ್.ಎಸ್. ಶಿವಪ್ರಕಾಶ್, ಆಯೋಜನೆ: ದಕಹವಿಸ, ಸ್ಥ: ದೇವರಾಜ್ ಅರಸ್ ಗ್ಯಾಲರಿ, ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪ ರಸ್ತೆ, ಸಂಜೆ 5

ನೃತ್ಯಾರ್ಪಣೆ ಶಾಸ್ತ್ರೀಯ ಭರತನಾಟ್ಯ ಕಾರ್ಯಕ್ರಮ: ಮುಖ್ಯ ಅತಿಥಿಗಳು: ಪ್ರಿಯಕೃಷ್ಣ, ರೂಪಶ್ರೀ ಮಧುಸೂಧನ್, ಕೋಮಲ ರಾಘವೇಂದ್ರ, ಆಯೋಜನೆ: ನೃತ್ಯಾಭಿನಯ, ಆಯೋಜನೆ: ಜ್ಞಾನಸೌಧ ಸಭಾಂಗಣ, ನಾಗರಬಾವಿ, ಸಂಜೆ 6

ರಾಮದೇವರ ರಥೋತ್ಸವ: ಪ್ರವಚನ: ಕೆ. ವಿದ್ಯಮಾಲಾ, ಆಯೋಜನೆ: ರಾಮಸೇವಾ ಮಂಡಳಿ, ಸ್ಥಳ: ಶ್ರೀರಾಮ ಮಂದಿರ, ರಾಜಾಜಿನಗರ, ಸಂಜೆ 6.45

'ಹಿಂಗ್ ಮಾಡಿದ್ರೆ ಹೆಂಗೆ' ನಾಟಕ ಪ್ರದರ್ಶನ: ತಂಡ: ಅಂತರಂಗ ಬಹಿರಂಗ ಮತ್ತು ಕಲ್ಪವೃಕ್ಷ ಟ್ರಸ್ಟ್, ರಚನೆ: ನಾಗವೇಣಿ ರಂಗನ್, ನಿರ್ದೇಶನ: ಬಾಶ್ ರಾಘವೇಂದ್ರ, ಸಂಗೀತ: ಮೇಘನಾ ಹಳಿಯಾಳ, ಸ್ಥಳ: ವಾಡಿಯಾ ಹಾಲ್, ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಸಂಜೆ 7.30


'ಹಿಂಗ್ ಮಾಡಿದ್ರೆ ಹೆಂಗೆ' ನಾಟಕದ ದೃಶ್ಯ

ಹುಟ್ಟುಹಬ್ಬದ ಸವಿನೆನಪು



ಶ್ರೀಮತಿ ಸುರೇಖಾ ಶಿವಶಂಕರ್
(ಸಿಂಡಿಕೇಟ್ ಬ್ಯಾಂಕ್)
ಜನನ: 09-09-1954 ಶಿವೈಕ್ಯ: 13-01-2023

70ನೇ ವರ್ಷದ ಹುಟ್ಟುಹಬ್ಬದ ಪ್ರೀತಿಯ ಶುಭಾಶಯಗಳು

ನಿಮ್ಮ ಆದರ್ಶ ಜೀವನವೇ ನಮಗೆ ಮಾರ್ಗದರ್ಶನ, ನಿಮ್ಮ ಕನಸುಗಳನ್ನು ನನಸಾಗಿಸುವುದೇ ನಮ್ಮ ಧ್ಯೇಯ ಭಗವಂತನು ನಿಮ್ಮ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಪ್ರಾರ್ಥಿಸುವ

ಪ್ರೀತಿಯ ಪತಿ, ಪುತ್ರ, ಮಗಳು (ಸೊಸೆ) ಅಕ್ಕ ಮತ್ತು ಮೊಮ್ಮಕ್ಕಳು

*ಈ ದಿನ ನಿಮ್ಮ ಮಧುರ ಗಾಯನ ಸುಶಿರ ಭಕ್ತಿ ಸಂಗಮ ಭಕ್ತಿ ಗೀತೆಗಳು 'ಯೂಟ್ಯೂಬ್' ಚಾನಲ್‌ನಲ್ಲಿ ಬಿಡುಗಡೆಯಾಗಿದೆ

ದಿ ಹನುಮಂತನಗರ ಸಹಕಾರಿ ಬ್ಯಾಂಕ್ ನಿಯಮಿತ

ಆಡಳಿತ ಕಛೇರಿ: ನಂ.7/29, ಕೆ.ಪಿ. ಪೂರ್ಣಚಂದ್ರ ತೇಜಸ್ವಿ ರಸ್ತೆ, 3ನೇ ಮುಖ್ಯರಸ್ತೆ 1ನೇ ಅಡ್ಡರಸ್ತೆ, ಹನುಮಂತನಗರ, ಬೆಂಗಳೂರು-560019.
ದೂ: 080-26507976, 22428985 ಫ್ಯಾಕ್ಸ್: 26508131
ಇ-ಮೇಲ್: headoffice@hnrcbank.in ವೆಬ್‌ಸೈಟ್: https://hnrcbank.in

58ನೇ ವಾರ್ಷಿಕ ಸಾಮಾನ್ಯ ಸಭೆಯ ಸೂಚನಾ ಪತ್ರದ ಪ್ರಕಟಣೆ

ಗೌರವಾನ್ವಿತ ಸದಸ್ಯರುಗಳೇ,

ಈ ಮೂಲಕ ತಮ್ಮ ಗಮನಕ್ಕೆ ತರಲಿಚ್ಛಿಸುವುದೇನೆಂದರೆ, ಬ್ಯಾಂಕಿನ 58ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಯನ್ನು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ರಾಮೇಗೌಡ ರವರ ಅಧ್ಯಕ್ಷತೆಯಲ್ಲಿ ದಿನಾಂಕ 10ನೇ ಸೆಪ್ಟೆಂಬರ್ 2023ರ ಭಾನುವಾರ ಬೆಳಿಗ್ಗೆ 10-00 ಗಂಟೆಗೆ ಆಚಾರ್ಯ ಪಾಠಶಾಲಾ ವಾಣಿಜ್ಯ ಕಾಲೇಜು ಆಡಿಟೋರಿಯಂ, ಎನ್.ಆರ್. ಕಾಲೋನಿ, ಬೆಂಗಳೂರು-560019 ಇಲ್ಲಿ ನಡೆಸಲಾಗುತ್ತದೆ. ಈ ಬಗ್ಗೆ ಮಾನ್ಯ ಸದಸ್ಯರೆಲ್ಲರಿಗೂ ತಿಳುವಳಿಕೆ ಪತ್ರಗಳನ್ನು ಈಗಾಗಲೇ ಅಂಚೆ ಮತ್ತು SMS ಮೂಲಕ ತಿಳಿಸಲಾಗಿದೆ. ತಿಳುವಳಿಕೆ ಪತ್ರ ತಲುಪದಿದ್ದಲ್ಲಿ ಈ ಪ್ರಕಟಣೆಯನ್ನೇ ನೋಟಿಸ್ ಎಂದು ಪರಿಗಣಿಸಿ ವಾರ್ಷಿಕ ಮಹಾಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸುವ ಮೂಲಕ ಸಭೆ ಯಶಸ್ವಿಯಾಗಲು ಸಹಕರಿಸಬೇಕಾಗಿ ಪ್ರಾರ್ಥಿಸುತ್ತೇವೆ. ಮಹಾಸಭೆಗೆ ಹಾಜರಾಗಲು ಗುರುತಿನ ಚೀಟಿ ಕಡ್ಡಾಯ.

ಆಡಳಿತ ಮಂಡಳಿ ಅಪ್ಪಣೆ ಮೇರೆಗೆ
ದಿನಾಂಕ: 07-09-2023 (ಕೃಷ್ಣ ಡಿ)
ಬೆಂಗಳೂರು ವ್ಯವಸ್ಥಾಪಕರು

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ನಂ:ಬೆಂಅಪ್ರಾ/ನಯೋಸ/CLU-49/1242/2023-24 ದಿನಾಂಕ: 07.09.2023

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ-ಗು	ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಮೆ॥ ಸ್ವೆಕ್ಟ್ರಾ ರೆಸಿಡೆನ್ಸಸ್ ಪ್ರೈ.ಲಿ. Formerly Known as M/s Head & Heart Education Pvt. Ltd.	ಆನೇಕಲ್	ಸರ್ಜಾಪುರ	ಹೆಗ್ಗೊಂಡನ ಹಳ್ಳಿ	80/2	1-09	ವ್ಯವಸಾಯ	ವಸತಿ
2					80/3	1-09		
3					81/1	0-08.50		
4					81/8(ಪಿ)	0-11		
					ಒಟ್ಟು	2-37.50		

ಷರಾ:- ಅರ್ಜಿದಾರರು ಪ್ರಶ್ನಿತ ಜಮೀನುಗಳನ್ನು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಮಾಡಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಸಾರ್ವಜನಿಕರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತವೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ವಿನ್ಯಾಸ ಅಭಿವೃದ್ಧಿಯಿಂದ ಸುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಹಾಗೂ ಯೋಜನಾಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ನಾಗರೀಕ ಸೌಲಭ್ಯದ ಜಾಗಗಳು ಮತ್ತು ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತವೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಪ್ರಶ್ನಿತ ಜಮೀನುಗಳನ್ನು "ವ್ಯವಸಾಯ ವಲಯ" ದಿಂದ "ವಸತಿ ಉಪಯೋಗಕ್ಕೆ" ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

BDA/PRO/CLU/18/2023-24 ಸಹಿ/- ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ನಗರಸಭೆ ಕಾರ್ಯಾಲಯ, ನೆಲಮಂಗಲ

ನೆಲಮಂಗಲ, ಬೆಂಗಳೂರು ಗ್ರಾಮಾಂತರ ಜಿಲ್ಲೆ-562123

ಸಂಖ್ಯೆ: ನಸನೆ/ತಾಂ.ಶಾ(ವಿ)/ಟೆಂಡರ್/68/2023-24 ದಿನಾಂಕ: 06.09.2023

ಟೆಂಡರ್ ಪ್ರಕಟಣೆ (ಕೆಪಿಪಿಪಿ ಪೋರ್ಟಲ್ ಮೂಲಕ ಮಾತ್ರ)
(ಸ್ಟಾಂಡರ್ಡ್ ಡಾಕ್ಯುಮೆಂಟ್ KW 1&2ರ ನಿಬಂಧನೆಗಳಂತೆ ಅರ್ಜಿ ಆಹ್ವಾನಿಸಲಾಗಿದೆ)

ಮೇಲ್ಕಂಡ ವಿಷಯ ಸಂಬಂಧಿಸಿದಂತೆ, 2023-24ನೇ ಸಾಲಿನ ನಗರಸಭೆ ನಿಧಿಯಡಿ ನೆಲಮಂಗಲ ನಗರಸಭೆ ವ್ಯಾಪ್ತಿಯ ಶುದ್ಧ ಕುಡಿಯುವ ನೀರಿನ ಘಟಕಗಳ ವಾರ್ಷಿಕ ನಿರ್ವಹಣೆ ಕಾಮಗಾರಿಗಳ ಐಟಂವಾರು ಮತ್ತು ಕೆಪಿಪಿಪಿ ಪೋರ್ಟಲ್‌ನ ಏಕ ಲಕೋಟೆ ಪದ್ಧತಿಯಲ್ಲಿ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: https://kppp.karnataka.gov.in ಮೂಲಕ ಟೆಂಡರ್ ಸಲ್ಲಿಸುವುದು.

ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: (As per KPPP Portal ಘಂಟೆಯವರೆಗೆ) ಟೆಂಡರ್ ತೆರೆಯುವ ದಿನಾಂಕ: (As per KPPP Portal) ಹೆಚ್ಚಿನ ವಿವರಗಳಿಗಾಗಿ ನಗರಸಭೆಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸುವುದು.

ಸಹಿ/-	ಸಹಿ/-	ಸಹಿ/-	ಸಹಿ/-
ಶ್ರೀಮತಿ ಲತಾ ಹೇಮಂತ್‌ಕುಮಾರ್ ಮಾನ್ಯ ಅಧ್ಯಕ್ಷರು ನಗರಸಭೆ, ನೆಲಮಂಗಲ	ಶ್ರೀಮತಿ ಸುಜಾತ ಮುನಿಯಪ್ಪ ಮಾನ್ಯ ಉಪಾಧ್ಯಕ್ಷರು, ನಗರಸಭೆ, ನೆಲಮಂಗಲ	ಶ್ರೀ ಆನಂದ್ ಜಿ ಮಾನ್ಯ ಸ್ಥಾಯಿ ಸಮಿತಿಅಧ್ಯಕ್ಷರು, ನಗರಸಭೆ, ನೆಲಮಂಗಲ	ಶ್ರೀ ಲೋಹಿತ್ ಡಿ ಪೌರಾಯುಕ್ತರು, ನಗರಸಭೆ, ನೆಲಮಂಗಲ

ವಾಸಾಸಂಇ/ವಾ.ಪ್ರ/1232/ಶಿರಡಿ ಸಾಯಿ/2023-24

ದಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಸ್ಥಾಪನೆ : 1907
ಆಡಳಿತ ಕಛೇರಿ: ನಂ. 3, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-560018
ಕಛೇರಿ ದೂ: 26678572 : 26600512 : 26609066, ಇ-ಮೇಲ್: : accounts@bccbl.co.in

117ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಯ ನೋಟೀಸು

ಬ್ಯಾಂಕಿನ ಎಲ್ಲಾ ಸದಸ್ಯರುಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ದಿನಾಂಕ : 31.03.2023 ಕ್ಕೆ ಮುಕ್ತಾಯಗೊಂಡ (2022-23ನೇ ಸಾಲಿನ) 117ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಯನ್ನು **ದಿನಾಂಕ 24.09.2023ನೇ ಭಾನುವಾರ ಬೆಳಿಗ್ಗೆ : 10.00 ಗಂಟೆಗೆ** ಸರಿಯಾಗಿ ಬ್ಯಾಂಕಿನ **ಪ್ರಧಾನ ಕಛೇರಿ / ಆಡಳಿತ ಕಛೇರಿ : ನಂ. 3, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-560018** ರ ಆವರಣದಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಆವಲಹಳ್ಳಿ ಚಂದ್ರಪ್ಪ.ಆರ್ ರವರ ಅಧ್ಯಕ್ಷತೆಯಲ್ಲಿ ನಡೆಸಲು ಏರ್ಪಾಡು ಮಾಡಲಾಗಿದೆ. ಮಾನ್ಯ ಸದಸ್ಯರುಗಳೆಲ್ಲರೂ ಸಕಾಲಕ್ಕೆ ಆಗಮಿಸಿ ಕಾರ್ಯ ಕಲಾಪಗಳಲ್ಲಿ ಭಾಗವಹಿಸಬೇಕಾಗಿ ವಿನಂತಿ. ಈಗಾಗಲೇ ಸದಸ್ಯರ ವಿಳಾಸಗಳಿಗೆ ಸೂಚನಾ ಪತ್ರಗಳನ್ನು ಅಂಚೆ ಮೂಲಕ ಸಕಾಲದಲ್ಲಿ ಕಳುಹಿಸಲಾಗಿದೆ. ಒಂದು ವೇಳೆ ಸೂಚನಾ ಪತ್ರ ತಲುಪದೇ ಇದ್ದಲ್ಲಿ ಇದನ್ನೇ ಸೂಚನಾ ಪತ್ರ ಎಂದು ಪರಿಗಣಿಸಿ, ತಪ್ಪದೇ ಸಭೆಗೆ ಹಾಜರಾಗಬೇಕೆಂದು ಈ ಮೂಲಕ ಕೋರಲಾಗಿದೆ.

ಆಡಳಿತ ಮಂಡಳಿ ಅಪ್ಪಣೆ ಮೇರೆಗೆ
ಆವಲಹಳ್ಳಿ ಚಂದ್ರಪ್ಪ .ಆರ್ ಅಧ್ಯಕ್ಷರು
ಪಿ.ಮಂಜುನಾಥ, ಬಿ.ಕಾಂ., ಎ.ಡಿ.ಸಿ.ಬಿ ಪ್ರಧಾನ ವ್ಯವಸ್ಥಾಪಕರು (ಪ್ರಭಾರ)

ಸೂಚನೆ: ಸದಸ್ಯರನ್ನು, ಸರ್ವಸದಸ್ಯರ ಮಹಾಸಭೆಯಲ್ಲಿ ಸದಸ್ಯತ್ವದ ಕಾರ್ಡುಗಳ ಮೂಲಕ ಗುರುತಿಸಲಾಗುವುದರಿಂದ ಸದಸ್ಯರು ತಪ್ಪದೇ ತಮ್ಮ ಸದಸ್ಯತ್ವದ ಕಾರ್ಡು (Membership Identity Card) ಗಳನ್ನು ತರಬೇಕಾಗಿ ವಿನಂತಿ



ಹೊಸಕೋಟೆ ಯೋಜನಾ ಪ್ರಾಧಿಕಾರ

ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ-562114, ಬೆಂಗಳೂರು ಗ್ರಾಮಾಂತರ ಜಿಲ್ಲೆ. ದೂರವಾಣಿ/ಫ್ಯಾಕ್ಸ್: 080-27934470/27935412
E-mail: hosakote.pa@gmail.com URL: www.hoskote-tpa.gov.in

ಸಂಖ್ಯೆ: ಹೊಯೋಪ್ರಾ/ಭೂ.ಉ.ನಿ/01/2023-24 ದಿನಾಂಕ: 07-09-2023

ಸಾರ್ವಜನಿಕ ಪ್ರಕಟಣೆ

ವಿಷಯ: ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 69 (2) ಮತ್ತು (3) ರಡಿಯಲ್ಲಿ ಸಾರ್ವಜನಿಕ ಮತ್ತು ಅರೆ-ಸಾರ್ವಜನಿಕ ವಲಯದಲ್ಲಿ ಕಾಯ್ದಿರಿಸಲಾಗಿರುವ ಜಮೀನನ್ನು ವಸತಿ ಉದ್ದೇಶಕ್ಕೆ ಭೂ ಉಪಯೋಗ ನಿಗದಿಪಡಿಸಲು ಕೋರಿರುವ ಬಗ್ಗೆ.

ಮಾಲೀಕರಾದ ಶ್ರೀಮತಿ ಶೈಲಜ ರವೀಂದ್ರ ಕೋಂ ಲೇ. ಬಿ.ಎಸ್. ರವೀಂದ್ರ, ಶ್ರೀ ಬಿ.ಆರ್. ಉದಯ್ ಕುಮಾರ್ ಬಿನ್ ಲೇ. ಬಿ.ಎಸ್. ರವೀಂದ್ರ, ಶ್ರೀಮತಿ ಶಿಲ್ಪಾ ಅಜಯ್ ಆಲೂರ್ ಬಿನ್ ಲೇ. ಬಿ.ಎಸ್. ರವೀಂದ್ರ, ಮತ್ತು ಶ್ರೀ ಸುನಯ್ ಬಿ. ರವೀಂದ್ರ ಬಿನ್ ಲೇ. ಬಿ.ಎಸ್. ರವೀಂದ್ರ ಇವರುಗಳ ಪರವಾಗಿ ಜಿಪಿಎದಾರರಾದ ಮೆ॥ ಕೆ.ಎನ್.ಎಸ್. ಇನ್‌ಫ್ರಾಸ್ಟ್ರಕ್ಚರ್ ಪ್ರೈ ಲಿ. ಇವರು ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಮಂಡೂರು ಗ್ರಾಮದ ಸ.ನಂ. 80/1 ರಲ್ಲಿನ 14 ಎಕರೆ 01 ಗುಂಟೆ ವಿಸ್ತೀರ್ಣದ ಜಮೀನಿನ ಪೈಕಿ 07 ಎಕರೆ 33 ಗುಂಟೆ ವಿಸ್ತೀರ್ಣದ ಜಮೀನನ್ನು **ಸಾರ್ವಜನಿಕ ಮತ್ತು ಅರೆ-ಸಾರ್ವಜನಿಕ ವಲಯದಿಂದ ವಸತಿ ಉದ್ದೇಶಕ್ಕೆ** ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 69 (2) ಮತ್ತು (3) ರಡಿಯಲ್ಲಿ ಭೂ ಉಪಯೋಗ ನಿಗದಿಪಡಿಸಲು ಕೋರಿರುತ್ತಾರೆ.

ಅರ್ಜಿದಾರರ ಮನವಿಯನ್ನು ಪರಿಶೀಲಿಸಲಾಗಿ, ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶಕ್ಕೆ ತಯಾರಿಸಿ ಸರ್ಕಾರದಿಂದ ಅನುಮೋದನೆಯಾಗಿರುವ ಮಹಾಯೋಜನೆಯಲ್ಲಿ **ಸಾರ್ವಜನಿಕ ಮತ್ತು ಅರೆ-ಸಾರ್ವಜನಿಕ ವಲಯಕ್ಕೆ ಕಾಯ್ದಿರಿಸಲಾಗಿರುವ** ಪ್ರಸ್ತಾಪಿತ ಜಮೀನಿನ ಸುತ್ತಮುತ್ತಲಿನ ಪರಿಸರದಲ್ಲಿ ಹೆಚ್ಚಿನ ವಸತಿ / ವಸತಿಯೇತರ ಬೆಳವಣಿಗೆಗಳು ಬಂದಿದ್ದು / ಬರುತ್ತಲಿದ್ದು, "ಉದ್ದೇಶಿತ ಜಮೀನಿನಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡ ಯೋಜನಾಬದ್ಧವಾದ ವಸತಿ ಚಟುವಟಿಕೆಯನ್ನು ಪ್ರಾರಂಭಿಸಲು ಉದ್ದೇಶಿಸಿರುವುದರಿಂದ ಸ್ಥಳೀಯ ಸಾರ್ವಜನಿಕರಿಗೆ ಅನೇಕ ಉದ್ಯೋಗಾವಕಾಶಗಳು ದೊರಕುವುದರ ಜೊತೆಗೆ ಸುತ್ತಲಿನ ಪರಿಸರದ ಪ್ರದೇಶವು ಸಹ ಯೋಜನಾಬದ್ಧವಾಗಿ ಅಭಿವೃದ್ಧಿ ಹೊಂದಲು ಸಹಕಾರಿಯಾಗುವುದೆಂಬ ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿರುತ್ತದೆ ಎಂದು ಅರ್ಜಿದಾರರು ತಮ್ಮ ಪ್ರಮಾಣ ಪತ್ರದ ಮುಖಾಂತರ ತಿಳಿಸಿರುತ್ತಾರೆ.

ಹಾಗಾಗಿ, ಸದರಿ ಭೂ ಉಪಯೋಗ ನಿಗದಿಪಡಿಸುವ ಪ್ರಸ್ತಾವನೆಯನ್ನು ಪರಿಗಣಿಸುವ ಬಗ್ಗೆ ಅಕ್ಕಪಕ್ಕದ ಜಮೀನಿನ ಮಾಲೀಕರಿಗೆ / ಇತರರಿಗೆ / ಪರಿಸರಕ್ಕೆ ಉಂಟಾಗಬಹುದಾದಂತಹ ತೊಂದರೆಗಳು ಹಾಗೂ ಇತರೆ ಅಂಶಗಳಿಗೆ ಸಂಬಂಧಿಸಿದಂತೆ ಸಲಹೆ / ಸೂಚನೆ / ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆ ನೀಡಿದ ದಿನಾಂಕದಿಂದ 15 ದಿನಗಳ ಒಳಗಾಗಿ ಲಿಖಿತ ರೂಪದಲ್ಲಿ **ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡ ರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ – 562114, ಬೆಂಗಳೂರು ಗ್ರಾಮಾಂತರ ಜಿಲ್ಲೆ** ರವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ಕೋರಲಾಗಿದೆ. ಅವಧಿ ಮೀರಿದ ನಂತರ ಸ್ವೀಕರಿಸಲಾಗುವ ಸಲಹೆ / ಸೂಚನೆ / ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/-
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಹೊಸಕೋಟೆ.

ವಾಸಾಸಂಇ/ವಾ.ಪ್ರ/1240/ಅಡ್ವರ್ಟೋರ್/2023-24

ಪಟ್ಟಣ ಪಂಚಾಯಿತಿ ಕಾರ್ಯಾಲಯ, ಬಾಶೆಟ್ಟಿಹಳ್ಳಿ

ಬೆಂಗಳೂರು ಗ್ರಾಮಾಂತರ ಜಿಲ್ಲೆ-561203.

ಸಂಖ್ಯೆ: ಬಾಪಪಂ/ತಾಂ.ಶಾ/ಟೆ.ಪ್ರ/02/2023-24 ದಿನಾಂಕ: 07-09-2023

ಟೆಂಡರ್ ಪ್ರಕಟಣೆ
(ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಮುಖ್ಯಾಧಿಕಾರಿಗಳು, ಪಟ್ಟಣ ಪಂಚಾಯಿತಿ, ಬಾಶೆಟ್ಟಿಹಳ್ಳಿ, ಬೆಂಗಳೂರು ಗ್ರಾಮಾಂತರ ಜಿಲ್ಲೆರವರು 15ನೇ ಹಣಕಾಸು ಯೋಜನೆಯಡಿ 2020-21 ಮತ್ತು 2021-22ನೇ ಸಾಲಿನಲ್ಲಿ ಉಳಿಕೆಯಾಗಿರುವ ಹಾಗೂ 2022-23ನೇ ಸಾಲಿನಲ್ಲಿ ಬಿಡುಗಡೆಯಾಗಿರುವ ಅನುದಾನ, 2022-23ನೇ ಸಾಲಿನ ಎಸ್.ಎಫ್.ಸಿ ಕುಡಿಯುವ ನೀರಿನ ಯೋಜನೆ ಅನುದಾನ, ಸ್ವಚ್ಛಭಾರತ್ ನಗರ ಯೋಜನೆಯಡಿ ಬಿಡುಗಡೆಯಾಗಿರುವ ಅನುದಾನ ಹಾಗೂ 2023-24ನೇ ಸಾಲಿನಲ್ಲಿ ಪಟ್ಟಣ ಪಂಚಾಯಿತಿ ನಿಧಿಯಡಿ ಈ ಕೆಳಕಂಡ ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ **ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್** ಮೂಲಕ **ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್** ಕೆ.ಟಿ.ಪಿ.ಪಿ ನಿಯಮಗಳನ್ವಯ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಪ್ಯಾಕೇಜ್ ಸಂ.	ಕೆಲಸದ ವಿವರ
ಪರಿಶಿಷ್ಟ ಜಾತಿ ವರ್ಗದ ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿಗಳು	
1	DMA/2023-24/WS/WORK_INDENT3276
ಸಾಮಾನ್ಯ ವರ್ಗದ ಕಾಮಗಾರಿಗಳು	
2	DMA/2023-24/IND0103
3	DMA/2023-24/IND0100
4	DMA/2023-24/IND0099
5	DMA/2023-24/IND0086
6	DMA/2023-24/IND0101
7	DMA/2023-24/IND0098
8	DMA/2023-24/WS/WORK_INDENT2450
9	DMA/2023-24/WS/WORK_INDENT2444
10	DMA/2023-24/SE0543

ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **(https://kppp.karnataka.gov.in)** ಮುಖಾಂತರ ಕಾಮಗಾರಿ ಮಾಡಲು, ವಾಹನಗಳನ್ನು ಸರಬರಾಜು ಮಾಡಲು ಹಾಗೂ ಸೇವೆ ಒದಗಿಸಲು ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್ ಮೊತ್ತ ಕನಿಷ್ಠ 2.14 ಲಕ್ಷದಿಂದ ಗರಿಷ್ಠ 15.00 ಲಕ್ಷಗಳಿದ್ದು, ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಬಿಡ್ ಸಲ್ಲಿಸಲು ಕೊನೆಯ ದಿನಾಂಕ: **21.09.2023 ರ 17.00 ಗಂಟೆಯವರೆಗೆ.** ಟೆಂಡರ್ ತೆರೆಯುವ ದಿನಾಂಕ: **22.09.2023 ರಂದು 17.15 ಗಂಟೆಗೆ.** ಹೆಚ್ಚಿನ ವಿವರಗಳಿಗೆ ಕಛೇರಿಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸಿ ತಿಳಿದುಕೊಳ್ಳುವುದು ಮತ್ತು ಯಾವುದೇ ತಿದ್ದುಪಡಿ ಹಾಗೂ ಬದಲಾವಣೆಯಿದ್ದಲ್ಲಿ ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ ತಿಳಿಸಲಾಗುವುದು.

ಸಹಿ/- ಆಡಳಿತಾಧಿಕಾರಿ, ಪಟ್ಟಣ ಪಂಚಾಯಿತಿ, ಬಾಶೆಟ್ಟಿಹಳ್ಳಿ
ವಾಸಾಸಂಇ/ವಾಪ್ರಾ//ಎಎಎ/2023-24
ಸಹಿ/- ಮುಖ್ಯಾಧಿಕಾರಿ, ಪಟ್ಟಣ ಪಂಚಾಯಿತಿ, ಬಾಶೆಟ್ಟಿಹಳ್ಳಿ



ಖಾಸಗಿ ಸಾರಿಗೆ ಸಂಘಗಳ ಒಕ್ಕೂಟ, ಸರ್ಕಾರದ ನಡುವೆ ಸಂಧಾನ ವಿಫಲ

ಸೆ.11ರಂದು ಖಾಸಗಿ ಸಾರಿಗೆ ಬಂದ್ ನಿಶ್ಚಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಖಾಸಗಿ ಸಾರಿಗೆ ಸಂಘಗಳ ಒಕ್ಕೂಟ ಹಾಗೂ ಸರ್ಕಾರದ ನಡುವೆ ನಡೆದ ಸಂಧಾನ ಸಭೆಯು ವಿಫಲವಾಗಿದ್ದು, ಸೆ.11ರಂದು ಖಾಸಗಿ ಸಾರಿಗೆ ಬಂದ್ ನಡೆಯುವುದು ಬಹುತೇಕ ನಿಶ್ಚಿತವಾಗಿದೆ.

'ಶಕ್ತಿ' ಯೋಜನೆಯಿಂದ ನಷ್ಟಕ್ಕೆ ಸಿಲುಕಿದ್ದು ಖಾಸಗಿ ಸಾರಿಗೆ ವಾಹನ ಚಾಲಕರಿಗೆ ಪರಿಹಾರ ಧನ ನೀಡುವುದು ಸೇರಿದಂತೆ ಹಲವು ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ಖಾಸಗಿ ಸಾರಿಗೆ ಸಂಘಗಳ ಒಕ್ಕೂಟವು ಬಂದ್‌ಗೆ ಕರೆ ನೀಡಿದೆ.

ಬಂದ್ ನಡೆದರೆ ಶಾಲಾ ಮಕ್ಕಳು, ಉದ್ಯೋಗಿಗಳು ಸೇರಿದಂತೆ ಖಾಸಗಿ ಸಾರಿಗೆ ವ್ಯವಸ್ಥೆ ಅವಲಂಬಿಸಿರುವ ಸಾಮಾನ್ಯ ವರ್ಗಕ್ಕೆ ಸೋಮವಾರ ಬೆಳಿಗ್ಗೆಯಿಂದಲೇ ಬಂದ್ ಬಿಸಿ ತಟ್ಟಲಿದೆ.

ಸುಮಾರು 32 ಸಂಘಟನೆಗಳ ಮುಖಂಡರು ಸಭೆ ಸೇರಿ ಚರ್ಚೆ ನಡೆಸಿದ್ದೇವೆ. ಈ ಹಿಂದೆ ಬೇಡಿಕೆ ಈಡೇರಿಕೆ ಸಂಬಂಧ ಸಾರಿಗೆ ಸಚಿವ ರಾಮಲಿಂಗರೆಡ್ಡಿ ನೇತೃತ್ವದಲ್ಲಿ ಸಭೆ ನಡೆಸಲಾಗಿತ್ತು. ಆಗ ಅವರು ಬೇಡಿಕೆ ಈಡೇರಿಸುವ ಭರವಸೆ ನೀಡಿದ್ದರು. ಆದರೆ, ಈವರೆಗೂ ಈಡೇರಿಸಲು ಮುಂದಾಗಿಲ್ಲ. ಆ ಹಿನ್ನೆಲೆಯಲ್ಲಿ ಬೆಂಗಳೂರಿನಲ್ಲಿ ಬಂದ್‌ಗೆ ಕರೆ ನೀಡಲಾಗಿದೆ. ಬೇಡಿಕೆ ಈಡೇರಿಕೆಯ ವಿಚಾರವು ಆದೇಶದ ರೂಪದಲ್ಲಿಯೇ ನೀಡಬೇಕು ಎಂದು ಒಕ್ಕೂಟದ ರಾಜ್ಯ ಅಧ್ಯಕ್ಷ ಎಸ್.ನಟರಾಜ್ ಆಗ್ರಹಿಸಿದ್ದಾರೆ.

'ಶಕ್ತಿ' ಯೋಜನೆ ಜಾರಿಯಿಂದ ಬಸ್‌ಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನರು ಪ್ರಯಾಣಿಸುತ್ತಿದ್ದಾರೆ. ಖಾಸಗಿ ಸಾರಿಗೆ ಬಳಸುತ್ತಿಲ್ಲ. ಇದರಿಂದ ನಷ್ಟವಾಗುತ್ತಿದೆ. ಅಕ್ರಮವಾಗಿ ಚಲಿಸುತ್ತಿರುವ ರಾಪಿಡೊ ಬೈಕ್, ಟ್ಯಾಕ್ಸಿ ಸಂಪೂರ್ಣವಾಗಿ ನಿಷೇಧಿಸುವ ಕೆಲಸ ಸರ್ಕಾರದಿಂದಲೂ ನಡೆದಿಲ್ಲ ಎಂದು ದೂರಿದರು.


ಆಟೊ, ಟ್ಯಾಕ್ಸಿ, ಖಾಸಗಿ ಬಸ್‌ಗಳ ಚಾಲಕರು ಮತ್ತು ಮಾಲೀಕರ ಬೇಡಿಕೆಗಳಲ್ಲಿ ಬಹುತೇಕ ಅಂಶಗಳಿಗೆ ಸರ್ಕಾರ ಸ್ಪಂದಿಸಿದ್ದು, ಈಡೇರಿಕೆ ವಿವಿಧ ಹಂತದಲ್ಲಿವೆ. ಎರಡು, ಮೂರು ಮಾತ್ರ ಮುಖ್ಯಮಂತ್ರಿ ಹಂತದಲ್ಲೇ ತೀರ್ಮಾನ ಆಗಬೇಕಿದೆ. ಅದಕ್ಕಾಗಿ ಸ್ವತಃ ಮುಖ್ಯಮಂತ್ರಿ ಸಭೆಗೆ ಆಹ್ವಾನಿಸಿದರೂ ಒಕ್ಕೂಟದ ಪ್ರತಿನಿಧಿಗಳು ಭಾಗವಹಿಸಲಿಲ್ಲ. ಆ ಅವಕಾಶವನ್ನೂ ಕೈಚೆಲ್ಲಿದರು. ಈಗ ಮುಷ್ಕರ ನಡೆಸುವುದಾಗಿ ಹೇಳುತ್ತಿದ್ದಾರೆ. ಇದು ಎಷ್ಟು ಸರಿ ಎಂದು ಸಾರಿಗೆ ಸಚಿವ ರಾಮಲಿಂಗರೆಡ್ಡಿ ಅವರು ಪ್ರಶ್ನಿಸಿದ್ದಾರೆ.

ಇಂದು ಮತ್ತೊಮ್ಮೆ ಚರ್ಚೆ



ಬಂದ್ ನಡೆಸದಂತೆ ಮನವಿ ಮಾಡಲಾಗಿದೆ. ಬಂದ್ ನಡೆಸಿದರೆ ತೊಂದರೆ ಆಗದಂತೆ ಪರ್ಯಾಯ ವ್ಯವಸ್ಥೆ ಕಲ್ಪಿಸಲಾಗುವುದು. ಪೊಲೀಸರಿಗೂ ಸೂಚನೆ ನೀಡಲಾಗಿದೆ. ಒಕ್ಕೂಟದ ಸದಸ್ಯರು ಶನಿವಾರ ಮತ್ತೊಮ್ಮೆ ನನ್ನನ್ನು ಭೇಟಿ ಮಾಡಲಿದ್ದಾರೆ. ಆಗ ಚರ್ಚಿಸಲಾಗುವುದು

ರಾಮಲಿಂಗರೆಡ್ಡಿ, ಸಾರಿಗೆ ಸಚಿವ



11ನೇ ಪುಣ್ಯ ಸ್ಮರಣೆಯ ದಿನದಂದುಡಾ. ಕುರಿಯನ್ ಅವರಿಗೆಶ್ರದ್ಧಾಂಜಲಿ


ವಿದ್ಯುತ್ ವ್ಯತ್ಯಯ 10ಕ್ಕೆ

ಬೆಂಗಳೂರು: ಕೆಪಿಟಿಸಿಎಲ್ ವತಿಯಿಂದ ನಿರ್ವಹಣಾ ಕಾರ್ಯ ಕೈಗೊಂಡಿರುವುದರಿಂದ ಚಂದಾಪುರ ವಿಭಾಗದ ವಿವಿಧೆಡೆ ಸೆ.10ರಂದು ಬೆಳಿಗ್ಗೆ 10ರಿಂದ ಮಧ್ಯಾಹ್ನ 3ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

ಸ್ಥಳಗಳು: ಸರ್ಜಾಪುರ, ಮುಗಳೂರು, ಹಂದೇನಹಳ್ಳಿ, ಬಿಲ್ಲಾಪುರ, ಅತ್ತಿಬೆಲೆ ಪಟ್ಟಣ, ಅತ್ತಿಬೆಲೆ ಕೈಗಾರಿಕೆ ಪ್ರದೇಶ, ಯಡವನಹಳ್ಳಿ ಸುತ್ತಮುತ್ತ ಪ್ರದೇಶಗಳು

ಶ್ರೀನಿವಾಸುಲು ಆಹಾರ ನಿಗಮ ಎಂಡಿ

ಬೆಂಗಳೂರು: ಹೆಚ್ಚುವರಿ ಪ್ರಧಾನ ಅರಣ್ಯ ಸಂರಕ್ಷಣಾಧಿಕಾರಿ (ಸಂಶೋಧನೆ) ಶ್ರೀನಿವಾಸುಲು ಅವರನ್ನು ಕರ್ನಾಟಕ ಆಹಾರ ಮತ್ತು ನಾಗರಿಕ ಪೂರೈಕೆ ನಿಗಮದ ವ್ಯವಸ್ಥಾಪಕ ನಿರ್ದೇಶಕ ಹುದ್ದೆಗೆ ವರ್ಗಾಯಿಸಲಾಗಿದೆ







FARNAZ



ಬೆಸಿಲಿಕಾದಲ್ಲಿ ತಾಯಿ ಮೇರಿ ಜಯಂತ್ಯುತ್ಸವದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ

ಕ್ರೈಸ್ತ ಅಭಿವೃದ್ಧಿ ನಿಗಮ ಸ್ಥಾಪನೆ ಶೀಘ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶೀಘ್ರದಲ್ಲೇ ಕ್ರೈಸ್ತ ಅಭಿವೃದ್ಧಿ ನಿಗಮ ಸ್ಥಾಪಿಸಲಾಗುವುದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ಶಿವಾಜಿನಗರದ ಸೇಂಟ್ ಮೇರಿ ಬೆಸಿಲಿಕಾದಲ್ಲಿ ತಾಯಿ ಮೇರಿ ಜಯಂತ್ಯುತ್ಸವ ಉದ್ಘಾಟಿಸಿ ಅವರು ಮಾತನಾಡಿದ ಅವರು, 'ಬಜೆಟ್‌ನಲ್ಲಿ ಕ್ರೈಸ್ತ ಅಭಿವೃದ್ಧಿ ನಿಗಮ ಸ್ಥಾಪನೆಯನ್ನು ಘೋಷಿಸಲಾಗಿದೆ. ಈ ನಿಗಮಕ್ಕೆ ₹100 ಕೋಟಿ ಅನುದಾನ ಮೀಸಲಿರಿಸಿ ಅರ್ಹ ಅಧ್ಯಕ್ಷರನ್ನು ನೇಮಿಸಲಾಗುವುದು' ಎಂದು ಭರವಸೆ ನೀಡಿದರು.

'ಭಾರತವೇ ಒಂದು ಭಾವೈಕ್ಯ ಕೇಂದ್ರ. ಇಲ್ಲಿ ಜಾತಿ-ಧರ್ಮದ ಹೆಸರಿನಲ್ಲಿ ಮನುಷ್ಯ ದ್ವೇಷಕ್ಕೆ ಜಾಗ ಇಲ್ಲ. ಕೆಲವರು ಮನುಷ್ಯ ದ್ವೇಷವನ್ನೇ ಸಂಸ್ಕೃತಿಯನ್ನಾಗಿ ಆಚರಿಸಲು ಪ್ರಯತ್ನಿಸುತ್ತಿದ್ದಾರೆ. ದ್ವೇಷದ ವಾತಾವರಣ ಹರಡಿಸುವವರ ವಿರುದ್ಧ ಸರ್ಕಾರ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಿದೆ. ಮತೀಯ ಗೂಂಡಾಗಿರಿಗೆ ಅವಕಾಶ ಇಲ್ಲ. ಕಾನೂನು ಉಲ್ಲಂಘಿಸಿದರೆ ತಕ್ಕ ಶಾಸ್ತಿಯಾಗಲಿದೆ' ಎಂದು ಎಚ್ಚರಿಸಿದರು.

'ಬೆಸಿಲಿಕಾ ಪ್ರಾರ್ಥನಾ ಮಂದಿರಕ್ಕೆ ಎಲ್ಲಾ ಜಾತಿ, ಧರ್ಮದವರು ಭೇಟಿ ನೀಡುತ್ತಾರೆ. ಹೀಗಾಗಿ ಇದೊಂದು ಭಾವೈಕ್ಯತಾ ಕೇಂದ್ರವಾಗಿ ರೂಪುಗೊಂಡಿದೆ. ಕ್ರೈಸ್ತ ಸಮುದಾಯ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರದಲ್ಲಿ ನಾಡಿಗೆ ಅಪಾರ ಸೇವೆ ಸಲ್ಲಿಸಿದೆ' ಎಂದು ಮೆಚ್ಚುಗೆ ಸೂಚಿಸಿದರು.

ಶಿವಾಜಿನಗರ ಮೆಟ್ರೊ ನಿಲ್ದಾಣಕ್ಕೆ ಸೇಂಟ್ ಮೇರೀಸ್ ನಿಲ್ದಾಣ ಎಂದು ಹೆಸರಿಡಬೇಕು ಎನ್ನುವುದೂ ಸೇರಿ ಸಮುದಾಯದ ಮುಖಂಡರು ಮುಂದಿಟ್ಟಿರುವ ಮೂರು ಬೇಡಿಕೆಗಳ ಬಗ್ಗೆ ಪರಿಶೀಲಿಸಿ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಶಾಸಕ ರಿಜ್ವಾನ್ ಅರ್ಷದ್ ಅಧ್ಯಕ್ಷತೆ ವಹಿಸಿದ್ದರು. ಆರ್ಚ್ ಬಿಷಪ್ ಪೀಟರ್ ಮಚ್ಚಾಡೋ ಇದ್ದರು.



ಶಿವಾಜಿನಗರದ ಸೇಂಟ್ ಮೇರಿ ಬೆಸಿಲಿಕಾದಲ್ಲಿ ಶುಕ್ರವಾರ ನಡೆದ ತಾಯಿ ಮೇರಿ ಜಯಂತ್ಯುತ್ಸವದಲ್ಲಿ ಸಾವಿರಾರು ಭಕ್ತರು ಪಾಲ್ಗೊಂಡಿದ್ದರು. ಪ್ರಜಾವಾಣಿ ಚಿತ್ರ/ವಿ.ಪುಷ್ಕರ್

ವೈದ್ಯಕೀಯ ಪಿ.ಜಿ: ಮಾರ್ಗದರ್ಶಿ ಬಿಡುಗಡೆ

ನವದೆಹಲಿ (ಪಿಟಿಐ): ಸ್ನಾತಕೋತ್ತರ ವೈದ್ಯಕೀಯ ಪದವಿ ಕೋರ್ಸ್ ಆರಂಭಿಸಲು ಬಯಸುವ ಆಸ್ಪತ್ರೆಗಳಿಗಾಗಿ ಹೊಸ ಕರಡು ಮಾರ್ಗದರ್ಶಿ ಸೂತ್ರಗಳನ್ನು ರಾಷ್ಟ್ರೀಯ ವೈದ್ಯಕೀಯ ಆಯೋಗವು (ಎನ್‌ಎಂಸಿ) ಶುಕ್ರವಾರ ಬಿಡುಗಡೆ ಮಾಡಿದೆ.

ಹೊಸದಾಗಿ ಕೋರ್ಸ್ ಆರಂಭಿಸುವ ಆಸ್ಪತ್ರೆಗಳಲ್ಲಿ ಕನಿಷ್ಠ 200 ಹಾಸಿಗೆಗಳ ಸೌಲಭ್ಯವಿರಬೇಕು. ಇದರಲ್ಲಿ ಶೇ 75ರಷ್ಟು ವರ್ಷಪೂರ್ತಿ ಬಳಕೆಯಾಗಿರಬೇಕು. ಸ್ನಾತಕೋತ್ತರ ಪದವಿ ತರಬೇತಿಗಾಗಿ ನಿಯೋಜಿಸುವ ಒಟ್ಟು ಹಾಸಿಗೆಗಳಲ್ಲಿ ಶೇ 15 ರಷ್ಟು ಹಾಸಿಗೆಗಳು ತೀವ್ರ ನಿಗಾ ಘಟಕಕ್ಕೆ (ಐಸಿಯು) ಅಥವಾ ಎಚ್‌ಡಿಯು ಘಟಕಕ್ಕೆ ಸಂಬಂಧಿಸಿದ್ದಾಗಿರಬೇಕು ಎಂದು ತಿಳಿಸಿದೆ.

ಅಲ್ಲದೆ, ಆಸ್ಪತ್ರೆಗಳು ಕಡ್ಡಾಯವಾಗಿ ಜೀವರಾಸಾಯನ ವಿಜ್ಞಾನ, ನರರೋಗ, ಸೂಕ್ಷ್ಮಜೀವವಿಜ್ಞಾನ ಮತ್ತು ರೇಡಿಯೊ ಡಯಾಗ್ನೋಸಿಸ್ ವಿಭಾಗ ಹೊಂದಿರಬೇಕೆಂದು ಮಾರ್ಗದರ್ಶಿ ಸೂತ್ರಗಳಲ್ಲಿ ತಿಳಿಸಲಾಗಿದೆ. ಸಾರ್ವಜನಿಕರು ತಮ್ಮ ಸಲಹೆಗಳನ್ನು ಸೆಪ್ಟೆಂಬರ್ 15ರವರೆಗೂ ಸಲ್ಲಿಸಬಹುದಾಗಿದೆ ಎಂದು ತಿಳಿಸಿದೆ.

ಸುದ್ದಿ 2 ನಿಮಿಷ

ಸಿ.ಎಂ ಭೇಟಿ ಮಾಡಿದ ದಲಿತ, ಹಿಂದುಳಿದ ಮಠಾಧೀಶರು

ಬೆಂಗಳೂರು: ಹಿಂದುಳಿದ ವರ್ಗಗಳು ಮತ್ತು ದಲಿತ ಸಮುದಾಯದ 20ಕ್ಕೂ ಹೆಚ್ಚು ಮಠಾಧೀಶರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಶುಕ್ರವಾರ ಭೇಟಿ ಮಾಡಿ, ತಮ್ಮ ಸಮುದಾಯಗಳ ಸಾಮಾಜಿಕ ಮತ್ತು ಶೈಕ್ಷಣಿಕ ಅಭಿವೃದ್ಧಿಗೆ ನೆರವು ನೀಡುವಂತೆ ಮನವಿ ಮಾಡಿದರು.

ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದ ಸ್ವಾಮೀಜಿ ನಿಯೋಗದ ನೇತೃತ್ವ ವಹಿಸಿದ್ದರು.

ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ನಿಯೋಗದ ಜತೆಗಿದ್ದರು. ರಾಜ್ಯದ ವಿವಿಧ ಭಾಗಗಳ ಮಠಾಧೀಶರು ಇದ್ದರು.

ಶೈಕ್ಷಣಿಕ ಸಂಸ್ಥೆಗಳನ್ನು ಆರಂಭಿಸಲು ಜಮೀನು ಮತ್ತು ಅನುದಾನ ಒದಗಿಸುವಂತೆ ಮಠಾಧೀಶರು ಮನವಿ ಮಾಡಿದ್ದಾರೆ. ಸಮುದಾಯ ಭವನಗಳನ್ನು ನಿರ್ಮಿಸುವುದಕ್ಕೂ ನೆರವು ಕೋರಿದ್ದಾರೆ ಸಿ.ಎಂ ಕಚೇರಿ ಪ್ರಕಟಣೆ ತಿಳಿಸಿದೆ.

'ಕನ್ನಡ ಸಾಹಿತ್ಯಕ್ಕೆ ವಿಭಿನ್ನ ಆಯಾಮ ಕೊಟ್ಟ ತೇಜಸ್ವಿ'



ಬೆಂಗಳೂರು: 'ಕನ್ನಡ ಸಾಹಿತ್ಯಕ್ಕೆ ವಿಭಿನ್ನ ಆಯಾಮ ಕೊಟ್ಟ ಸೃಜನಶೀಲ ಲೇಖಕರಲ್ಲಿ ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಪ್ರಮುಖರು' ಎಂದು ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಅಧ್ಯಕ್ಷ ಮಹೇಶ ಜೋಶಿ ಬಣ್ಣಿಸಿದರು.

ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಅವರ 85ನೇ ಜನ್ಮದಿನ ಪ್ರಯುಕ್ತ ಕಸಾಪ ನಗರದಲ್ಲಿ ಶುಕ್ರವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಹಲವು ಬಗೆಯ ಆಸಕ್ತಿಗಳು, ವಿಭಿನ್ನ ಪ್ರಯೋಗಗಳು, ತಲಸ್ಪರ್ಶಿಯಾದ ಬದುಕಿನ ಶೋಧ, ದಿಟ್ಟ ವೈಚಾರಿಕ ನಿಲುವು ಮತ್ತು ಕಲಾತ್ಮಕ ಅಭಿವ್ಯಕ್ತಿ ತೇಜಸ್ವಿಯವರನ್ನು ಅನನ್ಯ ಲೇಖಕರನ್ನಾಗಿ ಮಾಡಿತು. ತೇಜಸ್ವಿ ಅವರ ಅಭಿವ್ಯಕ್ತಿಯ ಹರಹೂ ವಿಸ್ತಾರವಾಗಿದೆ' ಎಂದು ಹೇಳಿದರು.

ಕಸಾಪ ಪ್ರಕಟಣಾ ವಿಭಾಗದ ಮುಖ್ಯಸ್ಥ ಎನ್.ಎಸ್.ಶ್ರೀಧರಮೂರ್ತಿ, 'ತೇಜಸ್ವಿಯವರ 'ತಬರನ ಕತೆ'ಯನ್ನು ಗಿರೀಶ ಕಾಸರವಳ್ಳಿಯವರು ಸಿನಿಮಾ ಮಾಡಿದರು. ಇದಕ್ಕೆ ಸ್ವರ್ಣ ಕಮಲ ಪುರಸ್ಕಾರವೂ ಲಭಿಸಿತು. ಅವರ 'ಕರ್ವಾಲೋ', 'ಚಿದಂಬರ ರಹಸ್ಯ', 'ಕೃಷ್ಣೇಗೌಡರ ಆನೆ', 'ಕಿರಗೂರಿನ ಗಯ್ಯಾಳಿಗಳು' ರಂಗಭೂಮಿಯಲ್ಲಿ ಜನಪ್ರಿಯವಾದವು. ಅವರ 'ಡೇರ್ ಡೆವಿಲ್ ಮುಸ್ತಾಫಾ' ಬಹು ಯಶಸ್ವಿ ಚಿತ್ರವಾಯಿತು. ಹೊಸ ಪೀಳಿಗೆ ಬರಹಗಾರರಿಗೆ ದಿಕ್ಸೂಚಿಯಂತಿದ್ದ ಅವರು, ವಿಜ್ಞಾನ, ಮಾಹಿತಿ ತಂತ್ರಜ್ಞಾನದ ಕುರಿತೂ ವಿಪುಲವಾಗಿ ಬರೆದಿದ್ದಾರೆ' ಎಂದು ತಿಳಿಸಿದರು.



ಏರೋಪ್ಲೇನ್ ಚಿಟ್ಟೆಗಳ ಛಾಯಾಚಿತ್ರಗಳನ್ನು ಯುವಕ ಯುವತಿಯರು ಕುತೂಹಲದಿಂದ ವೀಕ್ಷಿಸಿದರು – ಪ್ರಜಾವಾಣಿ ಚಿತ್ರ

ನಗರದಲ್ಲಿ 'ಕೊಡತಿ' ಕೀಟ ಲೋಕ ಅನಾವರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಣ್ಣ ಬಣ್ಣದ ರೆಕ್ಕೆಗಳು, ದೊಡ್ಡದಾದ ಕಣ್ಣುಗಳು ಹಾಗೂ ಗೋಲಾಕಾರದ ತಲೆಯ ಭಾಗವನ್ನು ಹೊಂದಿರುವ ಕೊಡತಿ ಕೀಟದ (ಏರೋಪ್ಲೇನ್ ಚಿಟ್ಟೆ) ಸುಮಾರು 180 ಪ್ರಭೇದಗಳು ಇಲ್ಲಿನ ಚಿತ್ರಕಲಾ ಪರಿಷತ್ತಿನಲ್ಲಿ ಅನಾವರಣಗೊಂಡಿವೆ.

ಪರಿಸರ–ನಿಸರ್ಗ ಸಂರಕ್ಷಣಾ ಟ್ರಸ್ಟ್, ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಪ್ರತಿಷ್ಠಾನ ಹಾಗೂ ಕರ್ನಾಟಕ ಚಿತ್ರಕಲಾ ಪರಿಷತ್ತು ಜಂಟಿಯಾಗಿ ನಗರದಲ್ಲಿ 'ತೇಜಸ್ವಿ ಜೀವಲೋಕ 11' ಶೀರ್ಷಿಕೆಯಡಿ ಹಮ್ಮಿಕೊಂಡ ಛಾಯಾಚಿತ್ರ ಹಾಗೂ ಸಾಕ್ಷ್ಯಚಿತ್ರ ಪ್ರದರ್ಶನಕ್ಕೆ ಶುಕ್ರವಾರ ಚಾಲನೆ ದೊರೆಯಿತು. ಛಾಯಾಚಿತ್ರ ಪ್ರದರ್ಶನವು ಇದೇ 14ರವರೆಗೆ ಬೆಳಿಗ್ಗೆ 11ರಿಂದ ಸಂಜೆ 7.30ರವರೆಗೆ ನಡೆಯಲಿದೆ.

ಕರ್ನಾಟಕ, ರಾಜಸ್ಥಾನ, ಪಶ್ಚಿಮ ಬಂಗಾಳ, ಕೇರಳ ಸೇರಿ ವಿವಿಧ ರಾಜ್ಯಗಳಲ್ಲಿ ಕಾಣಸಿಗುವ ಏರೋಪ್ಲೇನ್ ಚಿಟ್ಟೆಯ ಛಾಯಾಚಿತ್ರಗಳನ್ನು ಪ್ರದರ್ಶನಕ್ಕೆ ಇರಿಸಲಾಗಿದೆ. ಈ ಕೀಟದ ಬಗ್ಗೆ ಕೊಲ್ಕತ್ತದ ಪ್ರೊಸೇನ್‌ಜಿತ್ ಅವರು ಅಧ್ಯಯನ ನಡೆಸುತ್ತಿದ್ದು, ಅವರು ಸೆರೆಹಿಡಿದ ಹಾಗೂ ಸಂಗ್ರಹಿಸಿದ ಛಾಯಾಚಿತ್ರಗಳಲ್ಲಿ 230 ಛಾಯಾಚಿತ್ರಗಳು ಇಲ್ಲಿವೆ.

'ದೇಶದಲ್ಲಿ ಸುಮಾರು 500 ಪ್ರಭೇದಗಳ ಏರೋಪ್ಲೇನ್ ಚಿಟ್ಟೆಗಳಿವೆ. ಕೆರೆಗಳ ನೀರು ಮಲಿನ, ಗಿಡ–ಮರಗಳ ನಾಶ ಸೇರಿ ವಿವಿಧ ಕಾರಣಗಳಿಂದ ಕೆಲ ಪ್ರಭೇದಗಳು ಕಣ್ಮರೆಯಾಗುತ್ತಿವೆ. ಇವುಗಳಿಗೆ ಪ್ರದೇಶವಾರು ವಿವಿಧ ಹೆಸರುಗಳಿಂದ ಕರೆಯಲಾಗುತ್ತಿದೆ. ಈ ಕೀಟವು ಬೇಟೆಯಲ್ಲಿ ನಿಪುಣ' ಎಂದು ಪ್ರೊಸೇನ್‌ಜಿತ್ ತಿಳಿಸಿದರು.

'ತೇಜಸ್ವಿ ಅವರ ನೆನಪಿನಲ್ಲಿ ಅವರ ಕಥೆಗಳಲ್ಲಿ ಬರುವ ಜೀವಿಯೊಂದನ್ನು ಕೇಂದ್ರವಾಗಿರಿಸಿ ಸರಣಿ ಛಾಯಾಚಿತ್ರ, ಸಾಕ್ಷ್ಯಚಿತ್ರ ಪ್ರದರ್ಶನಗಳನ್ನು ನಡೆಸಲಾಗುತ್ತಿದೆ' ಎಂದು ಪರಿಸರ ನಿಸರ್ಗ ಸಂರಕ್ಷಣಾ ಸಂಸ್ಥೆಯ ಕಾರ್ಯದರ್ಶಿ ಈಶ್ವರ್ ಪ್ರಸಾದ್ ತಿಳಿಸಿದರು.

ಛಾಯಾಚಿತ್ರ ಪ್ರದರ್ಶನದ ಉದ್ಘಾಟನಾ ಸಮಾರಂಭದಲ್ಲಿ ಕೃಷಿ ಅಧಿಕಾರಿ ಹಾಗೂ ದೂರದರ್ಶನ ವಾರ್ತಾ ವಾಚಕ ನೂರ್ ಸಮದ್ ಅಬ್ಬಲಗೆರೆ ಅವರ 'ವಿಸ್ಮಯ ಕೀಟ ಪ್ರಪಂಚ' ಕೃತಿಯನ್ನು ಬಿಡುಗಡೆ ಮಾಡಲಾಯಿತು. ಕರ್ನಾಟಕ ಚಿತ್ರಕಲಾ ಪರಿಷತ್ತಿನ ಅಧ್ಯಕ್ಷ ಬಿ.ಎಲ್. ಶಂಕರ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಬೆಂಗಳೂರು ನಗರ, ಗ್ರಾಮಾಂತರ, ರಾಮನಗರ ಜಿಲ್ಲೆಗಳ ಕರಡು ಪಟ್ಟಿ ಪ್ರಕಟ

ಸ್ಥಿರಾಸ್ತಿ ದರ ಪರಿಷ್ಕರಣೆ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಸ್ಥಿರಾಸ್ತಿ ಮಾರ್ಗಸೂಚಿ ದರಗಳ ಪರಿಷ್ಕರಣೆ ಪ್ರಕ್ರಿಯೆಯನ್ನು ನೋಂದಣಿ ಮತ್ತು ಮುದ್ರಾಂಕ ಇಲಾಖೆ ಆರಂಭಿಸಿದೆ. ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಗಳಲ್ಲಿನ ಸ್ಥಿರಾಸ್ತಿಗಳ ಪರಿಷ್ಕೃತ ಮಾರ್ಗಸೂಚಿ ದರಗಳ ಕರಡು ಪಟ್ಟಿಯನ್ನು ಗುರುವಾರ ಪ್ರಕಟಿಸಲಾಗಿದೆ.

ಎರಡು ಹಂತಗಳಲ್ಲಿ ಸ್ಥಿರಾಸ್ತಿ ದರ ಪರಿಷ್ಕರಣೆ ಮಾಡಲಾಗುತ್ತಿದೆ. ಮೊದಲ ಹಂತದಲ್ಲಿ ರಾಜ್ಯ ರಾಜಧಾನಿ ಮತ್ತು ಸಮೀಪದ ಎರಡು ಜಿಲ್ಲೆಗಳ ಸ್ಥಿರಾಸ್ತಿಗಳ ಮಾರ್ಗಸೂಚಿ ದರ ಪರಿಷ್ಕರಣೆಗೆ ಕರಡು ದರ ಪಟ್ಟಿ ಪ್ರಕಟವಾಗಿದೆ. ಎರಡನೇ ಹಂತದಲ್ಲಿ ಅಕ್ಟೋಬರ್ 1ರಂದು ಉಳಿದ 28 ಜಿಲ್ಲೆಗಳ ಕರಡು ದರ ಪಟ್ಟಿಗಳನ್ನು ಪ್ರಕಟಿಸಲಾಗುವುದು ಎಂದು ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ಈ ಬಾರಿ ಸ್ಥಿರಾಸ್ತಿಗಳ ಮಾರ್ಗಸೂಚಿ ದರವನ್ನು ಸರಾಸರಿ ಹೆಚ್ಚಳ ಮಾಡಿಲ್ಲ. ಹೊಸದಾಗಿ ಸಿದ್ಧಪಡಿಸಿರುವ ಮಾನದಂಡಗಳ ಆಧಾರದಲ್ಲಿ ಶೇಕಡ 5ರಿಂದ ಶೇಕಡ 70ರವರೆಗೂ ಹೆಚ್ಚಳ ಮಾಡುವ ಪ್ರಸ್ತಾವ ಕರಡು ಪಟ್ಟಿಯಲ್ಲಿದೆ ಎಂದು ಮೂಲಗಳು ಹೇಳಿವೆ.

ಅಭಿವೃದ್ಧಿ ಹೊಂದಿದ ಪ್ರದೇಶಗಳಲ್ಲಿ ಮಾರ್ಗಸೂಚಿ ದರ ಕಡಿಮೆ ಇರುವುದನ್ನು ಗುರುತಿಸಿ ವ್ಯತ್ಯಾಸ ಸರಿಪಡಿಸುವ ಪ್ರಯತ್ನ ಮಾಡಲಾಗಿದೆ. ಕೆಲವೆಡೆ ನೈಜ ಮಾರುಕಟ್ಟೆ ದರ ಮತ್ತು ಮಾರ್ಗಸೂಚಿ ದರಗಳ ನಡುವೆ ಭಾರಿ ಅಂತರ ಇದೆ. ಅಂತಹ ಪ್ರದೇಶಗಳಲ್ಲೂ ಅಂತರ ತಗ್ಗಿಸುವಂತೆ ದರ ನಿಗದಿ ಮಾಡಲಾಗಿದೆ. ಈ ಬಾರಿ ಹೆಚ್ಚು ವೈಜ್ಞಾನಿಕವಾಗಿ ಸ್ಥಿರಾಸ್ತಿಗಳ ಮಾರ್ಗಸೂಚಿ ದರ ಪರಿಷ್ಕರಣೆಯ ಪ್ರಕ್ರಿಯೆ ನಡೆದಿದೆ ಎಂದು ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ಬೆಂಗಳೂರಿನಲ್ಲಿ ಮೆಟ್ರೊ ರೈಲು ಮಾರ್ಗ ಹಾದು ಹೋಗಿರುವ ಪ್ರದೇಶಗಳು, ಮೆಟ್ರೊ ರೈಲು ನಿಲ್ದಾಣಗಳಿಗೆ ಸಮೀಪದಲ್ಲಿರುವ ಪ್ರದೇಶಗಳು, ಉದ್ದೇಶಿತ ಹೊಸ ಮೆಟ್ರೊ ರೈಲು ಮಾರ್ಗಗಳ ಪ್ರದೇಶಗಳು, ಬೃಹತ್ ರಸ್ತೆಗಳು ನಿರ್ಮಾಣವಾಗಿರುವ ಪ್ರದೇಶಗಳು, ಹೊರ ವರ್ತುಲ ರಸ್ತೆ, ಉಪನಗರ ವರ್ತುಲ ರಸ್ತೆಯ ಸಮೀಪದ ಪ್ರದೇಶಗಳು, ಹೊಸದಾಗಿ ಬೃಹತ್ ಮಾಲ್‌ಗಳು, ವಾಣಿಜ್ಯ ಸಮುಚ್ಛಯಗಳು ನಿರ್ಮಾಣವಾಗಿರುವ ಪ್ರದೇಶಗಳಲ್ಲಿ ಸ್ಥಿರಾಸ್ತಿಗಳ ಮಾರ್ಗಸೂಚಿ ಬೆಲೆಯಲ್ಲಿ ಹೆಚ್ಚಳ ಮಾಡಲಾಗಿದೆ.

ಬೆಂಗಳೂರು ನಗರದಲ್ಲಿ ಕೆಲವು ಪ್ರದೇಶಗಳಲ್ಲಿ ಕೆಲವು ರಸ್ತೆಗಳು ಮಾರ್ಗಸೂಚಿ ದರ ಪಟ್ಟಿಯಲ್ಲಿ ನಮೂದಾಗಿರಲಿಲ್ಲ. ಅಂತಹ ಪ್ರದೇಶಗಳಲ್ಲಿ ಕಡಿಮೆ ದರ ಇತ್ತು. ಅವುಗಳನ್ನು ಪತ್ತೆಮಾಡಿ ಪಟ್ಟಿಯಲ್ಲಿ ನಮೂದಿಸಿ, ಪಕ್ಕದ ಪ್ರದೇಶಗಳಿಗೆ ಸಮನಾದ ಮಾರ್ಗಸೂಚಿ ದರ ನಿಗದಿಪಡಿಸಲಾಗಿದೆ.

ಬೆಂಗಳೂರು ನಗರದ ಹೊರ ವಲಯ, ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಗಳ ವ್ಯಾಪ್ತಿಯಲ್ಲಿ ಚೆನ್ನೈ– ಬೆಂಗಳೂರು ಎಕ್ಸ್‌ಪ್ರೆಸ್ ವೇ, ಬೆಂಗಳೂರು– ಮೈಸೂರು ಎಕ್ಸ್‌ಪ್ರೆಸ್ ವೇ, ಬೃಹತ್ ಕೈಗಾರಿಕಾ ಪ್ರದೇಶಗಳಿಗೆ ಹೊಂದಿಕೊಂಡಿರುವ ಪ್ರದೇಶಗಳಲ್ಲಿ ಆಸ್ತಿಗಳ ಮಾರ್ಗಸೂಚಿ ದರವನ್ನು ಗಣನೀಯವಾಗಿ ಹೆಚ್ಚಿಸುವ ಪ್ರಸ್ತಾವ ಕರಡು ಪಟ್ಟಿಯಲ್ಲಿದೆ ಎಂಬ ಮಾಹಿತಿ ಲಭ್ಯವಾಗಿದೆ.

ವೆಬ್‌ಸೈಟ್‌ನಲ್ಲಿ ಲಭ್ಯವಾಗದ ಪಟ್ಟಿ

ಸ್ಥಿರಾಸ್ತಿ ಮಾರ್ಗಸೂಚಿ ದರ ಪರಿಷ್ಕರಣೆಯ ಕರಡು ಪಟ್ಟಿಯನ್ನು ಗುರುವಾರವೇ ಪ್ರಕಟಿಸಿದ್ದರೂ, ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ವೆಬ್‌ಸೈಟ್‌ನಲ್ಲಿ ಇನ್ನೂ ಲಭ್ಯವಾಗಿಲ್ಲ. ತಾಂತ್ರಿಕ ಸಮಸ್ಯೆಯಿಂದಾಗಿ ಪಟ್ಟಿಗಳನ್ನು ಅಪ್‌ಲೋಡ್ ಮಾಡಲು ಸಾಧ್ಯವಾಗಿಲ್ಲ ಎಂದು ನೋಂದಣಿ ಮತ್ತು ಮುದ್ರಾಂಕ ಇಲಾಖೆ ಆಯುಕ್ತೆ ಮಮತಾ ಬಿ.ಆರ್. ತಿಳಿಸಿದ್ದಾರೆ.

ಕರಡು ದರ ಪಟ್ಟಿಗಳನ್ನು ಜಿಲ್ಲಾ ನೋಂದಣಾಧಿಕಾರಿ ಕಚೇರಿ, ಉಪ ನೋಂದಣಾಧಿಕಾರಿ ಕಚೇರಿ, ಜಿಲ್ಲಾಧಿಕಾರಿ ಕಚೇರಿ, ಜಿಲ್ಲಾ ಪಂಚಾಯತ್ ಮತ್ತು ಬಿಬಿಎಂಪಿ ಕಚೇರಿಗಳಲ್ಲಿ ಪ್ರಕಟಿಸಲಾಗಿದೆ. ಇಲಾಖೆಯ ವೆಬ್‌ಸೈಟ್ https://igr.karnataka.gov.in/ನಲ್ಲೂ ಲಭ್ಯವಾಗಲಿವೆ ಎಂದು ಹೇಳಿದ್ದಾರೆ.

ಕರಡು ದರಪಟ್ಟಿಗೆ ಸಂಬಂಧಿಸಿದಂತೆ ಆಕ್ಷೇಪಣೆ ಅಥವಾ ಸಲಹೆಗಳಿದ್ದಲ್ಲಿ 15 ದಿನಗಳೊಳಗೆ ಸದಸ್ಯ ಕಾರ್ಯದರ್ಶಿ, ಕೇಂದ್ರ ಮೌಲ್ಯಮಾಪನ ಸಮಿತಿ, ನೋಂದಣಿ ಮಹಾ ಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರ ಕಚೇರಿ, ಎಂಟನೇ ಮಹಡಿ, ಕಂದಾಯ ಭವನ, ಕೆ.ಜಿ. ರಸ್ತೆ, ಬೆಂಗಳೂರು ಈ ವಿಳಾಸಕ್ಕೆ ಅಂಚೆ ಮೂಲಕ ಅಥವಾ cvcobjectionstonotifications@kranataka.gov.in ಈ ವಿಳಾಸಕ್ಕೆ ಇ–ಮೇಲ್ ಮೂಲಕ ಸಲ್ಲಿಸಬಹುದು ಎಂದು ತಿಳಿಸಿದ್ದಾರೆ.

ಪ್ರಜಾವಾಣಿ @75

ಪತ್ರಿಕೆ ಚಂದಾದಾರರಾಗಲು / ದೂರುಗಳಿಗೆ
(ಪತ್ರಿಕೆ ಬಾರದಿರುವುದು, ತಡವಾಗಿ ಪತ್ರಿಕೆ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)

ಸಂಪರ್ಕಕ್ಕೆ
8147623791
080 45557204
readerservicecell@deccanherald.co.in

ಸಂಪರ್ಕಿಸಲು ಕೋಡ್ ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕ್‌ಗೆ ಭೇಟಿಮಾಡಿ
bit.ly/40dPCqy

ಕೆಂಪೇಗೌಡ ಬಡಾವಣೆ: ಅರಣ್ಯ ಒತ್ತುವರಿ ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೀಸಲು ಅರಣ್ಯವನ್ನು ಒತ್ತುವರಿ ಮಾಡಿಕೊಂಡಿದ್ದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ), ಕೆಂಪೇಗೌಡ ಬಡಾವಣೆ ನಿರ್ಮಿಸಿತ್ತು. ಈ ಒತ್ತುವರಿಯನ್ನು ಅರಣ್ಯ ಇಲಾಖೆ ತೆರವು ಮಾಡಿದೆ.

ಸೂಲಿಕೆರೆ ಮೀಸಲು ಅರಣ್ಯದಲ್ಲಿ 1 ಎಕರೆ 38 ಗುಂಟೆ ಅರಣ್ಯ ಭೂಮಿಯನ್ನು ಒತ್ತುವರಿ ಮಾಡಿಕೊಂಡಿದ್ದ ಬಿಡಿಎ, ನಾಡಪ್ರಭು ಕೆಂಪೇಗೌಡ ಬಡಾವಣೆಯನ್ನು ನಿರ್ಮಿಸಿದೆ. ಈ ಬಗ್ಗೆ ಬೆಂಗಳೂರು ನಗರದ ಡಿಸಿಎಫ್ ಕಳೆದ ತಿಂಗಳು ಬಿಡಿಎ ಆಯುಕ್ತರಿಗೆ ಪತ್ರ ಬರೆದು, ಒತ್ತುವರಿ ತೆರವುಗೊಳಿಸಲು ಮನವಿ ಮಾಡಿದ್ದರು. ಆದರೆ, ಅವರು ಮಾಡಿರಲಿಲ್ಲ.

ಹೀಗಾಗಿ, ಅರಣ್ಯ ಇಲಾಖೆ ಗುರುವಾರ ಕಾರ್ಯಾಚರಣೆ ನಡೆಸಿ, ಅರಣ್ಯ ಭೂಮಿಯನ್ನು ವಶಕ್ಕೆ ಪಡೆದುಕೊಂಡಿದೆ.

ಸೂಲಿಕೆರೆ, ಕೊಮ್ಮಘಟ್ಟ ಮತ್ತು ಮಾರಗೊಂಡನಹಳ್ಳಿ ವ್ಯಾಪ್ತಿಯಲ್ಲಿ 525 ಎಕರೆ 2 ಗುಂಟೆ ಪ್ರದೇಶವನ್ನು 'ಸೂಲಿಕೆರೆ ಮೀಸಲು ಅರಣ್ಯ' ಎಂದು ಸರ್ಕಾರ 1934ರ ಸೆ.3ರಂದು ಆದೇಶಿಸಿದೆ. ಕಗ್ಗಲಿಪುರದ ಆರ್‌ಎಫ್‌ಒ 2019ರ ಡಿಸೆಂಬರ್‌ನಲ್ಲಿ ತಪಾಸಣೆ ನಡೆಸುತ್ತಿದ್ದ ಸಂದರ್ಭದಲ್ಲಿ ಬಿಡಿಎ ಒತ್ತುವರಿ ಮಾಡಿಕೊಂಡಿರುವುದು ಕಂಡುಬಂದಿದೆ. ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ಪ್ರಮುಖ ರಸ್ತೆ ನಿರ್ಮಿಸಲು ಮತ್ತು 8ನೇ ಬ್ಲಾಕ್‌ನಲ್ಲಿ ರಸ್ತೆ ನಿರ್ಮಿಸಲು ಅರಣ್ಯ ಭೂಮಿಯನ್ನು ಒತ್ತುವರಿ ಮಾಡಿಕೊಳ್ಳಲಾಗಿತ್ತು.

ಆಎಫ್‌ಒ ಅರಣ್ಯ ಕಾಯ್ದೆಯಡಿ ಬಿಡಿಎ ಅಧಿಕಾರಿಗಳ ಮೇಲೆ ಒತ್ತುವರಿ ಪ್ರಕರಣ ದಾಖಲಿಸಿದ್ದರು. ಅಲ್ಲದೆ, ಕಂದಾಯ ಇಲಾಖೆಯೊಂದಿಗೆ ಜಂಟಿ ಸರ್ವೆಯನ್ನೂ ನಡೆಸಿ ನಕ್ಷೆಯನ್ನು ಬಿಡಿಎಗೆ ಒದಗಿಸಲಾಗಿತ್ತು.

'ಅಪರಾಧ ಪ್ರಕರಣ ದಾಖಲಿಸುವ ಮುನ್ನ ಬಿಡಿಎಗೆ ಎಲ್ಲ ರೀತಿಯ ಅವಕಾಶಗಳನ್ನೂ ನೀಡಲಾಗಿತ್ತು. ಸಂಬಂಧಿಸಿದ ಮುಖ್ಯ ಎಂಜಿನಿಯರ್‌ಗೆ ಒತ್ತುವರಿ ಬಗ್ಗೆ ಮಾಹಿತಿಯೂ ಇತ್ತು. ನಾವು ಇದೀಗ ಭೂಮಿಯನ್ನು ವಶಪಡಿಸಿಕೊಂಡಿದ್ದು, ಆ ಜಾಗದಲ್ಲಿ ಬಿದಿರು ಸಸಿಗಳನ್ನು ನಡೆಲಾಗಿದೆ' ಎಂದು ಬೆಂಗಳೂರು ನಗರ ಡಿಸಿಎಫ್ ಎನ್. ರವೀಂದ್ರಕುಮಾರ್ ತಿಳಿಸಿದರು.

ನವದೆಹಲಿ: ಹುಸಿ ಎಚ್ಚರಿಕೆ ನೀಡಿದ ವ್ಯಕ್ತಿಯ ಬಂಧನ

ನವದೆಹಲಿ (ಪಿಟಿಐ): 'ಜಿ20 ಶೃಂಗಸಭೆ ನಡೆಯುತ್ತಿರುವ ಪ್ರಗತಿ ಮೈದಾನ ಪ್ರದೇಶದೆಡೆಗೆ ಆಟೊ ರಿಕ್ಷಾದಲ್ಲಿ ತುಪಾಕಿ ಮತ್ತು ಸ್ಫೋಟಕಗಳನ್ನು ಒಯ್ಯಲಾಗುತ್ತಿದೆ ಎಂದು ಸಾಮಾಜಿಕ ಮಾಧ್ಯಮದಲ್ಲಿ ಹುಸಿ ಎಚ್ಚರಿಕೆ ನೀಡಿದ ವ್ಯಕ್ತಿಯನ್ನು ಶುಕ್ರವಾರ ಬಂಧಿಸಲಾಗಿದೆ' ಎಂದು ಅಧಿಕಾರಿಗಳು ಹೇಳಿದ್ದಾರೆ.

'ಬಂಧಿತ ಆರೋಪಿಯು ಉತ್ತರ ದೆಹಲಿಯ ಭಲಸ್ವಾ ಡೇರಿ ಪ್ರದೇಶದ ನಿವಾಸಿ. ಸಾರ್ವಜನಿಕರಲ್ಲಿ ಇಂಥ ಸುಳ್ಳು ಮಾಹಿತಿ ಹರಡಿದ ವಿಷಯ ತಿಳಿಯುತ್ತಿದ್ದಂತೆಯೇ ಪೊಲೀಸರು ಆರೋಪಿಯನ್ನು ಪತ್ತೆ ಹಚ್ಚಿದ್ದಾರೆ. ಈತನ ವಿರುದ್ಧ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಾಗುವುದು' ಎಂದು ದೆಹಲಿ ಪೊಲೀಸರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಕೃತಿ ಬಿಡುಗಡೆ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಮತ

'ಅಂತರ್ಜಾತಿ ವಿವಾಹ ಜಾತಿ ವಿನಾಶದ ಪ್ರಥಮ ಹೆಜ್ಜೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜಾತಿ ನಾಶವಾಗದೆಯೇ ಸಮಸಮಾಜ ನಿರ್ಮಾಣ ಸಾಧ್ಯವಿಲ್ಲ. ಅಂತರ್ಜಾತಿ ವಿವಾಹವು ಜಾತಿ ವಿನಾಶದ ಪ್ರಥಮ ಹೆಜ್ಜೆಯಾಗಿದ್ದು, ಅಂತರ್ಜಾತಿ ವಿವಾಹ ಸಂಖ್ಯೆ ಹೆಚ್ಚಾಗಬೇಕಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಪಾದಿಸಿದರು.

ನಗರದಲ್ಲಿ ಕಮಲಾ ಹಂಪನಾ ಸಾಹಿತ್ಯ ವೇದಿಕೆ ಶುಕ್ರವಾರ ಆಯೋಜಿಸಿದ್ದ ಲೇಖಕಿ ಕಮಲಾ ಹಂಪನಾ ಅವರ 'ಬೆಳಕು ಬಿತ್ತಿದವರು', ಸಾಹಿತಿ ಹಂಪ ನಾಗರಾಜಯ್ಯ ಅವರ 'ಪ್ರಾಕೃತ ಕಥಾ ಸಾಹಿತ್ಯ', ಪ್ರತಿಭಾ ಪಾರ್ಶ್ವನಾಥ್ ಅವರ 'ದಿ ಜರ್ನಿ ಆಫ್ ಲೈಫ್' ಕೃತಿ ಬಿಡುಗಡೆ ಸಮಾರಂಭದಲ್ಲಿ ಅವರು ಮಾತನಾಡಿದರು.

'ದೇಶದಲ್ಲಿ ಜನಸಂಖ್ಯೆಗೆ ಪೂರಕವಾಗಿ ಸಾಮಾಜಿಕ, ಆರ್ಥಿಕ ಬೆಳವಣಿಗೆಗಳು ನಡೆದಿಲ್ಲ. ಆರ್ಥಿಕ ಸಂಪನ್ಮೂಲ ಕೆಲವರ ಕೈಯಲ್ಲಿದ್ದು, ಇದರಿಂದ ಅಸಮಾನತೆ ಸೃಷ್ಟಿಯಾಗಿದೆ' ಎಂದು ಹೇಳಿದರು.

'ಜಾತಿ ಯಾವುದಿದ್ದರೂ ಅಂತಿಮವಾಗಿ ನಾವು ಮನುಷ್ಯರಾಗಬೇಕು. ಮನುಷ್ಯ ಮನುಷ್ಯ ಪ್ರೀತಿಸುವುದೇ ಧರ್ಮ. ದ್ವೇಷಿಸುವುದು ಅಧರ್ಮ. ಆದರೆ, ಇಂದು ದ್ವೇಷ ಆರಾಧಿಸುವ ಸಮಾಜವನ್ನು ನಿರ್ಮಿಸುವ ಅಪಾಯಕಾರಿ ಬೆಳವಣಿಗೆಗಳು ನಡೆಯುತ್ತಿವೆ' ಎಂದು ಆತಂಕ ವ್ಯಕ್ತಪಡಿಸಿದರು.

'ಹಂಪ ನಾಗರಾಜಯ್ಯ ಅವರು ತಮ್ಮ ಮೂವರು ಮಕ್ಕಳಿಗೆ ಅಂತರ್ಜಾತಿ ವಿವಾಹ ಮಾಡಿದ್ದಾರೆ. ಕಮಲಾ ಹಂಪನಾ ಹಾಗೂ ಹಂಪ ನಾಗರಾಜಯ್ಯ ದಂಪತಿ ಮಾದರಿ' ಎಂದು ಹೇಳಿದರು.

'ಸ್ವಾತಂತ್ರ್ಯದ ಉದ್ದೇಶ ಈಡೇರಬೇಕಾದರೆ ಸಮಾಜದಲ್ಲಿ ಅವಕಾಶ ಮತ್ತು ಸಂಪತ್ತು ಸಮಾನ ಹಂಚಿಕೆ ಆಗಬೇಕಿದೆ. ಆಗ ಮಾತ್ರ ಸಮ ಸಮಾಜ ನಿರ್ಮಾಣ ಸಾಧ್ಯ' ಎಂದು ಹೇಳಿದರು.

ಸಾಹಿತಿ ಬರಗೂರು ರಾಮಚಂದ್ರಪ್ಪ ಮಾತನಾಡಿ, 'ಏಕಧರ್ಮ, ಒಂದೇ ಸಂಸ್ಕೃತಿ, ಏಕ ನಾಯಕತ್ವ ಮೆರೆಸುವುದನ್ನು ಕಾಣುತ್ತಿದ್ದೇವೆ. ಇದು ಅಪಾಯಕಾರಿ. ದೇಶದಲ್ಲಿ ಬಹುತ್ವ ಗೌರವಿಸುವ ಪರಂಪರೆ ಸಂವಿಧಾನದಲ್ಲೇ ಇತ್ತು. ಅದು ಕಣ್ಮರೆಯಾಗುತ್ತಿದೆ' ಎಂದು ಬೇಸರ ವ್ಯಕ್ತಪಡಿಸಿದರು.



ಸಾಹಿತಿ ಬರಗೂರು ರಾಮಚಂದ್ರಪ್ಪ (ಎಡದಿಂದ ಮೂರನೆಯವರು) ಅವರು ನಗರದಲ್ಲಿ ಶುಕ್ರವಾರ ಮೂರು ಕೃತಿಗಳನ್ನು ಬಿಡುಗಡೆ ಮಾಡಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ನೀಡಿದರು. ಜಿ.ಎನ್ ಮೋಹನ್, ಕಮಲಾ ಹಂಪನಾ, ಹಂಪ ನಾಗರಾಜಯ್ಯ, ಪ್ರತಿಭಾ ಪಾರ್ಶ್ವನಾಥ್ ಇದ್ದರು. – ಪ್ರಜಾವಾಣಿ ಚಿತ್ರ

> ಶ್ರವಣಬೆಳಗೊಳದಲ್ಲಿ ಪ್ರಾಕೃತ ವಿಶ್ವವಿದ್ಯಾಲಯ ಸ್ಥಾಪಿಸಲು ₹ 25 ಕೋಟಿ ಅನುದಾನ ಮಂಜೂರು ಮಾಡಿದ್ದೆ. ಆ ವಿ.ವಿಗೆ ಹೊಸ ರೂಪ ನೀಡಲಾಗುವುದು
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

ಪುಸ್ತಕ ಪರಿಚಯ

ಲೇಖಕ: ಹಂಪ ನಾಗರಾಜಯ್ಯ
ಕೃತಿ: ಪ್ರಾಕೃತ ಕಥಾ ಸಾಹಿತ್ಯ
ಪುಟ: 535
ಮೊತ್ತ: ₹495
ಪ್ರಕಾಶನ: ಸಪ್ನ

ಪುಸ್ತಕ ಪರಿಚಯ

ಲೇಖಕಿ: ಕಮಲಾ ಹಂಪನಾ
ಕೃತಿ: ಬೆಳಕು ಬಿತ್ತಿದವರು
ಪುಟ: 251
ಮೊತ್ತ: ₹225
ಪ್ರಕಾಶನ: ಸಪ್ನ

ಮನೆಗಾಗಿ ಮಹಿಳೆಯರ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶೆಡ್‌ಗಳಲ್ಲಿ ಇಲಿ -ಹೆಗ್ಗಣ ಕಾಟದಿಂದ ರಾತ್ರಿಯೆಲ್ಲ ಜಾಗರಣೆ ಮಾಡುವಂತಾಗಿದೆ. ನಮಗೆಲ್ಲ ಮನೆ ಕೊಡಿ' ಎಂದು ಮಹಿಳೆಯರು ವಸತಿ ಸಚಿವ ಹಾಗೂ ಅಧಿಕಾರಿಗಳಿಗೆ ಕೈಮುಗಿದ ಮನವಿ ಮಾಡಿದರು.

ಹೆಬ್ಬಾಳದ ಕುಂತಿ ನಗರದಲ್ಲಿ ಶುಕ್ರವಾರ ವಸತಿ ಸಚಿವ ಜಮೀರ್ ಅಹಮದ್ ಖಾನ್ ಅಧಿಕಾರಿಗಳ ಜತೆ ಭೇಟಿ ನೀಡಿದಾಗ, 'ಎರಡು ವರ್ಷಗಳಿಂದ ಮನೆಗಳು ಪೂರ್ಣಗೊಂಡಿಲ್ಲ. ಕೂಡಲೇ ಕ್ರಮಕೈಗೊಳ್ಳಬೇಕು' ಎಂದರು.

ಕೊಳೆಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ರೂಪಿಸಿರುವ ಪ್ರಧಾನ ಮಂತ್ರಿ ಅವಾಸ್ ವಸತಿ ಯೋಜನೆ ಎರಡು ವರ್ಷ ಆದರೂ ಪೂರ್ಣಗೊಂಡಿಲ್ಲ. ಕೂಲಿ ಮಾಡಿ ಜೀವನ ಮಾಡುತ್ತಿದ್ದೇವೆ. ಫಲಾನುಭವಿ ವಂತಿಗೆ ಮೂರೂವರೆಯಿಂದ ನಾಲ್ಕು ಲಕ್ಷದವರೆಗೆ ಪಾವತಿ ಮಾಡಲು ಆಗುತ್ತಿಲ್ಲ. ದಯವಿಟ್ಟು ಮನೆ ಕಟ್ಟಿಕೊಡಿ ಎಂದು ಮನವಿ ಮಾಡಿಕೊಂಡರು.

ಸ್ಥಳೀಯ ವಾಸಿಗಳಾದ ನೇತ್ರ, ಅಣ್ಣಿಯಮ್ಮ, ಮುತ್ಯಾ ಲಮ್ಮ, ವೆಂಕಟೇಶ್ ಅವರು, 'ನಮ್ಮ ಜೀವನ ರಸ್ತೆಗೆ ಬಂದಿದೆ. ಮಕ್ಕಳಿಗೆ ವಿದ್ಯೆ ಕಲಿಸಲು ಆಗುತ್ತಿಲ್ಲ. ಆರೋಗ್ಯ ಸಮಸ್ಯೆ ಎಂದರೆ ಚಿಕಿತ್ಸೆಗೆ ಹಣ ಇಲ್ಲದಂತಾಗಿದೆ' ಎಂದು ಕಣ್ಣೀರು ಹಾಕಿದರು.

ಕುಂತಿ ನಗರ ಕೊಳೆಗೇರಿಯಲ್ಲಿ ಪ್ರತಿ ಮನೆಗೆ ₹7 ಲಕ್ಷದಂತೆ 402 ಮನೆಗಳನ್ನು ₹31 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗುತ್ತಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಎಸ್‌ಸಿ/ಎಸ್‌ಟಿ ವರ್ಗಕ್ಕೆ ₹3.50 ಲಕ್ಷ, ಸಾಮಾನ್ಯ ವರ್ಗಕ್ಕೆ ₹2.70 ಲಕ್ಷ ಸಬ್ಸಿಡಿ ಸಿಗುತ್ತಿದ್ದು, ಉಳಿದ ಮೊತ್ತವನ್ನು ಫಲಾನುಭವಿ ಕಟ್ಟಬೇಕು. ಆದರೆ ವಂತಿಗೆ ಪಾವತಿ ಆಗದೆ ಮನೆ ಅರ್ಧಕ್ಕೆ ನಿಂತಿವೆ ಎಂದು ಅಧಿಕಾರಿಗಳು ತಿಳಿಸಿದರು.

ಸರ್ವಜ್ಞ ಕ್ಷೇತ್ರದ ಚಟ್ಟಪ್ಪ ಗಾರ್ಡನ್, ಬಸವ ನ ಗುಡಿಯ ಚಾಮುಂಡಿ ನಗರ ಕೊಳೆಗೇರಿಗೂ ಸಚಿವರು ಭೇಟಿ ನೀಡಿ ಪರಿಶೀಲನೆ ಮಾಡಿದರು.

ಆರ್ಥಿಕ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್. ಕೆ. ಅತೀಕ್, ವಸತಿ ಇಲಾಖೆ ಪ್ರಧಾನ ಕಾರ್ಯದರ್ಶಿ ನವೀನ್ ರಾಜ್ ಸಿಂಗ್, ಕೊಳೆಗೇರಿ ಅಭಿವೃದ್ಧಿ ಮಂಡಳಿ ಆಯುಕ್ತ ಬಿ. ವೆಂಕಟೇಶ್, ಪ್ರಧಾನ ಎಂಜಿನಿಯರ್ ಬಾಲರಾಜು ಇದ್ದರು.



ಹೆಬ್ಬಾಳದ ಕುಂತಿ ನಗರದಲ್ಲಿ ಶುಕ್ರವಾರ ವಸತಿ ಸಚಿವ ಜಮೀರ್ ಅಹಮದ್ ಖಾನ್ ಅಧಿಕಾರಿಗಳ ಜತೆ ಭೇಟಿ ನೀಡಿದಾಗ ಸ್ಥಳೀಯರು ಮನೆ ಶೀಘ್ರ ಕಟ್ಟಿಕೊಡಲು ಮನವಿ ಮಾಡಿದರು

ಸೌಜನ್ಯಾ ಪ್ರಕರಣದ ಮರು ತನಿಖೆಗೆ ಆಗ್ರಹ: ಪಾದಯಾತ್ರೆ ಅಂತ್ಯ

‘ಅತ್ಯಾಚಾರಿ ರಕ್ಷಕರಿಗೆ ಶಿಕ್ಷೆ ನೀಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸೌಜನ್ಯಾ ಕೊಲೆ ಪ್ರಕರಣದ ಮರು ತನಿಖೆ ನಡೆಸಬೇಕು’ ಎಂದು ಒತ್ತಾಯಿಸಿ ಕರ್ನಾಟಕ ರಾಷ್ಟ್ರ ಸಮಿತಿ (ಕೆಆರ್‌ಎಸ್) ಪಕ್ಷದಿಂದ ಹಮ್ಮಿಕೊಂಡಿದ್ದ ಪಾದಯಾತ್ರೆ ಶುಕ್ರವಾರ ಅಂತ್ಯಗೊಂಡಿತು.

ಆಗಸ್ಟ್ 26ರಂದು ಬೆಳ್ತಂಗಡಿಯಿಂದ ಆರಂಭಗೊಂಡಿದ್ದ ‘ದೌರ್ಜನ್ಯದ ವಿರುದ್ಧ ಸೌಜನ್ಯ’ ಪಾದಯಾತ್ರೆಯು ಶುಕ್ರವಾರ ಬೆಂಗಳೂರು ತಲುಪಿತು.

ಸ್ವಾತಂತ್ರ್ಯ ಉದ್ಯಾನದಲ್ಲಿ ಬೃಹತ್ ಪ್ರತಿಭಟನಾ ಸಭೆ ನಡೆಸಿದ ಪಕ್ಷದ ಕಾರ್ಯಕರ್ತರು, ಪ್ರಕರಣದ ಮರು ತನಿಖೆಗಾಗಿ ಘೋಷಣೆ ಕೂಗಿದರು.

‘ಸೌಜನ್ಯಾ ಮಹಿಳಾ ಸುರಕ್ಷಾ ಆಯೋಗ ಸ್ಥಾಪಿಸಬೇಕು. ಮಕ್ಕಳ ಮತ್ತು ಮಹಿಳಾ ದೌರ್ಜನ್ಯ ಪ್ರಕರಣಗಳ ವಿಚಾರಣೆಗೆ ತ್ವರಿತ ನ್ಯಾಯಾಲಯ ಸ್ಥಾಪಿಸಬೇಕು. ಮಕ್ಕಳ ಮತ್ತು ಮಹಿಳೆಯರ ಮೇಲಿನ ಅತ್ಯಾಚಾರ ಪ್ರಕರಣಗಳ ತನಿಖೆಗೆ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಬೇಕು’ ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಸೌಜನ್ಯಾ ತಾಯಿ ಕುಸುಮಾವತಿ, ‘ನನ್ನ ಮಗಳ ಮೇಲೆ ಅತ್ಯಾಚಾರ ಎಸಗಿ ಕೊಲೆ ಮಾಡಿದ್ದಾರೆ. ನಮಗೆ ಇದುವರೆಗೂ ನ್ಯಾಯ ಸಿಕ್ಕಿಲ್ಲ. ಅತ್ಯಾಚಾರಿಗಳಿಗೆ ಹಾಗೂ ಅವರನ್ನು ಕಾಪಾಡುತ್ತಿರುವ ಪ್ರಭಾವಿಗಳಿಗೆ ಶಿಕ್ಷೆ ಆಗಬೇಕು’ ಎಂದು ಒತ್ತಾಯಿಸಿದರು.

ಮನವಿ ಸಲ್ಲಿಕೆ: ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ರವಿ ಕೃಷ್ಣಾರೆಡ್ಡಿ ನೇತೃತ್ವದ ನಿಯೋಗ ಮುಖ್ಯಮಂತ್ರಿ ಸಚಿವಾಲಯದ ಅಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿತು.



ಕರ್ನಾಟಕ ರಾಷ್ಟ್ರ ಸಮಿತಿ (ಕೆಆರ್‌ಎಸ್) ಪಕ್ಷದಿಂದ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಶನಿವಾರ ಪ್ರತಿಭಟನಾ ಸಭೆ ನಡೆಸಲಾಯಿತು. ಸೌಜನ್ಯರ ತಾಯಿ ಕುಸುಮಾವತಿ, ರವಿಕೃಷ್ಣಾ ರೆಡ್ಡಿ ಇದ್ದರು – ಪ್ರಜಾವಾಣಿ ಚಿತ್ರ

ಸೌಜನ್ಯಾ ಪ್ರಕರಣ: ಪಿಐಎಲ್ ವಜಾ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಧರಣಿಗಳಿಂದ ಕಾನೂನು ಚೌಕಟ್ಟು ಮೀರಲು ಸಾಧ್ಯವಿಲ್ಲ– ಹೈಕೋರ್ಟ್
- ಕಾನೂನಿನಡಿ ಪರ್ಯಾಯ ವಿಧಾನಗಳ ಮೂಲಕ ಪರಿಹಾರಕ್ಕೆ ಸೂಚನೆ

ಬೆಂಗಳೂರು: ‘ಸೌಜನ್ಯಾ ಅತ್ಯಾಚಾರ ಮತ್ತು ಕೊಲೆ ಪ್ರಕರಣವನ್ನು ಸಿಬಿಐ ಅಥವಾ ವಿಶೇಷ ತನಿಖಾ ತಂಡದ ಮುಖೇನ (ಎಸ್‌ಐಟಿ) ಹೊಸದಾಗಿ ತನಿಖೆ ನಡೆಸಲು ಸರ್ಕಾರಕ್ಕೆ ಆದೇಶಿಸಬೇಕು’ ಎಂದು ಕೋರಲಾಗಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಈ ಸಂಬಂಧ ನಗರದ ಗಿರೀಶ್ ಭಾರದ್ವಾಜ್, ಬೆಳ್ತಂಗಡಿಯ ಜಿ.ನವೀನ್ ಕುಮಾರ್ ಮತ್ತು ಬಲ್ನಾಡು ಪುತ್ತೂರಿನ ವಿನಾಯಕ ಫ್ರೆಂಡ್ಸ್ ಚಾರಿಟಬಲ್ ಟ್ರಸ್ಟ್ ವತಿಯಿಂದ ಸಲ್ಲಿಸಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ಮತ್ತು ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ಕೆಲ ಕಾಲ ವಿಚಾರಣೆ ಆಲಿಸಿದ ನ್ಯಾಯಪೀಠ, ‘ಸಭೆ-ಸಮಾರಂಭ, ಧರಣಿ ಹಾಗೂ ಸಾರ್ವಜನಿಕರ ಭಾವನೆಗಳಿಂದ ಕಾನೂನು ಚೌಕಟ್ಟು ಮೀರಲು ಸಾಧ್ಯವಿಲ್ಲ. ಅರ್ಜಿದಾರರ ಉದ್ದೇಶ ಒಳ್ಳೆಯದಿದ್ದರೂ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಕಾನೂನಿನ ವ್ಯಾಪ್ತಿಯಲ್ಲಿಯೇ ನೋಡಬೇಕಾಗುತ್ತದೆ. ಹೀಗಾಗಿ, ಅರ್ಜಿದಾರರು ತಮ್ಮ ಅರ್ಜಿ ಹಿಂಪಡೆದು ಕಾನೂನಿನಡಿ ಲಭ್ಯವಿರುವ ಪರ್ಯಾಯ ವಿಧಾನಗಳ ಮೂಲಕ ಪರಿಹಾರ ಪಡೆದುಕೊಳ್ಳಬಹುದು’ ಎಂದು ತಿಳಿಸಿತು.

‘ಪ್ರಕರಣದಲ್ಲಿ ಸರ್ಕಾರ, ಮೂಲ ದೂರುದಾರರು ಅಥವಾ ಸಂತ್ರಸ್ತರ ಕುಟುಂಬವು ಆರೋಪಿಯನ್ನು ದೋಷಮುಕ್ತಗೊಳಿಸಿದ ವಿಚಾರಣಾ ನ್ಯಾಯಾಲಯದ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಲು ಕಾನೂನಿನಲ್ಲಿ ಅವಕಾಶವಿದೆ. ಮೇಲ್ಮನವಿಯಲ್ಲಿ ತನಿಖಾ ಲೋಪಗಳನ್ನು ಪರಿಗಣಿಸಬಹುದಾಗಿದೆ’ ಎಂದು ಹೇಳಿತು. ಅಂತೆಯೇ ಅರ್ಜಿ ಹಿಂಪಡೆಯಲು ಸೂಚಿಸಿತು.

ಆದರೆ, ಅರ್ಜಿ ಹಿಂಪಡೆಯಲು ನಿರಾಕರಿಸಿದ ಅರ್ಜಿದಾರರ ಪರ ಹಾಜರಿದ್ದ ಹಿರಿಯ ವಕೀಲ ಎಂ. ಅರುಣ್ ಶ್ಯಾಮ್, ‘ಅರ್ಜಿಗೆ ಸಂಬಂಧಿಸಿದಂತೆ ಮೆರಿಟ್ ಮೇಲೆ ಆದೇಶ ಮಾಡಬೇಕು’ ಎಂದು ಕೋರಿದರು.

ಇದಕ್ಕೆ ಒಪ್ಪದ ನ್ಯಾಯಪೀಠವು ‘ಅರ್ಜಿದಾರರ ಮನವಿ ಕುರಿತು ಕಾನೂನಿನಡಿ ಲಭ್ಯವಿರುವ ಪರ್ಯಾಯ ವಿಧಾನಗಳ ಮೂಲಕ ಪರಿಹಾರ ಪಡೆಯಬಹುದು’ ಎಂಬ ಅಭಿಪ್ರಾಯ ವ್ಯಕ್ತಪಡಿಸಿತಲ್ಲದೆ, ‘ಅರ್ಜಿ ವಜಾಗೊಳಿಸಲಾಗಿದೆ. ಈ ಕುರಿತು ವಿವರವಾದ ಆದೇಶ ಹೊರಡಿಸಲಾಗುವುದು’ ಎಂದು ತಿಳಿಸಿತು.

‘ಫಿಸಿಯೊಥೆರಪಿ: ಶೀಘ್ರದಲ್ಲಿ ದೇಶಕ್ಕೆ ಒಂದೇ ಪಠ್ಯಕ್ರಮ’

ಮಂಗಳೂರು: ಫಿಸಿಯೊಥೆರಪಿ ಶಿಕ್ಷಣದಲ್ಲಿ ಇಡೀ ದೇಶಕ್ಕೆ ಒಂದೇ ಪಠ್ಯಕ್ರಮ ಅಳವಡಿಸಲು ಯೋಚಿಸಲಾಗಿದ್ದು, ಇದು ಶೀಘ್ರ ಅನುಷ್ಠಾನಗೊಳ್ಳಲಿದೆ ಎಂದು ಭಾರತೀಯ ಫಿಸಿಯೊಥೆರಪಿಸ್ಟ್ ಅಸೋಸಿಯೇಷನ್ ಅಧ್ಯಕ್ಷ ಡಾ. ಸಂಜೀವ್ ಝಾ ಹೇಳಿದರು.

ಸೌತ್ ಕೆನರಾ ಫಿಸಿಯೊಥೆರಪಿ ಶಿಕ್ಷಕರ ಸಂಘದ ಆಶ್ರಯದಲ್ಲಿ ಶುಕ್ರವಾರ ಇಲ್ಲಿ ಉದ್ಘಾಟನೆಗೊಂಡ ‘ಮಂಗಳೂರು ಫಿಸಿಯೊಕಾನ್’ ಎರಡು ದಿನಗಳ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಅವರು ಮಾತನಾಡಿದರು.

2030ರ ವೇಳೆಗೆ ಫಿಸಿಯೊಥೆರಪಿ ವಿಭಾಗವನ್ನು ವೈದ್ಯಕೀಯ ಕ್ಷೇತ್ರದ ಪ್ರಮುಖ ವ್ಯವಸ್ಥೆಯಾಗಿ ರೂಪಿಸಿ, ಹೊರ ದೇಶದ ವಿದ್ಯಾರ್ಥಿಗಳನ್ನು ಭಾರತದತ್ತ ಸೆಳೆಯಲು ಅಸೋಸಿಯೇಷನ್ ಕಾರ್ಯತಂತ್ರ ರೂಪಿಸಿದೆ ಎಂದರು.

ರಕ್ಷಣಾ ಯೋಜನೆ: ಮೋದಿ– ಬೈಡನ್ ಮಾತುಕತೆ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಮತ್ತು ಅಮೆರಿಕ ಅಧ್ಯಕ್ಷ ಜೋ ಬೈಡನ್ ನಡುವೆ ನವದೆಹಲಿಯಲ್ಲಿ ಶುಕ್ರವಾರ ರಾತ್ರಿ ದ್ವಿಪಕ್ಷೀಯ ಸಭೆ ನಡೆಯಿತು. ಈ ವೇಳೆ ಉಭಯ ದೇಶಗಳ ರಕ್ಷಣಾ ಸಹಕಾರ ಯೋಜನೆಗಳ ಕುರಿತು ಮಹತ್ವದ ಮಾತುಕತೆ ನಡೆಯಿತು.

ಸುಸ್ಥಿರ ಅಭಿವೃದ್ಧಿ, ಬಹುಪಕ್ಷೀಯ ಸಹಕಾರವನ್ನು ಹೆಚ್ಚಿಸುವುದು ಮತ್ತು ಜಾಗತಿಕ ಸವಾಲುಗಳನ್ನು ಎದುರಿಸಲು ಆರ್ಥಿಕ ನೀತಿಗಳ ಬಗ್ಗೆ ಸಹಮತದೊಂದಿಗೆ ಮುನ್ನಡೆಯುವ ಕುರಿತು ಮೋದಿ ಮತ್ತು ಜೋ ಬೈಡನ್ ವಿಶ್ವಾಸ ವ್ಯಕ್ತಪಡಿಸಿದರು.

ಉಭಯ ನಾಯಕರು 50 ನಿಮಿಷ ಮಾತುಕತೆ ನಡೆಸಿದರು.

> **‘ಪ್ರಶ್ನಿಸಲು ಅನುಮತಿಸದ ಭಾರತ’**
> ’ದ್ವಿಪಕ್ಷೀಯ ಸಭೆಯ ಬಳಿಕ ಅಧ್ಯಕ್ಷ ಜೋ ಬೈಡನ್ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪ್ರಶ್ನೆಗಳನ್ನು ಕೇಳಲು ಮಾಧ್ಯಮದವರಿಗೆ ಅವಕಾಶ ದೊರೆಯಲಿಲ್ಲ. ಈ ಕುರಿತು ಭಾರತಕ್ಕೆ ಕೆಲವು ಬಾರಿ ಮನವಿ ಮಾಡಿದರೂ ಅನುಮತಿ ನೀಡಲಿಲ್ಲ ಎಂದು ಬೈಡನ್ ತಂಡ ಶುಕ್ರವಾರ ಆರೋಪಿಸಿದೆ’ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ‘ಎಕ್ಸ್’ನಲ್ಲಿ ಖಂಡಿಸಿದ್ದಾರೆ.

ರಕ್ಷಣಾ ಪಾಲುದಾರಿಕೆಯನ್ನು ಮತ್ತಷ್ಟು ಸದೃಢಗೊಳಿಸಲು ಇಬ್ಬರೂ ಸಮ್ಮತಿಸಿದರು. ಡ್ರೋನ್‌ಗಳು ಮತ್ತು ಜೆಟ್ ಎಂಜಿನ್‌ಗಳ ನಿರ್ಮಾಣ ಯೋಜನೆಯನ್ನು ಜಂಟಿಯಾಗಿ ಅಭಿವೃದ್ಧಿಪಡಿಸುವ ಕ್ರಮಕ್ಕೆ ಸಹಮತ ವ್ಯಕ್ತಪಡಿಸಿದರು.

ಅಣು ಇಂಧನ ಕ್ಷೇತ್ರದಲ್ಲಿ ಸಹಕಾರ, 6ಜಿ ಮತ್ತು ಕೃತಕ ಬುದ್ಧಿಮತ್ತೆಯಂತಹ ನಿರ್ಣಾಯಕ ಮತ್ತು ಅತ್ಯಾಧುನಿಕ ತಂತ್ರಜ್ಞಾನಗಳ ಕುರಿತು ಉಭಯ ನಾಯಕರು ಚರ್ಚೆ ನಡೆಸಿದರು.

ವಾಷಿಂಗ್ಟನ್‌ನಲ್ಲಿ ಕಳೆದ ಜೂನ್ 22ರಂದು ಈ ನಾಯಕರು ಭೇಟಿಯಾಗಿದ್ದಾಗ ಒಪ್ಪಿಕೊಂಡಿದ್ದ ರಕ್ಷಣಾ ಸಹಾಯಕ ಯೋಜನೆಗಳನ್ನು ಮುಂದುವರಿಸಲು ಭಾರತ ಮತ್ತು ಅಮೆರಿಕ ಬದ್ಧತೆ ತೋರಿವೆ. ಬೆಂಗಳೂರಿನಲ್ಲಿರುವ ಎಚ್‌ಎಎಲ್ ಮತ್ತು ಅಮೆರಿಕದ ಸಿನ್ಸಿನಾಟಿಯ ಜಿ.ಇ ಏರೋಸ್ಪೇಸ್ ಎಫ್‌–414 ಫೈಟರ್ ಜೆಟ್ ಎಂಜಿನ್‌ಗಳನ್ನು ತಯಾರಿಸುವ ಕುರಿತ ವಾಣಿಜ್ಯ ಒಪ್ಪಂದಕ್ಕೆ ಸಂಬಂಧಿಸಿದಂತೆ ಮಾತುಕತೆ ನಡೆಯಿತು ಎಂದು ದ್ವಿಪಕ್ಷೀಯ ಸಭೆಯ ಬಳಿಕ ಬಿಡುಗಡೆಯಾದ ಉಭಯ ದೇಶಗಳ ಜಂಟಿ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಸ್ವಾತಂತ್ರ್ಯ, ಪ್ರಜಾಪ್ರಭುತ್ವ, ಮಾನವ ಹಕ್ಕುಗಳು, ಬಹುತ್ವ ಮತ್ತು ಎಲ್ಲಾ ನಾಗರಿಕರಿಗೆ ಸಮಾನ ಅವಕಾಶಗಳ ಹಂಚಿಕೆಯ ಮೌಲ್ಯಗಳು ಉಭಯ ದೇಶಗಳು ಅನುಭವಿಸುವ ಯಶಸ್ಸಿಗೆ ನಿರ್ಣಾಯಕವಾಗಿವೆ. ಈ ಮೌಲ್ಯಗಳು ನಮ್ಮ ಸಂಬಂಧವನ್ನು ಬಲಪಡಿಸುತ್ತವೆ ಎಂದು ಉಭಯ ನಾಯಕರು ಜಂಟಿ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಶಾಲೆ, ಕಾಲೇಜು, ದೇಗುಲ ಆವರಣ ಏಕಬಳಕೆ ಪ್ಲಾಸ್ಟಿಕ್ ನಿಷೇಧಕ್ಕೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಶಾಲೆ, ಕಾಲೇಜು, ದೇವಾಲಯಗಳಲ್ಲಿ ಏಕ ಬಳಕೆ ಪ್ಲಾಸ್ಟಿಕ್ ನಿಷೇಧ ಜಾರಿಯಾಗದಿದ್ದರೆ ದಂಡ ಹಾಕಿ, ಕಾನೂನು ಕ್ರಮಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಲಾಗಿದೆ.

ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣಾ ನಿಯಮಗಳು-2016ಗಳು ಮತ್ತು ಏಕ ಬಳಕೆಯ ಪ್ಲಾಸ್ಟಿಕ್ ನಿಷೇಧದ ಬಗ್ಗೆ ಆದೇಶ ಹೊರಡಿಸಲಾಗಿದ್ದು, ಯಾವ ರೀತಿ ಕ್ರಮ ಕೈಗೊಳ್ಳಬೇಕೆಂಬುದನ್ನೂ ಸೂಚಿಸಲಾಗಿದೆ.

ಪಾಲಿಕೆಯ ವ್ಯಾಪ್ತಿಯಲ್ಲಿರುವ ಎಲ್ಲಾ ಶಾಲೆ– ಕಾಲೇಜು, ದೇವಾಲಯಗಳ ಆವರಣದೊಳಗೆ ಪ್ಲಾಸ್ಟಿಕ್ ನಿಷೇಧದ ಫಲಕ ಅಳವಡಿಸಬೇಕು. ನಿರ್ವಹಣಾ ತಂತ್ರಗಳನ್ನು ವಿನ್ಯಾಸಗೊಳಿಸುವ ಮೂಲಕ ಏಕಬಳಕೆ ಪ್ಲಾಸ್ಟಿಕ್ ಅನ್ನು ಹಂತಹಂತವಾಗಿ ನಿಯಂತ್ರಿಸಿ, ನಿರ್ಮೂಲನೆ ಮಾಡಬೇಕು.

ನಿಯಮಗಳಲ್ಲಿ ಗುರುತಿಸಲಾದ ಏಕಬಳಕೆ ಪ್ಲಾಸ್ಟಿಕ್ ವಸ್ತುಗಳ ಮೇಲೆ ವಿಧಿಸಲಾದ ನಿರ್ದಿಷ್ಟ ನಿಷೇಧ ಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕು. ಏಕಬಳಕೆ ಪ್ಲಾಸ್ಟಿಕ್ ಬದಲಾಗಿ ಬಟ್ಟೆ ಅಥವಾ ಕಾಗದದಿಂದ ತಯಾರಾದ ವಸ್ತುಗಳನ್ನು ಬಳಸಬೇಕು.

ನಿಯಮಗಳನ್ನು ಪಾಲಿಸಲು ವಿಫಲವಾದರೆ ಘನತ್ಯಾಜ್ಯ ನಿರ್ವಹಣಾ ಬೈ-ಲಾ ಪ್ರಕಾರ ದಂಡ ವಿಧಿಸಲಾಗುವುದು. ಪಾಲಿಕೆಯಿಂದ ಹೊರಡಿಸಲಾದ ವಿವಿಧ ಆದೇಶಗಳು ಮತ್ತು ನಿಬಂಧನೆಗಳ ಉಲ್ಲಂಘನೆಯು ದಂಡದ ಷರತ್ತು ಮತ್ತು ಕ್ರಮವನ್ನು ಪರಿಗಣಿಸಿ ಕ್ರಮಕೈಗೊಳ್ಳಲಾಗುತ್ತದೆ.

ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಲು ಮತ್ತು ಏಕಬಳಕ ಪ್ಲಾಸ್ಟಿಕ್ ಬಳಸುವ ಪರಂಪರೆಯ ಅಭ್ಯಾಸವನ್ನು ತೊಡೆದುಹಾಕಲು ನಿರಂತರ ಪ್ರಯತ್ನಗಳನ್ನು ಮಾಡಬೇಕು. ವಿದ್ಯಾರ್ಥಿಗಳಲ್ಲಿ ‘ಏಕಬಳಕ ಪ್ಲಾಸ್ಟಿಕ್ ತ್ಯಜಿಸಿ’ ಎಂಬ ವಿಷಯದ ಮೇಲೆ ಸ್ಪರ್ಧೆಗಳನ್ನು ನಿಯಮಿತವಾಗಿ ಆಯೋಜಿಸಬೇಕು ಎಂದು ಬಿಬಿಎಂಪಿ ಘನತ್ಯಾಜ್ಯ ನಿರ್ವಹಣಾ ವಿಭಾಗದ ಜಂಟಿ ಆಯುಕ್ತೆ ಪ್ರತಿಭಾ ಆದೇಶದಲ್ಲಿ ತಿಳಿಸಿದ್ದಾರೆ.

ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ಪಂಡಿತರತ್ನ ಎ. ಶಾಂತಿರಾಜಶಾಸ್ತ್ರಿ ಟ್ರಸ್ಟ್‌ನಿಂದ 2023–24ನೇ ಸಾಲಿನ ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

2023–24ನೇ ಸಾಲಿನಲ್ಲಿ ಬಿ.ಇ. ಹಾಗೂ ಸ್ನಾತಕೋತ್ತರ ತರಗತಿಗಳಲ್ಲಿ ಜೈನಾಲಜಿ ಅಥವಾ ಪ್ರಾಕೃತ, ಜೈನಾಗಮ, ಶಾಸ್ತ್ರಿಗಳ ಜೀವನ ಮತ್ತು ಸಾಹಿತ್ಯದ ವಿಷಯದಲ್ಲಿ ಸಂಶೋಧನೆ ಮಾಡುತ್ತಿರುವ, ಕನ್ನಡ ಸಂಸ್ಕೃತ ಮತ್ತು ಪ್ರಾಕೃತ ವಿಷಯಗಳಲ್ಲಿ ಎಂ.ಎ ಮಾಡುತ್ತಿರುವ ಅರ್ಹ ವಿದ್ಯಾರ್ಥಿಗಳು ಅಕ್ಟೋಬರ್ 20ರೊಳಗೆ ಅರ್ಜಿ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ವಿಳಾಸ: ಪಂಡಿತರತ್ನ ಎ. ಶಾಂತಿರಾಜ ಶಾಸ್ತ್ರಿ ಟ್ರಸ್ಟ್, ನಂ. 369, 42ನೇ ಕ್ರಾಸ್, 8ನೇ ಬ್ಲಾಕ್, ಜಯನಗರ, ಬೆಂಗಳೂರು.

ಡೆಂಗಿ: ಡ್ಯಾಶ್‌ಬೋರ್ಡ್, ಆ್ಯಪ್‌ಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡೆಂಗಿ ರೋಗ ನಿಯಂತ್ರಣ ಹಾಗೂ ನಿರ್ವಹಣೆಗೆ ಆರೋಗ್ಯ ಇಲಾಖೆ ಹಾಗೂ ಬಿಬಿಎಂಪಿ ಜಂಟಿಯಾಗಿ ಅಭಿವೃದ್ಧಿಪಡಿಸಿರುವ ಡ್ಯಾಶ್‌ಬೋರ್ಡ್ ಮತ್ತು ಮೊಬೈಲ್ ಅಪ್ಲಿಕೇಶನ್‌ಗೆ ಶುಕ್ರವಾರ ಚಾಲನೆ ದೊರೆತಿದೆ.

ಭಾರತೀಯ ವಿಜ್ಞಾನ ಸಂಸ್ಥೆ ಹಾಗೂ ರೊಬೊಟಿಕ್ಸ್ ಟೆಕ್ನಾಲಜಿ ಪಾರ್ಕ್ ಸಹಯೋಗದಲ್ಲಿ ಡ್ಯಾಶ್‌ಬೋರ್ಡ್ ಮತ್ತು ಮೊಬೈಲ್ ಅಪ್ಲಿಕೇಶನ್ ಅಭಿವೃದ್ಧಿಪಡಿಸಲಾಗಿದೆ. ರೋಗದ ಮುನ್ಸೂಚನೆ, ವಿಶ್ಲೇಷಣೆಗೆ ಇದು ಸಹಕಾರಿಯಾಗಲಿದೆ.

ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಶುಕ್ರವಾರ ಈ ವ್ಯವಸ್ಥೆಗೆ ಚಾಲನೆ ನೀಡಿ, ಮಾತನಾಡಿದರು. ‘ಹವಾಮಾನ ಬದಲಾವಣೆಯಿಂದ ಡೆಂಗಿ ಪ್ರಕರಣಗಳು ಹೆಚ್ಚಳವಾಗುತ್ತಿವೆ. ಜಗತ್ತಿನಲ್ಲಿ ವರದಿಯಾಗುತ್ತಿರುವ ಡೆಂಗಿ ಪ್ರಕರಣದ ಮೂರನೇ ಒಂದರಷ್ಟು ಪ್ರಕರಣ ನಮ್ಮ ದೇಶದಲ್ಲಿ ದೃಢಪಡುತ್ತಿದೆ. ಬೆಂಗಳೂರು ಸೇರಿ ರಾಜ್ಯದ ವಿವಿಧೆಡೆ ಕೆಲ ದಿನಗಳಿಂದ ಡೆಂಗಿ ಪ್ರಕರಣಗಳ ಸಂಖ್ಯೆ ಏರುಗತಿ ಪಡೆದಿದೆ. ಹೀಗಾಗಿ, ತಂತ್ರಜ್ಞಾನದ ನೆರವಿನಿಂದ ರೋಗ ನಿಯಂತ್ರಣಕ್ಕೆ ಕ್ರಮವಹಿಸಲಾಗಿದೆ’ ಎಂದು ತಿಳಿಸಿದರು.

‘ನೂತನ ವ್ಯವಸ್ಥೆಯು ರೋಗ ನಿಯಂತ್ರಣ ಚಟುವಟಿಕೆಗಳನ್ನು ನಿರ್ವಹಿಸುವಲ್ಲಿ ನೀತಿ ನಿರೂಪಕರು ಮತ್ತು ಸಾರ್ವಜನಿಕ ಆರೋಗ್ಯ ಅಧಿಕಾರಿಗಳಿಗೆ ಸಹಾಯ ಮಾಡುತ್ತದೆ. ರೋಗದ ಕಣ್ಗಾವಲು ನಡೆಸುವ ಡ್ಯಾಶ್‌ಬೋರ್ಡ್ ಕರ್ನಾಟಕದಾದ್ಯಂತ ಜಿಲ್ಲಾ ಮತ್ತು ಉಪ ಜಿಲ್ಲಾ ಮಟ್ಟದಲ್ಲಿ ಏಕಾಏಕಿ ಸಂಭವಿಸುವ ನಕ್ಷೆಯನ್ನು ಒದಗಿಸುತ್ತದೆ. ನಾಲ್ಕು ವಾರಗಳ ಮುನ್ಸೂಚನೆಯ ನಕ್ಷೆ ರಾಜ್ಯ ಮತ್ತು ಜಿಲ್ಲಾ ಅಧಿಕಾರಿಗಳಿಗೆ ಲಭ್ಯವಾಗುವಂತೆ ಮಾಡುತ್ತದೆ’ ಎಂದರು.

ಆರೋಗ್ಯ ಇಲಾಖೆ ಹಾಗೂ ಬಿಬಿಎಂಪಿ ಅಧಿಕಾರಿಗಳು ಇದ್ದರು.



ಡ್ಯಾಶ್ ಬೋರ್ಡ್ ಮತ್ತು ಮೊಬೈಲ್ ಅಪ್ಲಿಕೇಶನ್‌ಗೆ ದಿನೇಶ್ ಗುಂಡೂರಾವ್ ಚಾಲನೆ ನೀಡಿದರು. ಬಿಬಿಎಂಪಿ ವಿಶೇಷ ಆಯುಕ್ತ (ಆರೋಗ್ಯ) ಡಾ.ಕೆ.ವಿ. ತ್ರಿಲೋಕಚಂದ್ರ, ಆರೋಗ್ಯ ಇಲಾಖೆ ಆಯುಕ್ತ ಡಿ. ರಂದೀಪ್, ರಾಷ್ಟ್ರೀಯ ಆರೋಗ್ಯ ಅಭಿಯಾನದ ವ್ಯವಸ್ಥಾಪಕ ನಿರ್ದೇಶಕ ನವೀನ್ ಭಟ್ ಹಾಗೂ ಅಧಿಕಾರಿಗಳು ಇದ್ದಾರೆ.

ಬಾಪ ಗ್ರಾಮದಲ್ಲಿ ಅಂಚೆ ಜನ ಸಂಪರ್ಕ ಅಭಿಯಾನ

ಅಂಚೆ ಇಲಾಖೆ ಸೌಲಭ್ಯ: ಒಂದೇ ಸೂರಿನಡಿ ಮಾಹಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಶ್ಚಿಮ ಅಂಚೆ ವಿಭಾಗವು ಬಾಪ ಗ್ರಾಮ ವ್ಯಾಪ್ತಿಯಲ್ಲಿ ಪ್ರಥಮ ಬಾರಿಗೆ ‘ಅಂಚೆ ಜನ ಸಂಪರ್ಕ ಅಭಿಯಾನ’ ಹಮ್ಮಿಕೊಂಡಿತ್ತು.

ಅಭಿಯಾನಕ್ಕೆ ಚಾಲನೆ ನೀಡಿದ ಪೋಸ್ಟ್ ಮಾಸ್ಟರ್ ಜನರಲ್ ಎಲ್. ಕೆ.ಡ್ಯಾಶ್ ಮಾತನಾಡಿ, ‘ಇಂದು ಕೇಂದ್ರ ಸರ್ಕಾರ ಉತ್ತಮ ಯೋಜನೆ ಹಮ್ಮಿಕೊಂಡಿದ್ದು, ಅಂಚೆ ಸೇವೆಯನ್ನು ಮನೆ ಬಾಗಿಲಿಗೆ ಕೊಂಡೊಯ್ಯುವ ಕಾರ್ಯಕ್ರಮ ಹಮ್ಮಿಕೊಂಡಿದೆ. ಗ್ರಾಹಕರು ಇದರ ಪ್ರಯೋಜನ ಪಡೆದುಕೊಳ್ಳಬೇಕು’ ಎಂದು ಕೋರಿದರು.

ಉಳಿತಾಯ ಖಾತೆ ತೆರೆಯುವಿಕೆ, ಐಪಿಪಿಬಿ ಖಾತೆ ತೆರೆಯುವಿಕೆ, ಆಧಾರ್ ನೋಂದಣಿ, ತಿದ್ದುಪಡಿ, ಉಳಿತಾಯ ಖಾತೆಗೆ ಆಧಾರ್ ಸಂಖ್ಯೆ ಜೋಡಣೆ, ಮೈ ಸ್ಟಾಂಪ್, ಮೈಲ್ಸ್ , ಅಂಚೆ ಜೀವ ವಿಮೆ ಕುರಿತು ಮಾಹಿತಿಗಳನ್ನು ಒಂದೇ ಸೂರಿನಡಿಯಲ್ಲಿ ನೀಡಲಾಯಿತು.

ಅಂಚೆ ಉಳಿತಾಯ ಖಾತೆ ಪಾಸ್ ಪುಸ್ತಕ, ಅಂಚೆ ಜೀವ ವಿಮೆ ಪಾಲಿಸಿ ಬಾಂಡ್ ವಿತರಿಸಲಾಯಿತು.

ಬೆಂಗಳೂರು ಪಶ್ಚಿಮ ಅಂಚೆ ವಿಭಾಗದ ವರಿಷ್ಠ ಅಂಚೆ ಅಧೀಕ್ಷಕ ಬಿ.ಚಂದ್ರಕಾಂತ ಕಾಮತ್ ಅಧ್ಯಕ್ಷತೆ ವಹಿಸಿದ್ದರು.

ಮಾಚೋಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಎನ್.ಎಸ್.ಸರಸ್ವತಿ, ಉಪಾಧ್ಯಕ್ಷೆ ಲಕ್ಷ್ಮಿದೇವಿ, ಉಪ ಅಂಚೆ ಅಧೀಕ್ಷಕರಾದ ಮೋಹನ್, ಹರಿರಾಂ, ಸುದರ್ಶನ್ ಇದ್ದರು.

‘ತಾಪಮಾನ 1.5 ಡಿಗ್ರಿ ಸೆಲ್ಸಿಯಸ್ ಗುರಿ ಜೀವಂತವಿರಿಸಿ’



ಗುಟೆರಸ್

ನವದೆಹಲಿ (ಪಿಟಿಐ): ಜಿ20 ರಾಷ್ಟ್ರಗಳು ಜಾಗತಿಕ ತಾಪಮಾನ ಏರಿಕೆಯನ್ನು 1.5 ಡಿಗ್ರಿ ಸೆಲ್ಸಿಯಸ್‌ಗೆ ಮಿತಗೊಳಿಸುವ ಗುರಿಯನ್ನು ಜೀವಂತವಾಗಿರಿಸಬೇಕು ಎಂದು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆಂಟೋನಿಯೊ ಗುಟೆರಸ್ ಶುಕ್ರವಾರ ಹೇಳಿದ್ದಾರೆ.

ಜಿ20 ಶೃಂಗಸಭೆಯ ಮುನ್ನಾ ದಿನವಾದ ಶುಕ್ರವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಹಸಿರು ಆರ್ಥಿಕತೆಯ ಮೂಲಕ ನ್ಯಾಯಯುತ ಮತ್ತು ಸಮಾನತೆಯ ಪರಿವರ್ತನೆಯನ್ನು ಮುನ್ನಡೆಸಬೇಕು ಎಂದು ಜಿ20 ರಾಷ್ಟ್ರಗಳ ನಾಯಕರಿಗೆ ಕರೆನೀಡಿದರು.

‘ಸವಾಲುಗಳು ಹೆಚ್ಚುತ್ತಿವೆ. ಹವಾಮಾನ ಬಿಕ್ಕಟ್ಟು ತೀವ್ರವಾಗಿ ಹದಗೆಡುತ್ತಿದೆ. ಆದರೆ, ತುರ್ತುಸ್ಥಿತಿ ಎದುರಿಸಲು ಸಾಮೂಹಿಕ ಪ್ರತಿಸ್ಪಂದನೆ, ಮಹತ್ವಾಕಾಂಕ್ಷೆ, ವಿಶ್ವಾಸಾರ್ಹತೆಯ ಕೊರತೆ ಎದ್ದು ಕಾಣಿಸುತ್ತಿದೆ’ ಎಂದು ಗುಟೆರಸ್ ಹೇಳಿದರು.

ವಿಶ್ವದ ಜಿಡಿಪಿಯ 85 ಪ್ರತಿಶತವನ್ನು ಹೊಂದಿರುವ ಜಿ20 ರಾಷ್ಟ್ರಗಳು ಶೇ 80ರಷ್ಟು ಇಂಗಾಲ ಹೊರಸೂಸುವಿಕೆಗೂ ಕಾರಣವಾಗಿವೆ. ಹವಾಮಾನ ಕುಸಿತ ತಡೆಗಟ್ಟುವುದು ಮತ್ತು ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸುವುದು ಈ ಎರಡು ಆದ್ಯತೆಯ ಕ್ಷೇತ್ರಗಳಲ್ಲಿ ಜಿ20 ರಾಷ್ಟ್ರಗಳು ನಾಯಕತ್ವ ಪ್ರದರ್ಶಿಸಬೇಕು ಎಂದು ಅವರು ಒತ್ತಾಯಿಸಿದರು.

ಬಿ.ಸರೋಜಾದೇವಿಗೆ ರಾಜ್‌ಕುಮಾರ್ ಸಂಸ್ಕೃತಿ ದತ್ತಿ ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಡಾ.ರಾಜ್‌ಕುಮಾರ್ ಅವರು ನನ್ನ ಹೆಮ್ಮೆಯ ನಟ. ಅವರಿಂದ ಕಲಿತ ಶಿಸ್ತು, ಜವಾಬ್ದಾರಿ ಕಾರಣವೇ ಹೆಚ್ಚಿನ ಅಭಿನಯ ಕಲಿಯುವುದಕ್ಕೆ ಸಾಧ್ಯವಾಯಿತು’ ಎಂದು ನಟಿ ಬಿ.ಸರೋಜಾದೇವಿ ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಶುಕ್ರವಾರ ನಡೆದ ಸಮಾರಂಭದಲ್ಲಿ ರಾಜ್‌ಕುಮಾರ್ ಸಂಸ್ಕೃತಿ ದತ್ತಿ ಪ್ರಶಸ್ತಿ ಸ್ವೀಕರಿಸಿ ಅವರು ಮಾತನಾಡಿದರು.

‘ಸಾಕಷ್ಟು ಪ್ರಶಸ್ತಿಗಳು ದೊರೆತಿವೆ. ಅದ್ಯಾವುದಕ್ಕೂ ಸಂಸ್ಕೃತಿ ದತ್ತಿ ಪ್ರಶಸ್ತಿ ಸರಿ ಸಮವಲ್ಲ. ರಾಜ್‌ಕುಮಾರ್ ಅವರ ನಟನೆಗೆ ಸರಿದೂಗಿಸಲು ನಾವು ಕಷ್ಟಪಟ್ಟು ಅಭಿನಯ ಮಾಡಬೇಕಿತ್ತು. ಅದರ ಪರಿಣಾಮವೇ ಜನಮೆಚ್ಚುವ ಪಾತ್ರಗಳನ್ನು ಮಾಡುವುದಕ್ಕೆ ಸಾಧ್ಯವಾಗಿದೆ’ ಎಂದು ಹೇಳಿದರು.

ಸಾಹಿತ್ಯ ಪರಿಷತ್ ಅಧ್ಯಕ್ಷ ಮಹೇಶ ಜೋಶಿ ಮಾತನಾಡಿದರು.



ಡಾ.ರಾಜ್‌ಕುಮಾರ್ ಸಂಸ್ಕೃತಿ ದತ್ತಿ ಪ್ರಶಸ್ತಿಯನ್ನು ನಟಿ ಬಿ.ಸರೋಜಾದೇವಿ ಅವರಿಗೆ ಪ್ರದಾನ ಮಾಡಲಾಯಿತು. ನಿರ್ಮಾಪಕ ಎಸ್‌.ಎ.ಚನ್ನೇಗೌಡ, ಕನ್ನಡ ಸಾಹಿತ್ಯ ಪರಿಷತಿನ ಅಧ್ಯಕ್ಷ ಮಹೇಶ ಜೋಶಿ, ಗೌರವ ಕಾರ್ಯದರ್ಶಿ ಪದ್ಮಿನಿ ನಾಗರಾಜ್, ಗಾಯಕಿ ಬಿ.ಕೆ. ಸುಮಿತ್ರಾ ಇದ್ದರು – ಪ್ರಜಾವಾಣಿ ಚಿತ್ರ

‘ಕೈಗಾರಿಕೋದ್ಯಮ, ಶಿಕ್ಷಣ ರಂಗಗಳ ಸಹಭಾಗಿತ್ವಕ್ಕೆ ಉನ್ನತ ಸಮಿತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೈಗಾರಿಕೋದ್ಯಮ ಮತ್ತು ಶಿಕ್ಷಣ ರಂಗಗಳ ಸಹಭಾಗಿತ್ವಕ್ಕೆ ಸಚಿವರ ಮಟ್ಟದ ಉನ್ನತ ಸಮಿತಿ ರಚಿಸಲಾಗುವುದು’ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದರು.

ರಾಮಯ್ಯ ಇನ್ಸಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ಶುಕ್ರವಾರ ಏರ್ಪಡಿಸಿದ್ದ ‘ಎಕ್ಸೀಡ್’ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಅವರು ಮಾತನಾಡಿದರು.

‘ಉನ್ನತ ಸಮಿತಿಯಲ್ಲಿ ಉನ್ನತ ಶಿಕ್ಷಣ, ವೈದ್ಯಕೀಯ ಶಿಕ್ಷಣ, ಸಣ್ಣ ಕೈಗಾರಿಕೆ, ಆರೋಗ್ಯ ಮತ್ತು ಕೌಶಲ ಅಭಿವೃದ್ಧಿ ಸಚಿವರು ಇರಲಿದ್ದಾರೆ’ ಎಂದು ಹೇಳಿದರು.

‘ಉದ್ಯಮಕ್ಕೆ ಬೇಕಾದಂತೆ ಮಾನವ ಸಂಪನ್ಮೂಲವನ್ನು ರಾಜ್ಯದಲ್ಲಿ ಸಜ್ಜುಗೊಳಿಸಲು ನಾವು ಸಿದ್ಧರಿದ್ದೇವೆ. ಇದರಿಂದ ರಾಜ್ಯದ ಯುವಜನರಿಗೂ ಉದ್ಯೋಗಾವಕಾಶಗಳು ಸಿಗಲಿವೆ’ ಎಂದು ಹೇಳಿದರು.



ರಾಮಯ್ಯ ಇನ್ಸಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ಶುಕ್ರವಾರ ಏರ್ಪಡಿಸಿದ್ದ 'ಎಕ್ಸೀಡ್' ಕಾರ್ಯಕ್ರಮದಲ್ಲಿ ಅರುಂಧತಿ ರಾವ್, ಸಚಿವ ಎಂ.ಬಿ. ಪಾಟೀಲ, ಕಾಲೇಜಿನ ಟ್ರಸ್ಟಿ ಎಂ.ಆರ್. ಆನಂದರಾಮ್, ಸತೀಶ್ ರಾಮಯ್ಯ, ಉದ್ಯಮಿ ಮದನ್ ಪದಕಿ, ಟಿವಿಎಸ್ ಮೋಟಾರ್ಸ್ ಉಪಾಧ್ಯಕ್ಷ ಎಸ್. ದೇವರಾಜನ್ ಉಪಸ್ಥಿತರಿದ್ದರು.

ಪಿವಿ ಬ್ರ್ಯಾಂಡ್ ಸ್ಪಾಟ್

ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ **‘ಪಿವಿ ಬ್ರ್ಯಾಂಡ್ ಸ್ಪಾಟ್’**ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

ಕಣ್ಣೀರು ಹಾಕಿದ ಕುಂತಿನಗರ, ಸರ್ವಜ್ಞನಗರ ಗುಡಿಸಲು ವಾಸಿಗಳು

ಶೀಘ್ರ ಸೂರು ಕಲ್ಪಿಸಲು ಸಚಿವ ಜಮೀರ್ ಅಹಮದ್ ಖಾನ್‌ಗೆ ಮನವಿ

ಪ್ರಸ್ತುತಿ:ಪಿವಿ ಬ್ರ್ಯಾಂಡ್ ಸ್ಪಾಟ್

ಬೆಂಗಳೂರು: ನೆತ್ತಿಯ ಮೇಲೆ ಸೂರು ಕಲ್ಪಿಸಲು ಸಚಿವರ ಮುಂದೆ ಕಣ್ಣೀರು ಹಾಕಿದ ಮಹಿಳೆಯರು. ಅಧಿಕಾರಿಗಳಿಗೆ ಕೈಮುಗಿದು ಗೋಗರೆದ ಹಿರಿಯ ನಾಗರಿಕರು. ಶೆಡ್‌ಗಳಲ್ಲಿ ಇಲಿ-ಹೆಗ್ಗಣ ಕಾಟದ ನಡುವೆ ಇಡೀ ರಾತ್ರಿ ಜಾಗರಣೆ ಮಾಡುವಂತಾಗಿದೆ ಎಂದು ಅವಲತ್ತುಕೊಂಡ ಮಕ್ಕಳು. ಈ ದೃಶ್ಯ ಕಂಡುಬಂದಿದ್ದು ಸಿಲಿಕಾನ್ ಸಿಟಿಯ ಕುಂತಿನಗರದಲ್ಲಿ. ಸಾಕ್ಷಿಯಾಗಿದ್ದು ವಸತಿ ಸಚಿವ ಜಮೀರ್ ಅಹಮದ್ ಖಾನ್.

ಶುಕ್ರವಾರ ಹೆಬ್ಬಾಳದ ಕುಂತಿ ಗ್ರಾಮಕ್ಕೆ ವಸತಿ ಸಚಿವರು ಅಧಿಕಾರಿಗಳ ಜತೆ ಭೇಟಿ ಕೊಟ್ಟಾಗ ಕಂಡು ಬಂದ ಮನಕಲಕುವ ದೃಶ್ಯ. ಕೊಳಗೇರಿ ಅಭಿವೃದ್ಧಿ ಮಂಡಳಿ ಯಿಂದ ರೂಪಿಸಿರುವ ಪ್ರಧಾನ ಮಂತ್ರಿ ಅವಾಸ್ ವಸತಿ ಯೋಜನೆ ಯಡಿ ನಿರ್ಮಿಸಲು ಹೊರಟಿರುವ ಮನೆಗಳು, ಎರಡು ವರ್ಷ ಕಳೆದರೂ ಪೂರ್ಣಗೊಂಡಿಲ್ಲ ಇದಕ್ಕೆ ಕಾರಣ ಫಲಾನುಭವಿಗಳ ವಂತಿಗೆ ಪಾವತಿ ಆಗದಿರುವುದು.

‘ಕೂಲಿ ಮಾಡಿ ಜೀವನ ಮಾಡುತ್ತಿದ್ದೇವೆ. ಜೀವನ ನಿರ್ವಹಣೆಗೆ ಕಷ್ಟ ಆಗುತ್ತಿದೆ. ಗುಣಮಟ್ಟದ ಮನೆ ಕಟ್ಟಿಕೊಡುತ್ತಿದ್ದಾರೆ. ಫಲಾನುಭವಿವಂತಿಗೆ ಮೂರೂವರೆಯಿಂದ 4 ಲಕ್ಷದವರೆಗೆ ಪಾವತಿ ಮಾಡಲು ಆಗುತ್ತಿಲ್ಲ. ದಯವಿಟ್ಟು ನಮಗೆ ಮನೆ ಕಟ್ಟಿಕೊಡಿ’ ಎಂದು ಗುಡಿಸಲು ವಾಸಿಗಳು ಸಚಿವರಲ್ಲಿ ಮನವಿ ಮಾಡಿಕೊಂಡರು.

ಸ್ಥಳೀಯ ವಾಸಿಗಳಾದ ನೇತ್ರ, ಅಣ್ಣಿಯಮ್ಮ, ಮುತ್ಯಾಲಮ್ಮ, ವೆಂಕಟೇಶ್ ಅವರು ನಮ್ಮ ಜೀವನ ಬೀದಿಗೆ ಬಂದಿದೆ. ಮಕ್ಕಳಿಗೆ ವಿದ್ಯೆ ಕಲಿಸಲು ಆಗುತ್ತಿಲ್ಲ. ಆರೋಗ್ಯ ಸಮಸ್ಯೆ ಎಂದರೆ ಚಿಕಿತ್ಸೆಗೆ ಹಣ ಇಲ್ಲ. ಪೇಪರ್ ಆಯ್ದು, ಮನೆ ಕೆಲಸ, ರಸ್ತೆ ಬದಿ ಚಪ್ಪಲಿ ಹೊಲೆದು ಜೀವನ ಸಾಗಿಸುತ್ತಿದ್ದೇವೆ ಎಂದು ಕಣ್ಣೀರು ಹಾಕಿದರು.

ಮನೆ ಯಾವಾಗ ಕಟ್ಟಿಕೊಡುತ್ತೀರಿ ಪ್ಲೀಸ್: ಬಾಡಿಗೆ ಕಟ್ಟಲು ನಮ್ಮಿಂದ ಸಾಧ್ಯವಾಗುತ್ತಿಲ್ಲ. ಶೆಡ್‌ಗಳಲ್ಲೇ ಹಬ್ಬ, ಮದುವೆ ಮುಂತಾದ ಕಾರ್ಯಗಳನ್ನು ಮಾಡುವಂತಾಗಿದೆ. ಯಾವಾಗ ಮನೆ ಕಟ್ಟಿಕೊಡುತ್ತೀರಿ ಪ್ಲೀಸ್ ಎಂದು ಸರ್ವಜ್ಞನಗರ ಕ್ಷೇತ್ರದ ಚಟ್ಟಪ್ಪ ಗಾರ್ಡನ್ ಕೊಳಗೇರಿ ವಾಸಿಗಳು ವಸತಿ ಸಚಿವರನ್ನು ಗೋಗರೆದರು. ದಯವಿಟ್ಟು ನಮಗೆ ಬೇಗ ಮನೆ ಕಟ್ಟಿಕೊಡಿ. ಫಲಾನುಭವಿ ವಂತಿಗೆ ಪಾವತಿ ಮಾಡಲು ಆಗದು. ಕೂಲಿ ಮಾಡಿ ಜೀವನ ಸಾಗಿಸುವುದೇ ಕಷ್ಟವಾಗಿದೆ ಎಂದು ಸ್ಥಳೀಯ ಪ್ರೇಮಾವತಿ, ಅನಿತಾ ಎಂಬುವರು ಅಳಲು ತೋಡಿಕೊಂಡರು.

ಸಚಿವ ಜಮೀರ್ ಅಹಮದ್ ಖಾನ್ ಹಾಗೂ ಹಣಕಾಸು ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್. ಕೆ. ಅತೀಕ್ ಅವರು ಕಾಮಗಾರಿ ಗುಣಮಟ್ಟದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರಾದರೂ ಆದಷ್ಟು ಶೀಘ್ರ ಯೋಜನೆ ಪೂರ್ಣಗೊಳಿಸುವ ಬಗ್ಗೆ ಯೋಚಿಸಿ ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು. ವಸತಿ ಇಲಾಖೆ ಪ್ರಧಾನ ಕಾರ್ಯದರ್ಶಿ ನವೀನ್ ರಾಜ್ ಸಿಂಗ್, ಕೊಳಗೇರಿ ಅಭಿವೃದ್ಧಿ ಮಂಡಳಿ ಆಯುಕ್ತ ಬಿ. ವೆಂಕಟೇಶ್, ಪ್ರಧಾನ ಅಭಿಯಂತರ ಬಾಲರಾಜು ಉಪಸ್ಥಿತರಿದ್ದರು.





ಕುಂತಿ ಗ್ರಾಮದ ಮಹಿಳೆ ಸಚಿವ ಜಮೀರ್ ಅಹಮದ್ ಖಾನ್ ಅವರ ಮುಂದೆ ಕಣ್ಣೀರು ಹಾಕುತ್ತಿರುವುದು



ಅರ್ಧಕ್ಕೆ ನಿಂತಿರುವ ಮನೆಗಳ ನಿರ್ಮಾಣ ಕಾಮಗಾರಿ.

ಸಿಎಂ ಜತೆ ಚರ್ಚೆ: ಜಮೀರ್ ಅಹಮದ್ ಖಾನ್

2013 ರಿಂದ 2023 ರವರೆಗೆ ಕೊಳೆಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ಪ್ರಧಾನ ಮಂತ್ರಿ ಅವಾಸ್ ಯೋಜನೆಯಡಿಯಲ್ಲಿ 1.80 ಲಕ್ಷ ಮನೆ ನಿರ್ಮಾಣಕ್ಕೆ ಯೋಜನೆ ರೂಪಿಸಿದ್ದು, 295 ಯೋಜನೆಗಳಲ್ಲಿ ಒಂದೂ ಪೂರ್ಣಗೊಂಡಿಲ್ಲ. ಒಂದೇ ಒಂದು ಮನೆಯೂ ಕೊಟ್ಟಿಲ್ಲ. ಯಾಕೆಂದರೆ, ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಬ್ಸಿಡಿ ಹಣ ಬಿಟ್ಟರೆ ಫಲಾನುಭವಿ ವಂತಿಗೆ ಪಾವತಿ ಮಾಡದ ಕಾರಣ ಕಾಮಗಾರಿ ಅರ್ಧಕ್ಕೆ ಸ್ಥಗಿತಗೊಂಡಿದೆ. ಹೀಗಾಗಿ ಹಣಕಾಸು ಇಲಾಖೆ ಅಧಿಕಾರಿಗಳ ಜತೆ ಸಭೆ ನಡೆಸಿ ಬಾಕಿ ಉಳಿದಿರುವ ಮನೆ ಕಾಮಗಾರಿ ಪೂರ್ಣಗೊಳಿಸಲು ಮುಖ್ಯಮಂತ್ರಿ ಅವರ ಜತೆಯೂ ಚರ್ಚಿಸಿ ಶಾಶ್ವತ ಪರಿಹಾರಕ್ಕೆ ಮುಂದಾಗಿದ್ದೇನೆ. ಆದಷ್ಟು ಬೇಗ ಮನೆ ಪೂರ್ಣಗೊಳಿಸುವ ನಿಟ್ಟಿನಲ್ಲಿ ಮಾರ್ಗ ಹುಡುಕಲಾಗುತ್ತಿದೆ.

ಚಟ್ಟಪ್ಪ ಗಾರ್ಡನ್ ಕೊಳಗೇರಿ

ಸರ್ವಜ್ಞನಗರ ಕ್ಷೇತ್ರದ ಚಟ್ಟಪ್ಪ ಗಾರ್ಡನ್ ಕೊಳಗೇರಿಯಲ್ಲಿ 2.30 ಎಕರೆ ಜಾಗದಲ್ಲಿ ₹38 ಕೋಟಿ ವೆಚ್ಚದಲ್ಲಿ 612 ಮನೆ ನಿರ್ಮಾಣ ಆಗುತ್ತಿದ್ದು, ಪ್ರತಿ ಮನೆಯ ವೆಚ್ಚ ಸರಾಸರಿ ₹6.20 ಲಕ್ಷ ಆಗಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಬ್ಸಿಡಿ ಹೊರತುಪಡಿಸಿ ಫಲಾನುಭವಿ ₹2.75 ಲಕ್ಷ ಕೊಡಬೇಕಾಗಿದೆ. ಇಲ್ಲಿ ವಾಸಿಸುವ ಎಲ್ಲರೂ ಬಡವರಾಗಿರುವ ಕಾರಣ ಹಣ ಕಟ್ಟಲು ಸಾಧ್ಯವಾಗುತ್ತಿಲ್ಲ. ಬ್ಯಾಂಕ್‌ಗಳು ಸಾಲ ಕೊಡಲು ಮುಂದಾಗುತ್ತಿಲ್ಲ.

ಕುಂತಿ ಗ್ರಾಮ ಕೊಳಗೇರಿ

ಹೆಬ್ಬಾಳ ಕ್ಷೇತ್ರದ ಕುಂತಿ ಗ್ರಾಮ ಹಾಗೂ ಇತರೆ ಕೊಳಗೇರಿಗಳಲ್ಲಿ 412 ಮನೆ ₹32 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗುತ್ತಿದ್ದು, ಪ್ರತಿ ಮನೆಗೆ ₹7 ಲಕ್ಷ ವೆಚ್ಚ ಆಗುತ್ತಿದೆ. ಕೇಂದ್ರ, ರಾಜ್ಯ ಸರ್ಕಾರದಿಂದ ಎಸ್.ಸಿ. ಮತ್ತು ಎಸ್.ಟಿ. ವರ್ಗಕ್ಕೆ ₹3.50 ಲಕ್ಷ, ಸಾಮಾನ್ಯ ವರ್ಗಕ್ಕೆ ₹2.70 ಲಕ್ಷ ಸಬ್ಸಿಡಿ ಸಿಗುತ್ತಿದೆ. ಉಳಿದದ್ದು ಫಲಾನುಭವಿ ಕಟ್ಟಬೇಕು. ವಂತಿಗೆ ಪಾವತಿ ಆಗದೆ ಮನೆ ಅರ್ಧಕ್ಕೆ ನಿಂತಿವೆ.



ಅಂಡಾಶಯದಲ್ಲಿ ಸಿಸ್ಟ್: ನಿವಾರಣೆ ಹೇಗೆ?





ಸ್ಪಂದನ

ಡಾ. ವೀಣಾ ಎಸ್. ಭಟ್

ನನ್ನ ತಂಗಿ ಸರ್ಕಾರಿ ಉದ್ಯೋಗಿ. ಎರಡು ವರ್ಷಗಳ ಹಿಂದೆ ಒಂದು ಅಂಡಾಶಯದಲ್ಲಿ ಹೆಮೋರೋಜಿಕ್ ಸಿಸ್ಟ್ ಆಗಿ ಅದು ಸುತ್ತಿದ ಕಾರಣ ಒಂದು ಅಂಡಾಶಯವನ್ನು ತೆಗೆಯಲಾಗಿದೆ. ಅವಳಿಗೀಗ ಮದುವೆ ನಿಶ್ಚಯವಾಗಿದೆ. ಈಗ ಮತ್ತೊಂದು ಅಂಡಾಶಯದಲ್ಲಿ 2 ಸೆಂ.ಮೀಟರ್ ಸಿಸ್ಟ್ ಆಗಿದೆ. ಅದು ನಿವಾರಣೆಯಾಗಲು 21 ದಿನಕ್ಕೆ ಮಾತ್ರೆ ಕೊಟ್ಟಿದ್ದಾರೆ. ವಾರದಲ್ಲಿ ಐದು ದಿನವಾದರೂ ಸುಸ್ತು, ಬಳಲಿಕೆ, ತೀವ್ರ ಬೆನ್ನುನೋವು, ನಿರಾಸಕ್ತಿ ಇರುತ್ತದೆ. ತಾಯ್ತನಕ್ಕೆ ತೊಂದರೆ ಇಲ್ಲ ಅಂತ ವೈದ್ಯರು ತಿಳಿಸಿದ್ದಾರೆ. ಮಗುವಾದರೆ ಸಿಸ್ಟ್ ಕಡಿಮೆಯಾಗುತ್ತದೆ ಎಂದೂ ಭರವಸೆ ನೀಡಿದ್ದಾರೆ. ಮುಂದಿನ ಜೀವನ ಹೇಗಿರಬೇಕು ಎಂಬುದನ್ನು ತಿಳಿಸಿ.

ಹೆಸರು, ಊರು ತಿಳಿಸಿಲ್ಲ

ನಿಮ್ಮ ತಂಗಿಗೆ ಒಂದೇ ಅಂಡಾಶಯ ತೆಗೆದಿರುವುದರಿಂದ ಭಯಪಡುವುದೇನೂ ಬೇಡ. ಇನ್ನೊಂದರಲ್ಲಿ ಸಿಸ್ಟ್ ಕೂಡ ಸಾಮಾನ್ಯವಾಗಿ ಅಂಡೋತ್ಪತ್ತಿಯ ನಂತರ ಕೋಶಿಕೆಯಲ್ಲಿನ ದ್ರವ ಹೀರಲ್ಪಡದೇ ಇದ್ದಾಗ ಬೆಳೆದಂಥ ಸಿಸ್ಟ್ ಆಗಿರುತ್ತದೆ. ಅದು ತಾನಾಗಿಯೇ ಒಡೆದು ಹೋಗಬಹುದು. ಚಿಂತೆ ಮಾಡಬೇಡಿ. ಈಗಾಗಲೇ ವೈದ್ಯರು ಸೂಕ್ತ ಮಾತ್ರೆಗಳನ್ನು ಕೊಟ್ಟಿರುವುದರಿಂದ ಬೇಗನೆ ಕರಗಬಹುದು.

ತಾಯ್ತನದ ಸಾಮರ್ಥ್ಯ ಅಥವಾ ಅಂಡಾಶಯದ ಮೀಸಲು (ಒವೆರಿಯನ್ ರಿಸರ್ವ) ತಿಳಿಯಲು ಈಗಾಗಲೇ ನಿಮಗೆ ಕೆಲವು ಪರೀಕ್ಷೆಗಳನ್ನು ಮಾಡಿಸಲು ತಿಳಿಸಿದ್ದರೆ, ಮಾಡಿಸಿ. ಅದಕ್ಕೂ ಮೊದಲು ಸರಿಯಾಗಿ ತಿಂಗಳು ತಿಂಗಳು ಮುಟ್ಟಾಗುತ್ತಿದ್ದರೆ ಅಂತಹ ಮಹಿಳೆಯರಲ್ಲಿ ಅಂಡೋತ್ಪತ್ತಿ ಸರಿಯಾಗಿ ಆಗುತ್ತಿದೆ ಎಂದು ಸುಳಿವು ಸಿಕ್ಕಿಬಿಡುತ್ತದೆ. ಇಲ್ಲದಿದ್ದರೂ ತಾಯ್ತನದ ಸಾಮರ್ಥ್ಯ ತಿಳಿಯಲು ಹಲವು ವಿಧಾನಗಳಿವೆ. ಟ್ರಾನ್ಸ್‌ವಜೈನಲ್ ಅಲ್ಟ್ರಾಸೌಂಡ್ ಸ್ಕ್ಯಾನಿಂಗ್ ಎಂಬ ಸರಳವಾದ, ಹೆಚ್ಚಿನೆಡೆಯಲ್ಲಿ ಲಭ್ಯವಿರುವ ಪರೀಕ್ಷೆಯನ್ನು ಮುಟ್ಟಾಗಿ ಎರಡರಿಂದ ಮೂರು ದಿನದೊಳಗೆ ಮಾಡಬೇಕು.

ಆಂಟ್ರಲ್‌ಕೋಶಿಕೆಗಳ (1 ರಿಂದ 2 ಮಿ.ಮೀ. ಗಾತ್ರದ) ಎಣಿಕೆ 10ರಿಂದ20ರೊಳಗೆ ಇದ್ದರೆ ಆಗ ಉತ್ತಮ ಅಂಡಾಶಯದ ಮೀಸಲು ಇದೆ ಎಂದು ಅರ್ಥ. ಈ ಪರೀಕ್ಷೆಯಿಂದ ಹಿಂದಿನ ಋತುಚಕ್ರದ ಕಾರ್ಪಸ್‌ಲೂಟಿಯಂ ಸಿಸ್ಟ್‌ಗಳೇನಾದರೂ ಇದೆಯೇ? ಅಂಡಾಶಯದ ಪರಿಮಾಣ ಎಷ್ಟಿದೆ? ಗರ್ಭಾಶಯದ ಒಳಪದರ, ಶ್ರೋಣಿಯಲ್ಲಿರುವ ಗಂಟುಗಳು ಎಲ್ಲವನ್ನು ತಿಳಿಯಲು ಸಾಧ್ಯವಾಗುತ್ತದೆ.

ಇನ್ನು ರಕ್ತಪರೀಕ್ಷೆಯಲ್ಲಿ ಆಂಟಿಮುಲೇರಿಯನ್ ಹಾರ್ಮೋನು(ಎ.ಎಂ.ಹೆಚ್.)ಮಟ್ಟ ಸರಾಸರಿ 1 ರಿಂದ 3 ನ್ಯಾನೋಗ್ರಾಂ/ಮಿ.ಲಿ. ಇದ್ದರೆ ಅದು ಉತ್ತಮ ಅಂಡಾಶಯದ ಮೀಸಲು ಎನಿಸಿಕೊಳ್ಳುತ್ತದೆ. ಈ ಮಟ್ಟವೂ ಅನುವಂಶೀಯತೆ ಮತ್ತು ವಯಸ್ಸಿನ ಮೇಲೆ ಅವಲಂಬಿಸಿರುತ್ತದೆಯಾದರೂ ಕೆಲವು ಜೀವನಶೈಲಿ ಕ್ರಮಗಳಿಂದ ಎ.ಎಂ.ಎಚ್.ಮಟ್ಟ ಉತ್ತಮ ಪಡಿಸಿಕೊಳ್ಳಬಹುದು.

ಜೀವನಕ್ರಮ ಹೀಗಿರಲಿ: ಸಮತೂಕ ಕಾಯ್ದುಕೊಳ್ಳಿ. ಸಾಕಷ್ಟು ನೀರು ಕುಡಿಯಿರಿ. ಸಮತೋಲಿತ ಆಹಾರ, ನಿತ್ಯ 6 ರಿಂದ 8 ತಾಸು ನಿದ್ದೆ ಮಾಡಿ. ಧೂಮಪಾನ, ಮದ್ಯಪಾನ, ಕೃತಕ ಪಾನೀಯಗಳು, ಸಂಸ್ಕರಿಸಿದ ಆಹಾರ, ಬೇಕರಿ ತಿನಿಸುಗಳಿಂದ ದೂರವಿರಿ. ಸುಗಂಧದ್ರವ್ಯಗಳ ಬಳಸದಿರಿ. ಸೌಂದರ್ಯವರ್ಧಕಗಳ ಅತಿಯಾದ ಉಷ್ಣತೆಗೆ ತೆರೆದುಕೊಳ್ಳುವುದು ಬೇಡ. ಕಾಫಿ, ಟೀ, ಡೈರಿ ಉತ್ಪನ್ನಗಳ ಸೇವನೆ, ಪ್ರಾಣಿಜನ್ಯ ಕೊಬ್ಬು, ಸೋಯಾ ಉತ್ಪನ್ನಗಳ ಬಳಕೆ , ಪ್ಲಾಸ್ಟಿಕ್ ಬಳಕೆಯಿಂದ ದೂರವಿರಿ.

ಆಹಾರದಲ್ಲಿ ಒಮೆಗಾ 3, ಮೇದೊಆಮ್ಲಗಳಿರುವ ಅಗಸೆ ಬೀಜ, ಒಣಹಣ್ಣು, ಕುಂಬಳಬೀಜ, ಸೂರ್ಯಕಾಂತಿ ಬೀಜ, ಚಿಯಾ, ಎಳ್ಳು, ಹಸಿರು ಸೊಪ್ಪು ತರಕಾರಿ, ವಿಟಮಿನ್ ಹಾಗೂ ಪ್ರೊಟೀನ್‌ಯುಕ್ತ ಆಹಾರ ಜತೆಗೆ ವೈದ್ಯರ ಸಲಹೆ ಮೇರೆಗೆ ಪೊಲಿಕ್ ಆಸಿಡ್ ಮಾತ್ರೆ ಸೇವಿಸಿ. ಸಕಾರಾತ್ಮಕ ಚಿಂತನೆ, ಧ್ಯಾನ, ಸೂರ್ಯನಮಸ್ಕಾರ ನಿತ್ಯದ ಭಾಗವಾಗಲಿ.

ಸ್ಪಂದನ

ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳ ಬಗ್ಗೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗತಜ್ಞೆ ಡಾ.ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು



ಪೌಷ್ಟಿಕ ಆಹಾರ ಕುರಿತು ಜಾಗೃತಿ ಮೂಡಿಸಲು ಪ್ರತಿ ವರ್ಷ ಸೆಪ್ಟೆಂಬರ್ ಮೊದಲ ವಾರ (1 ರಿಂದ 7ರವರೆಗೆ) ರಾಷ್ಟ್ರೀಯ ಪೌಷ್ಟಿಕ ಆಹಾರ ಸಪ್ತಾಹ ಆಚರಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಮಹಿಳೆಯರ ಆರೋಗ್ಯಕ್ಕೆ ಮತ್ತು ಮಕ್ಕಳ ಬೆಳವಣಿಗೆಗೆ ಪೂರಕವಾದ ಪೌಷ್ಟಿಕ ಆಹಾರ ಹೇಗಿರಬೇಕು ಎಂಬುದನ್ನು ಅರಿಯೋಣ.

ಪೌಷ್ಟಿಕ ಆಹಾರದಲ್ಲಿದೆ ಆರೋಗ್ಯದ ಗುಟ್ಟು!

ಡಾ. ಅನಿತಾ ಕಡಗದ ಕೆಂಭಾವಿ

ನನ್ನಲ್ಲಿ ಚಿಕಿತ್ಸೆಗಾಗಿ ಬರುವ ಅನೇಕ ಮಹಿಳೆಯರಲ್ಲಿ ಸಾಮಾನ್ಯವಾಗಿ ಕಾಡುವ ಸಮಸ್ಯೆಗಳೆಂದರೆ ಮಾಸಿಕ ಋತುಚಕ್ರದಲ್ಲಿ ವ್ಯತ್ಯಾಸ, ಸಣ್ಣ ವಯಸ್ಸಿಗೆ ಅಧಿಕ ತೂಕ, ಅತಿಯಾದ ಋತುಸ್ರಾವ, ಸಪೂರ ದೇಹದವರಿಗೂ ಮಂಡಿನೋವು... ಇಂಥವೇ. ಈ ಪ್ರಕರಣಗಳನ್ನು ವಿಶ್ಲೇಷಿಸಿದಾಗ ತಿಳಿದುಬಂದಿದ್ದು ಒಂದು ಹಾರ್ಮೋನುಗಳ ವ್ಯತ್ಯಾಸ ಮತ್ತು ಬಹುಮುಖ್ಯವಾಗಿ ಜೀವನ ಶೈಲಿ ಹಾಗೂ ಆಹಾರ ಕ್ರಮದಲ್ಲಾದ ಬದಲಾವಣೆ. ಹಾಗಾಗಿ, ಅವರೆಲ್ಲರಿಗೂ ಔಷಧಗಳ ಜೊತೆಗೆ ಪೌಷ್ಟಿಕ ಹಾಗೂ ಸಮತೋಲಿತ ಆಹಾರ ಸೇವಿಸುವ ಸಲಹೆಯನ್ನೂ ನೀಡುತ್ತೇನೆ.

ಇಡೀ ಕುಟುಂಬವನ್ನು ಕಣ್ಣಿನ ರೆಪ್ಪೆಯಂತೆ ಕಾಪಿಡುವ ಹೆಣ್ಣುಮಕ್ಕಳ ಆರೋಗ್ಯದಲ್ಲಿ ದಿನೇ ದಿನೇ ವ್ಯತ್ಯಯ ಕಾಣುತ್ತಿದೆ. ಇದಕ್ಕೆಲ್ಲ ಕಾರಣ ಏನಿರಬಹುದು ಎಂದು ಗಮನಿಸಿದರೆ ಆಹಾರದ ಗುಣ, ಕಾಲ, ಸಂಯೋಜನೆಗಳನ್ನು ನೋಡದೇ ತಿನ್ನುವುದು. ದೇಹಕ್ಕೆ ಒಗ್ಗದ ಜಂಕ್ ಫುಡ್‌ನಂತಹ ತಿಂಡಿ ತಿನಿಸುಗಳನ್ನು ತಿನ್ನುವುದು, ಅಸಮತೋಲಿತ ಆಹಾರ ಸೇವನೆಯಿಂದಾಗಿ ಮಹಿಳೆಯರಲ್ಲಿ ಪಿಸಿಒಡಿ ಹಾಗೂ ಪಿಸಿಒಎಸ್, ಹಾರ್ಮೋನ್‌ನಲ್ಲಿ ವ್ಯತ್ಯಯ, ಕ್ಯಾಲ್ಸಿಯಂ ಕೊರತೆ, ರಕ್ತ ಹೀನತೆ, ಸಂಧಿವಾತ, ಆಮವಾತ, ನರದೌರ್ಬಲ್ಯದಂಥ ಸಮಸ್ಯೆಗಳು ಕಾಣಿಸಿಕೊಂಡಿವೆ. ಸಣ್ಣ ವಯಸ್ಸಿಗೆ ಹಲ್ಲಿನ ಸಮಸ್ಯೆ, ಮಂಡಿ ನೋವು, ಮಧುಮೇಹ, ರಕ್ತದೊತ್ತಡದಂತಹ ಸಮಸ್ಯೆಗಳು ಕಾಡುತ್ತಿವೆ. ಹದಿಹರೆಯದ ಹೆಣ್ಣುಮಕ್ಕಳಲ್ಲಿ ಬೊಜ್ಜು, ಮುಟ್ಟಿನ ತೊಂದರೆಗಳು ಹೆಚ್ಚುತ್ತಿವೆ.

ಇದಕ್ಕೆ ಪರಿಹಾರವೇನು?

ಈ ಅನಾರೋಗ್ಯ ಸಮಸ್ಯೆಗಳು ಕಂಡಾಗ, ತಕ್ಷಣ ಸಿಗುವ ಸಲಹೆಯೇ 'ಡಯಟ್' ಅರ್ಥಾತ್ ಮಿತ ಆಹಾರ ಸೇವನೆ. ಈ ಪದದ ಅರ್ಥವನ್ನು ಸರಿಯಾಗಿ ಗ್ರಹಿಸಬೇಕಿದೆ. ಡಯಟ್ ಎಂದರೆ ಉಪವಾಸ ಅಲ್ಲ ಅಥವಾ ಕೆಲವು ಪದಾರ್ಥಗಳನ್ನು ಬಿಟ್ಟು, ಕೆಲವನ್ನಷ್ಟೇ ಸೇವಿಸುವುದು ಎಂದರ್ಥವಲ್ಲ. 'ಡಯಟ್' ಎಂದರೆ ದೇಹಕ್ಕೆ ನಿತ್ಯ ಅಗತ್ಯವಿರುವಷ್ಟೇ ಆಹಾರ ಸೇವಿಸುವುದು (ಡೈಲಿ ಇನ್‌ಟೇಕ್ ಆಫ್ ಎಸೆನ್‌ಷಿಯಲ್ ಥಿಂಗ್ಸ್) ಎಂಬುದನ್ನು ತಿಳಿದುಕೊಳ್ಳಬೇಕಿದೆ. ಪ್ರತಿದಿನ ದೇಹಕ್ಕೆ ಅಗತ್ಯ ಇರುವಷ್ಟು ಪೌಷ್ಟಿಕ ಆಹಾರವನ್ನು ಸೇವಿಸಲೇಬೇಕು. ಜೊತೆಗೆ ಸಮತೋಲಿತ ಆಹಾರವೂ ಇರಬೇಕು. ಆಗ ಮಾತ್ರ ಶರೀರದ ಬೆಳವಣಿಗೆ, ಚಯಾಪಚಯ ಕ್ರಿಯೆಗಳು ಹಾಗೂ ಅಂಗಾಂಶಗಳ ಸಂರಕ್ಷಣೆಯಾಗುತ್ತದೆ. ಇದರಲ್ಲಿ ನಿರ್ಲಕ್ಷ್ಯ ತೋರಿದರೆ ವಿವಿಧ ಕಾಯಿಲೆಗಳು ಬೆನ್ನುಹತ್ತುವುದು ಗ್ಯಾರಂಟಿ.

ಸಮತೋಲಿತ ಆಹಾರ ಏಳು ಅಂಶಗಳನ್ನು ಹೊಂದಿರಬೇಕು. ಪಿಷ್ಠ, ಪ್ರೊಟೀನ್ಸ್, ಕೊಬ್ಬು, ನಾರಿನ ಅಂಶಗಳು, ಜೀವಸತ್ವಗಳು, ಖನಿಜಗಳು ಹಾಗೂ ನೀರಿನ ಅಂಶಗಳು. ಇದರಲ್ಲೂ ಮಹಿಳೆಯರು ನಾರಿನ ಅಂಶ, ಜೀವಸತ್ವ ಹಾಗೂ ಖನಿಜಾಂಶಯುಕ್ತ ಆಹಾರಗಳನ್ನು ತಪ್ಪಿಸಬಾರದು. ಪಾಲಿಶ್ ಮಾಡದ ಅಕ್ಕಿ ಹಾಗೂ ಸಿರಿಧಾನ್ಯಗಳಲ್ಲಿ ನಾರಿನ ಅಂಶ ಅಧಿಕವಾಗಿರುತ್ತದೆ. ಸಿರಿಧಾನ್ಯಗಳ ಅಡುಗೆ ರುಚಿಸದಿದ್ದರೆ, ಅದನ್ನು ಸ್ವಲ್ಪ ಪ್ರಮಾಣದಲ್ಲಿ ರೂಢಿಸಿಕೊಂಡು ನಿತ್ಯದ ಆಹಾರ ಪದ್ಧತಿಯಲ್ಲಿ ಸೇರಿಸಿಕೊಳ್ಳುವುದು ಉತ್ತಮ. ಏಕೆಂದರೆ ಇವುಗಳಲ್ಲಿ ನಾರಿನ ಅಂಶ ಹೆಚ್ಚಿರುತ್ತದೆ. ಈ ಧಾನ್ಯಗಳು ಸಕ್ಕರೆಯ ಅಂಶವನ್ನು ನಿಧಾನವಾಗಿ ರಕ್ತದಲ್ಲಿ ಬಿಡುವುದರಿಂದ ಸಕ್ಕರೆ ಪ್ರಮಾಣ ಸಮತೋಲನದಲ್ಲಿ ಇರುತ್ತದೆ. ಬೇಗನೇ ಹಸಿವಾಗುವುದಿಲ್ಲ. ಜೊತೆಗೆ ಅಡುಗೆಯಲ್ಲಿ ಹಸುವಿನ ತುಪ್ಪ ಹಾಗೂ ಗಾಣದಿಂದ ತೆಗೆದ ಎಣ್ಣೆಯ ಬಳಕೆಯೂ ಉತ್ತಮ. ನಿತ್ಯದ ಆಹಾರದಲ್ಲಿ ಬೇಳೆ-ಕಾಳುಗಳು, ಮೊಳಕೆಕಾಳು, ಹಾಲು-ಹಣ್ಣು-ತರಕಾರಿ ಕಡ್ಡಾಯವಾಗಿರಲಿ. ಅಭ್ಯಾಸವಿದ್ದರೆ ಗ್ರಿಲ್ಡ್ ಮೊಟ್ಟೆ, ಮಾಂಸ ಬಳಸಬಹುದು. ಇವುಗಳನ್ನು ಸಮತೋಲಿತವಾಗಿ ಬಳಸಿ. ಸಾಂಪ್ರದಾಯಿಕ, ಪ್ರಾದೇಶಿಕ ಮತ್ತು ಋತುವಿಗೆ ಅನುಗುಣವಾಗಿ ಆಹಾರ ಸೇವಿಸುವುದು ಪರಿಣಾಮಕಾರಿ. ಅಂದರೆ ಆಯಾ ಕಾಲದಲ್ಲಿ ದೊರೆಯುವ ಹಣ್ಣು, ತರಕಾರಿಗಳನ್ನು ಉಪಯೋಗಿಸಿ.

ಇವುಗಳನ್ನೂ ಗಮನಿಸಿ..

ಮಹಿಳೆಯರು, ಹಿಂದಿನ ದಿನ ಉಳಿದಿದ್ದ ಆಹಾರ ಪದಾರ್ಥಗಳನ್ನು ತಿನ್ನಬೇಡಿ. ತಾಜಾ ಹಾಗೂ ಪೌಷ್ಟಿಕ ಆಹಾರವನ್ನೇ ಸೇವಿಸಬೇಕು. ಇದನ್ನು ಪಾಲಿಸಿದರೆ ಮುಟ್ಟು ನಿಲ್ಲುವ ಹಂತದಲ್ಲಿ ಹಾಗೂ ವೃದ್ಧಾಪ್ಯದಲ್ಲಿ ಕಂಡು ಬರುವ ಸಮಸ್ಯೆಗಳನ್ನೂ ತಡೆಗಟ್ಟಬಹುದು.

ಮಹಿಳೆಯರು ಈಗ ಮನೆ ಮತ್ತು ಹೊರಗಡೆ ಎರಡೂ ಕಡೆ ದುಡಿಯುತ್ತಾಳೆ. ಸಮಯದ ಅಭಾವದಿಂದಾಗಿ ಮನೆಯಲ್ಲಿ ಅಡುಗೆ ಮಾಡಲಾಗದೇ ಹೊರಗಿನ ಆಹಾರದ ಮೇಲೆ ಅವಲಂಬಿತರಾಗುತ್ತಾರೆ. ಅಷ್ಟೇ ಅಲ್ಲ, ಹೊತ್ತಲ್ಲದ ಹೊತ್ತಲ್ಲಿ ಹೋಟೆಲ್‌ಗಳಲ್ಲಿ ತಿನ್ನುವುದು ಅಭ್ಯಾಸವಾಗುತ್ತದೆ. ಇವೆಲ್ಲ, ಆಹಾರದ ಸಮತೋಲನ ತಪ್ಪಲು ಕಾರಣವಾಗುತ್ತದೆ. ಹಾಗಾಗಿ, ಆದಷ್ಟು ಮನೆಯ ಆಹಾರಕ್ಕೆ ಆದ್ಯತೆ ನೀಡಬೇಕು.

ಆಯುರ್ವೇದದಲ್ಲಿ ಹೇಳಿರುವಂತೆ ಗರ್ಭಿಣಿ ಪರಿಚರ್ಯ ಹಾಗೂ ಸೂತಿಕಾ ಪರಿಚರ್ಯ (ಬಾಣಂತಿ ಆರೈಕೆ) ವಿಧಿಯನ್ನು ನುರಿತ ವೈದ್ಯರ ಸಲಹೆ ಪಡೆದು ಪಾಲಿಸಿದಲ್ಲಿ ತಾಯಿ ಹಾಗೂ ಮಗುವಿನ ಆರೋಗ್ಯ ಉತ್ತಮವಾಗುತ್ತದೆ. ಸಾಂಪ್ರದಾಯಿಕವಾಗಿ ಹೇಳಿದ ಆಹಾರವನ್ನು ಸೇವಿಸಿ ಆರೈಕೆ ಮಾಡಿಕೊಂಡರೆ ಮುಂದೆ ಬರಬಹುದಾದ ಸಂಧಿವಾತ, ಆಮವಾತ, ಬೊಜ್ಜು ಇತ್ಯಾದಿಗಳನ್ನು ತಡೆಗಟ್ಟಬಹುದು. ಅಂಟಿನ ಉಂಡೆ, ಆಳ್ವಿ ಪಾಯಸ, ತುಪ್ಪ, ಬೆಲ್ಲಗಳನ್ನು ಬಾಣಂತಿಯರಿಗೆ ನೀಡುವುದು ಇದೇ ಕಾರಣಕ್ಕೆ. ಗರ್ಭಿಣಿಯರು ಹಾಗೂ ಬಾಣಂತಿಯರು ತೀಕ್ಷ್ಣ, ಖಾರ ಹಾಗೂ ಆಲೂಗಡ್ಡೆ, ಕಡಲೆಯಂಥ ವಾಯು ಆಹಾರಗಳನ್ನು ಹೆಚ್ಚು ಸೇವಿಸಬಾರದು. ಮೊಸರಿಗಿಂತ ಮಜ್ಜಿಗೆ ಸೇವನೆ ಉತ್ತಮ.

ಪೌಷ್ಟಿಕ ಆಹಾರ ಕುರಿತ ಮಾಹಿತಿಗೆ ಸಂಪರ್ಕಿಸಬಹುದು: 9886759399 (ಸಂಪರ್ಕ ಸಮಯ ಸಂಜೆ 6 ರಿಂದ ರಾತ್ರಿ 8ಗಂಟೆವರೆಗೆ)

(ಲೇಖಕರು ಆಯುರ್ವೇದ, ಯೋಗ, ನಿಸರ್ಗೋಪಚಾರ, ಪಂಚಕರ್ಮ ತಜ್ಞರು, ಹುಬ್ಬಳ್ಳಿ)

(ನಿರೂಪಣೆ: **ಸ್ಮಿತಾ ಶಿರೂರ**)

ಆಯುರ್ವೇದದಲ್ಲಿ 'ಆಹಾರ' ಎಂದರೆ...

ಎಲ್ಲ ಅನ್ನ ಹಾಗೂ ಪಾನೀಯಗಳನ್ನು ಆಹಾರವೆಂದು ಪರಿಗಣಿಸಲಾಗುತ್ತದೆ. ಆಹಾರವೇ ಪ್ರಾಣಕ್ಕೆ ಮೂಲ. ಲೋಕದ ಸ್ಥಿತಿ, ಉತ್ಪತ್ತಿ ಹಾಗೂ ವಿನಾಶದ ಕಾರಣ ಆಹಾರವೇ ಆಗಿದೆ. ಆಹಾರ ಪಂಚಭೌತಿಕವಾಗಿದ್ದು ಪಂಚಭೂತಗಳಿಂದ ನಿರ್ಮಿತ ದೇಹವನ್ನು ನಿರ್ವಹಿಸುತ್ತದೆ.

ಆಹಾರವು ಗುರು (ಭಾರದ) ಅಥವಾ ಲಘು (ಹಗುರವಾದ) ಗುಣ ಹೊಂದಿರಬಹುದು. ಆಯುರ್ವೇದದ ಪ್ರಕಾರ ಆಹಾರವು ಬಲವೃದ್ಧಿ ಮಾಡುವ, ತೃಪ್ತಿಕರ, ಆಯಷ್ಕರ, ಉತ್ಸಾಹಕರ, ಸ್ಮೃತಿಕರ, ಓಜಸ್ಕರ ಹಾಗೂ ಅಗ್ನಿವರ್ಧನ ಮಾಡುವ ಗುಣ ಹೊಂದಿರಬೇಕು.ಸೂಕ್ತ ಪ್ರಮಾಣದಲ್ಲಿ ದೇಹದ ಅಗ್ನಿ ಬಲ ಅನುಸಾರವಾಗಿ ಆಹಾರ ಸೇವಿಸಬೇಕು. ಹೊಟ್ಟೆಯ ಎರಡು ಭಾಗ ಅನ್ನ, ಒಂದು ಭಾಗ ಪಾನ, ಒಂದು ಭಾಗ ವಾತ ಸಂಚಲನಕ್ಕೆ ಬಿಡಬೇಕೆಂದಿದ್ದಾರೆ. ಊಟದಲ್ಲಿ ಮೊದಲು ಮಧುರ ರಸ (ಸಿಹಿ- ವಾತ ನಿರ್ವಹಣೆ), ಮಧ್ಯದಲ್ಲಿ ಆಮ್ಲ (ಹುಳಿ)ಮತ್ತು ಲವಣ (ಉಪ್ಪು) ಕೊನೆಯಲ್ಲಿ ಕಟು (ಪಿತ್ತ ನಿವಾರಣೆ), ತಿಕ್ತ (ಕಹಿ) ಹಾಗೂ ಕಷಾಯ ಅಂಶಗಳು ಇದ್ದರೆ ಕಫವನ್ನು ಹತೋಟಿಯಲ್ಲಿಡುತ್ತದೆ. ಆಹಾರ ಪದ್ಧತಿಯ 8 ಪ್ರಕಾರದ ಲಕ್ಷಣಗಳನ್ನು ಆಯುರ್ವೇದ ವಿವರಿಸಿದೆ- 1) ಪ್ರಕೃತಿ (ಶರೀರದ ಗುಣ) 2) ಸಂಸ್ಕಾರ (ಆಹಾರ ತಯಾರಿಕೆ) 3) ಸಂಯೋಜನೆ (ಬೇರೆ ಬೇರೆ ಆಹಾರ ಪದಾರ್ಥಗಳ ಮಿಶ್ರಣ) 4) ರಾಶಿ (ಪ್ರಮಾಣ) 5) ದೇಶ (ಪ್ರದೇಶ) 6) ಕಾಲ (ದಿನ, ರಾತ್ರಿ, ಋತುಗಳಿಗೆ ಅನುಸಾರವಾಗಿ ಆಹಾರ ಸೇವನೆ) 7) ಉಪಯೋಗ (ಭೋಜನ ವಿಧಾನ). 8) ಉಪಭೋಕ್ತಾ (ಅಗ್ನಿಯ ಬಲಕ್ಕೆ ಅನುಸಾರವಾಗಿ)

ಮಕ್ಕಳ ಊಟದ ತಟ್ಟೆಯಲ್ಲಿ ಏನಿರಬೇಕು?



ದೀಪ ಬಿ.ಆರ್.

'ಮಗು ಸರಿಯಾಗಿ ಊಟ ಮಾಡುತ್ತಿಲ್ಲ' ಎಂಬುದು ಬಹುತೇಕ ಅಮ್ಮಂದಿರ ದೂರು. ಮಗು ತನ್ನ ಹೊಟ್ಟೆಗೆ ಎಷ್ಟು ಬೇಕೋ ಅಷ್ಟು ತೆಗೆದುಕೊಳ್ಳುತ್ತಿಲ್ಲವೋ ಅಥವಾ ನಮಗೆ ಬೇಕಾದಷ್ಟು ಮಗು ಊಟ ಮಾಡುತ್ತಿಲ್ಲವೊ ಎಂಬುದನ್ನು ಮೊದಲಿಗೆ ಕಂಡುಹಿಡಿದುಕೊಳ್ಳಬೇಕು. ಮಗುವಿಗೆ ಎಂಥ ಆಹಾರ ಕೊಡಬೇಕು ಎಂಬುದಕ್ಕೆ ನಿರ್ದಿಷ್ಟ ಸಿದ್ಧ ಸೂತ್ರಗಳು ಇರದೇ ಇದ್ದರೂ ಹಲವು ಮಿಥ್ಯೆಗಳಂತೂ ಇವೆ.

ಮಗು ಹುಟ್ಟಿದ ನಂತರ ಆರು ತಿಂಗಳವರೆಗೆ ತಾಯಿಯ ಎದೆ ಹಾಲು ನೀಡುವುದು ಎಷ್ಟು ಮುಖ್ಯವೊ ಅದೇ ರೀತಿ ಮುಂದಿನ ಹಂತಗಳಲ್ಲಿ ಮಗುವಿನ ದೈಹಿಕ ಹಾಗೂ ಮಾನಸಿಕ ಬೆಳವಣಿಗೆಯಲ್ಲಿ ಪೌಷ್ಟಿಕಯುಕ್ತ ಆಹಾರ ನೀಡುವುದು ಅಷ್ಟೆ ಅಗತ್ಯ.



ಮಗುವಿನ ದೇಹಪ್ರಕೃತಿಯನ್ನು ಮೊದಲಿಗೆ ಅರ್ಥ ಮಾಡಿಕೊಳ್ಳುವುದು ಬಹುಮುಖ್ಯ. ಥಂಡಿ ದೇಹದ ಮಗುವಿಗೆ ರಾತ್ರಿ ಹೊತ್ತು ದ್ರಾಕ್ಷಿ, ದಾಳಿಂಬೆ, ಮೊಸರು ತಿನ್ನಿಸುವುದರಿಂದ ಶೀತ ಹೆಚ್ಚಾಗಬಹುದು. ದೇಹಪ್ರಕೃತಿ ಅರಿತು ಬಿಸಿ ಬಿಸಿ ಆಹಾರವನ್ನು ನಿಗದಿತ ಪ್ರಮಾಣದಲ್ಲಿ ನಿಗದಿತ ಸಮಯಕ್ಕೆ ನೀಡುವುದು ವೈಜ್ಞಾನಿಕವಾಗಿ ಸರಿಯಾದುದು. ಕಬ್ಬಿಣದಂಶ, ವಿಟಮಿನ್ ಎ, ಡಿ, ಬಿ12 ಒಮೆಗಾ 3 ಫ್ಯಾಟ್, ಅಯೊಡಿನ್, ಪ್ರೊಟೀನ್ ಮಕ್ಕಳ ದೈಹಿಕ ಹಾಗೂ ಮಿದುಳಿನ ಬೆಳವಣಿಗೆಗೆ ಸಹಕಾರಿ. ಹಾಗಾಗಿ ಇವೆಲ್ಲವೂ ಮಗುವಿಗೆ ಪೂರೈಕೆಯಾಗುತ್ತಿದೆಯೇ ಎಂಬುದನ್ನು ಖಾತ್ರಿಪಡಿಸಿಕೊಳ್ಳಬೇಕು.

ಎಂಥ ಆಹಾರ ಇರಲಿ?

ಆರು ತಿಂಗಳ ಮಗುವಿಗೆ ತಾಯಿಯ ಎದೆ ಹಾಲಿನ ಜತೆಗೆ ಸಿರಿಧಾನ್ಯ, ಮೊಳಕೆ ಕಟ್ಟಿದ ಕಾಳು, ಸೊಪ್ಪು, ತರಕಾರಿಯಂಥ ಕಿಚಡಿ ಅನ್ನವನ್ನು(ದ್ರವರೂಪದಲ್ಲಿ) ಎರಡರಿಂದ ಮೂರು ಹನಿ ತುಪ್ಪ ಬೆರೆಸಿ ನೀಡಬಹುದು. ಒಣ ಬೀಜಗಳಾದ ಕುಂಬಳ, ಅಗಸೆ ಬೀಜಗಳನ್ನು ಕುಟ್ಟಿ ಪುಡಿ ಮಾಡಿ, ಅನ್ನದೊಂದಿಗೆ ಬೆರೆಸಿ ನೀಡಬಹುದು. ಮಗುವಿನ ಜೀರ್ಣಶಕ್ತಿ ಗಮನಿಸಿ, ಮೊಳಕೆ ಕಾಳಿನ ಜೊತೆಗೆ ತಾಜಾ ಹಣ್ಣು ಮತ್ತು ತರಕಾರಿ ಹಾಗೂ ಡೇರಿ ಉತ್ಪನ್ನಗಳು, ಮೊಟ್ಟೆ, ಮೀನು, ಮಾಂಸವನ್ನು ನೀಡಬಹುದು. ಇವೆಲ್ಲವೂ ನಿತ್ಯ ಆಹಾರದ ಭಾಗವಾದರೆ ಮಗುವಿನಲ್ಲಿ ರೋಗನಿರೋಧಕ ಶಕ್ತಿ ಹೆಚ್ಚುತ್ತದೆ. ಪ್ರಿಬಯಾಟಿಕ್ ಮತ್ತು ಪ್ರೋಬಯಾಟಿಕ್ ಆಹಾರ ನಮ್ಮ ಕರುಳಿನ ಆರೋಗ್ಯವನ್ನು ಉತ್ತೇಜಿಸುವುದರಿಂದ ಹಾಲು, ಮೊಸರು, ತುಪ್ಪ ಇವುಗಳ ಬಳಕೆ ಯಥೇಚ್ಛವಾಗಿರಲಿ.

ಶಾಲೆಗೆ ಹೋಗುವ ಮಕ್ಕಳಿಗೆ ಕಾರ್ಬೋಹೈಡ್ರೇಟ್ಸ್ , ಪ್ರೊಟೀನ್ಸ್, ಜೀವಸತ್ವಗಳು ಮತ್ತು ಖನಿಜಗಳು, ಕ್ಯಾಲ್ಸಿಯಂ, ಕಬ್ಬಿಣದ ಅಂಶ, ಒಮೆಗಾ-3 ಕೊಬ್ಬಿನಾಮ್ಲ, ನಾರಿನಂಶ ಮತ್ತು ನೀರು ಹೀಗೆ ಸಕಲವೂ ಸೇರಿದ ಸಮೃದ್ಧ ಆಹಾರ ನೀಡಬೇಕು.

ರುಚಿಯ ಪ್ರಾಧಾನ್ಯತೆಯಲ್ಲಿ ಉಪ್ಪಿಗೆ ಮಹತ್ವವಿದ್ದರೂ ಒಂದರಿಂದ ಮೂರು ವರ್ಷದೊಳಗಿನ ಮಕ್ಕಳಿಗೆ ದಿನಕ್ಕೆ ಒಂದು ಗ್ರಾಂ ಉಪ್ಪು ನೀಡಬಹುದು . 4 ರಿಂದ 6 ವರ್ಷ ವಯಸ್ಸಿನ ಮಕ್ಕಳಿಗೆ ದಿನಕ್ಕೆ ಎರಡು ಗ್ರಾಂ ಉಪ್ಪನ್ನು ನೀಡಬಹುದು. ಉಪ್ಪಿನ ಅತಿ ಬಳಕೆಯಿಂದ ಉಪ್ಪಿನಲ್ಲಿರುವ ಸೋಡಿಯಂ ಅಂಶ ಬೆಳೆಯುವ ಮಕ್ಕಳ ಮೂತ್ರಪಿಂಡದ ಮೇಲೆ ಹೆಚ್ಚು ಪರಿಣಾಮ ಬೀರಬಹುದು. ಹೆಚ್ಚುವರಿ ಸೋಡಿಯಂ ಅನ್ನು ಮಗುವಿನ ಮೂತ್ರಪಿಂಡ ಸಂಸ್ಕರಿಸುವುದಿಲ್ಲ. . ಅಗತ್ಯಕ್ಕಿಂತ ಹೆಚ್ಚಿನ ಸಕ್ಕರೆ ನೀಡಿದರೆ ಮಕ್ಕಳಿಗೆ ಎದೆಹಾಲು ರುಚಿಸುವುದಿಲ್ಲ.

ಇಷ್ಟಪಡುವ ಆಹಾರ ಕೊಡಿ

ಮಗುವಿನ ಪಚನಶಕ್ತಿ ಕಡಿಮೆ ಇರುವುದರಿಂದ ನಾರಿನಾಂಶವಿರುವ ಆಹಾರವನ್ನು ಹೆಚ್ಚು ನೀಡಬೇಕು. ಅದರಲ್ಲಿ ಎರಡು ಮೂರು ಗಂಟೆಗೊಮ್ಮೆ ಮಗು ಇಷ್ಟಪಡುವ ಆಹಾರವನ್ನು ಪ್ರೀತಿಯಿಂದ ತಿನಿಸಿ. ಮೊಳಕೆ ಬರಿಸಿದ, ಹಸಿರು ಬಟಾಣಿ, ಹೆಸರು ಕಾಳು, ಹುರಳಿ ಕಾಳುಗಳನ್ನು ಒಣಗಿಸಿ ಚೆನ್ನಾಗಿ ಮಿಕ್ಸಿಗೆ ಹಾಕಿ ಪುಡಿ ಮಾಡಿ, ಅದನ್ನು ಹಾಲಿನಲ್ಲಿ ಬೆರೆಸಿ ಅದಕ್ಕೆ ತುಸು ಬೆಲ್ಲ ಹಾಗೂ ತುಪ್ಪ ಸೇರಿಸಿ ತಿನ್ನಿಸಬಹುದು.

ಸಂಸ್ಕರಿತ 'ರೆಡಿ ಟು ಈಟ್' ರಾಗಿ ಮಣ್ಣಿ, ಜೋಳ ಹಾಗೂ ಅಕ್ಕಿ ಮಣ್ಣಿಗಳು ಆರೋಗ್ಯಕ್ಕೆ ಅಷ್ಟೇನೂ ಒಳ್ಳೆಯದಲ್ಲ. ಅವುಗಳಿಂದ ಮಕ್ಕಳನ್ನು ದೂರವಿಡುವುದು ಒಳ್ಳೆಯದು. ಬಿಸಿ ಬಿಸಿಯಾಗಿ ಆ ಕೂಡಲೇ ಮಾಡಿದ ಆಹಾರವನ್ನೇ ತಿನ್ನಿಸಿ.

ಹಾಗೆಂದ ಮಾತ್ರಕ್ಕೆ ಮಕ್ಕಳು ಇಷ್ಟಪಡುತ್ತಾರೆಂದು ಚಿಪ್ಸ್, ಪಿಜ್ಜಾ ಬರ್ಗರ್, ಪ್ಯಾಕ್ಡ್ ಆಹಾರ ನೀಡಬೇಡಿ. ಇಂಥ ಆಹಾರಗಳಲ್ಲಿ ಹೆಚ್ಚಿನ ಪ್ರಮಾಣದ ಮೈದಾ, ಕೃತಕ ಸಿಹಿಕಾರಕ ಅಂಶ, ಸೋಡಿಯಂ ಭರಿತ ಉಪ್ಪು ಇದ್ದು , ಆರೋಗ್ಯಕ್ಕೆ ಹಾನಿ ಉಂಟುಮಾಡಬಹುದು. ಆರಂಭದಿಂದಲೇ ಮಕ್ಕಳನ್ನು ಇವುಗಳಿಂದ ದೂರವಿರಿಸಿ.

ಆಹಾರದ ಅಲರ್ಜಿ

ಹತ್ತು ಮಕ್ಕಳಲ್ಲಿ ಒಂದು ಮಗುವಿಗಾದರೂ ಆಹಾರದ ಅಲರ್ಜಿ ಇರುತ್ತದೆ. ಕೆಲವು ಆಹಾರಗಳು ಕೆಲವು ಮಕ್ಕಳ ದೇಹಪ್ರಕೃತಿಗೆ ಒಗ್ಗದಿರಬಹುದು. ಉದಾಹರಣೆಗೆ ಕಡಲೆಕಾಯಿ ಬೀಜ, ಗೋಡಂಬಿ, ಬಾದಾಮಿ, ಪಿಸ್ತಾ, ಹಸುವಿನ ಹಾಲು, ಸಮುದ್ರದ ಮೀನು, ಮೊಟ್ಟೆ, ಗೋಧಿ ಮತ್ತು ಅದರ ಉತ್ಪನ್ನಗಳು ಇತ್ಯಾದಿ . ಇಂಥ ಆಹಾರವನ್ನು ಕೊಟ್ಟಾಗ ವ್ಯತಿರಿಕ್ತ ಪರಿಣಾಮ ಉಂಟಾಗುವ ಸಂಭವ ಇರುತ್ತದೆ. ಬೇಧಿ, ವಾಂತಿ, ಮೈಮೇಲೆ ಗುಳ್ಳೆಗಳು, ಮೂಗು ಸೋರಿಕೆ ಲಕ್ಷಣ ಕಾಣಿಸಿಕೊಳ್ಳಬಹುದು.

ಪ್ರಾದೇಶಿಕ ಆಹಾರಕ್ಕೆ ಆದ್ಯತೆ

ಸ್ಥಳೀಯ ಆಹಾರಕ್ಕೆ ಪ್ರಾಮುಖ್ಯ ನೀಡಬೇಕು. ಆಯಾ ಪ್ರದೇಶದ ಆಹಾರ, ಹಣ್ಣು, ತರಕಾರಿಗಳನ್ನು ಮಕ್ಕಳಿಗೆ ಹೆಚ್ಚಾಗಿ ಕೊಡಿ. ತರಕಾರಿಗಳನ್ನು ಚೆನ್ನಾಗಿ ಬೇಯಿಸಿ ಕೊಡಬೇಕು. ಜೋಳ ತಿನ್ನುವ ಮಗುವಿಗೆ ರಾಗಿ ಹಿಡಿಸದೇ ಹೋಗಬಹುದು. ಗೋಧಿ ತಿನ್ನುವ ಮಗುವಿಗೆ ಕುಸುವಲಕ್ಕಿ ಹಿಡಿಸದಿರಬಹುದು. ಹಾಗಾಗಿ ಆಯಾ ಪ್ರದೇಶ ಹಾಗೂ ಕುಟುಂಬದಲ್ಲಿ ಬಳಕೆಯಾಗುವ ಆಹಾರ ಪದಾರ್ಥಗಳಿಗೆ ಪ್ರಾಮುಖ್ಯ ನೀಡುವುದು ಒಳಿತು.

ಹೀಗಿರಲಿ ಊಟದ ವಿಧಾನ

ಏನು ತಿನ್ನುತ್ತಾರೆ ಎನ್ನುವುದು ಎಷ್ಟು ಮುಖ್ಯವೋ; ಎಷ್ಟು ತಿನ್ನುತ್ತಾರೆ, ಯಾವ ರೀತಿ ತಿನ್ನುತ್ತಾರೆ ಎಂಬುದು ಅಷ್ಟೆ ಮುಖ್ಯ. ತಿನ್ನುವ ವಿಚಾರದಲ್ಲಿ ಪ್ರತಿ ಮಗುವು ಭಿನ್ನ. ಒಂದು ಮಗು ಒಂದು ದೋಸೆ ತಿಂದರೆ, ಮತ್ತೊಂದು ಮಗು ಎರಡು ಚಪಾತಿ ತಿನ್ನಬಹುದು. ಕೆಲವು ಮಕ್ಕಳು ಗಂಟೆಗೊಮ್ಮೆ ತಿನ್ನುವ ರೂಢಿ ಮಾಡಿಕೊಂಡಿರುತ್ತವೆ. ಪರಸ್ಪರ ಹೋಲಿಕೆ ಮಾಡದೇ ಮಕ್ಕಳಿಗೆ ಉಣಬಡಿಸುವ ಕೆಲಸವಾಗಲಿ. ಒಂದೇ ಸಲ ಎರಡು ಚಪಾತಿ ಹಾಕಿ ತಿನ್ನು ತಿನ್ನು ಎಂದು ಒತ್ತಡ ಹಾಕಬೇಡಿ. ಚಪಾತಿಯನ್ನು ವಿಭಿನ್ನವಾಗಿ ಸಿದ್ಧಪಡಿಸಿ ತಿನಿಸುವ ಕಡೆಗೆ ಗಮನ ಕೊಡಿ.

ಮಕ್ಕಳ ಹೆಚ್ಚಿನ ಸಮಯ ಟಿ.ವಿ, ಕಂಪ್ಯೂಟರ್, ವಿಡಿಯೊಗೇಮ್, ಮೊಬೈಲ್, ಐಪ್ಯಾಡ್‌ಗಳಲ್ಲಿ ವ್ಯರ್ಥವಾಗುವುದರಿಂದ ದೈಹಿಕ ಕಸರತ್ತು ಕಡಿಮೆಯಾಗುತ್ತಿದೆ. ಏನನ್ನೇ ತಿಂದರೂ ಅರಗಿಸಿಕೊಳ್ಳಲು ಮಕ್ಕಳು ಆಟವಾಡಬೇಕು. ಇದರಿಂದ ಮಕ್ಕಳ ಮೂಳೆ ಮತ್ತು ಸ್ನಾಯುಗಳು ಬಲವಾಗುತ್ತವೆ.

ಮಾಂಸಾಹಾರ ಬಳಕೆ ಹೇಗೆ?

ಮಕ್ಕಳಿಗೆ ಮಾಂಸಾಹಾರ ನೀಡುವ ವಿಚಾರದಲ್ಲಿ ಕೆಲವು ನಂಬಿಕೆ ಈಗಲೂ ಇದ್ದು, ಎರಡು ವರ್ಷ ತುಂಬುವವರೆಗೂ ನೀಡುವುದಿಲ್ಲ. ಆದರೆ, ಇದಕ್ಕೆ ಯಾವುದೇ ಸಿದ್ಧ ಸೂತ್ರಗಳಿಲ್ಲ. ಆರು ತಿಂಗಳು ಪೂರ್ಣಗೊಂಡ ನಂತರ ಬೇಯಿಸಿದ ಮೊಟ್ಟೆಯನ್ನು ನೀಡಬಹುದು. ಏಳು ತಿಂಗಳು ಪೂರ್ಣಗೊಂಡ ಮಗುವಿಗೆ ಚೆನ್ನಾಗಿ ತೊಳೆದು, ಬೇಯಿಸಿದ ಕೋಳಿ ಮಾಂಸ ಹಾಗೂ ಕುರಿಮಾಂಸದ ರಸವನ್ನು ಮೂರು ಟೇಬಲ್ ಸ್ಪೂನ್‌ಗಳಷ್ಟು ನೀಡಬಹುದು. ಮಗು ಬೆಳದಂತೆ ಇದರ ಪ್ರಮಾಣವನ್ನು ಹೆಚ್ಚಿಸಬಹುದು. ಎಂಟು ತಿಂಗಳ ನಂತರ ಬೇಯಿಸಿದ ಮಾಂಸದ ತುಂಡುಗಳನ್ನು ಬೇಯಿಸಿದ ತರಕಾರಿಗಳೊಂದಿಗೆ ಅರ್ಧಕಪ್ ದಿನಕ್ಕೆ ಒಂದು ಬಾರಿ ನೀಡಬಹುದು. ಯಾವುದೇ ಕಾರಣಕ್ಕೂ ಸಂಸ್ಕರಿಸಿದ ಮಾಂಸ ಅಥವಾ ಹಸಿ ಮಾಂಸವನ್ನು ಕೊಡಬೇಡಿ.

ಪೂರಕ ವಾತಾವರಣ ಸೃಷ್ಟಿಸಿ

ತುತ್ತು ಅನ್ನವನ್ನು ಸಂತೋಷದಿಂದ ತಿನ್ನಲು ಮಗುವಿಗೆ ಸೂಕ್ತವಾದ ವಾತಾವರಣ ರೂಪಿಸಿ. ಊಟ ಮಾಡಲು ಮಗು ಸತಾಯಿಸಬಹುದು. 'ಹಠ ಮಾಡುತ್ತಾರೆ, ತಿನ್ನವುದೇ ಇಲ್ಲ' ಎಂಬ ದೂರು ನಿಮ್ಮದಿರಬಹುದು. ಅದೆಲ್ಲ ಪಕ್ಕಕ್ಕಿಡಿ. ಮಕ್ಕಳು ಹಸಿವಾದಾಗ ಖುಷಿಯಿಂದ ಊಟ ಮಾಡುತ್ತಾರೆ. ಅವರಿಗೆ ಊಟ ಮಾಡುವುದು ಖುಷಿಯ ಕೆಲಸವಾಗಬೇಕೇ ಹೊರತು, ಹಿಂಸೆ ನೀಡುವ ಕೆಲಸ ಎನಿಸದಂತೆ ನೋಡಿಕೊಳ್ಳಬೇಕು.

ವೈವಿಧ್ಯಮಯ ತರಕಾರಿ, ಹಣ್ಣು, ಸೊಪ್ಪುಗಳನ್ನು ಮಕ್ಕಳ ಮುಂದೆ ಇಡಿ. ಪದೇ ಪದೇ ಕಣ್ಣಿಗೆ ಬೀಳುವ ಆಹಾರಕ್ಕೆ ಆಕರ್ಷಿತರಾಗುವಂತೆ ಮಾಡಿ. ಆಗ ಮಕ್ಕಳು ತಾವಾಗೆ ತಿನ್ನುತ್ತಾರೆ. ವೈವಿಧ್ಯ ಊಟ ನೀಡುವುದರಲ್ಲಿ ಪೋಷಕರ ಜಾಣತನವೂ ಅಡಗಿದೆ.

(ಲೇಖಕರು: ಮಹಿಳಾ ಮತ್ತು ಮಕ್ಕಳ ಆಹಾರತಜ್ಞೆ, ಸ್ತನ್ಯಪಾನ ಮಾರ್ಗದರ್ಶಿ, ಮೈಸೂರು)

'ಕೈ' ವಿರುದ್ಧ 'ರಣಕಹಳೆ' ಬಿಜೆಪಿ–ಜೆಡಿಎಸ್ ಮೈತ್ರಿ ಖಚಿತ

ಒಡನೆ ಪುಟದಿಂದ

ಬೆಂಗಳೂರಿನಲ್ಲಿ ಸರ್ಕಾರಿ ಹುದ್ದೆಗಳನ್ನು ಹರಾಜಿಗಿಟ್ಟಿದ್ದಾರೆ. ಒಂದು ಹುದ್ದೆಗೆ ಮೊದಲು ₹8 ಕೋಟಿ ಇತ್ತು. 3 ತಿಂಗಳ ಬಳಿಕ ಅದೇ ಹುದ್ದೆಯನ್ನು ₹15 ಕೋಟಿಗೆ ಬಿಕರಿ ಮಾಡಿದ್ದಾರೆ. ಶಾಸಕರ ಭವನ, ಕುಮಾರಕೃಪಾ ಅತಿಥಿಗೃಹ ವರ್ಗಾವಣೆ ದಂಧೆಯ ಅಡ್ಡೆಗಳಾಗಿ ಪರಿವರ್ತನೆ ಆಗಿವೆ ಎಂದು ದೂರಿದರು.

ಉತ್ಸಾಹದಲ್ಲಿ ನಾಯಕರು: ವಿಧಾನ ಸಭಾ ಸೋಲಿನಿಂದ ಕಂಗೆಟ್ಟಿದ್ದ ಬಿಜೆಪಿ ನಾಯಕರಲ್ಲಿ ಶುಕ್ರವಾರ ಹೋರಾಟದ ಉತ್ಸಾಹ ಕಂಡುಬಂದಿತು. ಸರ್ಕಾರದ ವಿರುದ್ಧ ನಿರಂತರ ಹೋರಾಟ ನಡೆಸಿ ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಸೋಲಿಸುವುದಾಗಿ ನಾಯಕರು ಸಭೆಯಲ್ಲಿ ವೀರಾವೇಶದಿಂದ ನುಡಿದರು.

ಹಿಂದೂಗಳ ಬಗ್ಗೆ ದ್ವೇಷ ಏಕೆ?: ಕಾಂಗ್ರೆಸ್‌ಗೆ ಸನಾತನ ಧರ್ಮ, ಹಿಂದೂ ಧರ್ಮದ ಬಗ್ಗೆ ದ್ವೇಷ ಏಕೆ? ಡಿಎಂಕೆ ಪಕ್ಷದ ಉದಯನಿಧಿ ಸ್ಟಾಲಿನ್ ಒಬ್ಬ ಅವಿವೇಕಿ. ತಿಳಿವಳಿಕೆ ಇಲ್ಲದ ಅಲ್ಪಮತಿ. ಈತನ ಹೇಳಿಕೆ ಬೆಂಬಲಿಸಿ ರಾಜ್ಯದ ಕಾಂಗ್ರೆಸ್ ನಾಯಕರೂ ಟೀಕಿಸುತ್ತಿದ್ದಾರೆ. ದುರಾದೃಷ್ಟವಶಾತ್ ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ 10 ವರ್ಷಗಳಲ್ಲಿ ಹಿಂದೂಗಳು ಯಾರೂ ರಾಮ, ಕೃಷ್ಣ, ಶಿವ, ಶಂಕರ, ಶಿವಕುಮಾರ, ಸಿದ್ದರಾಮಯ್ಯ ಎಂದು ಹೆಸರು ಇಟ್ಟುಕೊಳ್ಳದ ಸ್ಥಿತಿ ನಿರ್ಮಾಣವಾಗುತ್ತದೆ ಎಂದು ಶಾಸಕ ಆರ್.ಅಶೋಕ ಹೇಳಿದರು.

> **ಸರ್ಕಾರ ಎಷ್ಟು ಹೆಸರು ಕೆಡಿಸಿಕೊಂಡಿದೆ ಎಂದರೆ, ಈಗ ವಿಧಾನಸಭೆ ಚುನಾವಣೆ ನಡೆದರೆ ಕಾಂಗ್ರೆಸ್ ಮೂರನೇ ಸ್ಥಾನಕ್ಕೆ ಹೋಗುವುದು ನಿಶ್ಚಿತ**
> **ಗೋವಿಂದ ಕಾರಜೋಳ**, ಮಾಜಿ ಸಚಿವ

> **ಹಿಂದೂಗಳ ಬಗ್ಗೆ ದ್ವೇಷ ಭಾವನೆ ಹೊಂದಿರುವ ನೀವು ಸಿದ್ದರಾಮಯ್ಯ, ಶಿವಕುಮಾರ, ಪರಮೇಶ್ವರ, ಚಂದ್ರಶೇಖರ ಎಂದು ಹೆಸರು ಏಕೆ ಇಟ್ಟುಕೊಂಡಿದ್ದೀರಿ. ನಿಮ್ಮ ಹೆಸರುಗಳನ್ನು ಕೋಳಿ, ನಾಯಿ, ಕತ್ತೆ ಎಂದು ಬದಲಿಸಿಕೊಳ್ಳಿ**
> **ಎಸ್.ಆರ್.ವಿಶ್ವನಾಥ್**, ಶಾಸಕ

ಒಡನೆ ಪುಟದಿಂದ

ಇತ್ತೀಚೆಗೆ ದೆಹಲಿಗೆ ತೆರಳಿದ್ದ ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರೊಂದಿಗೆ ಮಾತುಕತೆ ನಡೆಸಿದ್ದರು. ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ದೂರವಾಣಿ ಮೂಲಕ ಚರ್ಚಿಸಿದ್ದರು. ಆ ಬಳಿಕ ಮೈತ್ರಿಯ ನಿರ್ಧಾರವನ್ನು ಅಂತಿಮಗೊಳಿಸಲಾಗಿದೆ ಎಂದು ಜೆಡಿಎಸ್ ಮೂಲಗಳು ತಿಳಿಸಿವೆ.

ಆರಂಭಿಕ ಹಂತದಲ್ಲಿ ಬಿಜೆಪಿ ಜತೆಗಿನ ಮೈತ್ರಿ ಕುರಿತು ಜೆಡಿಎಸ್ ನಾಯಕರಲ್ಲಿ ಒಮ್ಮತವಿರಲಿಲ್ಲ. ದೆಹಲಿಯಿಂದ ಹಿಂದಿರುಗಿದ್ದ ಕುಮಾರಸ್ವಾಮಿ ಅವರು ದೇವೇಗೌಡರ ಬಳಿ ಈ ವಿಚಾರವನ್ನು ಚರ್ಚಿಸಿದ್ದರು. ಅವರೂ ಆರಂಭದಲ್ಲಿ ಒಲವು ತೋರಿರಲಿಲ್ಲ. ನಂತರದಲ್ಲಿ ಪಕ್ಷದ ಪ್ರಮುಖ ಮುಖಂಡರ ಜತೆ ಹಲವು ಸುತ್ತಿನ ಚರ್ಚೆ ನಡೆಸಿದ್ದರು. ಬಿಜೆಪಿ ಜತೆಗಿನ ಮೈತ್ರಿಯಿಂದ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವನ್ನು ಮಣಿಸಬಹುದು ಎಂಬ ಅಭಿಪ್ರಾಯ ಆಧರಿಸಿ, ಮೈತ್ರಿಗೆ ಒಪ್ಪಿಗೆ ಸೂಚಿಸಿದ್ದಾರೆ ಎಂದು ಮೂಲಗಳು ಹೇಳಿವೆ.

28 ಕ್ಷೇತ್ರಗಳಲ್ಲೂ ಗೆಲುವಿನ ಗುರಿ: ಬಿಜೆಪಿ– ಜೆಡಿಎಸ್ ಮೈತ್ರಿಕೂಟದಿಂದ ರಾಜ್ಯದ ಎಲ್ಲ 28 ಲೋಕಸಭಾ ಕ್ಷೇತ್ರಗಳಲ್ಲೂ ಗೆಲುವು ಸಾಧಿಸಲು ಎರಡೂ ಪಕ್ಷಗಳ ನಾಯಕರು ಗುರಿ ಹೊಂದಿದ್ದಾರೆ. ಲೋಕಸಭೆ ಚುನಾವಣೆ ಬಳಿಕವೂ ದೀರ್ಘಾವಧಿಗೆ ಮೈತ್ರಿ ಮುಂದುವರಿಸಲು ನಿರ್ಧರಿಸಿದ್ದಾರೆ ಎಂದು ಗೊತ್ತಾಗಿದೆ.

'ಎನ್‌ಡಿಎ ಮೈತ್ರಿಕೂಟದಲ್ಲಿ ಜೆಡಿಎಸ್ ಪಕ್ಷಕ್ಕೆ ಗೌರವಯುತ ಸ್ಥಾನ ನೀಡುವ ಭರವಸೆ ಬಿಜೆಪಿ ವರಿಷ್ಠರಿಂದ ಸಿಕ್ಕಿದೆ. ಈ ಕಾರಣಕ್ಕಾಗಿಯೇ ಎನ್‌ಡಿಎ ಮೈತ್ರಿಕೂಟದ ಭಾಗವಾಗಲು ಒಪ್ಪಿಗೆ ಸೂಚಿಸಲಾಗಿದೆ' ಎಂದು ಕುಮಾರಸ್ವಾಮಿ ಅವರ ಆಪ್ತರು ತಿಳಿಸಿದ್ದಾರೆ.

ಇದೇ ಭಾನುವಾರ ನಗರದ ಅರಮನೆ ಮೈದಾನದಲ್ಲಿ ಜೆಡಿಎಸ್ ಮುಖಂಡರು ಮತ್ತು ಕಾರ್ಯಕರ್ತರ ಸಭೆ ಆಯೋಜಿಸಲಾಗಿದೆ. ಬಿಜೆಪಿ ಜತೆಗಿನ ಮೈತ್ರಿ ಕುರಿತು ಅದೇ ಸಭೆಯಲ್ಲಿ ಜೆಡಿಎಸ್ ಪ್ರಮುಖರು ನಿರ್ಧಾರ ಪ್ರಕಟಿಸುವ ಸಾಧ್ಯತೆ ಇದೆ.

ಜೆಡಿಎಸ್‌ಗೆ ನಾಲ್ಕು ಕ್ಷೇತ್ರ?

ಒಡನೆ ಪುಟದಿಂದ

ಹಾಸನದಲ್ಲಿ, ಮಂಡ್ಯದ ಬದಲು ಚಿಕ್ಕಬಳ್ಳಾಪುರವನ್ನು ಜೆಡಿಎಸ್ ಕೇಳುವ ಸಾಧ್ಯತೆ ಇದೆ ಎನ್ನಲಾಗುತ್ತಿದೆ.

2019ರ ಲೋಕಸಭಾ ಚುನಾವಣೆಯಲ್ಲಿ ಆಗ ಸಮ್ಮಿಶ್ರ ಸರ್ಕಾರದ ಭಾಗವಾಗಿದ್ದ ಜೆಡಿಎಸ್– ಕಾಂಗ್ರೆಸ್ ಮೈತ್ರಿ ಮಾಡಿಕೊಂಡಿದ್ದವು. ಆಗಲೂ ಜೆಡಿಎಸ್‌ಗೆ ನಾಲ್ಕು ಕ್ಷೇತ್ರ ಬಿಟ್ಟುಕೊಡಲಾಗಿತ್ತು. ಜೆಡಿಎಸ್ ಮತ್ತು ಕಾಂಗ್ರೆಸ್ ತಲಾ ಒಂದು ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿದ್ದವು.

ಪ್ರಜ್ವಲ್ ಅರ್ಜಿ: ತೀರ್ಪು 11ಕ್ಕೆ?

ಬೆಂಗಳೂರು: ಚುನಾವಣೆಯಲ್ಲಿ ಅಕ್ರಮ ಎಸಗಿದ ಆರೋಪದಡಿ ಹಾಸನ ಲೋಕಸಭಾ ಕ್ಷೇತ್ರದ ಸಂಸದ ಸ್ಥಾನದಿಂದ ಆಯ್ಕೆಯಾಗಿರುವುದನ್ನು ಅಸಿಂಧುಗೊಳಿಸಿ ಹೊರಡಿಸಿರುವ ಆದೇಶಕ್ಕೆ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸುವವರೆಗೂ ತಡೆ ನೀಡುವಂತೆ ಕೋರಿ ಪ್ರಜ್ವಲ್ ರೇವಣ್ಣ ಸಲ್ಲಿಸಿರುವ ಮಧ್ಯಂತರ ಅರ್ಜಿ ವಿಚಾರಣೆ ಪೂರ್ಣಗೊಳಿಸಿರುವ ಹೈಕೋರ್ಟ್ ತೀರ್ಪು ಕಾಯ್ದಿರಿಸಿದೆ.

ಈ ಕುರಿತ ವಾದ-ಪ್ರತಿವಾದ ಆಲಿಸಿದ ನ್ಯಾಯಮೂರ್ತಿ ಕೆ.ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠ ತೀರ್ಪು ಕಾಯ್ದಿರಿಸಿ, ಇದೇ 11 ಅಥವಾ 12ಕ್ಕೆ ತೀರ್ಪು ಪ್ರಕಟಿಸಲಾಗುವುದು ಎಂದರು. ಪ್ರಜ್ವಲ್ ಆಯ್ಕೆ ಅಸಿಂಧುಗೊಳಿಸಿ ನ್ಯಾಯಮೂರ್ತಿ ಕೆ.ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಇದೇ 1ರಂದು ತೀರ್ಪು ನೀಡಿತ್ತು.

ವ್ಯಂಗ್ಯಚಿತ್ರಕಾರ ನೈನನ್ ನಿಧನ



ಮೈಸೂರು: ಖ್ಯಾತ ವ್ಯಂಗ್ಯಚಿತ್ರಕಾರ ಅಜಿತ್ ನೈನನ್ (68) ಶುಕ್ರವಾರ ಹೃದಯಾಘಾತದಿಂದ ಇಲ್ಲಿ ನಿಧನರಾದರು. ಅವರಿಗೆ ಪತ್ನಿ, ಇಬ್ಬರು ಪುತ್ರಿಯರಿದ್ದಾರೆ.

'ಇಂಡಿಯಾ ಟುಡೆ', 'ಔಟ್ ಲುಕ್', 'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆಗಳಿಗೆ ವ್ಯಂಗ್ಯಚಿತ್ರಕಾರರಾಗಿ ಕೆಲಸ ಮಾಡಿದ್ದರು. 'ಇಂಡಿಯಾ ಟುಡೆ' ಪತ್ರಿಕೆ ಬಳಗದ 'ಟಾರ್ಗೆಟ್' ಎಂಬ ಮಕ್ಕಳ ಪತ್ರಿಕೆಯಲ್ಲಿ 'ಡಿಟೆಕ್ಟಿವ್ ಮೂಛುವಾಲಾ' ಎಂಬ ಸರಣಿ ವ್ಯಂಗ್ಯಚಿತ್ರಗಳನ್ನು ಪ್ರಕಟಿಸಿದ್ದರು. ಬಳಿಕ 'ಟೈಮ್ಸ್ ಆಫ್ ಇಂಡಿಯಾ' ಪತ್ರಿಕೆಗೆ ವ್ಯಂಗ್ಯಚಿತ್ರ ಬರೆಯುತ್ತಿದ್ದರು.

ದೆಹಲಿಯಲ್ಲಿದ್ದ ಅವರು, ಎರಡು ವರ್ಷಗಳಿಂದ ಮೈಸೂರಿನಲ್ಲಿ ವಾಸಿಸುತ್ತಿದ್ದರು. ಅಂತ್ಯಕ್ರಿಯೆ ಭಾನುವಾರ (ಸೆ.10) ಮಧ್ಯಾಹ್ನ ನಡೆಯಲಿದೆ.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ.
ಬೆಂಗಳೂರು

ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ (GTTC)
ರಾಜಾಜಿನಗರ ಕೈಗಾರಿಕಾ ವಸಾಹತು, ಬೆಂಗಳೂರು–560 010.
ದೂ.ಸಂ.: 080–23507448, ಇ–ಮೇಲ್: gttcadmn2019@gmail.com
ಸಂಖ್ಯೆ: ಜಿಟಿಟಿಸಿ/ಅಡ್ಮಿನ್/ಪ್ರಾ/ಗು/7/2023–24 ದಿನಾಂಕ: 09.09.2023

ಗುತ್ತಿಗೆ ಆಧಾರದ ಮೇಲೆ ಪ್ರಾಂಶುಪಾಲರ ಹುದ್ದೆಗಳಿಗೆ ನೇಮಕಾತಿ ಮಾಡಲು ಪ್ರಕಟಣೆ

ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದ (1)ದಾಂಡೇಲಿ, (2)ಮಂಗಳೂರು, (3)ಮದ್ದೂರು ಮತ್ತು (4)ಚಿತ್ರದುರ್ಗ ಕೇಂದ್ರಗಳಲ್ಲಿನ ಪ್ರಾಂಶುಪಾಲರ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಲು ಬಿ.ಇ ಪದವಿ ಮತ್ತು ಎಂ.ಟೆಕ್ ಸ್ನಾತಕೋತ್ತರ ಪದವಿ ವಿದ್ಯಾರ್ಹತೆ ಹೊಂದಿರುವ ಆಕಾಂಕ್ಷಿತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಹುದ್ದೆಗಳ ಸಂಖ್ಯೆ, ಅರ್ಹತೆ, ವಿದ್ಯಾರ್ಹತೆ, ಅರ್ಜಿ ನಮೂನೆ ಮತ್ತು ಇತರ ವಿವರಗಳನ್ನು ಜಿಟಿಟಿಸಿ ಜಾಲತಾಣ **https://gttc.karnataka.gov.in** ದಲ್ಲಿ ಪ್ರಕಟಿಸಲಾಗಿದೆ. ಆಸಕ್ತರಾದ ಅಭ್ಯರ್ಥಿಗಳು, ಅರ್ಜಿ ನಮೂನೆ ಮತ್ತು ಇತರ ವಿವರಗಳನ್ನು ಸದರಿ ಜಾಲತಾಣದಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಭರ್ತಿ ಮಾಡಿದ ಅರ್ಜಿಗಳನ್ನು ಸಂಬಂಧಿಸಿದ ದಾಖಲೆಗಳೊಂದಿಗೆ ವ್ಯವಸ್ಥಾಪಕ ನಿರ್ದೇಶಕರು, ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ, ರಾಜಾಜಿನಗರ ಕೈಗಾರಿಕಾ ವಸಾಹತು, ಬೆಂಗಳೂರು–560010 ಇವರಿಗೆ, ಅರ್ಜಿ ಸಲ್ಲಿಸಿದ ಹುದ್ದೆಯ ವಿವರವನ್ನು ಲಕೋಟೆ ಮೇಲೆ ನಮೂದಿಸಿ, **ದಿನಾಂಕ 25.09.2023 ರ ಸಂಜೆ 5:00 ಗಂಟೆಯೊಳಗೆ** ಸಲ್ಲಿಸುವುದು.

ಸಹಿ/–ವ್ಯವಸ್ಥಾಪಕ ನಿರ್ದೇಶಕರು

ದಿ ಜಯನಗರ ಕೋ–ಆಪರೇಟಿವ್ ಹೌಸಿಂಗ್ ಸೊಸೈಟಿ ಲಿಮಿಟೆಡ್
ನಂ. 902, 8ನೇ ಮುಖ್ಯ ರಸ್ತೆ, 2ನೇ ಬ್ಲಾಕ್, ಜಯನಗರ, ಬೆಂಗಳೂರು–560 011.
ದೂರವಾಣಿ: 080–26568074

73ನೇ ವಾರ್ಷಿಕ ಸರ್ವಸದಸ್ಯರ ಸಭೆ
2022–23ನೇ ಸಾಲಿನ ವಾರ್ಷಿಕ ಸರ್ವಸದಸ್ಯರ ಸಭೆಯ ತಿಳುವಳಿಕೆ ಪತ್ರ

ಸಂಘದ 2022–23ನೇ ಸಾಲಿನ ಸರ್ವಸದಸ್ಯರ ಸಭೆಯನ್ನು **ದಿನಾಂಕ: 10.09.2023ನೇ ಭಾನುವಾರ ಬೆಳಿಗ್ಗೆ 10.00 ಘಂಟೆಗೆ** ಸಂಘದ ಅಧ್ಯಕ್ಷರಾದ **"ಸಹಕಾರ ಕೌಸ್ತುಭ" ಶ್ರೀ ಬಿ.ಆರ್. ವಾಸುದೇವ್(ವಾಸು)** ಇವರ ಅಧ್ಯಕ್ಷತೆಯಲ್ಲಿ **"ಸಹಕಾರಿ ವಿದ್ಯಾಕೇಂದ್ರ ಶಾಲೆ ಆವರಣ"** ನಂ.3, 41ನೇ ಕ್ರಾಸ್, ಈಸ್ಟ್ ಎಂಡ್ 'ಬಿ' ಮುಖ್ಯ ರಸ್ತೆ, ಜಯನಗರ 9ನೇ ಬಡಾವಣೆ, ಬೆಂಗಳೂರು–69. ಇಲ್ಲಿ ಏರ್ಪಡಿಸಲಾಗಿದೆ. ಮಾನ್ಯ ಸದಸ್ಯರು ದಯವಿಟ್ಟು ಸಭೆಗೆ ಹಾಜರಾಗಬೇಕೆಂದು ಈ ಮೂಲಕ ಕೋರಲಾಗಿದೆ.

ಸ್ಥಳ : ಬೆಂಗಳೂರು
ದಿನಾಂಕ : 22.08.2023

ಆಡಳಿತ ಮಂಡಳಿ ಪರವಾಗಿ
(ಎಂ.ಶಿವಣ್ಣ)
ಕಾರ್ಯದರ್ಶಿ

ಕರ್ನಾಟಕ ಅರಣ್ಯ ಇಲಾಖೆ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಸಂಶೋಧನಾ ಉಪ ವಿಭಾಗ, 1ನೇ ಅಡ್ಡರಸ್ತೆ, ಅರೆಕೆರೆ ಮೈಕೋ ಬಡಾವಣೆ, ದೊರೆಸಾನಿಪಾಳ್ಯ, ಬನ್ನೇರುಘಟ್ಟ ರಸ್ತೆ, ಬೆಂಗಳೂರು–76. ದೂ.: 080–26587663, ಇಮೇಲ್: ccfrbangalore@gmail.com
ಸಂಖ್ಯೆ : ಎ2/ಬಿಯುಡಿ/ಟೆಂಡರ್/ಸಿಆರ್–08/2023–24 ದಿನಾಂಕ : 28–08–2023

ಸಂಕ್ಷಿಪ್ತ ಟೆಂಡರ್ ಪ್ರಕಟಣೆ

2023–24 ನೇ ಸಾಲಿನಲ್ಲಿ ಬೆಂಗಳೂರು ಸಂಶೋಧನಾ ವೃತ್ತ ವ್ಯಾಪ್ತಿಗೆ ಒಳಪಡುವ ಬೆಂಗಳೂರು, ಮಂಡ್ಯ, ತುಮಕೂರು, ಹೊಸಕೋಟೆ ಮತ್ತು ಕೋಲಾರ ಸಂಶೋಧನಾ ವಲಯಗಳಲ್ಲಿ ಆರ್.ಎಸ್.ಪಿ.ಡಿ. ಲೆಕ್ಕ ಶೀರ್ಷಿಕೆಯಡಿ ಕಸಿಸಸಿಗಳನ್ನು ಬೆಳೆಸುವ ಕಾಮಗಾರಿಗಾಗಿ ಇ–ಟೆಂಡರ್ ಮೂಲಕ ದಿನಾಂಕ : 13–09–2023 ರ ಸಂಜೆ 4.00 ಗಂಟೆಯವರೆಗೆ ಟೆಂಡರ್‌ನ್ನು ಕರೆಯಲಾಗಿದೆ. ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಚಿಸಿವವರು ವಿವರಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ. ಹಾಗೂ ವೆಬ್‌ಸೈಟ್ ವಿಳಾಸ : https://kppp.karnataka.gov.in ನಲ್ಲಿ ಪಡೆಯಬಹುದಾಗಿದೆ.

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ಸಂಶೋಧನೆ ಉಪ ವಿಭಾಗ, ಬೆಂಗಳೂರು.
ವಾಸಾಇ/ಬೆಂ.ನ./1221/ಮಣಿಪಾಲ್/2023–24

ಜಿಲ್ಲಾ ಶಸ್ತ್ರ ಚಿಕಿತ್ಸಕರ ಕಛೇರಿ, ಜಿಲ್ಲಾ ಆಸ್ಪತ್ರೆ, ಧಾರವಾಡ
ದೂರವಾಣಿ ಸಂಖ್ಯೆ: 0836–2741277, 0836–2748374
E-Mail I.D.: dsdharwad@gmail.com
ಸತ್ಯಮೇವ ಜಯತೇ — ಆರೋಗ್ಯವೇ ಭಾಗ್ಯ
ಸಂಖ್ಯೆ: ಜಿಆಧಾ/ಸಿಬ್ಬಂದಿ–(2)/ವಿವ/37/2023–24 ದಿ: 07–09–2023

ಟೆಂಡರ್ ಪ್ರಕಟಣೆ

ವಿಷಯ : ಧಾರವಾಡ ಜಿಲ್ಲಾ ಆಸ್ಪತ್ರೆಗೆ 2023–24 ನೇ ಸಾಲಿಗಾಗಿ ವೈದ್ಯೇತರ (Non-Clinical) ಸೇವೆಯನ್ನು ಪಡೆಯಲ್ಲು ಇ–ಪ್ರೋಕ್ಯುರಮೆಂಟ್ ಮೂಲಕ **Tender No DHFWS/2023-24/SE0305** ಟೆಂಡರ್ ಆಹ್ವಾನಿಸುವ ಕುರಿತು.

ಧಾರವಾಡ ಜಿಲ್ಲಾ ಆಸ್ಪತ್ರೆಗೆ **2023–24** ನೇ ಸಾಲಿಗಾಗಿ **ವೈದ್ಯೇತರ (Non-Clinical) ಸೇವೆಯನ್ನು ಪಡೆಯುವ ಸಲುವಾಗಿ** ಟೆಂಡರ (ಇ–ಪ್ರೋಕ್ಯುರಮೆಂಟ್) ಆಹ್ವಾನಿಸಲಾಗಿದೆ. ಅರ್ಹ ಆಸಕ್ತ ಟೆಂಡರದಾರರು ನಿಗಧಿತ ದಿನಾಂಕದೊಳಗಾಗಿ ಇ–ಪೋರ್ಟಲನ ಮುಖಾಂತರ **Tender No DHFWS/2023-24/SE0305** ಟೆಂಡರ ಅರ್ಜಿಯನ್ನು ಸಲ್ಲಿಸಬಹುದಾಗಿದೆ. ದಿನಾಂಕ: **07–09–2023** ರಿಂದ ಇ–ಪ್ರೋಕ್ಯುರಮೆಂಟ್ ವೆಬ್‌ಸೈಟ್ www.kppp.karnataka.gov.in ದಲ್ಲಿ ಇ–ಪೋರ್ಟೆಲ್‌ನಲ್ಲಿ ನಿಗದಿ ಪಡಿಸಿದ ಶುಲ್ಕದೊಂದಿಗೆ ಪಡೆಯಬಹುದು. ಭರ್ತಿ ಮಾಡಿದ ಟೆಂಡರ ಫಾರ್ಮಗಳನ್ನು ದಿನಾಂಕ: **07–09–2023** ರಿಂದ ದಿನಾಂಕ:**23–09–2023** ರವರೆಗೆ ಸಾಯಂಕಾಲ **4:30** ಗಂಟೆಯವರೆಗೆ ಇ–ಪೋರ್ಟೆಲ್‌ದಲ್ಲಿ ಅಪ್‌ಲೋಡ್ ಮಾಡಬಹುದು. ಹೆಚ್ಚಿನ ಮಾಹಿತಿಯನ್ನು ಧಾರವಾಡ ಜಿಲ್ಲಾ ಆಸ್ಪತ್ರೆಯ ಕಾರ್ಯಾಲಯದಿಂದ ಕೆಲಸದ ದಿನಗಳಂದು ಪಡೆಯಬಹುದು.

ಸಹಿ/–
ಜಿಲ್ಲಾ ಶಸ್ತ್ರಚಿಕಿತ್ಸಕರು
ಜಿಲ್ಲಾ ಆಸ್ಪತ್ರೆ ಧಾರವಾಡ
ವಾ.ಸಾ.ಇ/ಧಾರವಾಡ/262/2023–24/ದೇಶಪಾಂಡೆಪಬ್ಲಿಸಿಟಿ

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಕಾನೀನಿನಿ., ಯಗಚಿ ಯೋಜನಾ ವಿಭಾಗ, ಬೇಲೂರು, ಹಾಸನ ಜಿಲ್ಲೆ

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 02/2023–24 ದಿನಾಂಕ: 07–09–2023 (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಯಗಚಿ ಯೋಜನಾ ವಿಭಾಗ, ಬೇಲೂರು ಇವರು ಕರ್ನಾಟಕ ಲೋಕೋಪಯೋಗಿ/ಕೇಂದ್ರ ಲೋಕೋಪಯೋಗಿ ಇಲಾಖೆಗಳಲ್ಲಿ ದರ್ಜೆ–IV ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಪಾರದರ್ಶಕ ಕಾಯಿದೆ KW-1 ರ ಅನ್ವಯ ಐಟಂವಾರು ಅಲ್ಪಾವಧಿ ಟೆಂಡರ್‌ಗಳನ್ನು E-Procurement PlatForm (https://kppp.karnataka.gov.in)ನಲ್ಲಿ ಟೆಂಡರ್‌ಗಳನ್ನು ಕಾರ್ಯಪಾಲಕ ಇಂಜಿನಿಯರ್, ಯಗಚಿ ಯೋಜನಾ ವಿಭಾಗ, ಬೇಲೂರು ಇವರು ಆಹ್ವಾನಿಸಿದ್ದು, ಟೆಂಡರ್ ಪ್ರಕ್ರಿಯೆ ದಿನಾಂಕಗಳು ಈ ಕೆಳಕಂಡಂತಿವೆ. (1)ಟೆಂಡರ್ ಪ್ರೊಸೆಸಿಂಗ್ ಫೀ: https://kppp.karnataka.gov.in ನಲ್ಲಿ ನೋಡುವುದು(2)E-Procurement ನಲ್ಲಿ ದಾಖಲಾತಿಗಳನ್ನು ಪಡೆಯುವ ಹಾಗೂ ಅಪ್‌ಲೋಡ್ ಮಾಡುವ ಅವಧಿ:ದಿನಾಂಕ:08–09–2023 ರಿಂದ ದಿನಾಂಕ: 15–09–2023 ವರೆಗೆ ಸಂಜೆ 4.00 ಘಂಟೆವರೆಗೆ(3)ಟೆಂಡರ್ ತೆರೆಯುವ ದಿನಾಂಕ: 16–09–2023 ಸಂಜೆ 5.00 ಘಂಟೆಗೆ (4)ಕಾಮಗಾರಿಗಳ ಸಂಖ್ಯೆ: 01(ಒಂದು) (5) ಕೆಲಸದ ಕಾಲಮಿತಿ:45 ದಿನಗಳು (ಮಳೆಗಾಲ ಸೇರಿ)(6) ಕಾಮಗಾರಿಯ ಟೆಂಡರಿಗಿಟ್ಟ ಮೊತ್ತ: ರೂ.2.92 ಲಕ್ಷಗಳು (7)ಇ.ಎಂ.ಡಿ. ಮೊತ್ತರೂ.0.04 ಲಕ್ಷಗಳು(8) ಲೋಕೋಪಯೋಗಿ /ಕೇಂದ್ರ ಲೋಕೋಪಯೋಗಿ ಇಲಾಖೆ ದರ್ಜೆ-IV ಮತ್ತು ಮೇಲ್ಪಟ್ಟ ವರ್ಗ. ಸೂಚನೆ: 1.ಯಾವುದೇ ಸಂದರ್ಭದಲ್ಲಾದರೂ ಯಾವುದೇ ಕಾರಣ ನೀಡದೆ ಟೆಂಡರ್‌ಗಳನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿರುವವರು ಕಾಯ್ದಿರಿಸಿಕೊಂಡಿರುತ್ತಾರೆ. 2.ಟೆಂಡರ್ ನಿಬಂಧನೆಗಳು ಹಾಗೂ ಸಂಬಂಧಪಟ್ಟ ವಿವರಗಳನ್ನು e-procurement portal https://kppp.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರಿಗಿಟ್ಟ ಮೊತ್ತವು ಬದಲಾವಣೆಗೆ ಒಳಪಟ್ಟಿರುತ್ತದೆ.

ಸಹಿ/–ಕಾರ್ಯಪಾಲಕ ಇಂಜಿನಿಯರ್,
ಕಾನೀನಿನಿ, ಯಗಚಿ ಯೋಜನಾ ವಿಭಾಗ, ಬೇಲೂರು
ವಾಸಾಸಂಇ/ಹಿಸನಿ/ಹಾಸನ/290/ಕೆಎಸ್‌ಎಂಸಿಎ/292/2023–24

ಕೃಷಿ ವಿಶ್ವವಿದ್ಯಾಲಯ, ಧಾರವಾಡ
ಸರಕು ಖರೀದಿ ಅಧಿಕಾರಿಗಳ ಕಚೇರಿ, ಕೃಷಿ ನಗರ ಧಾರವಾಡ–580 005
ಮಿಂಚಂಚೆ : po@uasd.in
ನಂ. ಎಸ್‌ಪಿಒ/ಇಒ/ಟೆಂಡರ್–ಇಪ್ರೋಕ್–02/2023–24 ದಿನಾಂಕ: 06.09.2023

"ಆಸಕ್ತಿ ವ್ಯಕ್ತಪಡಿಸುವಿಕೆ" (ಇ–ಪ್ರೊಕ್ಯೂರಮೆಂಟ್ ಮೂಲಕ)

ಕೃಷಿ ವಿಶ್ವವಿದ್ಯಾಲಯ, ಧಾರವಾಡದಲ್ಲಿ ಕಚೇರಿ ಲೇಖನ ಸಾಮಗ್ರಿಗಳ **(Office Stationery Items)** ಪೂರೈಕೆಗಾಗಿ ನೋಂದಾಯಿತ ಅಧಿಕೃತ ಏಜನ್ಸಿಗಳಿಂದ ಆಸಕ್ತಿ ವ್ಯಕ್ತಪಡಿಸುವಿಕೆಗೆ ಟೆಂಡರ ಆಹ್ವಾನಿಸಲಾಗಿದ್ದು ಆಸಕ್ತ ಏಜನ್ಸಿಗಳು ಭಾಗವಹಿಸಲು ಮುಂದೆ ಹೇಳಿದ ವೆಬ್‌ಸೈಟನ್ನು ಆನ್‌ಲೈನ ಮುಖಾಂತರ ಸಂಪರ್ಕಿಸುವುದು http://kppp.karnataka.gov.in **(Goods Tender Category)** ದೂರವಾಣಿ ಸಂಖ್ಯೆ: 080–22230960 / 080–22234115.

ಟೆಂಡರ್ ವೇಳಾ ಪಟ್ಟಿ

ಟೆಂಡರ್ ವಿಚಾರಣೆ / ಸ್ಪಷ್ಟೀಕರಣಕ್ಕೆ ಕೊನೆಯ ದಿನಾಂಕ	:	13.09.2023 (ಬುಧವಾರ) 04.00 ಗಂಟೆಯವರೆಗೆ
ಪ್ರಿ ಬಿಡ್ ಮೀಟಿಂಗ್ ದಿನಾಂಕ ಮತ್ತು ಸಮಯ ಸ್ಥಳ ಆಸ್ತಿ ಅಧಿಕಾರಿಗಳ ಕಛೇರಿ, ಕೃ.ವಿ.ವಿ ಧಾರವಾಡ	:	15.09.2023 (ಶುಕ್ರವಾರ) 11.00 ಗಂಟೆಗೆ
ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ	:	27.09.2023 (ಬುಧವಾರ) 04.00 ಗಂಟೆಯವರೆಗೆ
ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	:	29.09.2023 (ಶುಕ್ರವಾರ) 4.00 ಗಂಟೆಗೆ

ಟೆಂಡರಿನಲ್ಲಿ ಭಾಗವಹಿಸಲಿಚ್ಛಿಸುವ ಏಜನ್ಸಿಗಳು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಬೆಂಗಳೂರು, ಇವರಲ್ಲಿ ನೋಂದಣಿ ಮಾಡಿಕೊಂಡಿರಬೇಕು. ಹೆಚ್ಚಿನ ವಿವರಗಳಿಗಾಗಿ 0836–2214231 ದೂರವಾಣಿಯನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು. ಬಿಡ್‌ದಾರರು ಟೆಂಡರಿನ ಒಟ್ಟಾರೆ ಅವಧಿಯಲ್ಲಿ ಆನ್‌ಲೈನ್ ಮೂಲಕ http://kppp.karnataka.gov.in ನಲ್ಲಿ ನೀಡಲಾಗುವ ತಿದ್ದುಪಡಿ / ಸೇರ್ಪಡೆ (ಇದ್ದಲ್ಲಿ) ತಪ್ಪದೇ ಗಮನಿಸುವುದು.

ಸಹಿ/–
ಆಸ್ತಿ ಅಧಿಕಾರಿಗಳು,
ಕೃ.ವಿ.ವಿ. ಧಾರವಾಡ.
ವಾ.ಸಾ.ಇ/ಧಾರವಾಡ/260/2023–24/ದೇಶಪಾಂಡೆಪಬ್ಲಿಸಿಟಿ

ಕರ್ನಾಟಕ ಸರ್ಕಾರ
ಮಕ್ಕಳ ರಕ್ಷಣಾ ನಿರ್ದೇಶನಾಲಯ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ
ಜಿಲ್ಲಾ ಬಾಲಭವನ ಆವರಣ, ಚಿತ್ರದುರ್ಗ–577501
E-mail: dcpocta@gmail.com Ph: 08194-295822



ಪೋಷಕರ ಪತ್ತೆಗಾಗಿ ಮನವಿ

(1) ಶಿಶುವಿನ ಹೆಸರು: ನವಜಾತ ಹೆಣ್ಣು ಶಿಶು (2) ವಯಸ್ಸು:– 03 ದಿನಗಳು. (3) ಮಗು ಸಿಕ್ಕಿದ ಸ್ಥಳ: ದುಗ್ಗಾಣಿಹಟ್ಟಿ ಗ್ರಾಮದ ಅರಣ್ಯ ಪ್ರದೇಶ, ಹಿರಿಯೂರು ತಾಲ್ಲೂಕು. ದಿನಾಂಕ: 26.08.2023ರ ಸಂಜೆ 5.30 ಗಂಟೆಗೆ. (4) ಮೈಬಣ್ಣ:–ಕಪ್ಪು ಬಣ್ಣ (5)ತೂಕ 2.200 ಕೆ.ಜಿ. (6) ತಂದೆ/ತಾಯಿಯ ಹೆಸರು:– ಗೊತ್ತಿಲ್ಲ. (7) ಗುರುತಿಸುವ ಚಿಹ್ನೆ:– ಕೋಲುಮುಖ. (8) ಶಿಶುವಿನ ಎತ್ತರ:– 44 ಸೆ.ಮೀ. (9)ಮಗುವಿನ ಆರೋಗ್ಯ ಸ್ಥಿತಿ:– ಸಾಧಾರಣ (10) ಶಿಶುವಿನ ವಿಷಯವಾಗಿ ಯಾರನ್ನು ಸಂಪರ್ಕಿಸುವುದು:– ಸರ್ಕಾರಿ ಬಾಲಕಿಯರ ಬಾಲಮಂದಿರ, ಜಿ.ಪಂ. ರಸ್ತೆ, ಸರ್ಕಾರಿ ಕಲಾ ಕಾಲೇಜು ಎದುರು, ಸ್ಟೇಡಿಯಂ ಹತ್ತಿರ, ಚಿತ್ರದುರ್ಗ. & ಜಿಲ್ಲಾ ಮಕ್ಕಳ ರಕ್ಷಣ ಘಟಕ, ಚಿತ್ರದುರ್ಗ. ದೂರವಾಣಿ ಸಂಖ್ಯೆ: 08194–295986, 08194–295822

DIPR/CTA/KSMCA/190/2023-24
ಸಹಿ/–ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು
ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಚಿತ್ರದುರ್ಗ.

"ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಾರ್ಯಾಲಯ ಬಳ್ಳಾರಿ–583101"
ಸಂಖ್ಯೆ: ಜಿನಕೊಬ/ಇ.ಕ್ಯಾಂ/ಬಳ್ಳಾರಿ/01/2022–23 ದಿನಾಂಕ : 07.09.2023

ಅಲ್ಪಾವಧಿ ಟೆಂಡರ್ ಪ್ರಕಟಣೆ

ಬಳ್ಳಾರಿ ಜಿಲ್ಲೆಯ ಪ್ಯಾಕೇಜ್– 01 (ಬಳ್ಳಾರಿ ಮಹಾನಗರ ಪಾಲಿಕೆ) ಪ್ಯಾಕೇಜ್– 02 (ನಗರಸಭೆ ಸಿರುಗುಪ್ಪ ಮತ್ತು ಪುರಸಭೆ ಸಂಡೂರು) ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಇಂದಿರಾ ಕ್ಯಾಂಟೀನ್ ತೆರೆಯಲು ಕ್ಯಾಟರಿಂಗ್ ಸರ್ವಿಸ್ ಪೂರೈಸಲು ಸ್ಟಾಂಡರ್ಡ್ ಡ್ಯಾಕುಮೆಂಟ್ ರನ್ವಯ ಹೋಟೆಲ್ / ಕ್ಯಾಟರಿಂಗ್ ಸೇವೆಯನ್ನು ಒದಗಿಸಲು ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ದಸ್ತಾವೇಜು ಗಳನ್ವಯ ಈ ಕೆಳಕಾಣಿಸಿದಂತೆ **Public Procurement Portal** ಮೂಲಕ ಟೆಂಡರ್ ಅಹ್ವಾನಿಸಲಾಗಿರುತ್ತದೆ.

ಪ್ಯಾಕೇಜ್ ಕಾಮಗಾರಿ ವಿವರ: 01.**PACKAGE-1 PROVIDING CATERING SERVICES FOR INDIRA CANTEENS IN BALLARI CITY CORPORATION LIMITS, BALLAR of Ballari DistrictIndent No :DMA/2023-24/SE0817**. ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ): **4,97,86,000/-**. EMD (Rs): **7,50,000/-**

02.**PACKAGE-2: PROVIDING CATERING SERVICES FOR INDIRA CANTEENS IN SIRUGUPPA CMC & SANDOOR TMC LIMITS, Ballari DistrictIndent No : DMA/2023-24/SE0818.** ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ): **1,81,04,000/-**. EMD (Rs): **2,72,000/-**.

1.Last date & time for tender queries / clarifications: **20.09.2023 at 17.30 Hrs.** 2.Pre Bid Meeting : **20.09.2023 at 11.00 hrs.** 3.Last date and time for receipt of tender technical bids: **26.09.2023 at 16.30 hrs.** 4.Date & time for opening of (Technical bids): **29.09.2023 at 11:00 Hrs.** 5.Date & time for opening of (Financial bids): **05.10.2023 at 11:00 Hrs.** 6.Auto extension of tender schedule : **02 days**

ಸದರಿ ಕಾಮಗಾರಿಗಳಿಗೆ ಟೆಂಡರ್‌ನ್ನು **ದಿನಾಂಕ: 26.09.2023** ರಂದು 16.30 ಗಂಟೆವರೆಗೆ ಸಲ್ಲಿಸಬಹುದಾಗಿರುತ್ತದೆ, ಸದರಿ ಟೆಂಡರನ್ನು **ದಿನಾಂಕ: 29.09.2023** ರಂದು 11:00 ಗಂಟೆಗೆ ತೆರೆಯಲಾಗುವುದು, ಸದರಿ ದಿನಾಂಕಗಳಲ್ಲಿ ಆಕಸ್ಮಿಕ ರಜೆಗಳು ಬಂದಲ್ಲಿ ಮರುದಿನವನ್ನು ಪರಿಗಣಿಸಲಾಗುವುದು, ಇ–ಪ್ರೊಕ್ಯೂರ್‌ಮೆಂಟ್‌ರಲ್ಲಿ ಟೆಂಡರ್ ದಾಖಲಾತಿಗಳಿಗಾಗಿ ಮತ್ತು ಷರತ್ತುಗಳಿಗಾಗಿ: **https://eproc.karnataka.gov.in** ವೆಬ್‌ಸೈಟ್‌ನಲ್ಲಿ ಲಾಗಿನ್ ಆಗಿ ಟೆಂಡರ್ ಭರ್ತಿ ಮಾಡುವುದು & ಕಛೇರಿಯಲ್ಲಿ ಯಾವುದೇ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ, ಹೆಚ್ಚಿನ ವಿವರಗಳಿಗೆ ಕಾರ್ಯಪಾಲಕ ಅಭಿಯಂತಕರು / ಸಹಾಯಕ ಕಾರ್ಯಪಾಲಕ ಅಭಿಯಂತಕರು ಜಿಲ್ಲಾ ನಗರಾಭಿವೃದ್ಧಿ ಕೋಶ, (ದೂ ಸಂ : 7760848586, 7892198334) ಇವರನ್ನು ಸಂಪರ್ಕಿಸಿ ಪಡೆಯಬಹುದು.

ಡಿಐಪಿಆರ್/ಬಳ್ಳಾರಿ/261/ಕೆಎಸ್‌ಎಂಸಿಎ/2023–24
ಸಹಿ/–ಜಿಲ್ಲಾಧಿಕಾರಿಗಳು, ಬಳ್ಳಾರಿ.

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ
ಉಗ್ರಾಣ ಮತ್ತು ಖರೀದಿ ಇಲಾಖೆ, ಕೇಂದ್ರ ಕಚೇರಿ ಸಾರಿಗೆ ಸದನ, ಮುಖ್ಯ ರಸ್ತೆ ಕಲಬುರಗಿ–02
ದೂರವಾಣಿ ಮತ್ತು ಫ್ಯಾಕ್ಸ್: 08472– 224428, ಮೊಬೈಲ್: 7760686172 (ಉಖನಿ), 7760992029 (ಉಅ), ಇ–ಮೇಲ್: cospnekrtc@gmail.com
ಸಂ. ಕಕರಸಾ/ಕೇಕ/ಉ&ಮಖನಿ/ 05 /2023–24 ದಿನಾಂಕ: 07.09.2023

:: ಟೆಂಡರ್ ಪ್ರಕಟಣೆ ::

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೋಡ್‌ನಲ್ಲಿ ಮಾತ್ರ)

ಈ ಕೆಳಗಿನ ವಸ್ತುಗಳನ್ನು ಪೂರೈಸಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (ಪ್ರಿ ಕ್ವಾಲಿಫಿಕೇಶನ್ ಮತ್ತು ಕಮರ್ಷಿಯಲ್) ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಸಂಖ್ಯೆ ಮತ್ತು ದಿನಾಂಕ	ವಸ್ತುಗಳ ವಿವರ	ಟೆಂಡರ್ ಮೌಲ್ಯ	ಟೆಂಡರ್‌ನಲ್ಲಿ ಪಾಲ್ಗೊಳ್ಳಲು ಕೊನೆಯ ದಿನಾಂಕ
ಜಿ–08/23–24 ದಿ. 07.09.23	Supply of Passenger Seat Foams	ರೂ. 66.00 ಲಕ್ಷಗಳಲ್ಲಿ	06.10.2023 ಸಮಯ: 15:30 ಗಂಟೆ
ಜಿ–09/23–24 ದಿ. 07.09.23	Supply of Mirror & Mirror Brackets.	ರೂ. 20.97 ಲಕ್ಷಗಳಲ್ಲಿ	
ಜಿ–10/23–24 ದಿ. 07.09.23	Supply of Front Show, FRP Panel & Dash Boards	ರೂ. 41.47 ಲಕ್ಷಗಳಲ್ಲಿ	

ಟೆಂಡರ್, ನೊಂದಣೆ, ಟೆಂಡರ್ ಫಾರ್ಮ ದಾಖಲಾತಿಗಳ ಎಲ್ಲಾ ವಿವರಗಳು **https://kppp.karnataka.gov.in/#/portal/portal-home** ನಲ್ಲಿ ಲಭ್ಯವಿದೆ. ಅಗತ್ಯವಿದ್ದರೆ ಹೆಚ್ಚಿನ ಮಾಹಿತಿಗಾಗಿ cospnekrtc@gmail.com ಅಥವಾ support@eprochelpdesk.com ಗೆ ಇ–ಮೇಲ್ ಮುಖಾಂತರ ಸಂಪರ್ಕಿಸಬಹುದಾಗಿದೆ. ಪರಿಭಾಷೆಯಲ್ಲಿನ ಬದಲಾವಣೆಗಳಿಗೆ ಸಂಬಂಧಿಸಿದಂತೆ ಯಾವುದೇ ಅಡೆಂಡಮ್ /ಕೊರಿಜೆಂಡಮ್ ಮತ್ತು ಟೆಂಡರ್ ಷರತ್ತು ಮತ್ತು ನಿಬಂಧನೆಗಳು, ಸ್ಪೆಸಿಫಿಕೇಶನ್ ಮತ್ತು ಘಟನೆಗಳ ಕ್ಯಾಲೆಂಡರ್ ಇತ್ಯಾದಿಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ ಅಪ್ಲೋಡ್ ಮಾಡಲಾಗುತ್ತದೆ.

ಸಹಿ/– ಉಗ್ರಾಣ ಮತ್ತು ಖರೀದಿ ನಿಯಂತ್ರಕರು
(ಟೆಂಡರ್ ಆಹ್ವಾನಿಸುವ ಪ್ರಾಧಿಕಾರಸ್ಥರು)
ವಾ.ಸಾ.ಸಂ.ಇ/ಕಲಬುರಗಿ/264/ಕೆ.ಎಸ್.ಎಂ.ಸಿ.&ಎ/2023–24

ನಗರಸಭಾ ಕಾರ್ಯಾಲಯ, ಹೂಟಗಳ್ಳಿ
ಎಸ್.ಆರ್.ಎಸ್. ಸ್ಟೇಷನ್ ಎದುರು, ಹೈಟೆನ್ಷನ್ ಜೋಡಿ ರಸ್ತೆ,ಹೂಟಗಳ್ಳಿ, ಮೈಸೂರು ಜಿಲ್ಲೆ –570018
Ph.No: 0821-2001737 http://www.hootagallicity.mrc.gov.in ka.hootagalli.cmc@gmail.com
ಸಂ:ನಸಹೂ/ತಾಂತ್ರಿಕ/ಟೆಂಡರ್/ಸಿ.ಆರ್–05/2023–24 ದಿನಾಂಕ: 06.09.2023

ಟೆಂಡರ್ ಪ್ರಕಟಣೆ (ಇ–ಪೋರ್ಟಲ್ 2.0 ಮೂಲಕ)

ಹೂಟಗಳ್ಳಿ ನಗರಸಭೆ ವ್ಯಾಪ್ತಿಯಲ್ಲಿ 2022–23ನೇ ಸಾಲಿನ ಎಸ್.ಎಫ್.ಸಿ ಕುಡಿಯುವ ನೀರು, 2023–24ನೇ ಸಾಲಿನ ಎಸ್.ಎಫ್.ಸಿ 7.25%, ನಗರಸಭೆ ಸಾಮಾನ್ಯ ನಿಧಿ ಶೇ.24.10%, ಶೇ.7.25%, ಶೇ.5.00% ಹಾಗೂ 2023–24ನೇ ಸಾಲಿನ ನಗರಸಭೆ ನಿಧಿ ಅನುದಾನದಡಿ ಕೆ.ಟಿ.ಪಿ.ಪಿ. ಕಾಯ್ದೆ 2000ರ ಪ್ರಕಾರ ಕೆ.ಡಬ್ಲ್ಯೂ–01ರ ನಿಯಮದಂತೆ ಇ–ಪೋರ್ಟಲ್ ಮೂಲಕ ಐಟಂವಾರು ಟೆಂಡರ್ ಕರೆಯಲಾಗಿದ್ದು. ವಿದ್ಯುತ್ ಪರಿವೀಕ್ಷಣಾಲಯ/ಸಿವಿಲ್ ಲೋಕೋಪಯೋಗಿ ಇಲಾಖೆಯ ಅರ್ಹ ನೋಂದಾಯಿತ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್‌ಗಳನ್ನು https://kppp.karnataka.gov.in ಇ–ಪೋರ್ಟಲ್ 2.0 ಮೂಲಕ ಸಲ್ಲಿಸಬಹುದಾಗಿದೆ. ಟೆಂಡರ್ ಸಲ್ಲಿಸುವ ಕೊನೆಯ ದಿ: 22.09.2023 ಸಂಜೆ 5:30 ಗಂಟೆಯವರೆಗೆ ಹಾಗೂ ಟೆಂಡರ್ ತೆರೆಯುವ ದಿ: 25.09.2023 ಬೆಳಗ್ಗೆ 10:30 ಗಂಟೆಗೆ. ಹೆಚ್ಚಿನ ಮಾಹಿತಿಗಾಗಿ ಕಛೇರಿ ತಾಂತ್ರಿಕ ಶಾಖೆ ಹಾಗೂ ಕಛೇರಿ ವೆಬ್‌ಸೈಟ್‌ಅನ್ನು ಸಂಪರ್ಕಿಸಬಹುದಾಗಿದೆ. ಟೆಂಡರ್‌ನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ನಗರಸಭೆ ಕಾಯ್ದಿರಿಸಿಕೊಂಡಿದೆ. ಕಾಮಗಾರಿಗಳಿಗೆ ಜಿ.ಎಸ್.ಟಿಯನ್ನು ಪ್ರತ್ಯೇಕವಾಗಿ ಪಾವತಿಸಲಾಗುವುದು. ನಗರಸಭಾ ಅನುದಾನದ ಕಾಮಗಾರಿಗಳಿಗೆ ನಗರಸಭೆಯ ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ ಬಿಲ್ ಪಾವತಿಸಲಾಗುವುದು.

ಕ್ರ ಸಂ	ಕಾಮಗಾರಿಗಳ ಇಂಡೆಂಟ್ ವಿವರ	ಮೀಸಲಾತಿ	ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ. ಗಳಲ್ಲಿ)
1	DMA/2023-24/RD/WORK_INDENT3347	ಸಾಮಾನ್ಯ	5.90	14,750/–
2	DMA/2023-24/BD/WORK_INDENT3345	ಪ. ಪಂಗಡ	4.50	5,625/–
3	DMA/2023-24/OW/WORK_INDENT3342	ಪ. ಜಾತಿ	8.40	10,500/–
4	DMA/2023-24/RD/WORK_INDENT3336	ಸಾಮಾನ್ಯ	6.85	17,125/–
5	DMA/2023-24/OW/WORK_INDENT3333	ಸಾಮಾನ್ಯ	7.18	17,950/–
6	DMA/2023-24/EL/WORK_INDENT3375	ಪ. ಜಾತಿ	10.00	12,500/–
7	DMA/2023-24/WS/WORK_INDENT3363	ಸಾಮಾನ್ಯ	10.00	25,000/–
8	DMA/2023-24/WS/WORK_INDENT3294	ಸಾಮಾನ್ಯ	5.72	14,300/–

DIPR/DDMYS/KSMCA/315/2023-24
ಸಹಿ/– ಪೌರಾಯುಕ್ತರು, ನಗರಸಭೆ, ಹೂಟಗಳ್ಳಿ

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
#49, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು–560 001
ದೂ: 080–2558 6520/ 2558 9112 ಫ್ಯಾಕ್ಸ್: 080–2588 6321
ಇಮೇಲ್: contact@kspcb.gov.in ವೆಬ್‌ಸೈಟ್: https//kspcb.karnataka.gov.in
ಸಂಖ್ಯೆ:ಮಾನಿಮಂ/41/17ನೇ ಪ್ರವರ್ಗ/ಹೆಚ್‌ಪಿಐ/ಇ.ಪಿ.ಎಚ್/2023/3063 ದಿನಾಂಕ:04.09.2023

ಪರಿಸರ ಸಾರ್ವಜನಿಕ ಸಭೆಗಾಗಿ ಸೂಚನೆ

ಮೆ॥ ವಿಐಎನ್‌ಪಿ ಡಿಸ್ಟಿಲರೀಸ್ ಮತ್ತು ಶುಗರ್ಸ್ ಪ್ರೈವೇಟ್ ಲಿಮಿಟೆಡ್ (ಘಟಕ–2), ಇವರು, ಧಾರವಾಡ ಜಿಲ್ಲೆ, ಕಲಘಟಗಿ ತಾಲ್ಲೂಕು, ತಬಕದ ಹೊನ್ನಳ್ಳಿ ಗ್ರಾಮದ ಸರ್ವೇ ನಂ.292/1, 292/2, 293/1ಎ, 293/1ಬಿ, 293/2 & 298 ರಲ್ಲಿ ಹೊಸದಾಗಿ 10000 ಟಿಸಿಡಿ ಸಾಮರ್ಥ್ಯದ ಕಬ್ಬು ಅರೆಯುವ ಘಟಕ, 800 ಕೆಎಲ್‌ಪಿಡಿ ಸಾಮರ್ಥ್ಯದ ಮಲ್ಟಿಫೀಡ್ (ಕಬ್ಬಿನ ರಸ/ಮೊಲ್ಯಾಸಸ್/ಧಾನ್ಯಾಧಾರಿತ) ಡಿಸ್ಟಿಲರಿ ಘಟಕ ಮತ್ತು 42 ಮೆಗಾವ್ಯಾಟ್ ಸಾಮರ್ಥ್ಯದ ಸಹ ವಿದ್ಯುತ್ ಉತ್ಪಾದನಾ ಘಟಕ ಸ್ಥಾಪಿಸಲು ಉದ್ದೇಶಿಸಿದ್ದು, ಈ ಬಗ್ಗೆ ಸಾರ್ವಜನಿಕ ಪರಿಸರ ಸಭೆ ನಡೆಸಲು ಉದ್ದೇಶಿಸಲಾಗಿದೆ.

ಸದರಿ ಯೋಜನೆಯ ಪ್ರವರ್ತಕರು ಪರಿಸರ ಅಘಾತ ಅಧ್ಯಯನದ ಅಧಿಸೂಚನೆ ದಿನಾಂಕ: 14.9.2006ರ (ತಿದ್ದುಪಡಿ ದಿನಾಂಕ: 09.05.2022) ಪ್ರಕಾರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ ಭಾರತ ಸರ್ಕಾರ, ಇವರಿಂದ ಪೂರ್ವ ಪರಿಸರ ವಿಮೋಚನಾ ಪತ್ರವನ್ನು ಪಡೆಯಬೇಕಾಗಿರುತ್ತದೆ ಮತ್ತು ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸಬೇಕಾಗಿರುತ್ತದೆ. ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ಭಾರತ ಸರ್ಕಾರ ಇವರ Terms of Reference ಪತ್ರ ಸಂಖ್ಯೆ: IA-J-11011/102/2023-IA-II(I) ದಿನಾಂಕ: 15.03.2023 ರಂತೆ ಹಾಗೂ ಉದ್ದಿಮೆ ನಿವೇದನೆ ಪತ್ರ ಮಂಡಳಿಯಲ್ಲಿ ಸ್ವೀಕೃತಿ ದಿನಾಂಕ: 21.06.2023 ರ ಪ್ರಕಾರ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವತಿಯಿಂದ ನಡೆಸಲಾಗುತ್ತಿದೆ.

ಯೋಜನೆಯ ವಿವರಗಳು ಕಳಕಂಡಂತಿವೆ:

1.	**ಕಂಪನಿಯ ಹೆಸರು ಮತ್ತು ವಿಳಾಸ: ಮೆ॥ ವಿಐಎನ್‌ಪಿ ಡಿಸ್ಟಿಲರೀಸ್ ಮತ್ತು ಶುಗರ್ಸ್ ಪ್ರೈವೇಟ್ ಲಿಮಿಟೆಡ್ (ಘಟಕ–2), 2ನೇ ಮಹಡಿ, ಡ್ರೀಮ್ ಛೇಂಬರ್ಸ್, ಗಾಂಧಿನಗರ ರಸ್ತೆ, ಬಸ್ ನಿಲ್ದಾಣದ ಹತ್ತಿರ, ಯಲ್ಲಾಪುರ, ಉತ್ತರ ಕನ್ನಡ–581359.**
2.	**ಉದ್ದೇಶಿತ ಯೋಜನೆಯ ಸ್ಥಳ:** ಧಾರವಾಡ ಜಿಲ್ಲೆ, ಕಲಘಟಗಿ ತಾಲ್ಲೂಕು, ತಬಕದ ಹೊನ್ನಳ್ಳಿ ಗ್ರಾಮ ಸರ್ವೇ ನಂ.292/1, 292/2, 293/1ಎ, 293/1ಬಿ, 293/2 & 298
3.	**ಉದ್ದೇಶಿತ ಕಾರ್ಖಾನೆಯ ಯೋಜನೆ:** ಹೊಸದಾಗಿ 10000 ಟಿಸಿಡಿ ಸಾಮರ್ಥ್ಯದ ಕಬ್ಬು ಅರೆಯುವ ಘಟಕ, 800 ಕೆಎಲ್‌ಪಿಡಿ ಸಾಮರ್ಥ್ಯದ ಮಲ್ಟಿಫೀಡ್ (ಕಬ್ಬಿನ ರಸ/ಮೊಲ್ಯಾಸಸ್/ಧಾನ್ಯಾಧಾರಿತ) ಡಿಸ್ಟಿಲರಿ ಘಟಕ ಮತ್ತು 42 ಮೆಗಾವ್ಯಾಟ್ ಸಾಮರ್ಥ್ಯದ ಸಹ ವಿದ್ಯುತ್ ಉತ್ಪಾದನಾ ಘಟಕವನ್ನು ಸ್ಥಾಪಿಸುವುದು.
4.	**ಪರಿಸರ ಸಾರ್ವಜನಿಕ ಸಭೆಯ ಸ್ಥಳ, ದಿನಾಂಕ ಮತ್ತು ಸಮಯ: ದಿನಾಂಕ: 11.10.2023 (ಬುಧವಾರ) ಸಮಯ: ಬೆಳಿಗ್ಗೆ 11.00 ಗಂಟೆ ಸ್ಥಳ: ಯೋಜನಾ ಸ್ಥಳ, ಮೆ॥ ವಿಐಎನ್‌ಪಿ ಡಿಸ್ಟಿಲರೀಸ್ ಮತ್ತು ಶುಗರ್ಸ್ ಪ್ರೈವೇಟ್ ಲಿಮಿಟೆಡ್ (ಘಟಕ–2), ಸರ್ವೇ ನಂ.292/1, 292/2, 293/1ಎ, 293/1ಬಿ, 293/2 & 298, ತಬಕದ ಹೊನ್ನಳ್ಳಿ ಗ್ರಾಮ, ಕಲಘಟಗಿ ತಾಲ್ಲೂಕು, ಧಾರವಾಡ ಜಿಲ್ಲೆ.**
5.	**ಪರಿಸರ ಸಾರ್ವಜನಿಕ ಕಾರ್ಯಕಾರಿ ಸಾರಾಂಶ ಸಾರ್ವಜನಿಕ ಪರಾಮರ್ಶೆಗೆ ಲಭ್ಯವಿರುವ ಸ್ಥಳ.** (ಅ) ಜಿಲ್ಲಾಧಿಕಾರಿಗಳ ಕಛೇರಿ, ಧಾರವಾಡ ಜಿಲ್ಲೆ, ಧಾರವಾಡ. (ಆ) ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳ ಕಛೇರಿ, ಜಿಲ್ಲಾ ಪಂಚಾಯತ್, ಧಾರವಾಡ ಜಿಲ್ಲೆ, ಧಾರವಾಡ. (ಇ) ಜಿಲ್ಲಾ ಕೈಗಾರಿಕಾ ಕೇಂದ್ರ, ಧಾರವಾಡ ಜಿಲ್ಲೆ, ಧಾರವಾಡ. (ಈ) ತಬಕದ ಹೊನ್ನಳ್ಳಿ ಗ್ರಾಮ ಪಂಚಾಯಿತಿ, ಕಲಘಟಗಿ ತಾಲ್ಲೂಕು, ಧಾರವಾಡ ಜಿಲ್ಲೆ. (ಉ) ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪ್ಲಾಟ್ ಸಂಖ್ಯೆ:4, ಲಕ್ಕಮ್ಮನಹಳ್ಳಿ ಕೈಗಾರಿಕಾ ಪ್ರದೇಶ, ಧಾರವಾಡ–580004. (ಊ) ಕೇಂದ್ರ ಅರಣ್ಯ, ಪರಿಸರ ಹಾಗೂ ಹವಾಗುಣ ಬದಲಾವಣೆ ಮಂತ್ರಾಲಯ, ದಕ್ಷಿಣ ವಲಯ ಕಛೇರಿ, ನಂ.ಇ–3/240, ಕೇಂದ್ರೀಯ ಸದನ, 4ನೇ ಮಹಡಿ, ಇ ಮತ್ತು ಎಫ್ ವಿಂಗ್ಸ್, 17ನೇ ಮುಖ್ಯರಸ್ತೆ, 2ನೇ ಬ್ಲಾಕ್, ಕೋರಮಂಗಲ, ಬೆಂಗಳೂರು–560034. (ಋ) ಸಹಾಯ ಕೇಂದ್ರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, "ಪರಿಸರ ಭವನ", ನೆಲ ಅಂತಸ್ತು, ನಂ.49, ಚರ್ಚ್ ಸ್ಟ್ರೀಟ್, ಬೆಂಗಳೂರು–560001.

ಸೂಚನೆ: ಯೋಜನಾ ಸ್ಥಳದಲ್ಲಿ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರಾಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರು ತಮ್ಮ ಸಲಹೆಗಳು, ಅನಿಸಿಕೆಗಳು, ಟೀಕೆ–ಟಿಪ್ಪಣಿಗಳು ಹಾಗು ಅಹವಾಲುಗಳನ್ನು ಮೌಖಿಕ/ಲಿಖಿತ/ಇ–ಮೇಲ್ ಮೂಲಕ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಅಧ್ಯಕ್ಷರು, ಪರಿಸರ ಸಾರ್ವಜನಿಕ ಸಮಿತಿ (ಜಿಲ್ಲಾಧಿಕಾರಿಗಳು, ಧಾರವಾಡ ಜಿಲ್ಲೆ, ಧಾರವಾಡ) ಇವರಿಗೆ ಈ ಅಧಿಸೂಚನೆ ಪ್ರಕಟವಾದ 30 ದಿನಗಳ ಒಳಗೆ ಸಲ್ಲಿಸತಕ್ಕದ್ದು. ಇಚ್ಛೆಯುಳ್ಳ ಸಾರ್ವಜನಿಕರು ಮೇಲೆ ತಿಳಿಸಿರುವ ದಿನದಂದು ಪರಿಸರ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಳ್ಳಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮಂಡಳಿಯ ವೆಬ್‌ಸೈಟ್ : **kspcb.karnataka.gov.in** ನಲ್ಲಿ ಪಡೆಯಬಹುದು.

ಸಹಿ/–
ಸದಸ್ಯ ಕಾರ್ಯದರ್ಶಿ

ನಮ್ಮೆಲ್ಲರ ಚಿತ್ತ, ನೈಸರ್ಗಿಕ ಸಂಪನ್ಮೂಲಗಳ ಮಿತ ಬಳಕೆಯತ್ತ; ತ್ಯಾಜ್ಯ ಉತ್ಪಾದನೆಯನ್ನು ತಗ್ಗಿಸಿ

ಕರ್ನಾಟಕ ಸರ್ಕಾರ
ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ವೈದ್ಯಕೀಯ ಶಿಕ್ಷಣ ಸ್ವಾಯುತ್ತ ಸಂಸ್ಥೆ, ಸಾಗರ ರಸ್ತೆ, ಶಿವಮೊಗ್ಗ–577 201
ಫೋನ್: 08182 229933/ 269701, ಫ್ಯಾಕ್ಸ್ : 08182 264100,
ವೆಬ್‌ಸೈಟ್: www.sims-shimoga.com

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

No:SIMS/Store/Tender/Notification/07/2023-24/1040 ದಿನಾಂಕ: 06.09.2023

ಈ ಕೆಳಗಿನ HNS ಸಾಮಾಗ್ರಿಗಳು & ಇತರೆ ಸಾಮಾಗ್ರಿಗಳ ಹಾಗೂ ಮೆಗ್ಗಾನ್ ಆಸ್ಪತ್ರೆಗೆ ಮಾನವ ಸಂಪನ್ಮೂಲ ಸೇವೆ ಒದಗಿಸುವ ಬಗ್ಗೆ ದ್ವಿ–ಲಕೋಟೆ ಪದ್ಧತಿಯಲ್ಲಿ ಆನ್ ಲೈನ್ ಮುಖಾಂತರ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

SI NO	Tender No. & Date	Name of the Item	Publish, Duration, End, Date and time.
1	SIMS/EST/OSSB/4/2023-EST1-SIMS SMG Dated: 06.09.2023	Providing Various Manpower Services to SIMS	07-09-2023 to 06-10-2023 at 5.00 PM.
2	SIMS/STORE/HNS/5/2023-24, Dated: 06.09.2023	Re-Tender Procurements of HNS (Disposable Items) to Sims Shivamogga	From: 12-09-2023 to 27-10-2023 at 5.00 PM.
3	SIMS/STORE/HNS/6/2023-24, Dated: 06.09.2023	Re-Tender Procurements of HNS (Dental, Opthalmic & Sutures Items) to Sims Shivamogga	From: 12-09-2023 to 27-09-2023 at 5.00 PM.
4	SIMS/EST/UC/Plumbing & Electrical /82221/2023-24, Dated: 06.09.2023	Re-Tender Procurements of Electrical & Plumbing Services to Sims Shivamogga	From: 13-09-2023 to 30-09-2023 at 5.00 PM.
5	SIMS/EST-2/26/Lab Chemical & Reagents /2023-24, Dated: 06.09.2023	e-Tender for the supply of Lab Chemicals & Reagents, to Central Lab sims Teaching Mcgann Hospital Shivamogga	From: 15-09-2023 to 03-10-2023 at 5.00 PM.
6	SIMS/PRCU/TNDR/27/2023-EST1-SIMS SMG Dated: 06.09.2023	Procurements of Equipments to Clinical Departments under AB-Ark Scheme	From: 19-09-2023 to 20-10-2023 at 5.00 PM.
7	SIMS/EST-2/OBG/CSS Fund/ Equipments/75/2023-24 Dated: 06.09.2023	Re-Tender for the supply of Equipments to OBG Dept, sims Teaching Mcgann Hospital Shivamogga	From: 19-09-2023 to 05-10-2023 at 5.00 PM.
8	SIMS/ARS/IP and OP/ TNDR/2023-24/1155048 Dated: 06.09.2023	Re-Tender for the Outsource Basis of Data Entry Operators, Pharmacist, and others IP and OP For Billing and Other modules to SSH & Mc-Gann Teaching District Hospital SIMS Shivamogga	From: 22-09-2023 to 10-10-2023 at 5.00 PM.

ಆನ್ ಲೈನ್ ನಲ್ಲಿ ಬಿಡ್ ದಾಖಲೆಗಳನ್ನು ವೆಬ್ ಸೈಟ್ http://kppp.karnataka.gov.in ನಿಂದ ಡೌನ್ ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್ ತೆರೆಯುವ ದಿನಾಂಕವನ್ನು ಟೆಂಡರ್ ಪುಸ್ತಕದಲ್ಲಿ ತಿಳಿಸಲಾಗುವುದು. ಟೆಂಡರ್ ಸ್ವೀಕರಿಸುವ ಪ್ರಾಧಿಕಾರವು, ಯಾವುದೇ ಕಾರಣ ನೀಡದೆ ಟೆಂಡರ್ ನ್ನು ಸ್ವೀಕರಿಸುವ/ ತಿರಸ್ಕರಿಸುವ/ ರದ್ದುಪಡಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತದೆ.

ಸಹಿ/– ನಿರ್ದೇಶಕರು/ಡೀನ್
ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಶಿವಮೊಗ್ಗ.
ವಾ.ಸಾ.ಸಂ.ಇ./ಶಿ/ನಂ.17-09/ಝೇಂಕಾರ್/2023-24

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ
ಆತ್ಮಗೌರವವನ್ನು ಬಿಟ್ಟು ಉಳಿಸಿಕೊಳ್ಳಬೇಕಾದ ಯಾವ ಕಲೆಯೂ ಪ್ರಪಂಚದಲ್ಲಿ ಇಲ್ಲ.
–ಕೆ.ಪಿ.ಪೂರ್ಣಚಂದ್ರ ತೇಜಸ್ವಿ

ಇಂಡಿಯಾ ಅಂದರೆ ಭಾರತ ಇಲ್ಲಿ ಯಾವುದೂ ಅನ್ಯವಲ್ಲ

ಭಾರತ ಮತ್ತು ಇಂಡಿಯಾ ಎಂಬ ಪದಗಳ ನಡುವೆ ಸಾಂವಿಧಾನಿಕವಾಗಿ, ರಾಜಕೀಯವಾಗಿ ಅಥವಾ ಶಬ್ದಾರ್ಥಕ್ಕೆ ಸಂಬಂಧಿಸಿದಂತೆ ಯಾವ ವ್ಯತ್ಯಾಸವೂ ಇಲ್ಲ. ಹೀಗಾಗಿ, 'ಇಂಡಿಯಾ' ಎಂಬ ಪದಕ್ಕಿಂತ 'ಭಾರತ' ಪದಕ್ಕೆ ಹೆಚ್ಚಿನ ಆದ್ಯತೆ ನೀಡಲು ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಇರಿಸಿರುವ ಹೆಜ್ಜೆಯು ಅರ್ಥಹೀನ. ಜಿ–20 ಶೃಂಗಸಭೆಯ ಭಾಗವಾಗಿ ನೀಡಿರುವ ಸರ್ಕಾರಿ ಆಹ್ವಾನ ಪತ್ರಿಕೆಯಲ್ಲಿ ಕೇಂದ್ರ ಸರ್ಕಾರವು 'ಭಾರತ' ಎಂಬ ಪದ ಬಳಸಿದೆ. ಈ ಪದವನ್ನು ಕೇಂದ್ರವು ಇನ್ನೂ ಹೆಚ್ಚು ವ್ಯಾಪಕವಾಗಿ ಬಳಸಲು ಮುಂದಾಗಬಹುದು. ರಾಜಕೀಯ ಹಾಗೂ ಸರ್ಕಾರಿ ಸಂಕಥನಗಳಲ್ಲಿ 'ಇಂಡಿಯಾ' ಎಂಬ ಪದದ ಬಳಕೆಯನ್ನು ಇನ್ನಿಲ್ಲವಾಗಿಸಲು ಕೂಡ ಕೇಂದ್ರವು ಮುಂದಾಗಬಹುದು. ಸಂವಿಧಾನವು ಈ ದೇಶವನ್ನು 'ಇಂಡಿಯಾ, ಅಂದರೆ ಭಾರತ' ಎಂದು ಕರೆದಿದೆ. ಹೀಗಾಗಿ ಒಂದು ಪದವನ್ನು ಅಳಿಸಿಹಾಕಬೇಕು ಎಂದಾದರೆ ಸಂವಿಧಾನಕ್ಕೆ ತಿದ್ದುಪಡಿ ತರಬೇಕಾಗುತ್ತದೆ. 'ಇಂಡಿಯಾ' ಪದದ ಬದಲಿಗೆ 'ಭಾರತ' ಪದ ಬಳಕೆಗೆ ಬಿಜೆಪಿ ಮತ್ತು ಆರ್‌ಎಸ್‌ಎಸ್ ಹಿಂದಿನಿಂದಲೂ ಒಲವು ತೋರಿಸಿವೆ ಎಂಬುದು ನಿಜವಾದರೂ, ಒಂದು ಪದದ ಬಳಕೆಯು ಇದ್ದಕ್ಕಿದ್ದಂತೆ ಸಮಸ್ಯೆಯಾಗಿ ಕಂಡಿದ್ದು ಏಕೆ ಎಂಬುದು ಗೊತ್ತಾಗದ ಸಂಗತಿ. ಬಿಜೆಪಿಯನ್ನು ವಿರೋಧಿಸುವ ರಾಜಕೀಯ ಪಕ್ಷಗಳ ಒಕ್ಕೂಟವು ತನಗೆ ಐ.ಎನ್.ಡಿ.ಐ.ಎ (ಇಂಡಿಯಾ) ಎಂಬ ಹೆಸರು ಕೊಟ್ಟುಕೊಂಡಿದ್ದಕ್ಕೆ ಪ್ರತಿಯಾಗಿ ಈ ಕೆಲಸ ನಡೆಯುತ್ತಿದೆ ಎಂದಾದರೆ, ಅದನ್ನು ಬಾಲಿಶತನದ, ಸಿಡುಕಿನ ಪ್ರತಿಕ್ರಿಯೆ ಎನ್ನಬೇಕಾಗುತ್ತದೆ. ರಾಷ್ಟ್ರೀಯವಾದದ ಸಂಕಥನದ ಮೇಲೆ ಇನ್ನಷ್ಟು ಬಲಿಷ್ಠವಾದ ಹಿಡಿತ ಸಾಧಿಸುವ ಹಲವು ಕ್ರಮಗಳ ಒಂದು ಭಾಗ ಇದು ಎನ್ನುವುದಾದರೆ, ಇದನ್ನು ಅವಿವೇಕದ ನಡೆ ಎನ್ನಬೇಕಾಗುತ್ತದೆ.



ಯಾವುದೋ ಒಂದು ರಾಜಕೀಯ ಪಕ್ಷದ ಅಭಿರುಚಿ ಅಥವಾ ಸೈದ್ಧಾಂತಿಕ ಒಲವುಗಳಿಗೆ ಅನುಗುಣವಾಗಿ ದೇಶದ ಹೆಸರನ್ನು ಬದಲಾಯಿಸಲಾಗದು; ಅದು ಆಡಳಿತದಲ್ಲಿ ಇರುವ ಪಕ್ಷವಾದರೂ ಸರಿ

ಭಾರತ ಹಾಗೂ ಇಂಡಿಯಾ ಎಂಬ ಪದಗಳನ್ನು ಒಂದರ ಬದಲಿಗೆ ಇನ್ನೊಂದು ಎಂಬಂತೆ ಬಳಸಲಾಗಿದೆ. ಕೆಲವು ಬಾರಿ, ಸಂದರ್ಭವನ್ನು ಆಧರಿಸಿ ಈ ಪದಗಳನ್ನು ಬಳಕೆ ಮಾಡಲಾಗುತ್ತಿದೆ. 'ಭಾರತ' ಪದಕ್ಕೆ ಸಾಂಸ್ಕೃತಿಕವಾಗಿ ಹೆಚ್ಚು ಮಹತ್ವವಿದೆ. ಆದರೆ 'ಇಂಡಿಯಾ' ಎಂಬ ಪದವು ಹೆಚ್ಚು ವ್ಯಾಪಕವಾಗಿ ಬಳಕೆಯಲ್ಲಿದೆ. ಅದರಲ್ಲೂ ರಾಜತಾಂತ್ರಿಕ ವ್ಯವಹಾರಗಳಲ್ಲಿ ಇದನ್ನು ಹೆಚ್ಚಾಗಿ ಬಳಸಲಾಗಿದೆ, ಇದು ಹೆಚ್ಚು ಜನಪ್ರಿಯವೂ ಆಗಿದೆ. 'ಭಾರತ' ಪದವು ದೇಶದ ಗ್ರಾಮೀಣ ಪ್ರದೇಶಗಳನ್ನು ಹೆಚ್ಚು ಚೆನ್ನಾಗಿ ಪ್ರತಿಬಿಂಬಿಸುತ್ತದೆ, 'ಇಂಡಿಯಾ' ಎಂಬ ಪದವು ದೇಶದ ನಗರ ಪ್ರದೇಶಗಳನ್ನು ಸೂಚಿಸುವುದಕ್ಕೆ ಸೂಕ್ತ ಎಂಬ ಮಾತುಗಳೂ ಇವೆ. 'ಇಂಡಿಯಾ' ಪದವನ್ನು ಮೊದಲು ಬಳಸಿದ್ದು ವಿದೇಶಿಯರು, ಅದು ದೇಶದ ಅಸ್ಮಿತೆ ಹಾಗೂ ದೇಶವು ಪ್ರತಿಪಾದಿಸುವ ಮೌಲ್ಯಗಳನ್ನು 'ಭಾರತ' ಎಂಬ ಪದದಷ್ಟು ಚೆನ್ನಾಗಿ ಧ್ವನಿಸುವುದಿಲ್ಲ ಎಂಬ ನೆಲೆಯಲ್ಲಿ 'ಇಂಡಿಯಾ' ಪದ ಬಳಕೆಗೆ ವಿರೋಧ ವ್ಯಕ್ತವಾಗಿದ್ದಿದೆ. ಆದರೆ ಎರಡೂ ಪದಗಳು ತಮ್ಮ ಅರ್ಥವ್ಯಾಪ್ತಿಯ ವಿಚಾರದಲ್ಲಿ ಇತಿಹಾಸದುದ್ದಕ್ಕೂ ವಿಕಾಸಗೊಳ್ಳುತ್ತ ಬಂದಿವೆ. ಈ ಎರಡು ಪದಗಳ ಇರುವಿಕೆ ಹಾಗೂ ಸಂವಿಧಾನವು ಎರಡೂ ಪದಗಳನ್ನು ಮಾನ್ಯ ಮಾಡಿರುವುದು, ಆ ಇತಿಹಾಸದ ಭಿನ್ನ ತೊರೆಗಳನ್ನು ಮತ್ತು ಭಿನ್ನ ಬೇರುಗಳನ್ನು ಗುರುತಿಸಿರುವುದಕ್ಕೆ ಸಮ. ಭಿನ್ನ ಸಮುದಾಯಗಳು, ಭಿನ್ನ ಭಾಷೆಗಳು ಮತ್ತು ಭಿನ್ನ ಧಾರ್ಮಿಕ ಆಚರಣೆಗಳ ಜನರ ಅನುಭವಗಳು, ಅವರ ಗ್ರಹಿಕೆಗಳು ಮತ್ತು ಅವರ ಆಲೋಚನೆಗಳು ಇಲ್ಲಿನ ರಾಷ್ಟ್ರೀಯ ಅಸ್ಮಿತೆಯನ್ನು ರೂಪಿಸಿವೆ. ಯಾವುದೋ ಒಂದನ್ನು ತಿರಸ್ಕರಿಸಿ, ಇನ್ನೊಂದನ್ನು ಮಾತ್ರ ಒಪ್ಪಿಕೊಳ್ಳುವುದು ತಪ್ಪು.

'ಇಂಡಿಯಾ' ಪದವನ್ನು ಕೈಬಿಟ್ಟು 'ಭಾರತ' ಎಂಬ ಪದವನ್ನು ಮಾತ್ರ ಬಳಸಬೇಕು ಎಂದಾದರೆ ಅದಕ್ಕೆ ಸಂವಿಧಾನ ತಿದ್ದುಪಡಿ ಮಾತ್ರವಲ್ಲದೆ, ವ್ಯಾಪಕ ಸಮಾಲೋಚನೆಯ ಅಗತ್ಯವಿದೆ. ಒಮ್ಮತವನ್ನು ರೂಪಿಸುವ ಅಗತ್ಯ ಇದೆ. ಯಾವುದೋ ಒಂದು ರಾಜಕೀಯ ಪಕ್ಷದ ಅಭಿರುಚಿ ಅಥವಾ ಸೈದ್ಧಾಂತಿಕ ಒಲವುಗಳಿಗೆ ಅನುಗುಣವಾಗಿ ದೇಶದ ಹೆಸರನ್ನು ಬದಲಾಯಿಸಲಾಗದು; ಅದು ಆಡಳಿತದಲ್ಲಿ ಇರುವ ಪಕ್ಷವಾದರೂ ಸರಿ. 'ಭಾರತ' ಎಂಬ ಪದವೂ ಈ ದೇಶವನ್ನು ಪೂರ್ತಿಯಾಗಿ ಪ್ರತಿನಿಧಿಸುವುದಿಲ್ಲ ಎಂದು ಕೆಲವರು ಭಾವಿಸುವ ಅಪಾಯ ಇದೆ; ಏಕೆಂದರೆ, ಆ ಪದವು ದೇಶದ ಉತ್ತರ ಭಾಗದ ಒಂದು ರಾಜವಂಶದ ಜೊತೆ ಬೆಸೆದುಕೊಂಡಿದೆ ಎಂದು ಕೆಲವರು ಭಾವಿಸಬಹುದು. ಹಿಂದೂ, ಹಿಂದಿ ಪದಗಳ ಬೇರುಗಳು ಕೂಡ ಪರ್ಷಿಯಾದಲ್ಲಿವೆ. ರಾಜಕೀಯ ಸನ್ನಿವೇಶವು ವಿಷಮಗೊಂಡಿರುವ ಹೊತ್ತಿನಲ್ಲಿ, 'ಭಾರತ' ಪದಕ್ಕೆ ಹೆಚ್ಚಿನ ಆದ್ಯತೆ ನೀಡುವುದು, 'ಇಂಡಿಯಾ' ಪದವನ್ನು ಕೈಬಿಡುವುದನ್ನು ಸಿದ್ಧಾಂತವೊಂದರ ಹೇರಿಕೆ ಎಂಬಂತೆ ಕಾಣಬಹುದು. ಅದಕ್ಕೆ ವಿರೋಧ ವ್ಯಕ್ತವಾಗಬಹುದು. 'ಭಾರತ' ಹಾಗೂ 'ಇಂಡಿಯಾ' ಪದಗಳನ್ನು ಒಟ್ಟೊಟ್ಟಿಗೆ ಇರಿಸಿಕೊಳ್ಳಲು ಅಗತ್ಯವಿರುವ ಬೌದ್ಧಿಕ ಚೈತನ್ಯ ದೇಶದ ಪ್ರಜೆಗಳಿಗೆ ಇದೆ.

ದಿನದ ಟ್ವೀಟ್


ಆಶಾದಾಯಕ ಬೆಳವಣಿಗೆ



ದೇಶದಲ್ಲಿ ಅಂತರ್ಜಾತಿ ವಿವಾಹಗಳು ಹೆಚ್ಚಾಗಿ ನಡೆಯುವ ರಾಜ್ಯಗಳಲ್ಲಿ ಪಂಜಾಬ್ ಒಂದಾಗಿದೆ. ಅಂತರ್ಜಾತಿ ವಿವಾಹಗಳಲ್ಲಿ ರಾಷ್ಟ್ರೀಯ ಸರಾಸರಿ ಪ್ರಮಾಣ ಶೇ 9.9ರಷ್ಟು. ಪಂಜಾಬ್‌ನಲ್ಲಿ ಈ ಪ್ರಮಾಣ ಶೇ 22.5ರಷ್ಟು ಇದೆ.

ಗುರ್‌ಶಂಷೀರ್ ಸಿಂಗ್, ಪತ್ರಕರ್ತ

ಕಿಡಿನುಡಿ



ಉತ್ತರಪ್ರದೇಶದ ದಿಟ್ಟ ಐಎಎಸ್ ಅಧಿಕಾರಿ ದಿವ್ಯಾ ಮಿತ್ತಲ್ ಅವರು ಮಿರ್ಜಾಪುರ ಜಿಲ್ಲೆಯ ಕುಗ್ರಾಮವಾದ ಲಾಸುರಿಯಾ ಘಾಟ್‌ಗೆ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಿ, ಮೊದಲ ನಲ್ಲಿಯನ್ನು ಹೆಮ್ಮೆಯಿಂದ ತಿರುಗಿಸಿದ್ದಾರೆ. ಆದರೆ ಈ ಕೆಲಸದ ಕೀರ್ತಿ ತಮಗೆ ದಕ್ಕದು ಎಂಬ ಕಾರಣಕ್ಕೆ ಸ್ಥಳೀಯ ರಾಜಕಾರಣಿಗಳು ಅವರನ್ನು ವರ್ಗಾವಣೆ ಮಾಡಿಸಿದ್ದಾರೆ. ಈ ಕಾರ್ಯವು ಹರ್ ಘರ್ ಜಲ್ ಯೋಜನೆಯಡಿ ಕಾರ್ಯಗತಗೊಂಡಿದೆ ಎಂದು ಹೇಳಿದ್ದಾರೆ. ಎಂತಹ ಚಿಲ್ಲರೆ ರಾಜಕಾರಣ.

ಯಶೋವರ್ಧನ್ ಝಾ ಆಜಾದ್, ಉದ್ಯಮಿ, ನಿವೃತ್ತ ಐಪಿಎಸ್ ಅಧಿಕಾರಿ

25 ವರ್ಷಗಳ ಹಿಂದೆ
ಬುಧವಾರ, 9-9-1998

• ಸದ್ದಿಲ್ಲದೆ ರಾಜ್ಯಕ್ಕೆ ಬಂದ ಸೀಸರಹಿತ ಪೆಟ್ರೋಲ್

ಬೆಂಗಳೂರು, ಸೆ. 8– ಪೆಟ್ರೋಲ್ ಕುರಿತು ಏನೇ ಸಂಭವಿಸಿದರೂ ದೊಡ್ಡ ಸುದ್ದಿಯಾಗುವ ಈ ದಿನಗಳಲ್ಲಿ, ಸೀಸರಹಿತ ಪೆಟ್ರೋಲ್ ಮಾರಾಟ ವ್ಯವಸ್ಥೆ ಹೆಚ್ಚು ಸದ್ದುಗದ್ದಲ ಇಲ್ಲದೆ ರಾಜ್ಯದ ರಾಜಧಾನಿಯಲ್ಲಿ ಜಾರಿಗೆ ಬಂದಿದೆ; ಜತೆಗೆ ಕೆಲವು ಆರಂಭಿಕ ಸಮಸ್ಯೆಗಳನ್ನೂ ತನ್ನೊಡನೆ ಹೊತ್ತು ತಂದಿದೆ.

ಕೆಲ ದಿನಗಳ ಹಿಂದೆ ಬೆಂಗಳೂರಿನ ಕೆಲವು ಪೆಟ್ರೋಲ್ ಬಂಕ್‌ಗಳಲ್ಲಿ ಆರಂಭವಾಗಿರುವ ಸೀಸರಹಿತ ಪೆಟ್ರೋಲ್ ಮಾರಾಟ ವ್ಯವಸ್ಥೆ ಹಂತಹಂತವಾಗಿ ಇಡೀ ರಾಜ್ಯದಲ್ಲಿ ಜಾರಿಯಾಗಲಿದೆ.

• ಬರುವಾ ವರ್ಗಾವಣೆ: ಕೇಂದ್ರಕ್ಕೆ ಸುಪ್ರೀಂ ಕೋರ್ಟ್ ಛೀಮಾರಿ

ನವದೆಹಲಿ, ಸೆ. 8 (ಪಿಟಿಐ): ಜಾರಿ ನಿರ್ದೇಶನಾಲಯದ ನಿರ್ದೇಶಕ ಎಂ.ಕೆ.ಬೆಜ್‌ಬರುವಾ ಅವರ ವರ್ಗಾವಣೆಯನ್ನು ಸಮರ್ಥಿಸಿ ನೀಡಿದ ಪ್ರಮಾಣಪತ್ರ, ತಪ್ಪು ಮಾಹಿತಿಗಳಿಂದ ಕೂಡಿದೆ ಎಂದು ಸುಪ್ರೀಂ ಕೋರ್ಟ್ ಇಂದು ಕೇಂದ್ರ ಸರ್ಕಾರಕ್ಕೆ ಛೀಮಾರಿ ಹಾಕಿದೆ.

ಸೂಕ್ಷ್ಮ ಹುದ್ದೆಯಲ್ಲಿರುವ ಅಧಿಕಾರಿಗಳನ್ನು ಆಗಾಗ್ಗೆ ವರ್ಗಾವಣೆ ಮಾಡುವ ಕುರಿತ ತನ್ನ ತೀರ್ಪನ್ನು 'ಸಂಪೂರ್ಣವಾಗಿ ತಿರುಚಲಾಗಿದೆ' ಎಂದು ಕೋರ್ಟ್ ಹೇಳಿದೆ.

50 ವರ್ಷಗಳ ಹಿಂದೆ
ಭಾನುವಾರ, 9-9-1973

• ಸರ್ಕಾರಿ ಕೈಗಾರಿಕೆಗಳಲ್ಲಿ ಸ್ಥಳೀಯರಿಗೆ ಆದ್ಯತೆ: ಕೇಂದ್ರದ ಸುತ್ತೋಲೆ

ಬೆಂಗಳೂರು, ಸೆ. 8– ರಾಜ್ಯದಲ್ಲಿರುವ ಸರ್ಕಾರಿ ಕ್ಷೇತ್ರದ ಕೈಗಾರಿಕೆಗಳಲ್ಲಿ ಮಾಸಿಕ 500 ರೂ.ವರೆಗೆ ವೇತನ ಪಡೆಯುವ ಹುದ್ದೆಗಳಿಗೆ ಸ್ಥಳೀಯರನ್ನೇ ನೇಮಕ ಮಾಡಬೇಕೆಂಬ ಸುತ್ತೋಲೆಯನ್ನು ಕೇಂದ್ರ ಸರ್ಕಾರ ಇತ್ತೀಚೆಗೆ ಕಳುಹಿಸಿದೆ ಎಂದು ಕೈಗಾರಿಕೆ ಸಚಿವ ಎಸ್.ಎಂ.ಕೃಷ್ಣ ವಿಧಾನಸಭೆಯಲ್ಲಿ ತಿಳಿಸಿದರು.

ರಾಜ್ಯದಲ್ಲಿರುವ ಖಾಸಗಿ ಅಥವಾ ಸರ್ಕಾರಿ ಕೈಗಾರಿಕೆಗಳಲ್ಲಿ ಕನಿಷ್ಠ ಶೇಕಡ 80ರಷ್ಟು ಹುದ್ದೆಗಳನ್ನು ಮೈಸೂರಿನವರಿಗೆ ಮೀಸಲಿಡುವಂತೆ ಶಾಸನ ರಚಿಸಬೇಕೆಂಬ ಕೆ.ಶ್ರೀರಾಮುಲು ಅವರ ಖಾಸಗಿ ನಿರ್ಣಯದ ಮೇಲೆ ನಡೆದ ಚರ್ಚೆಗೆ ಉತ್ತರ ನೀಡಿದ ಅವರು 'ಈ ಪ್ರಶ್ನೆಯನ್ನು ಸಂವಿಧಾನಕ್ಕೆ ಅನುಗುಣವಾಗಿ ಪರಿಶೀಲಿಸಬೇಕಾಗಿದೆ' ಎಂಬುದನ್ನು ಸ್ಪಷ್ಟಪಡಿಸಿದರು.

• ಒತ್ತಾಯಕ್ಕೆ ಮಣಿದು ಮುಖ್ಯಮಂತ್ರಿಗಳ ಬದಲಾವಣೆ ಅಸಾಧ್ಯ

ರಾಯಪುರ, ಸೆ. 8– ಭಿನ್ನಮತೀಯರ ಒತ್ತಾಯಕ್ಕೆ ಮಣಿದು ರಾಜ್ಯಗಳ ಮುಖ್ಯಮಂತ್ರಿಗಳನ್ನು ಬದಲಾಯಿಸುತ್ತಾ ಹೋಗಲು ಸಾಧ್ಯವಿಲ್ಲ ಎಂದು ಎ.ಐ.ಸಿ.ಸಿ ಪ್ರಧಾನ ಕಾರ್ಯದರ್ಶಿ ಚಂದ್ರಜಿತ್ ಯಾದವ್ ಸ್ಪಷ್ಟಪಡಿಸಿದರು.

ಕಾಂಗ್ರೆಸ್ಸನ್ನು ಬಿಟ್ಟುಹೋಗಿರುವ ವ್ಯಕ್ತಿಗಳನ್ನು ಪ್ರದೇಶ ಕಾಂಗ್ರೆಸ್ ಸಮಿತಿಗಳು ಪರೀಕ್ಷಿಸಿ ಶಿಫಾರಸು ಮಾಡಿದ ನಂತರ ಅಂತಹವರನ್ನು ವೈಯಕ್ತಿಕವಾಗಿ ಮತ್ತೆ ಪಕ್ಷಕ್ಕೆ ಸೇರಿಸಿಕೊಳ್ಳುವ ಬಗ್ಗೆ ಪರಿಶೀಲಿಸಬಹುದು. ಆದರೆ ಮೂಲಭೂತ ನೀತಿಗಳ ಮೇಲಿನ ಭಿನ್ನಾಭಿಪ್ರಾಯದಿಂದ ಪಕ್ಷ ಬಿಟ್ಟು ಹೋಗಿರುವವರನ್ನು ಸೇರಿಸಿಕೊಳ್ಳಲಾಗದು ಎಂದು ಸುದ್ದಿಗಾರರ ಪ್ರಶ್ನೆಗಳಿಗೆ ಉತ್ತರಿಸಿದರು.

ವಾಡಾ ಪಟ್ಟಿಯಲ್ಲಿ ಭಾರತಕ್ಕೆ ಎರಡನೇ ಸ್ಥಾನ; ಜೂನಿಯರ್ ಹಂತಕ್ಕೂ ವ್ಯಾಪಿಸಿದ ಪಿಡುಗು

ಡೋಪಿಂಗ್‌ಗೆ 'ಮದ್ದು' ಅರೆಯುವ ಕಾಲ



ವಿಶ್ಲೇಷಣೆ
ಗಿರೀಶ ದೊಡ್ಡಮನಿ

ಚೀನಾದಲ್ಲಿ ಏಷ್ಯನ್ ಕ್ರೀಡಾಕೂಟ ಆರಂಭವಾಗಲು ಇನ್ನೇನು ಕೆಲವೇ ದಿನಗಳು ಉಳಿದಿವೆ. ಭಾರತದ ಅಥ್ಲೀಟ್‌ಗಳು ಎಷ್ಟು ಪದಕ ಜಯಿಸಬಹುದು ಎಂಬ ಲೆಕ್ಕಾಚಾರಗಳೂ ಆರಂಭವಾಗಿವೆ. ಆದರೆ ಇತ್ತೀಚೆಗೆ ಬಂದ ಸುದ್ದಿಯೊಂದು ಕ್ರೀಡಾವಲಯದಲ್ಲಿ ಆಘಾತ ಮೂಡಿಸಿದೆ.

ಏಷ್ಯನ್ ಕ್ರೀಡಾಕೂಟಕ್ಕೆ ತೆರಳಲು ಆಯ್ಕೆಯಾಗಿದ್ದ ಭಾರತದ 14 ವರ್ಷದ ಈಜುಪಟುವೊಬ್ಬ ಉದ್ದೀಪನ ಮದ್ದು ಸೇವನೆ ಮಾಡಿ ಸಿಕ್ಕಿಬಿದ್ದಿದ್ದಾನೆ. ಒಟ್ಟು ಏಳು ಜೂನಿಯರ್ ಕ್ರೀಡಾಪಟುಗಳು ರಾಷ್ಟ್ರೀಯ ಮತ್ತು ಅರ್ಹತಾ ಚಾಂಪಿಯನ್‌ಷಿಪ್ ನಂತರ ನಡೆದ ಮಾದರಿಗಳ (ಮೂತ್ರ ಹಾಗೂ ರಕ್ತ) ಪರೀಕ್ಷೆಯಲ್ಲಿ ಉದ್ದೀಪನ ಮದ್ದು ಸೇವಿಸಿರುವುದು ಪತ್ತೆಯಾಗಿದೆ.

'ಅಬ್ಬಾ... ಇವರು ಏಷ್ಯನ್ ಕ್ರೀಡಾಕೂಟಕ್ಕೆ ಹೋಗಿ ಅಲ್ಲಿ ಸಿಕ್ಕಿಬಿದ್ದಿದ್ದರೆ ದೇಶದ ಮಾನ ಮರ್ಯಾದೆ ಹರಾಜಾಗುತ್ತಿತ್ತು. ಇಲ್ಲಿಯೇ ಸಿಕ್ಕಿಹಾಕಿಕೊಂಡಿದ್ದು ಒಳ್ಳೆಯದಾಯಿತು' ಎಂದು ಸಮಾಧಾನಪಟ್ಟುಕೊಂಡು ಸುಮ್ಮನಾಗುವ ವಿಷಯ ಇದಲ್ಲ. ಈ ಕ್ರೀಡಾಪಟುಗಳಿಂದ ಪಡೆದ ಮಾದರಿಯಲ್ಲಿ ನಿಷೇಧಿತ ಸ್ಟಿರಾಯ್ಡ್ ಅಂಶಗಳು ಪತ್ತೆಯಾಗಿರುವುದು ಆತಂಕಕಾರಿ ಬೆಳವಣಿಗೆ. ಜೂನಿಯರ್ ಹಂತದಲ್ಲಿಯೂ ಉದ್ದೀಪನ ಮದ್ದು ತನ್ನ ಕಬಂಧಬಾಹುಗಳನ್ನು ಚಾಚುತ್ತಿರುವುದರ ಸಂಕೇತ ಇದು. ಕೆಲವು ತಿಂಗಳುಗಳ ಹಿಂದೆ ದಾವಣಗೆರೆ ಸಮೀಪದ ಊರೊಂದರಲ್ಲಿ ನಡೆದಿದ್ದ ರಾಷ್ಟ್ರೀಯ ಕುಸ್ತಿ ಪಂದ್ಯಾವಳಿ ಸ್ಥಳದ ಸಮೀಪ ನಿಷೇಧಿತ ಮದ್ದುಗಳ ಸ್ಯಾಷೆಗಳು, ಸಿರಿಂಜ್‌ಗಳು ಪತ್ತೆಯಾಗಿದ್ದು ವರದಿಯಾಗಿತ್ತು.

ಈ ರೀತಿಯಾಗಲು ಆಟಗಾರರಿಗೆ ಅರಿವಿನ ಕೊರತೆ ಇದೆಯೇ? ಅವರಿಗೆ ತಿಳಿವಳಿಕೆ ನೀಡಬೇಕಾದ ಫೆಡರೇಷನ್‌ಗಳು, ತರಬೇತುದಾರರು ಹಾಗೂ ತಂಡದ ನೆರವು ಸಿಬ್ಬಂದಿಯ ಕರ್ತವ್ಯಲೋಪ ಕಾರಣವೇ ಎಂಬ ಪ್ರಶ್ನೆಗಳು ಮೂಡುವುದು ಸಹಜ.

ಜೂನಿಯರ್ ಕ್ರೀಡಾಪಟುಗಳಲ್ಲಿ ತಿಳಿವಳಿಕೆ ಇಲ್ಲದಿರಬಹುದು. ಕೋಚ್‌ಗಳು ಮತ್ತಿತರರ ಕೈವಾಡವೂ ಇರಬಹುದು. ಆದರೆ ದ್ಯುತಿ ಚಾಂದ್, ಒಲಿಂಪಿಯನ್ ಡಿಸ್ಕಸ್ ಥ್ರೋ ಅಥ್ಲೀಟ್ ಕಮಲ್‌ಪ್ರೀತ್ ಕೌರ್, ಜುಡೊ ಪಟು ಜಸ್ಲೀನ್ ಸಿಂಗ್, ಜಿಮ್ನಾಸ್ಟ್ ದೀಪಾ ಕರ್ಮಾಕರ್, ಜಾವೆಲಿನ್ ಥ್ರೋ ಪಟು ಶಿವಪಾಲ್ ಸಿಂಗ್, ಕ್ರಿಕೆಟಿಗ ಪೃಥ್ವಿ ಶಾ ಅವರಂತಹ ಅನುಭವಿ ಕ್ರೀಡಾಪಟುಗಳೂ ಈ ಜಾಲಕ್ಕೆ ಬಿದ್ದಿರುವುದು ಸೋಜಿಗ.


ಅದಕ್ಕಾಗಿಯೇ ಅತಿ ಹೆಚ್ಚು ಉದ್ದೀಪನ ಮದ್ದು ಸೇವನೆ ಪ್ರಕರಣಗಳು ವರದಿಯಾಗುವ ದೇಶಗಳ ಪಟ್ಟಿಯಲ್ಲಿ ಭಾರತ ಎರಡನೇ ಸ್ಥಾನದಲ್ಲಿದೆ. ಇತ್ತೀಚೆಗಷ್ಟೇ ವಿಶ್ವ ಉದ್ದೀಪನ ಮದ್ದು ತಡೆ ಘಟಕ (ವಾಡಾ) ಪ್ರಕಟಿಸಿರುವ ಪಟ್ಟಿಯಲ್ಲಿ ರಷ್ಯಾ ಅಗ್ರಸ್ಥಾನದಲ್ಲಿದ್ದು, ಭಾರತ ನಂತರದ ಸ್ಥಾನದಲ್ಲಿದೆ. ಇದಕ್ಕೆ ಇಲ್ಲಿಯ ರಾಷ್ಟ್ರೀಯ ಉದ್ದೀಪನ ಮದ್ದು ತಡೆ ಘಟಕದ (ನಾಡಾ) ಅದಕ್ಷತೆಯೂ ಕಾರಣ ಎಂದು ವಾಡಾ ಇತ್ತೀಚೆಗೆ ಕಿಡಿಕಾರಿತ್ತು.

ಅಥ್ಲೀಟ್‌ಗಳ ಚಲನವಲನ ಮಾಹಿತಿ ನಿರ್ವಹಣೆ ಮತ್ತು ಉದ್ದೀಪನ ಮದ್ದು ಸೇವನೆ ಪರೀಕ್ಷೆಗಳಲ್ಲಿ ವೈಫಲ್ಯವನ್ನೂ ವಾಡಾ ಗುರುತಿಸಿದೆ. ತಾನೇ ನಡೆಸಿದ ತನಿಖೆಯಲ್ಲಿ 12 ಅಥ್ಲೀಟ್‌ಗಳು ಡೋಪಿಂಗ್ ಮಾಡಿರುವುದನ್ನು ಖಚಿತಪಡಿಸಿದೆ. ಅಲ್ಲದೆ ಚಲನವಲನ ದಾಖಲಾಗದ 97 ಪ್ರಕರಣಗಳನ್ನು ಪತ್ತೆ ಮಾಡಿದೆ. ಇದರಲ್ಲಿ ಭಾರತದ 70 ಅಥ್ಲೀಟ್‌ಗಳೂ ಸೇರಿದ್ದಾರೆ.

ವಾಡಾದ ಸ್ವತಂತ್ರವಾದ ಗುಪ್ತಚರ ಮತ್ತು ತನಿಖಾ ಸಂಸ್ಥೆಯ ವರದಿಯಲ್ಲಿ ಈ ಮಾಹಿತಿಗಳನ್ನು ಬಹಿರಂಗಪಡಿಸಲಾಗಿದೆ. ಭಾರತದಲ್ಲಿ ನಾಡಾ ನಡೆಸುವ ಪರೀಕ್ಷಾ ವಿಧಾನಗಳು ಸಮಂಜಸವಾಗಿಲ್ಲ. ವಾಡಾ ನಿಯಮಾವಳಿ ಮತ್ತು ಅಂತರರಾಷ್ಟ್ರೀಯ ದರ್ಜೆಗೆ ಅನುಗುಣವಾಗಿ ಇಲ್ಲ ಎಂದೂ ಉಲ್ಲೇಖಿಸಿದೆ. 2018ರಿಂದಲೇ 'ಆಪರೇಷನ್ ಕರೋಸೆಲ್' ಆರಂಭಿಸಿದೆ. ಅದರ ಪ್ರಕಾರ ನಾಡಾದ ನೋಂದಾಯಿತ ಪರೀಕ್ಷೆ ತಂಡ (ಆರ್‌ಟಿಪಿ) ಸರಿಯಾದ ಮೇಲ್ವಿಚಾರಣೆ ನಡೆಸಿಲ್ಲ. ಅಥ್ಲೀಟ್‌ಗಳ ಚಲನವಲನದ ಮಾಹಿತಿ ನಿರ್ವಹಣೆ ಸೂಕ್ತವಾಗಿಲ್ಲ ಎಂದೂ ವಾಡಾ ಅಸಮಾಧಾನ ವ್ಯಕ್ತಪಡಿಸಿತ್ತು.

ಭಾರತದಲ್ಲಿ ಕ್ರೀಡಾಪಟುಗಳ ಸಂಖ್ಯೆ ಹೆಚ್ಚಾಗುತ್ತಿದೆ ಮತ್ತು ತಂತ್ರಜ್ಞಾನ ಬಳಕೆ ವೃದ್ಧಿಯಾಗುತ್ತಿದೆ. ಈ ಕಾರಣದಿಂದ ಹೆಚ್ಚಿನ ಸಂಖ್ಯೆಯಲ್ಲಿ ಮಾದರಿಗಳನ್ನು ಸಂಗ್ರಹಿಸಲಾಗುತ್ತಿದೆ. ಆದರೆ, ದೆಹಲಿಯಲ್ಲಿ ಇರುವ ಏಕೈಕ ಪ್ರಯೋಗಾಲಯದಲ್ಲಿ ಪರೀಕ್ಷೆ ನಡೆಸಬೇಕು. ಇದರಿಂದಾಗಿ ಫಲಿತಾಂಶಗಳು ಬರುವುದು ವಿಳಂಬವಾಗುತ್ತಿದೆ.

'ಅಂತರರಾಷ್ಟ್ರೀಯ ಮಟ್ಟದಲ್ಲಿ ಮದ್ದು ಪರೀಕ್ಷಾ ವಿಧಾನಗಳು ಬಹಳ ಮುಂದುವರಿದಿವೆ. ತಂತ್ರಜ್ಞಾನ ಬಹಳಷ್ಟು ಸುಧಾರಣೆಯಾಗಿದೆ. ಯಾವುದೇ ನಿಷೇಧಿತ ಮದ್ದು ಸೇವನೆ ಮಾಡಿದರೂ ಒಂದಿಲ್ಲೊಂದು ಹಂತದಲ್ಲಿ ಸಿಕ್ಕಿಬೀಳುವುದು ಖಚಿತ. ಮೊದಲು ಮೂತ್ರದ ಮಾದರಿ ಮತ್ತು ರಕ್ತದ ಮಾದರಿಗಳನ್ನು ಪರೀಕ್ಷಿಸಲಾಗುತ್ತಿತ್ತು. ಈಗ ಡಿಬಿಎಸ್‌ಟಿ ವಿಧಾನ ಅಂದರೆ ರಕ್ತದ ಒಣಗಿದ ಕಲೆಗಳ ಪರೀಕ್ಷೆ ಆರಂಭಿಸಲಾಗಿದೆ. ಈ ವಿಧಾನದಲ್ಲಿ ಕ್ರೀಡಾಪಟುವಿನ ರಕ್ತದ ಕೆಲವು ಹನಿಗಳನ್ನು ಕಾಗದದ (ವಿಶೇಷ ಬ್ಲಾಟಿಂಗ್ ಪೇಪರ್) ಮೇಲೆ ಹಾಕಲಾಗುತ್ತದೆ. ಅದು ಒಣಗಿದ ನಂತರ ಪ್ಯಾಕ್ ಮಾಡಿ ಪ್ರಯೋಗಾಲಯಕ್ಕೆ ಕಳಿಸಲಾಗುತ್ತದೆ. ಅಲ್ಲಿ ಅದನ್ನು ಪರೀಕ್ಷೆ ಮಾಡಲಾಗುತ್ತದೆ. ಈ ವಿಧಾನವು ಈಗ ಹೆಚ್ಚು ಅನುಕೂಲ ಮತ್ತು ರವಾನೆಯೂ ಸುಲಭ.



ಅಥ್ಲೀಟ್‌ಗಳಿಗೂ ಹೆಚ್ಚು ತೊಂದರೆ ಇಲ್ಲ. ಫಲಿತಾಂಶ ಕೂಡ ಬೇಗ ಸಿಗುತ್ತದೆ. ಏಷ್ಯಾಮಟ್ಟದ ಟೂರ್ನಿಗಳಲ್ಲಿ ಇದು ನಡೆಯಲಿದೆ. ಆದರೆ ಭಾರತದಲ್ಲಿ ಇದು ಇನ್ನೂ ಬಳಕೆಗೆ ಬಂದಿರುವ ಬಗ್ಗೆ ಮಾಹಿತಿ ಇಲ್ಲ' ಎಂದು ಫಿಫಾ ಮತ್ತು ಏಷ್ಯಾ ಫುಟ್‌ಬಾಲ್ ಕಾನ್ಫೆಡರೇಷನ್ (ಎಎಫ್‌ಸಿ) ಡೋಪಿಂಗ್ ನಿಯಂತ್ರಣ ಅಧಿಕಾರಿ ಹಾಗೂ ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ ವೈದ್ಯಕೀಯ ಸಮಿತಿ ಮುಖ್ಯಸ್ಥ ಡಾ. ಕಿರಣ ಕುಲಕರ್ಣಿ ಹೇಳುತ್ತಾರೆ.

ಕ್ರೀಡಾಪಟುಗಳು ಡೋಪಿಂಗ್ ಜಾಲಕ್ಕೆ ಬೀಳಲು ಕೆಲವು ಕಾರಣಗಳನ್ನೂ ಅವರು ಗುರುತಿಸಿದ್ದಾರೆ. ಅಥ್ಲೀಟ್‌ಗಳಿಗೆ ಬಾಲ್ಯದಿಂದಲೇ ನಿಷೇಧಿತ ಮದ್ದುಗಳ ಬಳಕೆಯ ಕುರಿತು ಅರಿವು ಮೂಡಿಸದಿರುವುದು ಪ್ರಮುಖ ಕಾರಣ. ಅಲ್ಲದೆ, ಅಥ್ಲೀಟ್‌ಗಳು ತಮಗೆ ಅನಾರೋಗ್ಯ ಅಥವಾ ಗಾಯದ ಸಮಸ್ಯೆಗಳಾದಾಗ ಅರ್ಹ ಕ್ರೀಡಾವೈದ್ಯರ ಬಳಿಯೇ ಚಿಕಿತ್ಸೆ ಪಡೆಯಬೇಕು. ಕ್ರೀಡಾ ವೈದ್ಯರಿಗೆ ನಿಷೇಧಿತ ಮದ್ದುಗಳ ಅರಿವು ಇರುವುದರಿಂದ ಸೂಕ್ತ ಔಷಧಿಗಳನ್ನು ನೀಡುತ್ತಾರೆ. ಆದ್ದರಿಂದ ಸಂಭವನೀಯ ಅಪಾಯವನ್ನು ತಪ್ಪಿಸಬಹುದು. ಇನ್ನೊಂದೆಡೆ, ಕೆಲವು ಫಿಸಿಯೊಥೆರಪಿಸ್ಟ್‌ಗಳು, ಟ್ರೇನರ್‌ಗಳು ಮತ್ತು ಜಿಮ್ನಾಷಿಯಂಗಳಲ್ಲಿರುವ ತರಬೇತುದಾರರು ಪೌಷ್ಟಿಕ ಆಹಾರದ ಹೆಸರಿನಲ್ಲಿ ನೀಡುತ್ತಿರುವ ಔಷಧಿಗಳು ಅಪಾಯಕಾರಿಯಾಗುತ್ತಿವೆ. ಇವುಗಳಲ್ಲಿಯೂ ಸ್ಟಿರಾಯ್ಡ್‌ಗಳು ಇರುತ್ತವೆ. ಅವು ಆ ಕ್ಷಣಕ್ಕೆ ಸಾಮರ್ಥ್ಯ ವೃದ್ಧಿ ಮಾಡಿದರೂ ದೀರ್ಘ ಸಮಯದಲ್ಲಿ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತವೆ. ಹಾರ್ಮೋನು ಅಸಮತೋಲನ, ಹೃದಯಾಘಾತ, ಮೂತ್ರಪಿಂಡ ವೈಫಲ್ಯದಂತಹ ತೊಂದರೆಗಳಿಗೆ ತುತ್ತಾಗುವ ಸಂಭವಗಳು ಹೆಚ್ಚು. ಇನ್ನೊಂದೆಡೆ, ಸಿಕ್ಕಿಬಿದ್ದರೆ ಕ್ರೀಡಾಪಟುವಿನ ಮತ್ತು ದೇಶದ ಮಾನವೂ ಹರಾಜಾಗುತ್ತದೆ.

ಕ್ರೀಡಾಪಟುಗಳಿಗೆ ನಿಷೇಧವಾಗಿರುವ ಕೆಲವು ಸ್ಟಿರಾಯ್ಡ್‌ಗಳನ್ನು ಕ್ರೀಡಾಪಟುಗಳಲ್ಲದ ರೋಗಿಗಳ ಚಿಕಿತ್ಸೆಗೆ ಬಳಕೆ ಮಾಡಲು ಅನುಮತಿ ಇದೆ. ಅಥ್ಲೀಟ್‌ಗಳು ತಮಗೆ ಅನಾರೋಗ್ಯವಿದ್ದಾಗ ಇಂತಹ ಚಿಕಿತ್ಸೆಗೆ ಒಳಗಾದರೆ ಮುಂದೆ ಸ್ಪರ್ಧೆಯ ಸಂದರ್ಭದಲ್ಲಿ ತೊಂದರೆಯಾಗುವುದು ಸಹಜ. ಆದ್ದರಿಂದ ಯಾವುದೇ ಗುಳಿಗೆ, ಔಷಧಿ ತೆಗೆದುಕೊಳ್ಳುವ ಮುನ್ನ ಕ್ರೀಡಾ ವೈದ್ಯರಿಂದ ಸಲಹೆ ಪಡೆಯುವುದು ಸೂಕ್ತ.

ಇದೆಲ್ಲಕ್ಕಿಂತ ಹೆಚ್ಚಾಗಿ ಇಂತಹ ಅರಿವಿನ ಬೆಳಕು ಹಚ್ಚುವ ಅಚ್ಚುಕಟ್ಟಾದ ವ್ಯವಸ್ಥೆಯೊಂದು ಅಭಿವೃದ್ಧಿಯಾಗಬೇಕಾದ ತುರ್ತು ಈಗ ಇದೆ. ನೀರಜ್ ಚೋಪ್ರಾ ಅವರಂತಹ ಅಥ್ಲೀಟ್‌ಗಳು ಭಾರತಕ್ಕೆ ಚಿನ್ನದ ಕಿರೀಟ ತೊಡಿಸಿದ್ದಾರೆ. ಪಿ.ವಿ. ಸಿಂಧು, ಮೀರಾಬಾಯಿ ಚಾನು, ಎಚ್.ಎಸ್. ಪ್ರಣಯ್, ಅಭಿನವ್ ಬಿಂದ್ರಾ, ಬಜರಂಗ್ ಪೂನಿಯಾ ಮತ್ತಿತರ ಕ್ರೀಡಾಪಟುಗಳು ಕೀರ್ತಿಪತಾಕೆ ಹಾರಿಸಿದ್ದಾರೆ. ಅವರ ಸ್ಫೂರ್ತಿಯಿಂದ ಕ್ರೀಡೆಗಳತ್ತ ವಾಲುತ್ತಿರುವ ನವಪ್ರತಿಭೆಗಳ ದಂಡು ದೊಡ್ಡದಿದೆ. ಆದರೆ ಯಶಸ್ಸು ಎಂಬುದು ರಾತ್ರಿ ಬೆಳಗಾಗುವುದರೊಳಗೆ ಒಲಿಯುವುದಿಲ್ಲ. ಅದಕ್ಕಾಗಿ ನಿರಂತರ ಶ್ರಮ, ಆತ್ಮವಿಶ್ವಾಸ ಇರಬೇಕು. ಅದಕ್ಕಾಗಿ ಡೋಪಿಂಗ್‌ನಂತಹ ಅಡ್ಡಹಾದಿ ಹಿಡಿಯುವ ಆಟಗಾರರೂ ಇದ್ದಾರೆ. ಇದು ತಪ್ಪಬೇಕು. ಅದಕ್ಕಾಗಿ ಎಲ್ಲ ಕ್ರೀಡಾ ಫೆಡರೇಷನ್‌ಗಳೂ ವೃತ್ತಿಪರವಾಗಬೇಕು. ಕೇಂದ್ರ ಕ್ರೀಡಾ ಸಚಿವಾಲಯವು ಡೋಪಿಂಗ್ ಪಿಡುಗಿಗೆ ಮದ್ದು ಅರೆಯಲು ಆದ್ಯತೆ ನೀಡುವುದೇ?

ಚುರುಮುರಿ



ಸರ್ಕಾರಿ ಮೇವು!

• ತುರುವೇಕೆರೆ ಪ್ರಸಾದ್

'ಏನ್ರಲಾ? ಬಿತ್ತನೆ ಕೆತ್ತನೆ ಎಲ್ಲಾ ಬುಟ್ಟು ಸೋಂಬೇರಿ ಕಟ್ಟೇಲಿ ಕುಂತ್‌ಬುಟ್ರಿ' ಅಂದ ರಾಮಜ್ಜ.

'ನಾವೇನ್ ಬಿತ್ತುದು? ಸರ್ಕಾರದೋರು ಮೋಡ ಬಿತ್ತಿ ಮಳೆ ಬಂದ್ ಮ್ಯಾಕಲ್ವಾ ನಾವು ಹುಳ ಬಿದ್ ಕಾಳು ಬಿತ್ತೋದು' ಅಂದ ಗುದ್ಲಿಂಗ.

'ಪ್ರತಿವರ್ಷ ಈ ವೇಳ್ಯಾಗೆ ಆಕಾಶ್ದಾಗೆ ಮೋಡ ತೂರಾಡ್ತಾವು, ಈ ಸಲ ಬರ ತೂರಾಡ್ತಾ ಐತೆ. ಕೆಲಸಿಲ್ದೆ ಬೆಳ್‌ಬೆಳಿಗ್ಗೇನೆ ಎಣ್ಣೆ ಒಡ್ಕಂಡು ಜನನೂ ತೂರಾಡ್ತಾವ್ರೆ' ಅಂದ ಮಾಲಿಂಗ.

'ಊ ಕಲಾ, ಬರ ಬಿದ್ದಿರೋ ಪಟ್ಟಿನ ರೆಡಿ ಮಾಡಿ ಮಡಿಕ್ಕಂಡವ್ರಂತೆ. ಈಚೆ ಬುಡೋದಷ್ಟೇ ಬಾಕಿ ಐತೆ ನೋಡು'.

'ಅದ್ರಲ್ಲೂ ನಮ್ ಕ್ಷೇತ್ರ ಸೇರ್ಸಿ, ನಮ್ದು ಸೇರ್ಸಿ ಅಂತ ಸಾನೆ ಜುಲುಮೆ ಮಾಡ್ತಾವ್ರಂತೆ ಸಾಸಕರು'.

'ಅದ್ಯಾಕ್ಲಾ? ಅದೇನ್ ಎಲೆಕ್ಷನ್ ಕ್ಯಾಂಡಿಡೇಟ್ಸ್ ಪಟ್ಟಿನಾ? ಬರ ಅನಸ್ಕೊಳ್ಳೋದ್ರಲ್ಲಿ ಏನ್ಲಾ ದೊಡ್ಡಸ್ತಿಕೆ ಐತೆ?'

'ಎಲ್ಲಾ ಕಡೆನೂ ಬರನೇ ಕಣ್ಲಾ! ಅಕ್ಕಿಗೆ ಬರ, ದುಡ್ಡಿಗೆ ಬರ, ರೇಸನ್ ಕಾರ್ಡಿಗೆ ಬರ, ಅನುದಾನಕ್ಕೆ ಬರ, ಇದ್‌ಬದ್ ದುಡ್ಡೆಲ್ಲಾ ಗ್ಯಾರಂಟಿಗಾಕವ್ರೆ. ಅನುದಾನ, ಮಣ್ಣು ಮಸಿ ಏನೂ ಇಲ್ಲ. ರೈತರಿಗೆ ಹೊಳೆ ಹರಿವೂ ಇಲ್ಲ, ಅಧಿಕಾರದಲ್ಲಿರೋರಿಗೆ ಒಳಹರಿವೂ ಇಲ್ಲ. ಬರ್ದಾಗಾದ್ರೂ ಒಂದಿಷ್ಟು ಗೆಬರ್ಕಳ್ಣಾ ಅಂದ್ಕಂಡಿರ್ಬೇಕು'.

'ಹೌದೌದು, ಬರ ಪರಿಹಾರ ಕಾಮಗಾರಿ, ಗೋಶಾಲೆ ನಿರ್ಮಾಣ ಅಂತೆಲ್ಲಾ ದುಡ್ಡು ಕಮಾಯಿಸ್ಬಹುದು ಬುಡು'.

'ಗೋಶಾಲೆ ಕಟ್ಟಕ್ಕೆ ದುಡ್ಡೆಲ್ಲೈತೆ ಅಂತೀನಿ'.

'ಸಾವಿರಾರು ಕನ್ನಡ ಶಾಲೆಗಳೇಲಿ ಮೇಷ್ಟ್ರೇ ಇಲ್ವಂತೆ. ಮಕ್ಕಳನ್ನ ಗೋ- ಶಾಲೆಗೆ ಅನ್ನೋರೇ ಇಲ್ಲ. ಅವನ್ನೇ ಗೋಶಾಲೆ ಮಾಡುದ್ರಾಯ್ತು. ಶಾಸ-ಕರು ಸಿಕ್ಕಷ್ಟು ಮಿಕ್ಕಷ್ಟು ಹಾಲು ಕುಡ್ಕತವೆ'.

'ಅಂಗೇ ಈ ಮೇವು ಅಂತನೂ ಒಂದಿಷ್ಟು ನುಂಗಿ ನೀರು ಕುಡಿಬಹುದು'.

'ಮತ್ ಬುಟ್ತಾರಾ? ಅದಕ್ಕೇ ಹೇಳೋದು ಎವೆರಿವನ್ ಲೈಕ್ಸ್ ಎ ಗುಡ್ ಡ್ರಾಟ್ ಅಂತ'.

'ಅದೆಲ್ಲಾ ಜನಪ್ರತಿನಿಧಿಗಳಿಗೆ ಆಯ್ತು. ಜನರ ಕತೆ ಯೋಳಪ್ಪ'.

'ಹುಟ್ಟಿಸಿದ ದೇವರು ಹುಲ್ ಮೇಯ್ಸ್‌ತಾನಾ? ಎಂಗೋ ಆಯ್ತದೆ ಬುಡು'.

'ಹೌದು, ಹುಲ್ಲೇ ಮೇಯುಸ್ಬೇಕು, ಅಕ್ಕಿ ಇಲ್ವಲ್ಲ' ಎಂದ ಪರ್ಮೇಶಿ. ಎಲ್ಲಾ ಗೊಳ್ಳೆಂದು ನಕ್ಕರು!

ಸಂಗತ

ಭರವಸೆಯ ಬೆಳಕು ನೀಡೋಣ

ಆತ್ಮಹತ್ಯೆಯನ್ನು ತಡೆಯುವುದು ಸಮಾಜದ ಎಲ್ಲರ ಕರ್ತವ್ಯ

• ಡಾ. ಕೆ.ಆರ್.ಶ್ರೀಧರ್

ಸಮಾಜವನ್ನು ಕಾಡುತ್ತಿರುವ ಪಿಡುಗುಗಳಲ್ಲಿ ಪ್ರಚಲಿತ ಹೆಚ್ಚಾಗುತ್ತಿರುವುದು ಆತ್ಮಹತ್ಯೆ ಮತ್ತು ಆತ್ಮಹತ್ಯೆ ಪ್ರಯತ್ನದ ಪ್ರಕರಣಗಳು. ಅಂಕಿಅಂಶಗಳ ಪ್ರಕಾರ, ಭಾರತದಲ್ಲಿ ಆತ್ಮಹತ್ಯೆಯಿಂದ ಪ್ರತಿವರ್ಷ ಒಂದು ಲಕ್ಷಕ್ಕೂ ಹೆಚ್ಚು ಮಂದಿ ಅಸುನೀಗುತ್ತಾರೆ. ಅದಕ್ಕಿಂತ ಇಪ್ಪತ್ತು ಪಟ್ಟು ಹೆಚ್ಚು ಮಂದಿ ಆತ್ಮಹತ್ಯೆಗೆ ಪ್ರಯತ್ನಿಸುತ್ತಾರೆ. ಆತ್ಮಹತ್ಯೆ ಕುರಿತು ಆಲೋಚಿಸುವವರು ಇಪ್ಪತ್ತೈದು ಪಟ್ಟು ಹೆಚ್ಚು ಮಂದಿ. ಅದರಲ್ಲಿಯೂ ಹದಿನೈದರಿಂದ ಇಪ್ಪತ್ತೊಂಬತ್ತು ವರ್ಷದೊಳಗಿನವರು ಈ ಪಿಡುಗಿಗೆ ಹೆಚ್ಚು ಬಲಿಯಾಗುತ್ತಿದ್ದಾರೆ.

ಒಂದು ಕಾಲದಲ್ಲಿ ಆತ್ಮಹತ್ಯೆ ಮತ್ತು ಆತ್ಮಹತ್ಯೆಗೆ ಪ್ರಯತ್ನಿಸುವವರನ್ನು ಅಪರಾಧಿಗಳು ಎಂದು ಪರಿಗಣಿಸಲಾಗುತ್ತಿತ್ತು. 'ಆತ್ಮಹತ್ಯೆ ಮತ್ತು ಆತ್ಮಹತ್ಯೆಯ ಪ್ರಯತ್ನವನ್ನು ಅಪರಾಧವೆಂದು ಪರಿಗಣಿಸಬಾರದು. ಅದಕ್ಕೆ ಮಾನಸಿಕ ಕ್ಷೋಭೆಯೇ ಕಾರಣ. ಅಂಥವರಿಗೆ ಆಪ್ತ ಸಲಹೆ ನೀಡಬೇಕು. ಆ ಮೂಲಕ ಅವರು ಬದುಕನ್ನು ಕಟ್ಟಿಕೊಳ್ಳಲು ಸಹಾಯ ಮಾಡಬೇಕು' ಎಂದು ಸುಪ್ರೀಂ ಕೋರ್ಟ್ ಕೆಲ ವರ್ಷಗಳ ಹಿಂದೆ ತೀರ್ಪು ನೀಡಿತು. ಆತ್ಮಹತ್ಯೆ ಮತ್ತು ಪ್ರಯತ್ನವು ಒಂದು ಕಳಂಕ ಎಂಬ ಭಾವನೆ ಈಗ ಉಳಿದಿಲ್ಲ.

ಇಂತಹ ಪ್ರಕರಣಗಳು ಸಂತ್ರಸ್ತ ವ್ಯಕ್ತಿಯ ಕುಟುಂಬ ಮತ್ತು ಸಮಾಜದ ಮೇಲೂ ಭೀಕರ ಪರಿಣಾಮವನ್ನು ಉಂಟುಮಾಡುತ್ತವೆ. ಮನೋವೈದ್ಯಕೀಯದಲ್ಲಿ ಆಳವಾದ ಸಂಶೋಧನೆಗಳು ನಡೆದು, ಆತ್ಮಹತ್ಯೆಗೆ ಕಾರಣಗಳನ್ನು ನಮ್ಮ ಮುಂದೆ ತೆರೆದಿಟ್ಟಿವೆ. ಆತ್ಮಹತ್ಯೆಗೆ ಕಾರಣಗಳನ್ನು ಅಧ್ಯಯನ ಮಾಡಿದವರಲ್ಲಿ ಎಮಿಲ್ ಡರ್ಕೀಮ್ ಎಂಬ ಸಮಾಜ ವಿಜ್ಞಾನಿ ಮೊದಲಿಗರು. ಅವರು ಸಮಾಜದಲ್ಲಿ ಸ್ವಾರ್ಥಪರ, ಪರೋಪಕಾರಿ, ಕಟ್ಟುಪಾಡಿಲ್ಲದವರು ಎಂಬ ಮೂರು ವಿಧದ ವ್ಯಕ್ತಿಗಳನ್ನು ಗುರುತಿಸಿದರು. ಅವರಲ್ಲಿ ಸ್ವಾರ್ಥಪರ ಮತ್ತು ಕಟ್ಟುಪಾಡಿಲ್ಲದವರು ಆತ್ಮಹತ್ಯೆಗೆ ಬಲಿಯಾಗುವವರಲ್ಲಿ ಸೇರಿದ್ದಾರೆ ಎಂದು ಪ್ರತಿಪಾದಿಸಿದರು. ನಂತರದಲ್ಲಿ ನಡೆದ ಅಧ್ಯಯನಗಳು ಆತ್ಮಹತ್ಯೆಗೆ ಅವರವರ ಮನಃಸ್ಥಿತಿಯೇ ಕಾರಣ ಎಂಬುದನ್ನು ಸಾಬೀತುಪಡಿಸಿವೆ.

ದೇಶದಲ್ಲಿ ಆತ್ಮಹತ್ಯೆ ಮತ್ತು ಆತ್ಮಹತ್ಯೆಗೆ ಪ್ರಯತ್ನಿಸುವವರ ಸಂಖ್ಯೆ ಹದಿನೈದರಿಂದ ಇಪ್ಪತ್ತೈದು ವರ್ಷದ ಒಳಗಿನವರಲ್ಲಿ ಪ್ರತಿ ಸಾವಿರಕ್ಕೆ 38. ಹರೆಯದವರು ಹಾಗೂ ಯುವಕರಲ್ಲಿ ಈ ಪ್ರಕರಣಗಳು ಅಧಿಕವಾಗಿರಲು ಹಲವಾರು ಕಾರಣಗಳಿವೆ. ಹರೆಯ ಎಂಬುದು ಸಂಕ್ರಮಣದ ಕಾಲ. ದೈಹಿಕ ಬದಲಾವಣೆಗಳು, ಮನೋವಿಕಾಸ ಹರೆಯದವರಲ್ಲಿ ಹಲವಾರು ಸಂದೇಹಗಳನ್ನುಂಟು ಮಾಡುತ್ತವೆ. 'ತನ್ನತನ'ವನ್ನು ಕಂಡುಕೊಳ್ಳುವ ತವಕ, ಇವುಗಳ ಕುರಿತು ಪುಟಿದೇಳುವ ಪ್ರಶ್ನೆಗಳು ಅವರನ್ನು ಒತ್ತಡಕ್ಕೆ ಈಡು ಮಾಡುತ್ತವೆ. ಆಗ, ಯಾರ ಹತ್ತಿರವಾದರೂ ಕೇಳಬೇಕು, ಯಾರಾದರೂ ತನ್ನ ಸಂದೇಹಗಳನ್ನು ಪರಿಹರಿಸಬೇಕು ಎಂದು ಹರೆಯದ ಮನಸ್ಸು ಹಾತೊರೆಯುತ್ತದೆ. ಇದಕ್ಕೆ ಪೋಷಕರು ಸ್ಪಂದಿಸಿ, ಅವರ ಸಂಶಯಗಳನ್ನು ಪರಿಹರಿಸಿದಾಗ ಮನಸ್ಸು ನಿರಾಳಗೊಳ್ಳುತ್ತದೆ. ಕುಟುಂಬದ ಸದಸ್ಯರ ಅತಿಯಾದ ನಿರೀಕ್ಷೆ, ಪುನಃ ಪುನಃ ಅವರು ಮಾಡುವ ಟೀಕೆ ಟಿಪ್ಪಣಿಗಳು ಹರೆಯದ, ಅಪಕ್ವವಾದ ಮನಸ್ಸನ್ನು ಗಾಸಿಗೊಳಿಸುತ್ತವೆ. ಶೈಕ್ಷಣಿಕವಾಗಿ ಪೋಷಕರ ಅತಿಯಾದ ನಿರೀಕ್ಷೆ, ಪ್ರೀತಿ ಪ್ರೇಮದ ಕಾರಣಗಳೂ ಇರುತ್ತವೆ.

ಹರೆಯದವರು ಇಂತಹ ಸವಾಲುಗಳನ್ನು ಎದುರಿಸಿ ಪರಿಹಾರವನ್ನು ಕಂಡುಕೊಳ್ಳಲು ಹಲವು ಅಂಶಗಳು ಪೂರಕ ಎಂಬುದನ್ನು ಸಮಾಜ ಅರಿತರೆ ಒಳ್ಳೆಯದು. ಹಿತವಾದ ಕೌಟುಂಬಿಕ ವಾತಾವರಣ, ಸಾಮರಸ್ಯದಿಂದ ಕೂಡಿದ ಕುಟುಂಬ ಮತ್ತು ಪೋಷಕ-ಮಕ್ಕಳ ನಡುವೆ ಆತ್ಮೀಯ ಬಾಂಧವ್ಯ ಹರೆಯದವರ ಒತ್ತಡವನ್ನು ಕಡಿಮೆ ಮಾಡುತ್ತವೆ. ಮಕ್ಕಳ ಅನಿಸಿಕೆಗಳನ್ನು ಪೋಷಕರು ಸಂಯಮದಿಂದ ಆಲಿಸಿ, ಅವಕ್ಕೆ ಸ್ಪಂದಿಸಿದಾಗ ಮಕ್ಕಳಲ್ಲಿ ಪೋಷಕರ ಕುರಿತು ಆತ್ಮೀಯ ಭಾವನೆ ಉಂಟಾಗುತ್ತದೆ.

ಮಕ್ಕಳ ಭಾವನೆಗಳಿಗೆ ಆತ್ಮೀಯವಾಗಿ ಸ್ಪಂದಿಸಿ, ಸಕಾರಾತ್ಮಕವಾಗಿ ಮಾರ್ಗದರ್ಶನ ಮಾಡಬೇಕು. ಇವು ಹರೆಯದವರು ಸವಾಲುಗಳನ್ನು ಧೈರ್ಯದಿಂದ ಎದುರಿಸಿ ಮುನ್ನಡೆಯುವುದಕ್ಕೆ ಪೂರಕ. ಬಾಲ್ಯದಿಂದಲೇ ಮಕ್ಕಳಲ್ಲಿ ಸಂಗೀತಾಭ್ಯಾಸ, ಪುಸ್ತಕಗಳನ್ನು ಓದುವುದು, ಆಟ, ನೃತ್ಯದಂತಹ ಕೆಲವು ಹವ್ಯಾಸಗಳನ್ನು ರೂಢಿಸಬೇಕು. ಆತ್ಮೀಯ ಸ್ನೇಹಿತರು ಹರೆಯದ ಮನಸ್ಸನ್ನು ಸಮಸ್ಥಿತಿಯಲ್ಲಿಡಲು ಸಹಾಯಕ.



ಆತ್ಮಹತ್ಯೆಗೆ ಪ್ರಯತ್ನಿಸುವ ಹರೆಯದವರು ತಮ್ಮ ಭಾವನೆಗಳನ್ನು ಹಲವಾರು ವಿಧದಲ್ಲಿ ಹಂಚಿಕೊಳ್ಳುತ್ತಾರೆ. ಅವನ್ನು ಗಮನಿಸಬೇಕು. ಅಂಥವರು ತಮ್ಮ ದೈನಂದಿನ ಕೆಲಸಗಳಲ್ಲಿ ನಿರಾಸಕ್ತಿ, ಒಂಟಿತನ ಅನುಭವಿಸುತ್ತಾರೆ. ಮದ್ಯ, ಮಾದಕ ವಸ್ತುಗಳಿಗೆ ಮೊರೆ ಹೋಗಬಹುದು. ಓದಿನಲ್ಲಿ ಆಸಕ್ತಿ ಕಳೆದುಕೊಳ್ಳುತ್ತಾರೆ. ಯಾರಾದರೂ ಹೊಗಳಿದರೆ ಅದಕ್ಕೆ ಸ್ಪಂದಿಸುವುದಿಲ್ಲ. ಅವರ ವರ್ತನೆಗಳು ಕೆಲವು ವೇಳೆ ನಿಗೂಢ ಎನಿಸಬಹುದು. ಕೆಲವೊಮ್ಮೆ ಆತ್ಮಹತ್ಯೆ ಕುರಿತು ಮಾತನಾಡುತ್ತಿರುತ್ತಾರೆ.

ಸಾಮಾಜಿಕ ಪಿಡುಗಾದ ಆತ್ಮಹತ್ಯೆಯ ಕುರಿತು ಸಮಾಜದಲ್ಲಿ ಅರಿವು ಮೂಡಿಸಲು ವಿಶ್ವ ಆರೋಗ್ಯ ಸಂಸ್ಥೆಯ ಸಲಹೆಯಂತೆ ಪ್ರತಿವರ್ಷ ಸೆಪ್ಟೆಂಬರ್ ಹತ್ತರಂದು ಆತ್ಮಹತ್ಯೆ ತಡೆ ದಿನವನ್ನು ಆಚರಿಸಲಾಗುತ್ತದೆ. ಆತ್ಮಹತ್ಯೆಯನ್ನು ತಡೆಯುವುದು ಸಮಾಜದ ಎಲ್ಲರ ಕರ್ತವ್ಯ. ಅವರು ಸ್ನೇಹಿತರಿರಬಹುದು, ಪಕ್ಕದ ಮನೆಯವರಿರಬಹುದು, ಯಾರಾದರೂ ಆತ್ಮಹತ್ಯೆಯ ಕುರಿತು ಮಾತನಾಡುತ್ತಿದ್ದರೆ, ಖಿನ್ನವದನರಾಗಿ ಒಂಟಿಯಾಗಿದ್ದರೆ ಅಂತಹವರನ್ನು ಮಾತನಾಡಿಸಿ, ಅವರ ಅಹವಾಲುಗಳನ್ನು ಆಲಿಸಿ ಸ್ಪಂದಿಸಬೇಕು. ಭವಿಷ್ಯ ಉಜ್ವಲ ಎಂಬುದನ್ನು ಮನದಟ್ಟಾಗುವಂತೆ ಅವರಿಗೆ ವಿವರಿಸಬೇಕು. ಹೀಗೆ ಸಮಾಜದ ಪ್ರತಿಯೊಬ್ಬರೂ ಇದನ್ನು ಆಸಕ್ತಿಯಿಂದ ಆಚರಣೆಗೆ ತಂದಾಗ ಅಮೂಲ್ಯವಾದ ಜೀವವನ್ನು ಉಳಿಸಬಹುದು.

ಲೇಖಕ: ಮನೋವೈದ್ಯ

ವಾಚಕರ ವಾಣಿ

ಸನಾತನ ಧರ್ಮಾಚರಣೆ ಕಾಲೋಚಿತಗೊಳ್ಳಲಿ

'ಸಮಾಜದಲ್ಲಿ ತಾರತಮ್ಯ ಇರುವವರೆಗೂ ಮೀಸಲಾತಿ ಇರಲಿ, ಸಮಾಜದ ಕೆಲ ವರ್ಗಗಳು 2,000 ವರ್ಷಗಳಿಂದ ತಾರತಮ್ಯ ಅನುಭವಿಸುತ್ತಿವೆ ಎಂದಾದರೆ, ನಾವು (ತಾರತಮ್ಯ ಅನುಭವಿಸದೇ ಇರುವವರು) ಏಕೆ 200 ವರ್ಷಗಳ ಕಾಲ ಕೆಲ ತೊಂದರೆಗಳನ್ನು ಅನುಭವಿಸಬಾರದು' ಎಂಬ ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ ಭಾಗವತ್ ಅವರ ಪ್ರತಿಪಾದನೆ (ಪ್ರ.ವಾ., ಸೆ. 8), ಸನಾತನ ಧರ್ಮದ ಕುರಿತು ವಾದ– ವಿವಾದ, ಪರಸ್ಪರ ನಿಂದನೆಗಳು ತಾರಕಕ್ಕೇರಿರುವ ಈ ಸಂದರ್ಭದಲ್ಲಿ ಮಹತ್ವದ್ದು ಎನಿಸುತ್ತದೆ. ಸನಾತನ ಧರ್ಮದ ಕೆಲವು ಆಚರಣೆಗಳಿಂದಾಗಿ ಸಮಾಜದ ಕೆಲವರ್ಗಗಳು ಅವಹೇಳನ, ತುಳಿತಕ್ಕೆ ಒಳಗಾಗಿ, ಉದ್ದಕ್ಕೂ ಶೋಷಣೆಯನ್ನು ಅನುಭವಿಸುತ್ತಾ ಬಂದ ಕಾರಣ, ಸನಾತನ ಧರ್ಮದ ವಿರುದ್ಧ ಆಗಾಗ ಕೆಲವು ಅತಿರೇಕದ ಮಾತುಗಳು ರಾಜಕೀಯ ನಾಯಕರಿಂದ ಬರುತ್ತವೆ.

2,000 ವರ್ಷಗಳಿಂದ ಇಂತಹ ತಾರತಮ್ಯ ಇರುವುದನ್ನು ಭಾಗವತ್ ಅವರ ಹೇಳಿಕೆ ದೃಢೀಕರಿಸುತ್ತದೆ. ರಾಜಕೀಯ ನಾಯಕರ ಮಾತುಗಳಿಗೆ ರಾಜಕೀಯ ಆಯಾಮ ಇರಬಹುದಾದರೂ ಅವು ದಮನಿತ ಸಮುದಾಯದ ಆಕ್ರೋಶದ ಧ್ವನಿಯಾಗಿ ಆಗಾಗ ಇತರರಿಂದಲೂ ಹೊರಹೊಮ್ಮುತ್ತಿರುತ್ತವೆ. ಅವು ಅನುಚಿತ ಎನಿಸಬಹುದು. ಆದರೆ ಅಂತಹ ಧ್ವನಿಗಳ ಹಿಂದಿನ ನೋವನ್ನು ಅರ್ಥ ಮಾಡಿಕೊಂಡು ಅದಕ್ಕೆ ಪರಿಹಾರೋಪಾಯವನ್ನು ಕಂಡುಹಿಡಿದು, ಸನಾತನ ಧರ್ಮದ ಆಚರಣೆಗಳನ್ನು ಕಾಲೋಚಿತಗೊಳಿಸಿಕೊಳ್ಳುವುದು ಇಂದಿನ ಅಗತ್ಯ ಎನಿಸುತ್ತದೆ.

ನೊಂದವರ ನೋವು, ಶೋಷಣೆಗೆ ಕಾರಣವಾದ ಧಾರ್ಮಿಕ ಆಚರಣೆಗಳು, ತಾರತಮ್ಯ, ನಂಬಿಕೆಗಳ ವಿರುದ್ಧ ವಿವಿಧ ರೀತಿಯಲ್ಲಿ ಆಗಾಗ ಆಕ್ರೋಶ ವ್ಯಕ್ತವಾಗುವುದನ್ನು ನಾವು ನೋಡುತ್ತೇವೆ. ಇದು ಎಫ್‌ಐಆರ್ ದಾಖಲಿಸುವ ಅಥವಾ ರಾಜಕೀಯ ಕೆಸರೆರಚಾಟದ ಮೂಲಕ ಬಗೆಹರಿಯುವ ಸಮಸ್ಯೆಯಲ್ಲ. ಅದರಿಂದ ಸಮಸ್ಯೆ ಇನ್ನಷ್ಟು ಉಲ್ಬಣಗೊಳ್ಳಬಹುದು. ಆದ್ದರಿಂದ ಇಂತಹ ಆಕ್ರೋಶಗಳ ಹಿಂದಿರುವ ಯಾತನೆಯನ್ನು ಅರ್ಥ ಮಾಡಿಕೊಂಡು ಅದಕ್ಕೆ ಸೂಕ್ತ ಧಾರ್ಮಿಕ, ಸಾಮಾಜಿಕ, ನೈತಿಕ ನೈಜ ಪರಿಹಾರಗಳನ್ನು ಕಂಡುಕೊಳ್ಳುವ ದಿಸೆಯಲ್ಲಿ ಚಿಂತನೆ ನಡೆಸುವುದು ಉಚಿತ.

ವೆಂಕಟೇಶ ಮಾಚಕನೂರ, ಧಾರವಾಡ

ಪರಿಷತ್ತಿನಲ್ಲಿ ಮುಂದುವರಿಯಲಿ 'ತವರಿನ ಸಂಸ್ಕೃತಿ'

'ಕಸಾಪ ಚಟುವಟಿಕೆಗೆ ಏನಾಯಿತು?' ಎಂಬ ತಾ.ಸಿ.ತಿಮ್ಮಯ್ಯ ಅವರ ಪ್ರಶ್ನೆ (ವಾ.ವಾ., ಸೆ. 8) ಸಕಾಲಿಕ. ಕನ್ನಡ ಸಾಹಿತ್ಯ ಪರಿಷತ್ತಿನ ಕೃಷ್ಣರಾಜ ಪರಿಷನ್ಮಂದಿರ ಮತ್ತು ಟೌನ್‌ಹಾಲ್ ಅಂತಹವುಗಳು ಹಣ ಗಳಿಕೆಯ ಕೇಂದ್ರಗಳಾದರೆ, ಕಡಿಮೆ ಹಣದಲ್ಲಿ ಪುಸ್ತಕ ಬಿಡುಗಡೆ, ಪುಸ್ತಕ ಮಾರಾಟ, ಜನಪರ ಸಭೆ ಸಮಾರಂಭ ಏರ್ಪಡಿಸಬಯಸುವ ಲೇಖಕರು, ಸಂಘಟಕರ ಪಾಡೇನು? ಪರಿಷನ್ಮಂದಿರವನ್ನು ಚೆನ್ನಾಗಿಯೇ ದುರಸ್ತಿಗೊಳಿಸಿದ್ದಾರೆ ಎಂಬುದರಲ್ಲಿ ಎರಡು ಮಾತಿಲ್ಲ. ರಷ್ಯಾ- ಉಕ್ರೇನ್ ಯುದ್ಧ ಆರಂಭಗೊಂಡ ನಂತರ ಮುದ್ರಣಕ್ಕೆ ಬಳಸುವ ಪೇಪರ್ ದರ ಎರಡು ಪಟ್ಟು ಹೆಚ್ಚಾಗಿದೆ. ಲೇಖಕರು ಹೇಳಿದಂತೆ, ಹಾವೇರಿ ಸಾಹಿತ್ಯ ಸಮ್ಮೇಳನ ನಡೆದ ನಂತರ ಸಾಹಿತ್ಯ ಪರಿಷತ್ತಿನ ಚಟುವಟಿಕೆಗಳು ಬಹುತೇಕ ಸ್ಥಗಿತಗೊಂಡಿವೆ. ಮಂಡ್ಯ ಸಾಹಿತ್ಯ ಸಮ್ಮೇಳನದ ಸಿದ್ಧತೆಗಳು ಕೂಡ ನಿರೀಕ್ಷಿತ ಮಟ್ಟದಲ್ಲಿ ಚುರುಕುಗೊಂಡಂತೆ ಕಂಡುಬರುತ್ತಿಲ್ಲ.

ಕನ್ನಡದ ಮಹಾಮನೆ ಕನ್ನಡಿಗರನ್ನು ಒಗ್ಗೂಡಿಸುವ ಕೆಲಸ ಮಾಡಬೇಕಿದೆ. ಆದರೆ ಈಗ ಆಧುನೀಕರಣ, ನವೀಕರಣದ ಹೆಸರಿನಲ್ಲಿ ಸಾಹಿತ್ಯಾಸಕ್ತರನ್ನು ಪರಿಷತ್ತಿನ ಬಳಿ ಸುಳಿಯದಂತೆ ಮಾಡಿರುವುದು ಅತ್ಯಂತ ನೋವಿನ ಸಂಗತಿ. ಸಾಹಿತ್ಯ ಪರಿಷತ್ತಿನಲ್ಲಿ ಪಂಚತಾರಾ ಹೋಟೆಲ್ ಸಂಸ್ಕೃತಿಯ ಅಗತ್ಯ ಇಲ್ಲ. ಬದಲಿಗೆ ಸಾಹಿತಿಗಳು, ಸಾಹಿತ್ಯಾಸಕ್ತರು ಕನ್ನಡದ ಮಹಾಮನೆಗೆ ಬಂದು ಚರ್ಚೆ, ಸಂವಾದದಲ್ಲಿ ತೊಡಗಿಸಿಕೊಂಡು ಹೋಗುವಂತಹ 'ತವರಿನ ಸಂಸ್ಕೃತಿ' ಮುಂದುವರಿಸುವುದು ಅಗತ್ಯ. ಇಲ್ಲಿ ಕರ್ನಾಟಕದ ಕನ್ನಡ ಮಾತನಾಡುವ ಎಲ್ಲಾ ವರ್ಗದವರು ಸೇರುವಂತಹ ವಾತಾವರಣ, ಮನಸುಗಳನ್ನು ಬೆಸೆಯುವ ಕೆಲಸ ಆಗಬೇಕಾಗಿದೆ. ಬದಲಾವಣೆ, ಅಭಿವೃದ್ಧಿ ಅಗತ್ಯ. ಆದರೆ ಸಾಹಿತ್ಯಾಸಕ್ತರು ಅತ್ತ ಸುಳಿಯದಂತಹ ವಾತಾವರಣ ನಿರ್ಮಾಣವಾದರೆ ಆಗ ಆ ಮಹಾಮನೆ ಯಾರಿಗಾಗಿ, ಯಾರ ಹಿತಕ್ಕಾಗಿ ಎಂಬ ಪ್ರಶ್ನೆ ಕಾಡದೇ ಇರದು.

ಎಂ.ಜಿ.ರಂಗಸ್ವಾಮಿ, ಹಿರಿಯೂರು

ಬಿಜೆಪಿಗೆ ಬೇಕಿದೆ ಯಡಿಯೂರಪ್ಪ ಸಾರಥ್ಯ

ಇದೊಂದು ಪರ್ವಕಾಲ. ತನ್ನ ಆಡಳಿತ ವೈಫಲ್ಯದಿಂದ ಹಾಗೂ ಕಾಂಗ್ರೆಸ್‌ನ ಗ್ಯಾರಂಟಿಗಳ ಚಾಣಕ್ಯ ತಂತ್ರದಿಂದ ಚುನಾವಣೆಯಲ್ಲಿ ಮುಖಭಂಗ ಅನುಭವಿಸಿ ಉತ್ಸಾಹ ಕಳೆದುಕೊಂಡಿರುವ ಬಿಜೆಪಿ ರಾಜ್ಯ ಘಟಕಕ್ಕೆ ಕಾಯಕಲ್ಪ ನೀಡಿ, ಹೊಸ ಹುಮ್ಮಸ್ಸಿನಿಂದ ಲೋಕಸಭಾ ಚುನಾವಣೆಗೆ ಪಕ್ಷವನ್ನು ಸಜ್ಜುಗೊಳಿಸಬಲ್ಲ ಯುವ ನಾಯಕರು ಪಕ್ಷದಲ್ಲಿ ಇಲ್ಲ. ದೊಡ್ಡ ಪದವಿ ಅನುಭವಿಸಿಯೂ ಇನ್ನೂ ಅಧಿಕಾರ ದಾಹ ಹೊಂದಿದ ಅತೃಪ್ತರು ಪಕ್ಷದಲ್ಲಿದ್ದಾರೆ. ಪಕ್ಷ ಬಿಟ್ಟು ಮತ್ತೊಂದು ಪಕ್ಷಕ್ಕೆ ಸೇರಿ ಮಾತೃಪಕ್ಷವನ್ನು ಭಾಷಾ ಮರ್ಯಾದೆ ಮರೆತು ಟೀಕಿಸಿ, ಅದರ ಸೋಲಿನಲ್ಲಿ ಅಪರಿಮಿತ ಸಂಭ್ರಮ ಆಚರಿಸುವವರು ಪಕ್ಕದಲ್ಲಿದ್ದಾರೆ.

ಯುವಕರಿಗೆ ಸ್ಥಾನ ಕೊಟ್ಟು ಪಕ್ಷಕ್ಕೆ ತಾರುಣ್ಯ ತುಂಬುವ ಬಿಜೆಪಿ ವರಿಷ್ಠರ ಮುಂದಾಲೋಚನೆ ಸದ್ಯಕ್ಕೆ ಕರ್ನಾಟಕದಲ್ಲಿ ಫಲ ನೀಡಿಲ್ಲ. ಆಡಳಿತ ಪಕ್ಷವು ವಿರೋಧಪಕ್ಷಗಳ ಅತೃಪ್ತ ಹಿರಿಯರನ್ನು ತನ್ನತ್ತ ಎಳೆದುಕೊಳ್ಳುವ ಸಿದ್ಧಾಂತಶೂನ್ಯ ಕ್ರಮಕ್ಕೆ ಮುಂದಾಗಿದೆ.

ಎಪ್ಪತ್ತೈದು ವರ್ಷ ಮೀರಿದವರು ನಿವೃತ್ತರಾಗಿ ನಂತರ ಅವರು ಕಿರಿಯರಿಗೆ ಮಾರ್ಗದರ್ಶನ ಮಾಡುವ ಯಜಮಾನಿಕೆಯನ್ನು ವಹಿಸಿಕೊಳ್ಳಲಿ ಎನ್ನುವ ಪಕ್ಷದ ಪ್ರಯತ್ನ ವಿಫಲವಾಗಿಲ್ಲದಿದ್ದರೂ ರಾಜ್ಯದ ಮಟ್ಟಿಗೆ ನಿರೀಕ್ಷಿತ ಗೆಲುವು ತರುವಲ್ಲಿ ಯಶಸ್ವಿಯಾಗಿಲ್ಲ. ಹೀಗಾಗಿ, ಬಿ.ಎಸ್.ಯಡಿಯೂರಪ್ಪ ಅವರು ಮತ್ತೆ ಪಕ್ಷದ ಮುಖಂಡತ್ವ ವಹಿಸಿಕೊಳ್ಳುವುದು ಸದ್ಯದ ಅವಶ್ಯಕತೆಯಾಗಿದೆ. ಎರಡು– ಮೂರು ವರ್ಷ ಪಕ್ಷವನ್ನು ಮುನ್ನಡೆಸಿ, ಮೂರ್ನಾಲ್ಕು ಕಿರಿಯರಿಗೆ ರಾಜ್ಯದಲ್ಲಿ ಪಕ್ಷದ ಜವಾಬ್ದಾರಿ ಹೊರಲು ಅಗತ್ಯವಾದ ಕಾರ್ಯತತ್ಪರತೆಯನ್ನು ರೂಢಿಸಿ ನಿವೃತ್ತರಾದ ಬಳಿಕ ಇತರ ಹಿರಿಯರಂತೆ ಅವರು ಮಾರ್ಗದರ್ಶಕರಾಗಲಿ. ಆಗ ಬಿಜೆಪಿ ಇಲ್ಲಿ ಮತ್ತೆ ವಿಜೃಂಭಿಸಲು ಸಾಧ್ಯ. ವರಿಷ್ಠರು ಇತ್ತ ಗಂಭೀರವಾಗಿ ಗಮನಹರಿಸಲಿ.


ಸತ್ಯಬೋಧ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಲೋಕಸಭೆ, ರಾಜ್ಯ ವಿಧಾನಸಭೆಗಳಿಗೆ ಏಕಕಾಲದಲ್ಲಿ ಚುನಾವಣೆ...

ಒಂದು ದೇಶ, ಒಂದು ಚುನಾವಣೆ, ಒಬ್ಬನೇ ನಾಯಕ

• ಸುಧೀಂದ್ರ ಕುಲಕರ್ಣಿ



ನರೇಂದ್ರ ಮೋದಿ ಅವರಿಗೆ ಒಂದು ಗೀಳು ಇದೆ. ಈ ದೇಶ ಕಂಡ ಅತ್ಯಂತ ಶ್ರೇಷ್ಠ ಪ್ರಧಾನಿ ತಾವು ಎಂದೂ ಜವಾಹರಲಾಲ್ ನೆಹರೂ, ಇಂದಿರಾ ಗಾಂಧಿ ಮತ್ತು ಅಟಲ್ ಬಿಹಾರಿ ವಾಜಪೇಯಿ ಅವರೆಲ್ಲರಿಗಿಂತ ಶ್ರೇಷ್ಠ ಎಂದೂ ಇತಿಹಾಸವು ತಮ್ಮನ್ನು ಗುರುತಿಸಬೇಕು ಎಂದು ಅವರು ಬಯಸಿದ್ದಾರೆ. 'ಒಂದು ದೇಶ, ಒಂದು ಚುನಾವಣೆ'ಯಂತಹ ದಿಟ್ಟ ಮತ್ತು ದೂರದೃಷ್ಟಿಯ ನಿರ್ಧಾರಗಳನ್ನು ಕೈಗೊಳ್ಳಲು ತಮಗೆ ಮಾತ್ರ ಸಾಧ್ಯ ಎಂದು ತೋರಿಸಿಕೊಳ್ಳಲು ಅವರು ಬಯಸಿದ್ದಾರೆ.

ಭಾರತಕ್ಕೆ 'ಒಂದು ದೇಶ, ಒಂದು ಚುನಾವಣೆ'ಯ ಅಗತ್ಯ ಇದೆಯೇ? ಉತ್ತರ ಹೌದು ಎಂಬುದೇ ಆಗಿದೆ. ಪ್ರತಿ ವರ್ಷವೂ ಒಂದಲ್ಲ ಒಂದು ರಾಜ್ಯದಲ್ಲಿ ಚುನಾವಣೆ ನಡೆಯುತ್ತಲೇ ಇರುತ್ತದೆ. ಈ ಚುನಾವಣಾ ಸರಪಣಿಯಿಂದಾಗಿ ಉತ್ತಮ ಆಳ್ವಿಕೆ ಮತ್ತು ದೀರ್ಘಾವಧಿಯ ನೀತಿ ರೂಪಿಸುವಿಕೆ ಬಹಳ ಕಷ್ಟ ಎನಿಸುತ್ತದೆ. ಪ್ರಧಾನಿ, ಸಚಿವರು ಮತ್ತು ರಾಜಕೀಯ ನಾಯಕರು ತಮ್ಮ ಬಹುಪಾಲು ಸಮಯ ಮತ್ತು ಚೈತನ್ಯವನ್ನು ಚುನಾವಣಾ ಪ್ರಚಾರಕ್ಕೇ ವ್ಯಯ ಮಾಡಬೇಕಾಗುತ್ತದೆ. ಚುನಾವಣೆಯ ವೆಚ್ಚವು ಏರಿಕೆಯಾಗುತ್ತಿರುವುದು ಭ್ರಷ್ಟಾಚಾರಕ್ಕೆ ದಾರಿ ಮಾಡಿಕೊಡುತ್ತದೆ ಮತ್ತು ರಾಜಕಾರಣಿಗಳು ಹಣವಂತರ ಮೇಲೆ ಸದಾ ಅವಲಂಬಿತ ಆಗಿರಬೇಕಾಗುತ್ತದೆ. ಈಗ ನಮ್ಮ ಮುಂದೆ ಇರುವ ದೊಡ್ಡ ಪ್ರಶ್ನೆ ಈ ಪ್ರಸ್ತಾವ ಅಪೇಕ್ಷಣೀಯವೇ ಎಂಬುದಲ್ಲ. ಬದಲಿಗೆ ಇದರ ಅನುಷ್ಠಾನ ಹೇಗೆ ಎಂಬುದಾಗಿದೆ. ಇಲ್ಲಿ ಮೂರು ಸಮಸ್ಯೆಗಳು ಇವೆ.

ಮೊದಲನೆಯದಾಗಿ, ಭಾರತದ ಪ್ರಜಾಪ್ರಭುತ್ವದ ಮೇಲೆ ದೂರಗಾಮಿ ಪರಿಣಾಮಗಳನ್ನು ಬೀರಬಲ್ಲ ಯಾವುದೇ ಬದಲಾವಣೆಯನ್ನು ರಾಷ್ಟ್ರ ಮಟ್ಟದಲ್ಲಿ ಅತ್ಯಂತ ವ್ಯಾಪಕವಾದ ಸಹಮತದ ಮೂಲಕವೇ ಜಾರಿಗೆ ತರಬೇಕು. ಸಾಂವಿಧಾನಿಕ ತಿದ್ದುಪಡಿಗಳನ್ನು ಯಾವುದೇ ಚರ್ಚೆ ಇಲ್ಲದೆ ನಡೆಸಬಾರದು. ಸಂಸತ್ತು ಮತ್ತು ವಿಧಾನಸಭೆಗಳಲ್ಲಿ ಮಾತ್ರವಲ್ಲ, ಜನರ ನಡುವಲ್ಲಿಯೂ ವ್ಯಾಪಕವಾದ, ಸಮಂಜಸವಾದ ಚರ್ಚೆ ನಡೆಯಬೇಕು. ಯಾಕೆಂದರೆ, ಪ್ರಜಾಪ್ರಭುತ್ವದಲ್ಲಿ ಜನರ ಧ್ವನಿಯನ್ನು ಕೇಳಿಸಿಕೊಳ್ಳಲೇಬೇಕು. ಒಂದು ದೇಶ, ಒಂದು ಚುನಾವಣೆ ಜಾರಿಯಾಗಲೇಬೇಕು ಎಂಬ ಹಟ ಮೋದಿಯವರಿಗೆ ಇದ್ದರೆ, 2024ರ ಲೋಕಸಭಾ ಚುನಾವಣೆಯ ಪ್ರಣಾಳಿಕೆಯಲ್ಲಿ ಈ ವಿಚಾರವನ್ನು ಸೇರಿಸಿಕೊಳ್ಳಲಿ. ಇದರ ಪರವಾಗಿ ಜನಾದೇಶ ಬಂದರೆ, ಆಗ ಅನುಷ್ಠಾನ ಮಾಡಲಿ.

ಮೋದಿ ಅವರ ಈವರೆಗಿನ ನಡವಳಿಕೆಯನ್ನು ನೋಡಿದರೆ, ಸಂಸತ್ತಿನಲ್ಲಾಗಲಿ ರಾಜಕೀಯವಾಗಿ ಆಗಲಿ, ಜನರೊಂದಿಗೆ ಆಗಲಿ ಅರ್ಥಪೂರ್ಣ ಸಮಾಲೋಚನೆ ನಡೆಸುವುದರಲ್ಲಿ ಅವರಿಗೆ ನಂಬಿಕೆ ಇಲ್ಲ. ಉದಾಹರಣೆಗೆ, ಇದೇ 18ರಿಂದ 22ರವರೆಗೆ ಸಂಸತ್ತಿನ ವಿಶೇಷ ಅಧಿವೇಶನವನ್ನು ಕರೆಯಲಾಗಿದೆ. ಆದರೆ, ವಿರೋಧ ಪಕ್ಷಗಳ ಜೊತೆಗೆ ಸಮಾಲೋಚನೆಯೇ ಮಾಡದೆ, ಸಂಸದರಿಗೆ ಕಾರ್ಯಸೂಚಿಯನ್ನೂ ತಿಳಿಸದೆ ಈ ನಿರ್ಧಾರಕ್ಕೆ ಬರಲಾಗಿದೆ. ಇದು ಸರಿಯೇ?

ಎರಡನೆಯದಾಗಿ, ಲೋಕಸಭೆ ಮತ್ತು ವಿಧಾನಸಭೆಗಳಿಗೆ 2024ರಲ್ಲಿ ಏಕಕಾಲಕ್ಕೆ ಚುನಾವಣೆ ನಡೆಸುವ ಸಾಧ್ಯತೆಯನ್ನು ಪರಿಶೀಲಿಸೋಣ– ಅದಕ್ಕೆ ಎಲ್ಲ ರಾಜ್ಯಗಳ ವಿಧಾನಸಭೆಗಳನ್ನು ವಿಸರ್ಜಿಸಬೇಕಾಗುತ್ತದೆ. ಕರ್ನಾಟಕ ವಿಧಾನಸಭೆಗೆ ಮೂರೇ ತಿಂಗಳ ಹಿಂದೆ ಚುನಾವಣೆ ನಡೆದಿದೆ. ಸಹಜವಾಗಿಯೇ ವಿಧಾನಸಭೆ ವಿಸರ್ಜನೆಗೆ ರಾಜ್ಯಗಳಿಂದ ಪ್ರತಿರೋಧ ಬಂದೇ ಬರುತ್ತದೆ. ಕೇಂದ್ರ ಸರ್ಕಾರವು ವ್ಯಾಪಕವಾದ ಸಮಾಲೋಚನೆ ಇಲ್ಲದೆ ಈ ಪ್ರಸ್ತಾವವನ್ನು ಹೇರಿದರೆ ಕನಿಷ್ಠ ಪಕ್ಷ ಅಲ್ಪಾವಧಿಯಲ್ಲಾದರೂ ಸಾಮಾಜಿಕ ಅಶಾಂತಿ ಮತ್ತು ರಾಜಕೀಯ ಅಸ್ಥಿರತೆ ಉಂಟಾಗಬಹುದು.

> ಈಗ ನಮ್ಮ ಮುಂದೆ ಇರುವ ದೊಡ್ಡ ಪ್ರಶ್ನೆ ಈ ಪ್ರಸ್ತಾವ ಅಪೇಕ್ಷಣೀಯವೇ ಎಂಬುದಲ್ಲ. ಬದಲಿಗೆ ಇದರ ಅನುಷ್ಠಾನ ಹೇಗೆ ಎಂಬುದಾಗಿದೆ. ಇಲ್ಲಿ ಮೂರು ಸಮಸ್ಯೆಗಳು ಇವೆ

ದುರದೃಷ್ಟಕರ ಸಂಗತಿ ಎಂದರೆ, ಕೇಂದ್ರ ಮತ್ತು ರಾಜ್ಯಗಳ ನಡುವಣ ಸಂವಾದ ಹಾಗೂ ಸುಲಲಿತ ಸಂವಹನಕ್ಕಾಗಿ ಇದ್ದ ಎಲ್ಲ ಸಾಂಸ್ಥಿಕ ವೇದಿಕೆಗಳು ಮೋದಿ ಯುಗದಲ್ಲಿ ಸ್ಥಗಿತಗೊಂಡಿವೆ. ವಾಜಪೇಯಿ ಅವರು ಪ್ರಧಾನಿಯಾಗಿದ್ದಾಗ ಪ್ರಧಾನಿ ಕಾರ್ಯಾಲಯದಲ್ಲಿ ಕೆಲಸ ಮಾಡಿದ್ದ ನಾನು ಆಗಿನ ಪ್ರಧಾನಿಯು ರಾಷ್ಟ್ರೀಯ ಅಭಿವೃದ್ಧಿ ಪರಿಷತ್, ಅಂತರ್ ರಾಜ್ಯ ಪರಿಷತ್, ಮುಖ್ಯಮಂತ್ರಿಗಳ ಸಮಾವೇಶಗಳು ಮತ್ತು ಸರ್ವಪಕ್ಷ ಸಭೆಗಳನ್ನು ಬಿಜೆಪಿಯೇತರ ಪಕ್ಷಗಳ ನಾಯಕರ ವಿಶ್ವಾಸ ಮತ್ತು ಬೆಂಬಲ ಪಡೆದುಕೊಳ್ಳಲು ಹೇಗೆ ಬಳಸಿಕೊಂಡಿದ್ದರು ಎಂಬುದನ್ನು ನೋಡಿದ್ದೇನೆ. ಅವೆಲ್ಲವೂ ಈಗ ಇತಿಹಾಸವಾಗಿದೆ. ಕೇಂದ್ರ ಮತ್ತು ರಾಜ್ಯಗಳ ನಡುವಣ ಸಂಬಂಧವು ಯಾವತ್ತೂ ಈಗಿನಷ್ಟು ವಿಷಮಕರವಾಗಿ ಇರಲಿಲ್ಲ.

'ಟೀಮ್ ಇಂಡಿಯಾ = ಪ್ರಧಾನಿ + ಮುಖ್ಯಮಂತ್ರಿಗಳು' ಎಂದು ಮೋದಿ ಅವರು 2014ರಲ್ಲಿ ಹೇಳುವ ಮೂಲಕ ಸಹಕಾರಿ ಒಕ್ಕೂಟವಾದವನ್ನು ಬಲಪಡಿಸುವುದಾಗಿ ಭರವಸೆ ಕೊಟ್ಟಿದ್ದರು. ಆದರೆ, ಈಗ ಟೀಮ್ ಇಲ್ಲ ಕ್ಯಾಪ್ಟನ್ ಮಾತ್ರ ಇದ್ದಾರೆ. ಹಾಗಾಗಿಯೇ ಅವರಿಗೆ ಬೇಕಿರುವುದು ಒಂದು ದೇಶ, ಒಂದು ಚುನಾವಣೆ, ಒಬ್ಬನೇ ನಾಯಕ ಎಂಬುದು ಎಂದು ಟೀಕಾಕಾರರು ಹೇಳುತ್ತಿದ್ದಾರೆ. ಮೂರನೆಯದಾಗಿ, ಮೋದಿ ಸರ್ಕಾರವು ನೇಮಿಸಿರುವ ಸಮಿತಿಯು ವಿಶ್ವಾಸ ಮೂಡಿಸುವ ರೀತಿಯಲ್ಲಿ ಇಲ್ಲ. ಬಿಜೆಪಿಯೇತರ ಪಕ್ಷಗಳಿಗೆ ಪ್ರಾತಿನಿಧ್ಯ ಇಲ್ಲ. ಕಾಂಗ್ರೆಸ್ ನಾಯಕ ಅಧಿರ್ ರಂಜನ್ ಚೌಧರಿ ಅವರು ಸಮಿತಿಯಲ್ಲಿ ಇರಲು ನಿರಾಕರಿಸಿದ್ದಾರೆ. ಅಂತಿಮ ನಿರ್ಧಾರ ಏನಾಗಿರಬೇಕು ಎಂಬುದನ್ನು ಖಾತರಿಪಡಿಸುವಂತೆ ಈ ಸಮಿತಿಗೆ ನೀಡಲಾದ ನಿಯಮ ನಿಬಂಧನೆಗಳು ಇವೆ, ಹಾಗಾಗಿ ಈ ಇಡೀ ಪ್ರಕ್ರಿಯೆಯೇ ಕಣ್ಣೊರೆಸುವ ತಂತ್ರ ಎಂದು ಅವರು ಆರೋಪಿಸಿದ್ದಾರೆ. ಪ್ರಖ್ಯಾತ ಸಂವಿಧಾನ ತಜ್ಞ ಸುಭಾಷ್ ಕಶ್ಯಪ್ ಅವರನ್ನು ಬಿಟ್ಟರೆ (ಅವರಿಗೆ 94 ವರ್ಷ ವಯಸ್ಸು), ಸಮಿತಿಯಲ್ಲಿರುವ ಸರ್ಕಾರದ ಹೊರಗಿನ ಸದಸ್ಯರಿಗೆ ರಾಜಕೀಯ ಕುಶಾಗ್ರಮತಿಯೂ ಇಲ್ಲ, ಸಾಮಾನ್ಯ ಜನರ ಜೊತೆಗೆ ಸಂಪರ್ಕವೂ ಇಲ್ಲ. ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರನ್ನು ಸಮಿತಿಯ ಅಧ್ಯಕ್ಷರನ್ನಾಗಿ ಮಾಡಿದ್ದರಿಂದಾಗಿ ರಾಜಕೀಯ ಮತ್ತು ರಾಜಕೀಯೇತರವಾದ ಎಲ್ಲರನ್ನೂ ಸಂಪರ್ಕಿಸುವ ಕೆಲಸವು ಇನ್ನೂ ಕಠಿಣವಾಯಿತು. ವಿವಾದಾತ್ಮಕವಾಗಬಹುದಾದ ರಾಜಕೀಯ ಚಟುವಟಿಕೆಯೊಂದರಲ್ಲಿ ಕೋವಿಂದ್ ಅವರು ಭಾಗಿಯಾಗುವಂತೆ ಕೇಂದ್ರ ಸರ್ಕಾರ ಮಾಡಿದ್ದೇ ಸರಿಯಾದ ಕ್ರಮ ಅಲ್ಲ. ದೇಶದ ಅತ್ಯುನ್ನತ ಸಾಂವಿಧಾನಿಕ ಹುದ್ದೆಯಲ್ಲಿದ್ದ (ರಾಜಕೀಯೇತರವೂ ಹೌದು) ಕೋವಿಂದ್ ಅವರು ವಿವಾದಗಳಿಂದ ದೂರವೇ ಇರಬೇಕಾದ ಅಗತ್ಯ ಇದೆ. ಒಂದು ದೇಶ, ಒಂದು ಚುನಾವಣೆ ಪ್ರಸ್ತಾವವನ್ನು ಜಾರಿಗೆ ತರುವುದಕ್ಕೆ ಸಂಬಂಧಿಸಿ ಸರ್ಕಾರವು ಕೆಲ ತಿಂಗಳ ಹಿಂದಿನಿಂದಲೇ ಕೆಲಸ ಆರಂಭಿಸಿದೆ ಎಂಬ ವಿಶ್ವಾಸಾರ್ಹ ವರದಿಗಳು ಇವೆ. ಹೀಗಿರುವಾಗ ಕೋವಿಂದ್ ಅವರನ್ನು ಸಮಿತಿಗೆ ಮುಖ್ಯಸ್ಥರನ್ನಾಗಿಸಿದ್ದು ಇನ್ನಷ್ಟು ಅಸಮಂಜಸ ಅನಿಸಿಕೊಳ್ಳುತ್ತದೆ. ಒಟ್ಟಿನಲ್ಲಿ, ಒಂದು ಉತ್ತಮ ಯೋಚನೆಯನ್ನು ಪ್ರಜಾಸತ್ತಾತ್ಮಕವಲ್ಲದ ರೀತಿಯಲ್ಲಿ ಹೇರುವ ಪ್ರಯತ್ನ ನಡೆಯುತ್ತಿದೆ.

ಲೇಖಕ: ರಾಜಕೀಯ ವಿಶ್ಲೇಷಕ


ಪ್ರಜಾವಾಣಿ ಚರ್ಚೆ



ಮಧ್ಯಪ್ರದೇಶ ವಿಧಾನಸಭಾ ಚುನಾವಣೆಗೆ ಪೂರ್ವಭಾವಿಯಾಗಿ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ನಡೆಸಿದ ಪ್ರಚಾರ ರ‍್ಯಾಲಿಯಲ್ಲಿ ಕೇಂದ್ರ ಸಚಿವ ನರೇಂದ್ರ ಸಿಂಗ್ ತೋಮರ್ ಭಾಗಿಯಾಗಿದ್ದರು –ಪಿಟಿಐ ಚಿತ್ರ

ಅಸಾಧ್ಯವನ್ನು ಸಾಧ್ಯವಾಗಿಸಲು ಪ್ರಧಾನಿ ಮೋದಿ ಮುಂದಡಿ

• ಎ. ಸೂರ್ಯಪ್ರಕಾಶ್



ಎಷ್ಟೇ ಕ್ಲಿಷ್ಟ ಸಮಸ್ಯೆಯಾದರೂ ಸರಿ, ಪ್ರಧಾನಿ ನರೇಂದ್ರ ಮೋದಿ ಅವರು ಆ ಸಮಸ್ಯೆಯ ಆಳಕ್ಕಿಳಿದು ಅದಕ್ಕೊಂದು ಪರಿಹಾರ ಕಂಡುಕೊಳ್ಳುತ್ತಾರೆ.

ಪ್ರಧಾನಿ ಮೋದಿ ಅವರ ಕಾರ್ಯವೈಖರಿಯನ್ನು ಗಮನಿಸಿದರೆ ಅವರ ಈ ಸಾಮರ್ಥ್ಯದ ಅರಿವಾಗುತ್ತದೆ. ಲೋಕಸಭೆ ಹಾಗೂ ವಿಧಾನಸಭೆಗಳಿಗೆ ಜೊತೆಗೆ ಜಿಲ್ಲಾ ಪಂಚಾಯಿತಿಗೂ ಏಕಕಾಲದಲ್ಲಿ ಚುನಾವಣೆಯನ್ನು ನಡೆಸುವ ಅವರ ಆಸೆಯು ಇದಕ್ಕೆ ತಾಜಾ ಉದಾಹರಣೆಯಾಗಿದೆ.

ಇಂಥದ್ದೆ ಕಾರ್ಯವೈಖರಿಯನ್ನು ಅವರು ಗುಜರಾತ್‌ನ ಮುಖ್ಯಮಂತ್ರಿಯಾಗಿದ್ದಲೂ ಪ್ರದರ್ಶಿಸಿದ್ದರು. ಇದೇ ದೃಢ ಸಂಕಲ್ಪವನ್ನು ಅವರು ಪ್ರಧಾನಿಯಾದ ಮೇಲೂ ನೋಡಬಹುದಾಗಿದೆ. 370ನೇ ವಿಧಿ ಅಡಿಯಲ್ಲಿ ಜಮ್ಮು–ಕಾಶ್ಮೀರಕ್ಕೆ ನೀಡಲಾಗಿದ್ದ ವಿಶೇಷ ಸ್ಥಾನಮಾನವನ್ನು ರದ್ದು ಮಾಡಿದ್ದು, 1,500 ಕಾನೂನುಗಳಲ್ಲಿದ್ದ ತೊಡಕುಗಳನ್ನು ನಿವಾರಿಸಿರುವುದು, ಸುಮಾರು 20 ವರ್ಷಗಳಿಂದ ಬರಿಯ ಚರ್ಚೆಯಲ್ಲಿಯೇ ಇದ್ದ, ಎಂದಿಗೂ ಕಾರ್ಯರೂಪಕ್ಕೆ ಬಾರದ ನೂತನ ಸಂಸತ್ ಕಟ್ಟಡ ನಿರ್ಮಾಣದ ನಿರ್ಧಾರ ತೆಗೆದುಕೊಂಡಿದ್ದು – ಇವು ಮೋದಿ ಅವರ ಕೆಲವು ದೃಢ ಸಂಕಲ್ಪಗಳಿಗೆ ಉದಾಹರಣೆಗಳು.

ದೇಶದಲ್ಲಿರುವ ವೈವಿಧ್ಯ ಮತ್ತು ಸ್ವಾತಂತ್ರ್ಯಾನಂತರ ರಾಜಕೀಯ ಹಾಗೂ ಸಾಮಾಜಿಕವಾಗಿ ದೇಶದಲ್ಲಿ ಇರುವ ಸಂಕೀರ್ಣ ಸನ್ನಿವೇಶಗಳು 'ಒಂದು ದೇಶ, ಒಂದು ಚುನಾವಣೆ' ಸಂಕಲ್ಪವನ್ನು ಜಾರಿ ಮಾಡುವುದನ್ನು ಅಸಾಧ್ಯವಾಗಿಸಿವೆ. ಆದರೆ, ಈ ಅಸಾಧ್ಯವನ್ನು ಸಾಧ್ಯವಾಗಿಸುವ ಸವಾಲನ್ನು ಪ್ರಧಾನಿ ಮೋದಿ ಎದುರಿಸಲು ಹಿಂದಡಿ ಇಡಲಿಲ್ಲ. ಇದೇ ಕಾರಣಕ್ಕಾಗಿಯೇ 'ಒಂದು ದೇಶ, ಒಂದು ಚುನಾವಣೆ' ಕಾರ್ಯಸಾಧ್ಯತೆ ಪರಿಶೀಲಿಸಲು ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ್ ನೇತೃತ್ವದಲ್ಲಿ ಸಮಿತಿಯನ್ನು ರಚಿಸಲು ಪ್ರಧಾನಿ ನಿರ್ಧಾರ ಕೈಗೊಂಡರು.

> ಪದೇ ಪದೇ ನಡೆಯುವ ಚುನಾವಣೆ ಆಡಳಿತದ ಹಾಗೂ ಜನಸಾಮಾನ್ಯರ ಜೀವನದ ಗತಿಯ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ಆದ್ದರಿಂದ 'ಒಂದು ದೇಶ, ಒಂದು ಚುನಾವಣೆ' ಯನ್ನು ಒಪ್ಪಿಕೊಳ್ಳಬೇಕಾಗುತ್ತದೆ

ಲೋಕಸಭೆ ಹಾಗೂ ವಿಧಾನಸಭೆಗಳಿಗೆ ಏಕಕಾಲಕ್ಕೆ ಚುನಾವಣೆ ನಡೆಸುವ ಈ ಸಂಕಲ್ಪವನ್ನು ಸ್ವಾಗತಿಸಬೇಕಾಗುತ್ತದೆ. ಪದೇ ಪದೇ ನಡೆಯುವ ಚುನಾವಣೆಯು ಆಡಳಿತದ ಹಾಗೂ ಜನಸಾಮಾನ್ಯರ ಜೀವನದ ಗತಿಯ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ಆದ್ದರಿಂದಲೇ 'ಒಂದು ದೇಶ, ಒಂದು ಚುನಾವಣೆ'ಯನ್ನು ಒಪ್ಪಿಕೊಳ್ಳಬೇಕಾಗುತ್ತದೆ.

ಚುನಾವಣಾ ಆಯೋಗವು ನೀತಿ ಸಂಹಿತೆಯನ್ನು ಕಠಿಣವಾಗಿ ಜಾರಿ ಮಾಡುತ್ತಿದೆ. ಚುನಾವಣೆ ಸಂದರ್ಭದಲ್ಲಿ ಸರ್ಕಾರವೊಂದು ಯಾವುದೇ ಯೋಜನೆಯನ್ನು ಜಾರಿ ಮಾಡದಂತೆ, ಯಾವುದೇ ನಿರ್ಧಾರ ತೆಗೆದುಕೊಳ್ಳದಂತೆ ಈ ಸಂಹಿತೆಯು ತಡೆಯುತ್ತದೆ. ಇದು ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರವನ್ನು ಮೂರು ತಿಂಗಳ ಕಾಲ ಒಂದರ್ಥದಲ್ಲಿ ನಿಷ್ಕ್ರಿಯಗೊಳಿಸುತ್ತದೆ. ಇದು ಒಂದು ಸಮಸ್ಯೆ. ಇನ್ನೊಂದು ಸಮಸ್ಯೆ ಏನೆಂದರೆ, ವರ್ಷದಿಂದ ವರ್ಷಕ್ಕೆ ಬರುವ ಚುನಾವಣೆಗಳ ಕಾರಣದಿಂದ ರಾಜಕೀಯ ನಾಯಕರ ಮನಸ್ಸು ಆಡಳಿತದ ಕಡೆಗೆ ನೆಟ್ಟಿರದೆ, ಪಕ್ಷದ ಪ್ರಚಾರದ ಕುರಿತು ಮಾತ್ರವೇ ಇರುತ್ತದೆ. ಜೊತೆಗೆ, ಚುನಾವಣೆಗಳು ಬೇರೆ ಬೇರೆ ಅವಧಿಯಲ್ಲಿ ನಡೆದಷ್ಟೂ, ಚುನಾವಣೆಗೆ ವ್ಯಯಿಸುವ ವೆಚ್ಚವು ಅಷ್ಟೇ ಏರಿಕೆಯಾಗುತ್ತದೆ. ಒಂದುವೇಳೆ ಚುನಾವಣೆಗಳು ಒಂದೇ ವೇಳೆಯಲ್ಲಿ ನಡೆದರೆ, ಈ ವೆಚ್ಚವು ತಗ್ಗಲಿದೆ.

1952, 1957, 1962 ಮತ್ತು 1967ರಲ್ಲಿ ದೇಶದಲ್ಲಿ ವಿಧಾನಸಭೆ ಹಾಗೂ ಲೋಕಸಭೆಗೆ ಏಕಕಾಲದಲ್ಲಿ ಚುನಾವಣೆಗಳು ನಡೆದಿವೆ. ಈ ವಿಷಯ ಈಗಿನ ಪೀಳಿಗೆಗೆ ತಿಳಿದಿರಲಿಕ್ಕಿಲ್ಲ. ಮತದಾರನಿಗೆ ಎರಡು ಮತಪತ್ರಗಳನ್ನು ನೀಡಲಾಗುತ್ತಿತ್ತು. ಒಂದು ಲೋಕಸಭೆಗಾಗಿ ಇನ್ನೊಂದು ವಿಧಾನಸಭೆಗಾಗಿ. ಈ ಎರಡೂ ಮತಪತ್ರಗಳನ್ನು ಪ್ರತ್ಯೇಕ ಬಾಕ್ಸ್‌ಗಳಲ್ಲಿ ಇರಿಸಲಾಗುತ್ತಿತ್ತು.

1967-71ರ ಅವಧಿಯಲ್ಲಿ ಈ ಸಂಪ್ರದಾಯಕ್ಕೆ ತಡೆಯಂಟಾಯಿತು. ದೇಶದ ಉತ್ತರ ಭಾಗದ ಹಾಗೂ ಮಧ್ಯ ಭಾಗದ ಕೆಲವು ರಾಜ್ಯಗಳಲ್ಲಿ ಎಂದೂ ಹೊಂದಾಣಿಕೆಯೇ ಸಾಧ್ಯವಾಗದ ಎಸ್‌ಎಸ್‌ಪಿ, ಜನಸಂಘ, ಸಿಪಿಎಂ, ಸಿಪಿಐ ಪಕ್ಷಗಳ ಮೈತ್ರಿಕೂಟವು ಅಧಿಕಾರದಲ್ಲಿ ಇತ್ತು. ಈ ಸರ್ಕಾರಗಳು ಅವಧಿಗೂ ಮುನ್ನವೇ ಉರುಳಿತು ಮತ್ತು ಅಲ್ಲೆಲ್ಲಾ ರಾಷ್ಟ್ರಪತಿ ಆಳ್ವಿಕೆ ಹೇರಿಕೆಯಾಯಿತು. ನಂತರ ಅವಧಿಗೂ ಮುನ್ನವೇ ಚುನಾವಣೆಗಳು ಘೋಷಣೆಯಾದವು.

ಹಾಗಿದ್ದರೂ ಹಲವು ರಾಜ್ಯಗಳಲ್ಲಿ ಸರ್ಕಾರವು ಐದು ವರ್ಷಗಳ ಅಧಿಕಾರಾವಧಿ ಪೂರ್ಣಗೊಳಿಸಿತ್ತು. ಆದರೆ, 1971ರಲ್ಲಿ ಇಂದಿರಾ ಗಾಂಧಿ ಅವರು ಲೋಕಸಭೆಗೆ ಅವಧಿಗೂ ಮುನ್ನವೇ ಚುನಾವಣೆ ಘೋಷಿಸಿದರು. ಇಲ್ಲಿಂದ ಲೋಕಸಭೆ ಹಾಗೂ ವಿಧಾನಸಭೆಗೆ ಒಂದೇ ವೇಳೆಯಲ್ಲಿ ನಡೆಯುತ್ತಿದ್ದ ಚುನಾವಣೆಯ ಸಂಪ್ರದಾಯಕ್ಕೆ ಸಂಪೂರ್ಣ ತಡೆ ಬಿದ್ದಿತು.

ಈ ವರ್ಷದಲ್ಲಿ ಛತ್ತೀಸಗಢ, ಮಧ್ಯಪ್ರದೇಶ, ಮಿಜೋರಾಂ, ರಾಜಸ್ಥಾನ ಹಾಗೂ ತೆಲಂಗಾಣ ವಿಧಾನಸಭೆಗಳಿಗೆ ಚುನಾವಣೆ ನಡೆಯಲಿವೆ. ಮುಂದಿನ ವರ್ಷ ಆಂಧ್ರ ಪ್ರದೇಶ, ಅರುಣಾಚಲ ಪ್ರದೇಶ, ಒಡಿಶಾ ಹಾಗೂ ಸಿಕ್ಕಿಂ ವಿಧಾನಸಭೆಗಳಿಗೆ ಮೇ ತಿಂಗಳಲ್ಲಿ ಚುನಾವಣೆ ನಡೆಯಲಿದೆ. 2024ರ ಅಕ್ಟೋಬರ್ ಹೊತ್ತಿಗೆ ಹರಿಯಾಣ ಹಾಗೂ ಮಹಾರಾಷ್ಟ್ರದಲ್ಲಿ ಹಾಗೂ ಡಿಸೆಂಬರ್ ಹೊತ್ತಿಗೆ ಜಾರ್ಖಂಡ್‌ನಲ್ಲಿ ಚುನಾವಣೆ ನಡೆಯಲಿದೆ. 2024ರ ಮೇ ತಿಂಗಳಲ್ಲಿ ಲೋಕಸಭೆಗೆ ಚುನಾವಣೆ ನಡೆಯಲಿದೆ. ವರ್ಷವಿಡೀ ಬೇರೆ ಬೇರೆ ರಾಜ್ಯಗಳಲ್ಲಿ ಚುನಾವಣೆ ನಡೆಸುವುದು ಸರಿ ಇದೆ ಎಂದು ಅನ್ನಿಸುತ್ತದೆಯೇ? ಒಂದೇ ಬಾರಿಗೆ ಚುನಾವಣೆ ನಡೆಸಲು ಸಂವಿಧಾನಕ್ಕೆ ಬಹುಮುಖ್ಯವಾದ ತಿದ್ದುಪಡಿಗಳನ್ನು ಮಾಡಬೇಕು, ಚುನಾವಣಾ ಕಾನೂನುಗಳಿಗೆ ಬದಲಾವಣೆಗಳನ್ನು ಮಾಡುವಂಥ ಸಂಕೀರ್ಣ ವಿಷಯಗಳು ಇದರಲ್ಲಿವೆ. ಇದೇ ಕಾರಣಕ್ಕೆ ಈ ಹಿಂದಿನ ಸರ್ಕಾರವು ಯಾವುದೇ ಪ್ರಯತ್ನ ಮಾಡಿಯೇ ಇಲ್ಲ.

ಕೆಲವು ಪ್ರಮುಖ ಪಕ್ಷಗಳು ಸಹಕಾರ ನೀಡಿದರೆ, ಲೋಕಸಭೆ ಹಾಗೂ ವಿಧಾನಸಭೆಗೆ ಏಕಕಾಲದಲ್ಲಿ ಚುನಾವಣೆ ನಡೆಸಬಹುದು. ಇದರ ಮೊದಲ ಹೆಜ್ಜೆಯಾಗಿ 'ಒಂದು ದೇಶ, ಎರಡು ಚುನಾವಣೆ'ಯನ್ನು ನಡೆಸಬಹುದಾಗಿದೆ. 'ಎರಡು ಚುನಾವಣೆ' ಅಂದರೆ, ದೇಶದ ಎಲ್ಲ ರಾಜ್ಯಗಳನ್ನು ಎರಡು ಗುಂಪುಗಳಾಗಿ ವಿಂಗಡಿಸುವುದು. ಲೋಕಸಭೆ ಚುನಾವಣೆಯೊಂದಿಗೆ ಒಂದು ಗುಂಪಿನ ರಾಜ್ಯಗಳಲ್ಲಿ ಚುನಾವಣೆ ನಡೆಸುವುದು. ಇದರಿಂದಾಗಿ ರಾಜಕೀಯ ನಾಯಕರು ತಮ್ಮ ಸಮಯವನ್ನು ಆಡಳಿತದ ಕಡೆಗೆ ಹೆಚ್ಚು ನೀಡುವಂತಾಗುತ್ತದೆ. ಈ ಪ್ರಕ್ರಿಯೆಯಿಂದ ಯಾವುದೇ ರಾಜಕೀಯ ಪಕ್ಷಕ್ಕೆ ಅಥವಾ ಮೈತ್ರಿಕೂಟಕ್ಕೆ ಲಾಭವೂ ಇಲ್ಲ ನಷ್ಟವೂ ಇಲ್ಲ. ಎಲ್ಲ ಪಕ್ಷಗಳು ಹಾಗೂ ಮೈತ್ರಿಕೂಟಗಳಿಗೆ ಒಂದೇ ರೀತಿಯ ಅನುಕೂಲ ಹಾಗೂ ಅನನುಕೂಲಗಳು ಆಗುತ್ತವೆ. ಏನೇ ಆದರೂ, ಇದರಿಂದ ದೇಶಕ್ಕಂತೂ ಅನುಕೂಲವಿದೆ.

ದೇಶದಲ್ಲಿ ಒಂದುರೀತಿಯ ಜಡತ್ವ ಇದೆ ಹಾಗೂ ಕಲ್ಪನಾ ದಾರಿದ್ರ್ಯ ಇದೆ. ಇವು ದೇಶದಲ್ಲಿನ ಸಮಸ್ಯೆಗಳನ್ನು ಹೆಚ್ಚಿಸುತ್ತಿವೆ ಎನ್ನುವುದು ಪ್ರಧಾನಿ ಮೋದಿ ಅವರ ಅಭಿಪ್ರಾಯ. ಈ ಜಡತ್ವವು ಕೊನೆಗೊಳ್ಳಬೇಕು. ಜಡತ್ವವು ಕೊನೆಗಾಣಿಸಲು 'ಒಂದು ದೇಶ, ಒಂದು ಚುನಾವಣೆ'ಯು ಉತ್ತಮವಾದ ಹಾಗೂ ಬಹುಮುಖ್ಯವಾದ ಹೆಜ್ಜೆ ಆಗಲಿದೆ.

ಲೇಖಕ: ರಾಜಕೀಯ ವಿಶ್ಲೇಷಕ

ಸಿನಿ ಬಿಟ್ಸ್

ಅಕ್ಟೋಬರ್‌ನಿಂದ ಬಿಗ್‌ಬಾಸ್–10

ಕಿರುತೆರೆ ಜಗತ್ತಿನ ಜನಪ್ರಿಯ ರಿಯಾಲಿಟಿ ಶೋ 'ಬಿಗ್‌ಬಾಸ್' 10ನೇ ಆವೃತ್ತಿ ಅಕ್ಟೋಬರ್‌ನಿಂದ ಪ್ರಾರಂಭಗೊಳ್ಳಲಿದೆ.
'ಅಕ್ಟೋಬರ್ ಎರಡನೇ ವಾರ ಅಥವಾ ಮೂರನೇ ವಾರದಿಂದ ಬಿಗ್‌ಬಾಸ್ ಪ್ರಾರಂಭವಾಗಲಿದೆ. ಈ ಸಲ ಶೋನ ಸ್ವರೂಪದಲ್ಲಿ ಒಂದಷ್ಟು ಬದಲಾವಣೆಗಳು ಇರಲಿವೆ. ಶೋ ಪ್ರಾರಂಭವಾದಾಗ ಪುಣೆಯ ಲೋನಾವಾಲದಲ್ಲಿ ಸೆಟ್ ಹಾಕಲಾಗಿತ್ತು. ಬಳಿಕ ಅದನ್ನು ಬೆಂಗಳೂರಿನ ಇನೋವೇಟಿವ್ ಫಿಲಂ ಸಿಟಿಗೆ ಸ್ಥಳಾಂತರಿಸಲಾಯಿತು. ಆದರೆ ಈ ವರ್ಷ ದೊಡ್ಡ ಆಲದ ಮರದ ಬಳಿ ಸೆಟ್ ಕೆಲಸ ನಡೆಯುತ್ತಿದೆ' ಎಂದು ವಾಹಿನಿ ಮೂಲಗಳು ಹೇಳಿವೆ.

ಒಟಿಟಿ ಆವೃತಿ ಇಲ್ಲ:

ಟೆಲಿವಿಷನ್ ರೇಟಿಂಗ್(ಟಿಆರ್‌ಪಿ)ನಲ್ಲಿ ಬಿಗ್‌ಬಾಸ್ ಮೊದಲ ಆವೃತ್ತಿ ಹೊರತುಪಡಿಸಿ ಉಳಿದ ಆವೃತ್ತಿಗಳು ಅಷ್ಟೇನೂ ಯಶಸ್ಸು ಕಾಣಲಿಲ್ಲ. ಹೀಗಾಗಿ ಕಳೆದ ವರ್ಷ ತನ್ನ ಒಟಿಟಿ ವೇದಿಕೆ ವೂಟ್‌ನಲ್ಲಿಯೂ ವಾಹಿನಿ ಮೊದಲು ಪ್ರತ್ಯೇಕವಾಗಿ ಬಿಗ್‌ಬಾಸ್ ಸೀಸನ್ ಪ್ರಾರಂಭಿಸಿತ್ತು. ಅಲ್ಲಿಂದ ನಾಲ್ವರಿಗೆ ನೇರವಾಗಿ ಬಿಗ್‌ಬಾಸ್ ಮನೆಗೆ ಪ್ರವೇಶ ನೀಡಿತ್ತು. ಆದರೆ ಈ ವರ್ಷ ಒಟಿಟಿ ಆವೃತ್ತಿಯನ್ನು ವಾಹಿನಿ ಕೈಬಿಟ್ಟಿದೆ ಎಂದು ಮೂಲಗಳು ಖಚಿತಪಡಿಸಿವೆ.

ಸ್ಪರ್ಧಿಗಳ ಕೊರತೆ:

ಸಾಕಷ್ಟು ಜನಪ್ರಿಯ ವ್ಯಕ್ತಿಗಳ, ರಾಜಕಾರಣಿಗಳ ಹೆಸರು ಬಿಗ್‌ಬಾಸ್ ಪ್ರಾರಂಭಕ್ಕೂ ಮುನ್ನ ಕೇಳಿಬರುತ್ತವೆ. ಆದಾಗ್ಯೂ ಸೀಸನ್‌ನಿಂದ ಸೀಸನ್‌ಗೆ ಬಿಗ್‌ಬಾಸ್ ಮನೆ ಪ್ರವೇಶಿಸುವ ಗಣ್ಯರು, ಸಿನಿಮಾ ತಾರೆಯರ ಸಂಖ್ಯೆ ಕುಸಿದು, ಮುಖ್ಯ ಭೂಮಿಕೆಯಿಂದ ದೂರಸರಿದಿರುವ, ಕಿರುತೆರೆ ತಾರೆಯರ ವೇದಿಕೆಯಾಗಿ ಮಾರ್ಪಟ್ಟಿತ್ತು. ಈ ವರ್ಷವೂ ಮೂರು–ನಾಲ್ಕು ಸಿನಿ ತಾರೆಯರನ್ನು ಬಿಗ್‌ಬಾಸ್ ಮನೆಯೊಳಗೆ ಕರೆತರಲು ವಾಹಿನಿ ಕಸರತ್ತು ನಡೆಸುತ್ತಿದೆ. ಇದಲ್ಲದೇ ಕಿರುತೆರೆ ಕಲಾವಿದರು, ಸಾಮಾಜಿಕ ಜಾಲತಾಣಗಳಲ್ಲಿ ಸದ್ದು ಮಾಡಿದ ವ್ಯಕ್ತಿಗಳನ್ನು ಪಟ್ಟಿ ಮಾಡಿಕೊಂಡಿದೆ.

ಸೋಮವಾರದಿಂದ ಶುಕ್ರವಾರದವರೆಗೆ ರಾತ್ರಿ 9ರಿಂದ 10.30ವರೆಗೆ ಬಿಗ್‌ಬಾಸ್ ಪ್ರಸಾರಗೊಳ್ಳುವ ನಿರೀಕ್ಷೆಯಿದೆ. ವಾರಾಂತ್ಯದಲ್ಲಿ 'ವಾರದ ಕಥೆ ಕಿಚ್ಚನ ಜೊತೆ' ಪ್ರಸಾರವಾಗಲಿದೆ. ಇಷ್ಟು ವರ್ಷ ಕಲರ್ಸ್ ಕನ್ನಡ ಮುಖ್ಯಸ್ಥರಾಗಿದ್ದ ಪರಮೇಶ್ವರ್ ಗುಂಡ್ಕಲ್ ಕನ್ನಡದ ಬಿಗ್‌ಬಾಸ್ ನಿರ್ದೇಶಿಸಿದ್ದರು. ಈ ವರ್ಷ ಶೋನ ನಿರ್ದೇಶಕರು ಕೂಡ ಬದಲಾಗಿದ್ದಾರೆ ಎನ್ನುತ್ತಿವೆ ಮೂಲಗಳು.



ಜಾನ್ವಿರಾಯಲ ಈಗ 'ಶೋಷಿತೆ'

ಕಿರುತೆರೆ ನಿರೂಪಕಿ ಡಾ.ಜಾನ್ವಿರಾಯಲ ಮುಖ್ಯ ಪಾತ್ರದಲ್ಲಿ ಕಾಣಿಸಿಕೊಂಡಿರುವ 'ಶೋಷಿತೆ' ಚಿತ್ರ ತೆರೆಗೆ ಬರಲು ಸಿದ್ಧವಾಗಿದೆ. ಈ ಹಿಂದೆ ಕೆಲ ಕಿರುಚಿತ್ರಗಳನ್ನು ನಿರ್ದೇಶಿಸಿದ್ದ ಶಶಿಧರ್ ಈ ಚಿತ್ರಕ್ಕೆ ಕಥೆ ಬರೆದು ಆ್ಯಕ್ಷನ್ ಕಟ್ ಹೇಳಿದ್ದು, ಕಾರ್ನಿವಲ್ ಪ್ರೊಡಕ್ಷನ್ ಮೂಲಕ ಸಿರಿಶಾಅಲ್ಲ ನಿರ್ಮಿಸಿದ್ದಾರೆ.

'ಚಿತ್ರದ ಸೆನ್ಸಾರ್ ಮುಗಿದಿದ್ದು, 'ಯು' ಪ್ರಮಾಣಪತ್ರ ನೀಡಿದೆ. 2015ರಲ್ಲಿ ಆಂಧ್ರಪ್ರದೇಶದ ನೆಲ್ಲೂರಿನಲ್ಲಿ ನಡೆದಂತಹ ಘಟನೆಯು ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಇದರ ಒಂದು ಎಳೆಯನ್ನು ತೆಗೆದುಕೊಂಡು ಕಥೆ ಮಾಡಲಾಗಿದೆ. ಮಧ್ಯಮ ವರ್ಗದ ಹುಡುಗಿಗೆ ಯಾವ ರೀತಿಯ ಕಷ್ಟಗಳು ಎದುರಾಗುತ್ತವೆ, ಅದನ್ನು ಹೇಗೆ ಎದುರಿಸುತ್ತಾಳೆ ಎಂಬುದು ಚಿತ್ರದ ಸಾರ' ಎಂದರು ನಿರ್ದೇಶಕರು.

ರೂಪ ರಾಯಪ್ಪ ಖಳನಾಯಕಿ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಕೆ.ವಿ.ಎನ್.ಎಂ. ಸಂಗೀತ, ರವಿವರ್ಮ.ಕೆ ಛಾಯಾಗ್ರಹಣ ಚಿತ್ರಕ್ಕಿದೆ. ಬೆಂಗಳೂರು, ಹೊಸಕೋಟೆ ಮೊದಲಾದೆಡೆ ಚಿತ್ರೀಕರಣಗೊಂಡಿದೆ.



ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪದಬಂಧ 5436


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ತಲೆಯನ್ನು ಕೆಳಕ್ಕೆ ಬಾಗಿಸಿ ನಡೆಯುವವನು (4)
3.ಮೂಲಿಕೆಗಳನ್ನು ಬಟ್ಟಿಯಿಳಿಸಿ ತೆಗೆದ ರಸ(3)
5.ಗಣಿಯೊಳಗಿರುವ ಬಸುರಿ! (3)
7.ಹಲ್ಲುಗಳಿಗೆ ಆಧಾರವಾಗಿರುವ ಮಾಂಸಖಂಡ (3)
8.ಗ್ರಹಗಳ ಪ್ರದಕ್ಷಣೆ ಪಥ (2)
9.ಎಲ್ಲರೂ ಒಟ್ಟಾಗಿ ಹಾಡುವಿಕೆ (5)
11.ಅಗ್ಗಳಿಕೆಯಲ್ಲಿರುವ ಕಡಿಮೆ ಬೆಲೆ (2)
12.ಗದ್ದಲ ಇಲ್ಲೇ ಕೇಳುತ್ತಿದೆ (3)
13.ಕೋಟೆಯ ಮೇಲುಭಾಗ (3)
16.ಪ್ರತ್ಯಕ್ಷವಲ್ಲದ್ದು ಪಕ್ಷದೊಳಗಿದೆಯಲ್ಲಾ?(3)
17.ಅಕ್ಕಪಕ್ಕ ಎಂದು ಹೀಗೆನ್ನಿ (4)

ಮೇಲಿಂದ ಕೆಳಕ್ಕೆ

1.ಎಣ್ಣೆ ಮಜ್ಜನಕ್ಕೇನೂ ಭಂಗವಿಲ್ಲ ಬಿಡಿ! (3)
2.ಜಮ ಅಲ್ಲ! ಇದು ವೆಚ್ಚ! (2)
3.ಕರದಲ್ಲಿ ಹಿಡಿದಿರುವ ಕಚ್ಚಾಪ್ರತಿ (3)
4.ನರಕಾಧಿಪತಿ ನೀಡಿದ ಘೋರದಂಡನೆ (4)
6.ಸರಪಣಿಯಲ್ಲಿನ ಪಂಕ್ತಿಯೇ ಉಲ್ಟಾ ಆಗಿಬಿಟ್ಟಿದೆ (3)
7.ಕೆಲಸಕ್ಕೆ ಬಾರದ ಮಾತಿದು (5)
10.ಮುಸಲ್ಮಾನರ ದೊರೆ (3)
11.ಒಪ್ಪವಾಗಿ ಬಳಿಯುವುದು (4)
12.ಬೆಳಕಿನ ಕಿಂಡಿಯಿದು (3)
14.ರೀತಿಯೊಡನೆ ಬಂದಿರುವ ಸಂಪ್ರದಾಯ! (3)
15.ಬಯಕೆಯಿಲ್ಲಿ ಉಲ್ಟಾಪಲ್ಟಾ ಆಗಿಬಿಟ್ಟಿದೆ(2)



5435ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪರಂಧಾಮ 3.ಹುಸಿನಗು
5.ನೆನಪು 6.ನಿಕ್ಷೇಪ
8.ಕುಮಾರ 9.ಅಹಿತ
10.ರಥಿಕ 12.ವರ್ಜನ
14,ನಿಷ್ಕರುಣ
15.ದುರಾಚಾರ

ಮೇಲಿಂದ ಕೆಳಕ್ಕೆ:
1.ಪಯಸ್ವಿನಿ 2.ಮದ್ದಾನೆ
3.ಹುರುಪು
4.ಗುಪ್ತದ್ವಾರ 7.ಪರ್ವತ
8.ಕುಬೇರ
9.ಅವಧಾನಿ 11.ಕಳೇವರ
12.ವರುಣ 13.ನಗದು

ಸುಡೊಕು 5822

4			3		8			2
		1		6		3	8	
9		3			2			6
							6	
	2	6	9	4	7			
	4		6		1		7	5
			1		9	8		
8		7					9	
1	9		8		6	4		3


5821 ಸುಡೊಕು

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

1	5	8	4	3	2	9	7	6
3	7	6	9	8	1	2	4	5
9	2	4	6	5	7	1	8	3
8	9	5	2	7	4	6	3	1
4	6	1	5	9	3	7	2	8
7	3	2	1	6	8	5	9	4
5	4	9	3	2	6	8	1	7
2	1	7	8	4	5	3	6	9
6	8	3	7	1	9	4	5	2

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಸೆಪ್ಟೆಂಬರ್ 9, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಕೃಷ್ಣ ದಶಮಿ ಗಂ. 19-19 ನಕ್ಷತ್ರ: ಆರ್ದ್ರಾ ಗಂ. 14-26 ಯೋಗ: ವ್ಯತೀಪಾತ ಗಂ. 22-35 ಕರಣ: ವಣಿಜ ಗಂ. 06-21, ಸಿಂಹ ಮಾಸದ 23 ನೇ ದಿನ, ಮಳೆನಕ್ಷತ್ರ: ಪೂರ್ವ ಫಲ್ಗುಣಿ 3. ರಾಹುಕಾಲ : ಬೆಳಗ್ಗೆ 09-00 – 10-30
ಸೂರ್ಯೋದಯ : 06-23 ಸೂರ್ಯಾಸ್ತ : 06-33, ಮುಸ್ಲಿಂ ದಿನಾಂಕ : 23 ಸಫರ್
ಅದೃಷ್ಟ ಸಂಖ್ಯೆ : 4, 5

ಮೇಷ: ವಿಚಾರಗಳನ್ನು ಭಿನ್ನ ದೃಷ್ಟಿಯಿಂದ ನೋಡಲು ಪ್ರಯತ್ನಿಸಿ, ಸರಿ ತಪ್ಪಿನ ಅರಿವು ಸ್ವತಃ ನಿಮಗೇ ಆಗಲಿದೆ. ಸಾಂಕ್ರಾಮಿಕ ರೋಗಕ್ಕೆ ಒಳಗಾಗುವ ಪರಿಸ್ಥಿತಿ ಬರಬಹುದು. ದೇವತಾ ಕಾರ್ಯ ಜರುಗಿಸುವ ಬಗ್ಗೆ ಯೋಚಿಸಿ.

ವೃಷಭ: ಗುರಿ ಮುಟ್ಟುವತ್ತ ನಿಮ್ಮ ಹಾದಿ ಮಾರ್ಗದರ್ಶಕರ ಸಲಹೆ ಮೇರೆಗೆ ಬದಲಿಸಿಕೊಂಡಲ್ಲಿ ಯೋಜನೆಗಳು ನೀವು ಆಲೋಚಿಸಿದಕ್ಕಿಂತಲೂ ಹೆಚ್ಚು ಪ್ರಾಯೋಗಿಕವಾಗಿ ನೆರವೇರುವುದು. ಆಂಜನೇಯನನ್ನು ಆರಾಧಿಸಿ.

ಮಿಥುನ: ಸಹೋದರರಲ್ಲಿನ ಭಿನ್ನಾಭಿಪ್ರಾಯಕ್ಕೆ ದಾಯಾದಿಗಳು ಪುನಃ ಹುಳಿಹಿಂಡುವ ಕೆಲಸವನ್ನು ಮಾಡಲಿದ್ದಾರೆ. ಕಾರ್ಯರಂಗಕ್ಕೆ ಇಳಿಯಬೇಕೆಂಬ ನಿಮ್ಮ ಸ್ವಭಾವ ಮುನ್ನಡೆಸುವುದು.

ಕರ್ಕಾಟಕ: ನಿಮ್ಮಿಂದ ಉತ್ಪಾದಿತ ವಸ್ತುಗಳಿಗೆ ಮಾರುಕಟ್ಟೆಯಲ್ಲಿ ಭದ್ರ ನೆಲೆ ಸಿಕ್ಕಿ ಮನಸ್ಸಿಗೆ ಹೆಚ್ಚಿನ ನೆಮ್ಮದಿಯಾಗಲಿದೆ. ನಾಸ್ತಿಕರಿಗೆ ಸವಾಲೊಡ್ಡುವ ಸನ್ನಿವೇಶಗಳು ಎದುರಾಗುವುದು. ಆಭರಣ ತಯಾರಕರಿಗೆ ವಿಶೇಷ ದಿನ.

ಸಿಂಹ: ಬಹು ಕೆಲಸಗಳ ಹೊಣೆ ಇರುವ ನಿಮಗೆ ಇಂದಿನ ವಿನಾಕಾರಣದ ಅಲೆದಾಟದಿಂದ ಬೇಸರ ಮೂಡುತ್ತದೆ. ಪ್ರತಿ ಹೆಜ್ಜೆಯು ನಿಮ್ಮ ಆತ್ಮಸಾಕ್ಷಿಗೆ ಒಪ್ಪುವಂತೆ ಇರಲಿ. ಲೆಕ್ಕ ಪತ್ರಗಳ ಪರಿಶೀಲನೆ ಮಾಡುವುದು ಉತ್ತಮ.

ಕನ್ಯಾ: ತೆರಿಗೆ ಪಾವತಿಯ ವಿಚಾರದಲ್ಲಿ ಹಿರಿಯರ ಸಲಹೆ ಸಹಕಾರ ಕೇಳುವುದು ಸರಿ ಎನಿಸಲಿದೆ. ಯಾರೋ ಮಾಡಿದ ತಪ್ಪುಗಳಿಗೆ ನೇರ ಹೊಣೆಗಾರಿಕೆ ನೀವಾಗುವಿರಿ. ವಿವಾಹ ವಿಷಯಗಳು ನಿಮ್ಮಿಷ್ಟದಂತೆ ನಡೆಯುವುದು.

ತುಲಾ: ಇಂದು ನಿಮ್ಮ ಉದಾರ ಮನೋಭಾವವು ವ್ಯವಹಾರದಲ್ಲಿ ನಷ್ಟ ಅಥವಾ ಸೋಲೆನಿಸಿದರೂ, ಮುಂದಿನ ದಿನಗಳಲ್ಲಿ ಅನುಕೂಲ ಒದಗಿಸಲಿದೆ. ಜನರನ್ನು ಆಕರ್ಷಿಸುವಂತಹ ಕೃತಕ ವಾತಾವರಣ ಸೃಷ್ಟಿಸಿಕೊಳ್ಳುವಲ್ಲಿ ಯಶಸ್ವಿ.

ವೃಶ್ಚಿಕ: ಪೋಲೀಸ್ ಹುದ್ದೆಯವರಿಗೆ ಮಹತ್ತರ ಕಾರ್ಯಾಚರಣೆಗಾಗಿ ಕುಟುಂಬದಿಂದ ದೂರ ಇರುವ ಪರಿಸ್ಥಿತಿ ಅಥವಾ ದೂರ ಸಂಚಾರ ಮಾಡಬೇಕಾಗಬಹುದು. ವಾಹನ ಚಾಲನೆಯಂಥ ಕಾರ್ಯದಲ್ಲಿ ಆತುರವು ಒಳ್ಳೆಯದಲ್ಲ.


ಧನು: ತಪ್ಪುಗಳನ್ನು ಸಮರ್ಥಿಸಿಕೊಳ್ಳುವಂಥ ಕೆಲಸದ ಬದಲು ತಪ್ಪನ್ನು ಸರಿಪಡಿಸಿಕೊಳ್ಳುವ ಬಗ್ಗೆ ನಿಮ್ಮ ಆಲೋಚನೆಗಳು, ನಿಮ್ಮ ದೈಹಿಕ ಶ್ರಮವಿರಲಿ. ಪಿತೃ ವರ್ಗದ ಆಶೀರ್ವಾದದಿಂದ ಮನೆಯಲ್ಲಿ ಶುಭವಾಗುವುದು.

ಮಕರ: ಹೆಜ್ಜೆ ಬಿರುಸಾಗಿ ಮತ್ತು ಕೇವಲ ನಿಮಗಲ್ಲದೇ ಸಂಸ್ಥೆಗೂ ಲಾಭದಾಯಕ. ಎಲೆಕ್ಟ್ರಾನಿಕ್ ಉಪಕರಣಗಳ ತಯಾರಿಕೆ ಅಥವಾ ರಿಪೇರಿ ಮಾಡುವವರಿಗೆ ಸುದಿನ. ಸಜ್ಜನರ ಸಹವಾಸದ ಬೆಲೆ ಅನುಭವಕ್ಕೆ ಬರುವುದು.

ಕುಂಭ: ಬುದ್ಧಿಶಕ್ತಿಗೆ ಸ್ವಲ್ಪ ಕೆಲಸ ಕೊಟ್ಟರೆ ಇಂದು ಯಶಸ್ಸು ಖಂಡಿತವಾಗಿ ದೊರಕುತ್ತದೆ. ನೂತನ ಬಂಧುತ್ವದ ಬೆಸುಗೆ ಸಾಂಸಾರಿಕವಾಗಿ ಹೆಚ್ಚು ಫಲ ಕೊಟ್ಟೀತು. ಸಣ್ಣ ಕೆಲಸಕ್ಕೂ ಅಧಿಕ ಹಣ ವ್ಯಯವಾಗುವ ಲಕ್ಷಣಗಳಿದೆ.

ಮೀನ: ಹೊಸ ಜನರನ್ನು ಭೇಟಿಯಾಗುವ ಮೂಲಕ ಉದ್ಯೋಗದಲ್ಲಿ ಹೊಸ ಹುರುಪು ಮೂಡಲಿದೆ. ವ್ಯವಹಾರದಲ್ಲಿ ಆದಾಯ ಕಡಿಮೆ ಎಂದು ಅನಿಸಿದರೂ ಹೆದರುವ ಅಥವಾ ಬದಲು ಮಾಡುವ ಅವಶ್ಯಕತೆ ಇರುವುದಿಲ್ಲ.

ಷೇರುಪೇಟೆ ವಹಿವಾಟು ▲ 333



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19,727
ಇಂದಿನ ಅಂತ್ಯ	19,819
▲	92
ದಿನದ ಗರಿಷ್ಠ	19,867

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹480
12 ಮೊಟ್ಟೆಗೆ	₹65
ಮೈಸೂರು	
100 ಮೊಟ್ಟೆಗೆ	₹480

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1720(1720)
ಸೋಯಾ (ರಿಫೈನ್ಡ್)	₹900(910)
ಸೂರ್ಯಕಾಂತಿ (ರಿಫೈನ್ಡ್)	₹905(910)
ಪಾಮೋಲಿನ್	₹832(838)

ವಿನಿಮಯ ದರ

$ ಡಾಲರ್	83.02
£ ಪೌಂಡ್	103.56
€ ಯುರೊ	88.82
¥ ಯೆನ್ (100ಕ್ಕೆ)	56

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹7500-8410
ಕೆ.ಆರ್‌.ಪೇಟೆ	₹7992-7992
ತುಮಕೂರು	₹7900-8450
ತುರುವೇಕೆರೆ	₹8600-8600

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹144.50
ಆರ್‌ಎಸ್‌ಎಸ್-5	₹138
ಗುಡ್ ಲಾಟ್	₹126

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹285-502
ದ್ವಿತಳಿ (ಬಿ.ವಿ)	₹266-658

ರಿಲಯನ್ಸ್, ಎನ್‌ವಿಡಿಯಾ ಒಪ್ಪಂದ

ನವದೆಹಲಿ (ಪಿಟಿಐ): ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ (ಆರ್‌ಐಎಲ್) ಮತ್ತು ಅಮೆರಿಕದ ತಂತ್ರಜ್ಞಾನ ಕಂಪನಿ ಎನ್‌ವಿಡಿಯಾ ಜೊತೆಯಾಗಿ ಭಾರತದಲ್ಲಿ ಕೃತಕ ಬುದ್ಧಿಮತ್ತೆಯ ಸೂಪರ್‌ಕಂಪ್ಯೂಟರ್ ತಯಾರಿಸಲಿವೆ.

'ಭಾರತದಲ್ಲಿ ಇಂದು ಇರುವ ಅತ್ಯಂತ ವೇಗದ ಸೂಪರ್ ಕಂಪ್ಯೂಟರ್‌ಗಿಂತ ಹೆಚ್ಚು ಶಕ್ತಿಶಾಲಿಯಾದ ಕೃತಕ ಬುದ್ಧಿಮತ್ತೆ ಮೂಲಸೌಕರ್ಯ ನಿರ್ಮಾಣಕ್ಕೆ ಎರಡು ಕಂಪನಿಗಳು ಕೆಲಸ ಮಾಡಲಿವೆ' ಎಂದು ಹೇಳಿಕೆ ತಿಳಿಸಿದೆ.

ಈ ಘೋಷಣೆ ಹೊರಬೀಳುವ ಒಂದು ದಿನ ಮೊದಲು, ಎನ್‌ವಿಡಿಯಾ ಸಂಸ್ಥಾಪಕ ಹಾಗೂ ಸಿಇಒ ಜೆನ್ಸನ್ ಹುವಾಂಗ್ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿದ್ದರು. ಭಾರತದಲ್ಲಿ 2004ರಲ್ಲಿ ಕಾರ್ಯಾಚರಣೆ ಆರಂಭಿಸಿರುವ ಎನ್‌ವಿಡಿಯಾ ನಾಲ್ಕು ಕೇಂದ್ರಗಳನ್ನು, 3,800 ನೌಕರರನ್ನು ಹೊಂದಿದೆ.

ರಿಲಯನ್ಸ್ ಕಂಪನಿಯು ತನ್ನ 45 ಕೋಟಿ ಜಿಯೊ ಗ್ರಾಹಕರಿಗೆ ಎ.ಐ. ಅಪ್ಲಿಕೇಷನ್‌ಗಳನ್ನು ಅಭಿವೃದ್ಧಿಪಡಿಸಲಿದೆ, ವಿಜ್ಞಾನಿಗಳಿಗೆ, ಡೆವಲಪರ್‌ಗಳಿಗೆ ಹಾಗೂ ನವೋದ್ಯಮಗಳಿಗೆ ಎ.ಐ. ಮೂಲಸೌಕರ್ಯ ಒದಗಿಸಿಕೊಡಲಿದೆ ಎಂದು ಪ್ರಕಟಣೆ ತಿಳಿಸಿದೆ.

ಪೇಟೆ: 6ನೇ ದಿನವೂ ಗಳಿಕೆ



ನವದೆಹಲಿ (ಪಿಟಿಐ): ದೇಶದ ಷೇರುಪೇಟೆಗಳಲ್ಲಿ ಸತತ ಆರನೇ ದಿನವೂ ಸಕಾರಾತ್ಮಕ ವಹಿವಾಟು ನಡೆಯಿತು. ಎಚ್‌ಡಿಎಫ್‌ಸಿ ಬ್ಯಾಂಕ್, ಎಲ್‌ಆ್ಯಂಡ್‌ಟಿ ಮತ್ತು ರಿಲಯನ್ಸ್ ಇಂಡಸ್ಟ್ರೀಸ್ ಷೇರುಗಳನ್ನು ಹೂಡಿಕೆದಾರರು ಹೆಚ್ಚಿನ ಸಂಖ್ಯೆಯಲ್ಲಿ ಖರೀದಿಸಿದ್ದು ಸೂಚ್ಯಂಕಗಳ ಏರಿಕೆಗೆ ನೆರವಾಯಿತು.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 333 ಅಂಶ ಏರಿಕೆ ಕಂಡು 66,598 ಅಂಶಗಳಿಗೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 92 ಅಂಶ ಹೆಚ್ಚಾಗಿ 19,819 ಅಂಶಗಳಿಗೆ ತಲುಪಿತು. ಆರು ದಿನಗಳ ವಹಿವಾಟಿನಲ್ಲಿ ನಿಫ್ಟಿ 473 ಅಂಶ, ಸೆನ್ಸೆಕ್ಸ್ 1,434 ಅಂಶಗಳಷ್ಟು ಏರಿಕೆ ಕಂಡಿವೆ.

ಮಾರುಕಟ್ಟೆ ಮೌಲ್ಯ ವೃದ್ಧಿ: ಮುಂಬೈ ಷೇರುಪೇಟೆಯ ಮಾರುಕಟ್ಟೆ ಬಂಡವಾಳ ಮೌಲ್ಯವು ಶುಕ್ರವಾರದ ವಹಿವಾಟಿನಲ್ಲಿ ದಾಖಲೆಯ ₹320.94 ಲಕ್ಷ ಕೋಟಿಗೆ ಏರಿಕೆ ಕಂಡಿತು.

ಆರ್ಥಿಕ ಬೆಳವಣಿಗೆಗೆ ಉತ್ತೇಜನ ನೀಡುವಲ್ಲಿ ಪ್ರಮುಖ ಪಾತ್ರ ವಹಿಸುವ ಕಂಪನಿಗಳ ಷೇರುಗಳ ಮೇಲೆ ಹೂಡಿಕೆದಾರರು ಹೆಚ್ಚು ಹೂಡಿಕೆ ಮಾಡುತ್ತಿದ್ದಾರೆ ಎಂದು ಕೋಟಕ್ ಸೆಕ್ಯುರಿಟೀಸ್ ಲಿಮಿಟೆಡ್‌ನ ಉಪಾಧ್ಯಕ್ಷ ಅಮೋಲ್ ಅಠಾವಳೆ ಹೇಳಿದ್ದಾರೆ.

ಭಾರತದ ಡಿಜಿಟಲ್ ಮೂಲಸೌಕರ್ಯ: ವಿಶ್ವಬ್ಯಾಂಕ್ ಶ್ಲಾಘನೆ

ನವದೆಹಲಿ (ಪಿಟಿಐ): ವಿತ್ತೀಯ ಒಳಗೊಳ್ಳುವಿಕೆಗಾಗಿ ಆಧಾರ್ ಮತ್ತು ಯುಪಿಐ ಸೇರಿದಂತೆ ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯದ (ಡಿಪಿಐ) ಸಾಮರ್ಥ್ಯವನ್ನು ಬಳಸಿಕೊಳ್ಳುತ್ತಿರುವ ಭಾರತದ ಕ್ರಮವನ್ನು ವಿಶ್ವಬ್ಯಾಂಕ್ ಶ್ಲಾಘಿಸಿದೆ.

ಡಿಪಿಐ ಪ್ರಭಾವವು ವಿತ್ತೀಯ ಒಳಗೊಳ್ಳುವಿಕೆಯಷ್ಟೇ ಅಲ್ಲದೆ, ಆರೋಗ್ಯ, ಶಿಕ್ಷಣ ಮತ್ತು ಸುಸ್ಥಿರತೆಯನ್ನೂ ಬೆಂಬಲಿಸುತ್ತದೆ ಎಂದು ವಿಶ್ವಬ್ಯಾಂಕ್ ಸಿದ್ಧಪಡಿಸಿರುವ ವರದಿಯು ಹೇಳಿದೆ. ಡಿಪಿಐ ಮೂಲಕ ಕೇವಲ 6 ವರ್ಷಗಳಲ್ಲಿ ಭಾರತವು ಶೇ 80ರಷ್ಟು ವಿತ್ತೀಯ ಒಳಗೊಳ್ಳುವಿಕೆ ದರವನ್ನು ಸಾಧಿಸಿದೆ. ಡಿಪಿಐ ಇಲ್ಲದೇ ಇದ್ದಿದ್ದರೆ ಈ ಸಾಧನೆ ಮಾಡಲು ಸುಮಾರು 5 ದಶಕಗಳೇ ಬೇಕಾಗುತ್ತಿತ್ತು ಎಂದು ಹೇಳಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	750-800
ನಡುಗೋಲು	900-950
ರಾಶಿ	1000-1100
ರಾಶಿ ಉತ್ತಮ	1150-1200
ಹೆರಕಿದ್ದು	1600-1700
ಹಸಿರು (ಸಾಧಾರಣ)	1200-1250
ಹಸಿರು ಉತ್ತಮ	1600-1700
ಹಸಿರು ಅತಿ ಉತ್ತಮ	1900-2000
ಕಾಳುಮೆಣಸು -	630
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-48500
ಕುಮಟಾ	
ಚಿಪ್ಪು	31509-34899
ಕೋಕ	20109-32899
ಹಳೆಚಾಲಿ	39999-41899
ಹೊಸಚಾಲಿ	37799-40299
ಹೊಸನಗರ	
ಚಾಲಿ	37599-37599
ಕೆಂಪುಗೋಟು	29899-37019
ರಾಶಿ	42439-50600
ಕಾರ್ಕಳ	
ಹೊಸತು	30000-45000
ಹಳತು	40000-48500
ಶಿವಮೊಗ್ಗ	
ಬೆಟ್ಟೆ	43199-52240
ಗೊರಬಲು	18009-36669
ರಾಶಿ	40338-49899
ಸರಕು	53133-74040
ಸಿದ್ದಾಪುರ	
ಬಿಳಿಗೋಟು	32019-35809
ಕೋಕ	31219-35108
ಚಾಲಿ	38509-41209
ಕೆಂಪುಗೋಟು	30019-37689
ರಾಶಿ	44609-49499
ತಟ್ಟಿಬೆಟ್ಟೆ	39099-48899
ಶಿರಸಿ	
ಬೆಟ್ಟೆ	37399-48289
ಬಿಳಿಗೋಟು	24199-36125
ಚಾಲಿ	37000-42439
ಕೆಂಪುಗೋಟು	30199-36723
ರಾಶಿ	46669-50749
ಯಲ್ಲಾಪುರ	
ಬಿಳಿಗೋಟು	26918-36669
ಕೋಕ	16812-31929
ಚಾಲಿ	37399-42299
ಕೆಂಪುಗೋಟು	30369-37311
ರಾಶಿ	48020-55399
ತಟ್ಟಿಬೆಟ್ಟೆ	38100-47500
ಆಪಿ	55579-60379

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	12500	---	149.80 ಸೆಂಟ್ಸ್
ಎಸಿ	---	6300	---	
ಆರ್‌ಪಿ	---	10000	9900	ಲಂಡನ್
ಆರ್‌ಸಿ	---	238 on OT	5825	2407 ಡಾಲರ್ಸ್

ಹಂತ ಹಂತವಾಗಿ ಹಿಂಪಡೆಯಲು ರಿಸರ್ವ್ ಬ್ಯಾಂಕ್ ತೀರ್ಮಾನ

ಐ–ಸಿಆರ್‌ಆರ್ ಕೈಬಿಡಲು ನಿರ್ಧಾರ

ಮುಂಬೈ (ಪಿಟಿಐ): ಹೆಚ್ಚುವರಿ ನಗದು ಮೀಸಲು ಅನುಪಾತ (ಐ–ಸಿಆರ್‌ಆರ್) ವ್ಯವಸ್ಥೆಯನ್ನು ಹಂತ ಹಂತವಾಗಿ ಕೈಬಿಡಲು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ತೀರ್ಮಾನಿಸಿದೆ.

₹2,000 ಮುಖಬೆಲೆಯ ನೋಟುಗಳನ್ನು ಚಲಾವಣೆಯಿಂದ ಹಿಂದಕ್ಕೆ ಪಡೆಯುವ ತೀರ್ಮಾನ ಕೈಗೊಂಡ ನಂತರದಲ್ಲಿ ಹಣಕಾಸು ವ್ಯವಸ್ಥೆಯಲ್ಲಿ ನಗದು ಲಭ್ಯತೆ ಹೆಚ್ಚಾಗಿದ್ದುದನ್ನು ತಗ್ಗಿಸುವ ಉದ್ದೇಶದಿಂದ ಇದನ್ನು ಜಾರಿಗೆ ತರಲಾಗಿತ್ತು.

ಐ–ಸಿಆರ್‌ಆರ್ ಪಾಲನೆ ಮಾಡಬೇಕು ಎಂದು ಆರ್‌ಬಿಐ, ಬ್ಯಾಂಕ್‌ಗಳಿಗೆ ಆಗಸ್ಟ್ 10ರಂದು ಸೂಚನೆ ನೀಡಿತ್ತು. ಈ ಸೂಚನೆಯನ್ನು ಸೆಪ್ಟೆಂಬರ್ 8ರಂದು ಅಥವಾ ಅದಕ್ಕೂ ಮೊದಲು ಪುನರ್ ಪರಿಶೀಲಿಸಲಾಗುವುದು ಎಂದು ಕೂಡ ಆಗ ಹೇಳಿತ್ತು.

ಮುಖ್ಯಾಂಶಗಳು

- ಐ–ಸಿಆರ್‌ಆರ್ ಕ್ರಮ ತಾತ್ಕಾಲಿಕ ಎಂದಿದ್ದ ಗವರ್ನರ್
- ವ್ಯವಸ್ಥೆಯಲ್ಲಿನ ಹೆಚ್ಚುವರಿ ನಗದನ್ನು ಹಿಂಪಡೆಯಲು ಜಾರಿಗೊಳಿಸಿದ್ದ ಕ್ರಮ

ಐ–ಸಿಆರ್‌ಆರ್ ಕ್ರಮವು ತಾತ್ಕಾಲಿಕ ಮಾತ್ರ ಎಂಬ ಸೂಚನೆಯನ್ನು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಅವರೂ ಆಗ ನೀಡಿದ್ದರು. 'ಪರಿಶೀಲನೆಯ ನಂತರ, ಐ–ಸಿಆರ್‌ಆರ್ ಅಗತ್ಯವನ್ನು ಹಂತ ಹಂತವಾಗಿ ಕೈಬಿಡಲು ತೀರ್ಮಾನಿಸಲಾಗಿದೆ' ಎಂದು ಆರ್‌ಬಿಐ ಪ್ರಕಟಣೆ ತಿಳಿಸಿದೆ.



ಬ್ಯಾಂಕ್‌ಗಳು ಆರ್‌ಬಿಐನಲ್ಲಿ ಇರಿಸಿರುವ ಐ–ಸಿಆರ್‌ಆರ್ ಮೊತ್ತದಲ್ಲಿ ಶೇ 25ರಷ್ಟನ್ನು ಶನಿವಾರ ಬಿಡುಗಡೆ ಮಾಡಲಾಗುತ್ತದೆ. ಸೆಪ್ಟೆಂಬರ್ 23ರಂದು ಇನ್ನೂ ಶೇ 23ರಷ್ಟನ್ನು ಬಿಡುಗಡೆ ಮಾಡಲಾಗುತ್ತದೆ. ಇನ್ನುಳಿದ ಮೊತ್ತವನ್ನು ಅಕ್ಟೋಬರ್ 7ರಂದು ಬಿಡುಗಡೆ ಮಾಡಲಾಗುತ್ತದೆ ಎಂದು ಆರ್‌ಬಿಐ ಹೇಳಿದೆ.

₹2,000 ಮುಖಬೆಲೆಯ ನೋಟುಗಳನ್ನು ಚಲಾವಣೆಯಿಂದ ಹಿಂದಕ್ಕೆ ಪಡೆಯುವ ತೀರ್ಮಾನ ಹೊರಬಿದ್ದ ನಂತರದಲ್ಲಿ, ಬ್ಯಾಂಕಿಂಗ್ ವ್ಯವಸ್ಥೆಯಲ್ಲಿನ ನಗದು ಲಭ್ಯತೆಯು ಗಣನೀಯವಾಗಿ ಹೆಚ್ಚಾಗಿತ್ತು. ಹೆಚ್ಚುವರಿ ನಗದನ್ನು ಹಣಕಾಸು ವ್ಯವಸ್ಥೆಯಿಂದ ಹೊರತೆಗೆಯುವ ಉದ್ದೇಶದಿಂದ ಐ–ಸಿಆರ್‌ಆರ್ ಕ್ರಮ ಪ್ರಕಟಿಸಲಾಗಿತ್ತು.

₹2,000 ಮುಖಬೆಲೆಯ ನೋಟುಗಳನ್ನು ಚಲಾವಣೆಯಿಂದ ಹಿಂದಕ್ಕೆ ಪಡೆಯುವ ಪ್ರಕಟಣೆಯನ್ನು ಆರ್‌ಬಿಐ ಹೊರಡಿಸಿದ್ದು ಮೇ 19ರಂದು. ಆ ದಿನ ಚಲಾವಣೆಯಲ್ಲಿ ₹2,000 ಮುಖಬೆಲೆಯ ನೋಟುಗಳ ಪೈಕಿ ಶೇ 93ರಷ್ಟು ಬ್ಯಾಂಕಿಂಗ್ ವ್ಯವಸ್ಥೆಗೆ ಮರಳಿ ಬಂದಿವೆ.

ಆಗಸ್ಟ್ 31ರವರೆಗೆ ಬ್ಯಾಂಕುಗಳು ಒಟ್ಟು ₹3.32 ಲಕ್ಷ ಕೋಟಿ ಮೌಲ್ಯದ ₹2,000 ಮುಖಬೆಲೆಯ ನೋಟುಗಳನ್ನು ಮರಳಿ ಸ್ವೀಕರಿಸಿವೆ.

ಹಾಲ್‌ಮಾರ್ಕ್: 55 ಜಿಲ್ಲೆಗಳಲ್ಲಿ 3ನೇ ಹಂತ

ನವದೆಹಲಿ (ಪಿಟಿಐ): ಚಿನ್ನಾಭರಣಗಳಿಗೆ ಹಾಲ್‌ಮಾರ್ಕ್ ಕಡ್ಡಾಯ ಮಾಡುವ ನಿಯಮವು ಮೂರನೇ ಹಂತದಲ್ಲಿ ಕರ್ನಾಟಕ ಸೇರಿದಂತೆ 16 ರಾಜ್ಯಗಳ ಮತ್ತು ಒಂದು ಕೇಂದ್ರಾಡಳಿತ ಪ್ರದೇಶದ ಒಟ್ಟು 55 ಜಿಲ್ಲೆಗಳಲ್ಲಿ ಜಾರಿಗೆ ಬಂದಿದೆ ಎಂದು ಕೇಂದ್ರ ಸರ್ಕಾರ ಶುಕ್ರವಾರ ತಿಳಿಸಿದೆ.

ಮೂರನೇ ಹಂತವನ್ನು ಜಾರಿಗೊಳಿಸುವ ಸಂಬಂಧ ಶುಕ್ರವಾರ ಅಧಿಸೂಚನೆ ಹೊರಡಿಸಲಾಗಿದೆ ಎಂದು ಗ್ರಾಹಕ ವ್ಯವಹಾರಗಳ ಸಚಿವಾಲಯ ಹೇಳಿದೆ.

ಹಾಲ್‌ಮಾರ್ಕ್ ಕಡ್ಡಾಯದ ವಿವರ

- **4 ಲಕ್ಷ** ಪ್ರತಿ ದಿನವೂ ಹಾಲ್‌ಮಾರ್ಕ್ ಆಗುತ್ತಿರುವ ಚಿನ್ನಾಭರಣಗಳು
- **26 ಕೋಟಿ** ಎಚ್‌ಯುಐಡಿಯಲ್ಲಿ ಈವರೆಗೆ ಹಾಲ್‌ಮಾರ್ಕ್ ಆಗಿರುವ ಒಟ್ಟು ಚಿನ್ನಾಭರಣಗಳ ಸಂಖ್ಯೆ
- **1.81 ಲಕ್ಷ** ನೋಂದಾಯಿಸಿಕೊಂಡಿರುವ ಚಿನ್ನಾಭರಣ ವರ್ತಕರ ಸಂಖ್ಯೆ



ಕರ್ನಾಟಕ, ಹರಿಯಾಣ, ಪಂಜಾಬ್, ತಮಿಳುನಾಡು ಮತ್ತು ಜಮ್ಮು ಕಾಶ್ಮೀರದ ತಲಾ 3 ಜಿಲ್ಲೆಗಳು, ಬಿಹಾರದ 8 ಜಿಲ್ಲೆಗಳು, ಆಂಧ್ರಪ್ರದೇಶ, ಉತ್ತರ ಪ್ರದೇಶ ಮತ್ತು ಮಹಾರಾಷ್ಟ್ರದ ತಲಾ 5 ಜಿಲ್ಲೆಗಳು, ತೆಲಂಗಾಣದ 4 ಜಿಲ್ಲೆಗಳು ಹಾಗೂ ಅಸ್ಸಾಂ, ಗುಜರಾತ್, ಜಾರ್ಖಂಡ, ಮಧ್ಯಪ್ರದೇಶ, ಉತ್ತರಾಖಂಡ ಮತ್ತು ಪಶ್ಚಿಮ ಬಂಗಾಳದ ತಲಾ 2 ಜಿಲ್ಲೆಗಳಲ್ಲಿ, ರಾಜಸ್ಥಾನದ ಒಂದು ಜಿಲ್ಲೆಯಲ್ಲಿ ಶುಕ್ರವಾರದಿಂದ ಹಾಲ್‌ಮಾರ್ಕಿಂಗ್ ಕಡ್ಡಾಯವಾಗಿದೆ.

ಸದ್ಯ ಒಟ್ಟು 343 ಜಿಲ್ಲೆಗಳು ಹಾಲ್‌ಮಾರ್ಕ್ ಕಡ್ಡಾಯ ನಿಯಮದ ವ್ಯಾಪ್ತಿಗೆ ಒಳಪಟ್ಟಿವೆ. ಮೊದಲ ಹಂತದಲ್ಲಿ 256 ಜಿಲ್ಲೆಗಳು ಮತ್ತು ಎರಡನೇ ಹಂತದಲ್ಲಿ 32ಕ್ಕೂ ಹೆಚ್ಚು ಜಿಲ್ಲೆಗಳಲ್ಲಿ ಹಾಲ್‌ಮಾರ್ಕಿಂಗ್ ಕಡ್ಡಾಯಗೊಳಿಸುವಿಕೆ ಜಾರಿಗೆ ಬಂದಿದೆ.

ಹಟ್ಟಿ: 3ಂಗಳಲ್ಲಿ 110 ಕೆ.ಜಿ. ಚಿನ್ನ ಉತ್ಪಾದನೆ

ಪ್ರಜಾವಾಣಿ ವಾರ್ತೆ

ಹಟ್ಟಿ ಚಿನ್ನದಗಣಿ (ರಾಯಚೂರು ಜಿಲ್ಲೆ): ಹಟ್ಟಿ ಚಿನ್ನದಗಣಿ ಕಂಪನಿಯು ಆಗಸ್ಟ್ ತಿಂಗಳಲ್ಲಿ 48,914 ಮೆಟ್ರಿಕ್ ಟನ್ ಅದಿರು ಸಂಸ್ಕರಿಸಿ 110 ಕೆ.ಜಿ ಚಿನ್ನ ಉತ್ಪಾದಿಸುವ ಮೂಲಕ ದಾಖಲೆ ಮಾಡಿದೆ.

ಪ್ರಸಕ್ತ ಆರ್ಥಿಕ ವರ್ಷದಲ್ಲಿ 1,800 ಕೆ.ಜಿ. ಚಿನ್ನ ಉತ್ಪಾದನೆಯ ಗುರಿ ಹೊಂದಲಾಗಿದೆ. ಆದರೆ, ಐದು ತಿಂಗಳಲ್ಲಿ 501.865 ಕೆ.ಜಿ ಚಿನ್ನ ಉತ್ಪಾದಿಸಲಾಗಿದೆ.

ಏಪ್ರಿಲ್ ತಿಂಗಳಲ್ಲಿ 98 ಕೆ.ಜಿ, ಮೇ ತಿಂಗಳಲ್ಲಿ 94 ಕೆ.ಜಿ, ಜೂನ್‌ನಲ್ಲಿ 98 ಕೆ.ಜಿ. ಹಾಗೂ ಜುಲೈನಲ್ಲಿ 99 ಕೆ.ಜಿ ಚಿನ್ನ ಉತ್ಪಾದಿಸಲಾಗಿತ್ತು. ಆಗಸ್ಟ್ ತಿಂಗಳಲ್ಲಿ ಈ ಎಲ್ಲ ತಿಂಗಳಲ್ಲಿ ಆಗಿರುವುದಕ್ಕಿಂತ ಹೆಚ್ಚು ಚಿನ್ನವನ್ನು ಉತ್ಪಾದಿಸಲಾಗಿದೆ.



ಹಟ್ಟಿ ಚಿನ್ನದ ಗಣಿ ಕಂಪನಿಯ ಲೋಹ ವಿಭಾಗದಲ್ಲಿ ಕೆಲಸದಲ್ಲಿ ತೊಡಗಿರುವ ಕಾರ್ಮಿಕರು.

ಸರ್ಕ್ಯುಲರ್ ಶಾಫ್ಟ್: 6 ಮೀಟರ್ ಸುತ್ತಳತೆ ಹಾಗೂ 900 ಮೀಟರ್ ಆಳದ ನ್ಯೂ ಸರ್ಕ್ಯುಲರ್ ಶಾಫ್ಟ್ ಕಾಮಗಾರಿ ಮುಗಿದಿದೆ. ಈ ಶಾಫ್ಟ್‌ನ ಕೇಜ್ ಮೂಲಕ ಒಂದೇ ಸಮಯಕ್ಕೆ ನೂರು ಕಾರ್ಮಿಕರು ಒಳಗಡೆ ಹೋಗಿ ಬರಲು ಆಗುತ್ತದೆ.

'ಅದಿರು ಸಂಸ್ಕರಣೆಯ ಹೊಸ ಬಾಲ್ ಮಿಲ್ ಮತ್ತು ಸಾಗ್ ಸಂಸ್ಕರಣೆಗೆ ಸಿದ್ಧವಾಗಿವೆ. ಸದ್ಯ ಇದರ ಪ್ರಯೋಗಾರ್ಥ ಬಳಕೆ ನಡೆಯುತ್ತಿದೆ. ಪ್ರತಿದಿನ 3 ಸಾವಿರ ಮೆಟ್ರಿಕ್ ಟನ್ ಅದಿರು ಸಂಸ್ಕರಿಸುವುದರಿಂದ ಚಿನ್ನ ಉತ್ಪಾದನೆ ಪ್ರಮಾಣ ಹೆಚ್ಚಳವಾಗಲಿದೆ' ಎಂದು ಹಟ್ಟಿ ಚಿನ್ನದ ಗಣಿ ಕಂಪನಿಯ ಕಾರ್ಯನಿರ್ವಾಹಕ ನಿರ್ದೇಶಕ ಪ್ರಕಾಶ ಬಹದ್ದೂರ್ ತಿಳಿಸಿದರು.

ಐರೋಪ್ಯ ಒಕ್ಕೂಟದಲ್ಲೂ ಆತಂಕವಿದೆ: ರಾಹುಲ್ ಗಾಂಧಿ

ಪ್ರಜಾಪ್ರಭುತ್ವ ಸಂಸ್ಥೆಗಳ ಮೇಲೆ ದಾಳಿ

ಬ್ರಸೆಲ್ಸ್(ಪಿಟಿಐ): ಭಾರತದ ಪ್ರಜಾಪ್ರಭುತ್ವದ ಸಂಸ್ಥೆಗಳ ಮೇಲೆ ದಾಳಿ ನಡೆಯುತ್ತಿದೆ. ಪ್ರಜಾತಾಂತ್ರಿಕ ವ್ಯವಸ್ಥೆಯನ್ನು ನಿಗ್ರಹಿಸುವ ಈ ಪ್ರಯತ್ನಗಳ ವಿರುದ್ಧ ಐರೋಪ್ಯ ಒಕ್ಕೂಟದಲ್ಲೂ ಆತಂಕವಿದೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಶುಕ್ರವಾರ ಹೇಳಿದ್ದಾರೆ.

ಐರೋಪ್ಯ ರಾಷ್ಟ್ರಗಳ ಪ್ರವಾಸದಲ್ಲಿರುವ ರಾಹುಲ್ ಗಾಂಧಿ ಬ್ರಸೆಲ್ಸ್‌ನಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದರು. ಈ ವೇಳೆ ಹಲವು ವಿಷಯಗಳ ಕುರಿತು ಅವರು ಅಭಿಪ್ರಾಯ ಹಂಚಿಕೊಂಡರು.

'ಭಾರತದಲ್ಲಿ ತಾರತಮ್ಯ, ಹಿಂಸೆ ಮನೆ ಮಾಡಿದೆ. ದೇಶದ ಪ್ರಜಾಪ್ರಭುತ್ವದ ಸಂಸ್ಥೆಗಳ ಮೇಲೆ ದಾಳಿ ನಡೆಯುತ್ತಿದೆ. ಇದು ಎಲ್ಲರಿಗೂ ಗೊತ್ತಿರುವ ವಿಚಾರ' ಎಂದರು.

'ಭಾರತದಲ್ಲಿನ ಈ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಐರೋಪ್ಯ ಒಕ್ಕೂಟದ ಸಂಸದರ ಅಭಿಪ್ರಾಯವೇನು' ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, 'ಭಾರತದಲ್ಲಿನ ಸಮಸ್ಯೆಗಳ ಬಗ್ಗೆ ಐರೋಪ್ಯ ಒಕ್ಕೂಟದ ಸಂಸದರಲ್ಲಿ ಆತಂಕವಿದೆ. ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ನಿಗ್ರಹಿಸುವ ಪ್ರಯತ್ನಗಳು ಖಚಿತವಾಗಿ ನಡೆಯುತ್ತಿವೆ ಎಂದು ಅವರು ಭಾವಿಸಿದ್ದಾರೆ. ಅದರ ಅರ್ಥ, ನಮ್ಮ ಸಮಸ್ಯೆಗಳ ಬಗ್ಗೆ ಅವರಿಗೆ ಸ್ಪಷ್ಟ ಅರಿವಿದೆ' ಎಂದು ರಾಹುಲ್ ತಿಳಿಸಿದರು.

'ಭಾರತದಲ್ಲಿ ಅಲ್ಪಸಂಖ್ಯಾತರು ದಾಳಿಗೆ ಒಳಗಾಗಿದ್ದಾರೆ. ದಲಿತರು, ಬುಡಕಟ್ಟು ಸಮುದಾಯಗಳೂ ದಾಳಿಗೆ ಒಳಗಾಗುತ್ತಿವೆ. ನಮ್ಮ ದೇಶದ ಸ್ವರೂಪವನ್ನೇ ಬದಲಿಸುವ ಪ್ರಯತ್ನ ನಡೆಯುತ್ತಿದೆ. ಐರೋಪ್ಯ ಒಕ್ಕೂಟದ ಸಂಸದರೊಂದಿಗೆ ನಡೆದ ಸಭೆಯಲ್ಲಿ ಮಣಿಪುರದ ವಿಚಾರವನ್ನು ಚರ್ಚಿಸಲಾಗಿದೆ' ಎಂದು ಹೇಳಿದರು.



ರಾಹುಲ್

ಐರೋಪ್ಯ ರಾಷ್ಟ್ರಗಳ ಪ್ರವಾಸದಲ್ಲಿರುವ ರಾಹುಲ್ ಗಾಂಧಿ ಬ್ರಸೆಲ್ಸ್‌ನಿಂದ ಪ್ಯಾರಿಸ್‌ಗೆ ಪ್ರಯಾಣಿಸಲಿದ್ದಾರೆ. ವಾರಾಂತ್ಯದಲ್ಲಿ ನೆದರ್‌ಲ್ಯಾಂಡ್ಸ್ ಮತ್ತು ನಾರ್ವೆಗೆ ತೆರಳಲಿದ್ದಾರೆ. ಈ ದೇಶಗಳಲ್ಲಿನ ಸಂಸದರೊಂದಿಗೆ ಸಭೆ ನಡೆಸಲಿದ್ದಾರೆ. ಜತೆಗೆ, ಭಾರತೀಯ ಸಾಗರೋತ್ತರ ಕಾಂಗ್ರೆಸ್ ಮತ್ತು ಸ್ಥಳೀಯ ಸಂಘಟನೆಗಳು ಆಯೋಜಿಸುವ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ.

ಉಕ್ರೇನ್ ಯುದ್ಧ, ಸರ್ಕಾರದ ನಿಲುವಿಗೆ ಸಹಮತ: 'ರಷ್ಯಾ ಮತ್ತು ಉಕ್ರೇನ್ ನಡುವಿನ ಸಂಘರ್ಷದ ವಿಚಾರದಲ್ಲಿ ಕೇಂದ್ರ ಸರ್ಕಾರ ತಳೆದಿರುವ ನಿರ್ಧಾರವನ್ನು ಭಾರತದ ವಿರೋಧ ಪಕ್ಷಗಳು ಬೆಂಬಲಿಸುತ್ತವೆ. ಭಾರತಕ್ಕೆ ರಷ್ಯಾದೊಂದಿಗೆ ಉತ್ತಮ ಬಾಂಧವ್ಯವಿದೆ. ಇದಕ್ಕೆ ವ್ಯತಿರಿಕ್ತವಾದ ಅಭಿಪ್ರಾಯವನ್ನು ವಿರೋಧ ಪಕ್ಷಗಳು ಹೊಂದಿವೆ ಎಂದು ನನಗೆ ಅನಿಸುವುದಿಲ್ಲ' ಎಂದು ರಾಹುಲ್ ಹೇಳಿದರು.

ಕಾಶ್ಮೀರ ಕುರಿತ ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದ ಕಾಂಗ್ರೆಸ್ ನಾಯಕ, 'ಕಾಶ್ಮೀರ ಭಾರತದ ಅವಿಭಾಜ್ಯ ಅಂಗ. ಈ ವಿಷಯದಲ್ಲಿ ಮಧ್ಯಪ್ರವೇಶಿಸಲು ಯಾರಿಗೂ ಹಕ್ಕಿಲ್ಲ' ಎಂದರು.

'ಹೆಸರಿನ ಗೊಂದಲ: ಗಮನ ಬೇರೆಡೆ ಸೆಳೆಯುವ ಸರ್ಕಾರದ ಕಾರ್ಯತಂತ್ರ'

ಲಂಡನ್ (ಪಿಟಿಐ): 'ದೇಶದ ಹೆಸರು ಬದಲಾವಣೆ ಬಗ್ಗೆ ಸಾಮಾಜಿಕ ಮಾಧ್ಯಮದಲ್ಲಿ ವ್ಯಕ್ತವಾಗುತ್ತಿರುವ 'ಆತಂಕಕಾರಿ ಪ್ರತಿಕ್ರಿಯೆ'ಗಳು 'ಗಮನ ಬೇರೆಡೆ ಸೆಳೆಯುವ' ಸರ್ಕಾರದ ಕಾರ್ಯತಂತ್ರವಾಗಿದೆ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿದ್ದಾರೆ.

ಬ್ರಸೆಲ್ಸ್‌ನಲ್ಲಿ ಸುದ್ದಿಗಾರರ ಜೊತೆಗೆ ಮಾತನಾಡಿದ ಅವರು, 'ಕಾಂಗ್ರೆಸ್ ಪಕ್ಷವು ಕೇಂದ್ರ ಸರ್ಕಾರದ 'ಆಪ್ತ ಬಂಡವಾಳಶಾಹಿ'ಗಳ ವಿರುದ್ಧ ಪ್ರಸ್ತಾಪಿಸಿದಾಗಲೆಲ್ಲಾ ಇಂತಹ ವಿವಾದಗಳು ಗರಿಗೆದರುತ್ತವೆ' ಎಂದು ಅಭಿಪ್ರಾಯಪಟ್ಟರು.

ಜಿ20 ಶೃಂಗಸಭೆಯ ಔತಣ ಕೂಟಕ್ಕೆ ಸಂಬಂಧಿಸಿದ ರಾಷ್ಟ್ರಪತಿಯವರ ಆಹ್ವಾನ ಪತ್ರಿಕೆಯಲ್ಲಿ 'ಪ್ರೆಸಿಡೆಂಟ್ ಆಫ್ ಭಾರತ್' ಎಂಬ ಉಲ್ಲೇಖವಿದ್ದುದರಿಂದ ಇಂಡಿಯಾ ಮತ್ತು ಭಾರತ್ ಹೆಸರಿನ ಬದಲಾವಣೆ ಕುರಿತಂತೆ ವಿಸ್ತೃತವಾದ ಚರ್ಚೆ ನಡೆದಿತ್ತು.

'ಪ್ರತಿಪಕ್ಷಗಳ ಮೈತ್ರಿಕೂಟಕ್ಕೆ 'ಇಂಡಿಯಾ' ಎಂದು ಹೆಸರಿಸಿದ ಬಳಿಕ ಪ್ರಧಾನಿ ನರೇಂದ್ರ ಮೋದಿ ವಿಚಲಿತರಾಗಿದ್ದಾರೆ. ನನ್ನ ಪ್ರಕಾರ, ಇವು ಆತಂಕದ ಪ್ರತಿಕ್ರಿಯೆಗಳು. ಸರ್ಕಾರಕ್ಕೆ ಸ್ವಲ್ಪಮಟ್ಟಿಗೆ ಭೀತಿ ಇದೆ. ಇದು, ಗಮನ ಬೇರೆಡೆ ಸೆಳೆಯುವ ತಂತ್ರ' ಎಂದರು.

'ಸಂವಿಧಾನದಲ್ಲಿ ಉಲ್ಲೇಖವಾಗಿರುವ ಹೆಸರಿನ ಬಗ್ಗೆ ನನಗೆ ಖುಷಿಯಿದೆ. 'ಇಂಡಿಯಾ, ಅರ್ಥಾತ್ ಭಾರತ' ತುಂಬಾ ಚೆನ್ನಾಗಿದೆ'. ನಾವು ಮೈತ್ರಿಕೂಟಕ್ಕೆ ಇಂಡಿಯಾ ಎಂದು ಹೆಸರಿಸಿದ್ದೇವೆ. ಇದು ನಮಗೆ ಸರಿಯಾಗಿ ಹೊಂದಿಕೆಯಾಗಲಿದೆ. ಇದು, ನಿಜವಾಗಿ ಪ್ರಧಾನಿ ಅವರನ್ನು ವಿಚಲಿತರಾಗಿಸಿದೆ ಎಂಬುದಕ್ಕೆ ಅವರು ದೇಶದ ಹೆಸರು ಬದಲಿಸಲು ಮುಂದಾಗಿದ್ದಾರೆ ಎಂಬುದೇ ನಿದರ್ಶನ' ಎಂದು ಪ್ರತಿಕ್ರಿಯಿಸಿದರು.

'ಚೀನಾಕ್ಕೆ ಪರ್ಯಾಯ ಉತ್ಪಾದನಾ ಮಾದರಿ ಅಗತ್ಯ'

ಲಂಡನ್(ಪಿಟಿಐ): ಚೀನಾದ ಉತ್ಪಾದನಾ ಮಾದರಿಗೆ ಪರ್ಯಾಯ ಮತ್ತು ಸ್ಪರ್ಧಾತ್ಮಕವಾದ ಮಾದರಿಯನ್ನು ಅಮೆರಿಕ, ಯುರೋಪ್ ಮತ್ತು ಭಾರತ ರಚಿಸಬೇಕಾಗಿದೆ ಎಂದು ರಾಹುಲ್ ಗಾಂಧಿ ಹೇಳಿದ್ದಾರೆ.

ಬ್ರಸೆಲ್ಸ್‌ನಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, 'ಚೀನಾ ನಿರ್ದಿಷ್ಟ ಜಗತ್ತೊಂದರ ದೃಷ್ಟಿಕೋನವನ್ನು ಪ್ರತಿಪಾದಿಸುತ್ತಿದೆ. 'ಬೆಲ್ಟ್ ಆ್ಯಂಡ್ ರೋಡ್ ಇನ್ಶಿಯೇಟಿವ್ (ಬಿಆರ್‌ಐ)' ಎಂಬ ಯೋಜನೆಯ ಪರಿಕಲ್ಪನೆಯನ್ನು ಜಗತ್ತಿನ ಎದುರಿಗಿಟ್ಟಿದ್ದಾರೆ. ಜಾಗತಿಕ ಉತ್ಪಾದನೆಯ ಕೇಂದ್ರ ಸ್ಥಾನದಲ್ಲಿರುವ ಕಾರಣದಿಂದ ಅವರಿಗೆ ಈ ಯೋಜನೆ ಮಾಡಲು ಸಾಧ್ಯವಾಯಿತು' ಎಂದರು.

'ಚೀನಾದ ಮಾದರಿಗೆ ಪ್ರತಿಯಾಗಿ ನಮ್ಮ ಕಡೆಯಿಂದ ಪರ್ಯಾಯ ಮುನ್ನೋಟವೊಂದು ಕಾಣುತ್ತಿಲ್ಲ. ಆ ಮುನ್ನೋಟಕ್ಕೆ ಪ್ರಜಾಸತ್ತಾತ್ಮಕ ವಾತಾವರಣದ ಉತ್ಪಾದನೆಯ ದೃಷ್ಟಿಕೋನ ಬೇಕು. ಜನರಿಗೆ ಮುಕ್ತ ವಾತಾವರಣವಿರದ, ರಾಜಕೀಯ ಸ್ವಾತಂತ್ರ್ಯವಿರದ, ಬಲವಂತದ ವಾತಾವರಣದಲ್ಲಿ ಪರಿಣಾಮಕಾರಿಯಾಗಿ ಉತ್ಪಾದಿಸಲು ಸಾಧ್ಯವಿದೆ ಎಂಬುದನ್ನು ಚೀನಾ ತೋರಿಸಿಕೊಟ್ಟಿದೆ' ಎಂದರು.

'ನಮ್ಮ ಮುಂದಿರುವ ಸವಾಲು ಏನೆಂದರೆ, ಅದಕ್ಕೆ ಪರ್ಯಾಯವಾದ ವಾತಾವರಣದಲ್ಲಿ ಉತ್ಪಾದನೆ ಹೆಚ್ಚಿಸುವುದು. ರಾಜಕೀಯ ಸ್ವಾತಂತ್ರ್ಯವಿರುವ, ಪ್ರಜಾಸತ್ತಾತ್ಮಕ ವಾತಾವರಣದಲ್ಲಿ ನಾವು ಅದನ್ನು ಸಾಧಿಸಬೇಕು. ಅಮೆರಿಕ, ಯೂರೋಪ್ ಮತ್ತು ಭಾರತದ ನಡುವೆ ಅನೇಕ ಸಹಕಾರ ಒಪ್ಪಂದಗಳಾಗಿವೆ. ಸದ್ಯ ನಾವು ಚೀನಾಕ್ಕೆ ಪರ್ಯಾಯವಾದ ವ್ಯವಸ್ಥೆ ಬಗ್ಗೆ ಯೋಚನೆ ಮಾಡಬೇಕಾಗಿದೆ' ಎಂದು ರಾಹುಲ್ ಹೇಳಿದರು.

ಮುಂಬೈ ಧಾರಣೆ

ಶೇಂಗಾ 8–9–2023

ಜಾವಾ 70/80(ಹೊಸ)	12700-12800
ಜಾವಾ 80/90(ಹೊಸ)	12100-12200
ದಪ್ಪ ಮಧ್ಯಪ್ರದೇಶ(ಹೊಸ)	11200-11300
ದಪ್ಪ ಗುಜರಾತ್(ಹೊಸ)	12300-12400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1730(1730)
ಒಂದು ವಾರದ ಡೆಲಿವರಿ	1725(1725)
ಸೋಯಾ ಕಚ್ಚಾ	850(855)
ಪಾಮ್ ವಾರದ ಡೆಲಿವರಿ	830(836)
ಸೂರ್ಯಕಾಂತಿ ಎಣ್ಣೆ ಕಚ್ಚಾ	835(835)


ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	58,850(59,000)
ಬೆಳ್ಳಿ ಕೆ.ಜಿ	71,000(71,250)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ನಾಲ್ಕನೇ ವರ್ಷದ ಸ್ಮರಣೆ



ಶ್ರೀ ಕೆ.ಎನ್.ಎಂ.ನಂದೀಶ್ವರ
ಜನನ: 31.08.1934 ಲಿಂಗೈಕ್ಯ:09.09.2019
ನಿವೃತ್ತ ಸೂಪರಿಂಟೆಂಡೆಂಟ್ ಇಂಜಿನಿಯರ್ PWD
(ಡಾ. ಸಿದ್ಧಯ್ಯ ಪುರಾಣಿಕರವರ ಅಳಿಯ)
"ನಿಷ್ಪತ್ತಿಯೆಂಬ ಹಣ್ಣು ತೊಟ್ಟು ಬಿಟ್ಟು ಕಳಚಿ ಬೀಳುವಲ್ಲಿ ಕೂಡಲಸಂಗಮದೇವ ತನಗೆ ಬೇಕೆಂದು ಎತ್ತಿಕೊಂಡ"
ಸದಾ ಸ್ಮರಿಸುವ:
ಶ್ರೀಮತಿ ವಿಜಯಾ ನಂದೀಶ್ವರ
ಶ್ರೀ ಅನಮೋಲ್. ಡಾ. ಪಲ್ಲವಿ, ಕೆ. ಶಾಂತಮೂರ್ತಿ, ಇಶಾ, ಇಂಚರ, ಆರತಿ, ಅಕ್ಷರ, ಅಂಜನಿ ಹಾಗೂ ಬಂಧು–ಮಿತ್ರರು

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ
Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 6366430266, 6366430366

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ,ತಿಂಗಳಿಗೆ 18,000 ರಿಂದ 22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

General

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 12,000/- ರಿಂದ 20,000/- ESI & PF ಸೌಲಭ್ಯವಿರುತ್ತದೆ. ಬೆಂಗಳೂರು- 76 ತಕ್ಷಣ ಸಂಪರ್ಕಿಸಿ: 9606385001, 9606523307

ಬೇಕಾಗಿದ್ದಾರೆ. SSLC, PUC, DEGREE ಯುವಕ ಯುವತಿಯರು ಬೇಕಾಗಿದ್ದಾರೆ.15,500/- ರಿಂದ 35,000/- Ph. 8861041526, 9945721526

P.M.E.G.P SCHEME ಹಾಗೂ Online work Banking and Project Report ಮಾಡಲು ಗೊತ್ತಿರುವವರು ಬೇಕಾಗಿದ್ದಾರೆ. 9019976891

ಬಿಲ್ಡರ್ ಎಸೆನ್ಷಿಯಲ್
Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ರಿಯಲ್ ಎಸ್ಟೇಟ್ ಸೆಲ್ಲಿಂಗ್
Sites
General
SALE 6000 SQFT Land Near by Silicon Son City, Bangalore. CONTACT: 9841071137

ಪ್ರವಾಸ
Travel

17.11.2023 02.12.2023 ಸಿಂಗಾಪುರ್,ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು. 04.11.2023 22.11.2023 08.12.2023 ದುಬೈ,ಅಬುದಾಬಿ 5 ದಿನಗಳು. 27.10.2023 06.12.2023 ನೇಪಾಳ 9 ದಿನಗಳು. 06.10.2023 23.12.2023 ಭೂತಾನ್ 8 ದಿನಗಳು. 09.10.2023 17.11.2023 11.12.2023 ಶ್ರೀಲಂಕಾ 6 ದಿನಗಳು. 04.10.2023 22.11.2023 06.12.2023 ರಾಜಸ್ಥಾನ್ 9 ದಿನಗಳು. 27.10.2023 25.11.2023 12.12.2023 ಗುಜರಾತ್ 8 ದಿನಗಳು 27.10.2023 27.11.2023 ಅಸ್ಸಾಂ,ಮೇಘಾಲಯ 9 ದಿನಗಳು 06.10.2023 11.11.2023 11.12.2023 ಕಾಶಿ,ಗಯಾ,ಅಲಹಾಬಾದ್ 7 ದಿನಗಳು. 07.10.2023 11.11.2023 ದೆಹಲಿ,ಆಗ್ರಾ,ಜೈಪುರ್ 6 ದಿನಗಳು. ಸಂಪರ್ಕಿಸಿ: ಜೈನ್ ಟ್ರಾವಲ್ಸ್ ಮಲ್ಲೇಶ್ವರ. ಬೆಂಗಳೂರು.03 9448402248 7022547922

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

09.10.2023 13 ದಿನಗಳು ಚಾರ್ ಧಾಮ್‌ಯಾತ್ರೆ ವಿಮಾನದಲ್ಲಿ ಬೆಂಗಳೂರು ದೆಹಲಿ ಬೆಂಗಳೂರು. 2X2 ಬಸ್ಸಿನಲ್ಲಿ ಹರಿದ್ವಾರ್,ಯಮುನೋತ್ರಿ ಗಂಗೋತ್ರಿ,ಕೇದಾರನಾಥ್ ಬದರಿನಾಥ್. ಹೆಲಿಕಾಪ್ಟರ್ ಮೂಲಕ ಕೇದಾರನಾಥ್ ದರ್ಶನ (ಘಾಟ ಕೇದಾರನಾಥ್) ಇಬ್ಬರಿಗೆ ಒಂದು ರೂಮ್ ವಸತಿ ದಕ್ಷಿಣಭಾರತ ಶೈಲಿಯ ಅಡುಗೆ ಪ್ರತಿ ಸೀಟಿಗೆ 62500 ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: ತತ್ವಮಸಿ ಟೂರ್ಸ್ 9480158233 7795787484

08.10.2023 ರಿಂದ 10 ದಿನಗಳು. ವಿಮಾನ/ A/C ಬಸ್ಸಿನಲ್ಲಿ ಊಟ ವಸತಿ ಅತ್ಯುತ್ತಮ ವ್ಯವಸ್ಥೆಯೊಂದಿಗೆ ದೆಹಲಿ,ಆಗ್ರಾ,ಮಥುರ ನೈಮಿಶಾರಣ್ಯ ಕಾಶಿ,ಗಯಾ,ಅಲಹಾಬಾದ್ ಇತ್ಯಾದಿ. 15.11.2023 ರಿಂದ 10 ದಿನಗಳು ವಿಜಯವಾಡ,ಭದ್ರಾಚಲಂ ವಾಸವಿಘನಗೊಂಡ ಸಿಂಹಾಚಲಂ ಹಾಗೂ ಪಂಚರಾಮಗಳು. ಅನಿತಾ ಟ್ರಾವಲ್ಸ್ ಶೇಷಾದ್ರಿಪುರ ಬೆಂಗಳೂರು20. 9448602641 7760884305

24.10.2023 ಗುಜರಾತ್, ಮಧ್ಯಪ್ರದೇಶ್ 25.10.2023 ನೇಪಾಳ,ಮುಕ್ತಿನಾಥ, ಕಾಶಿ, ಕೊಲ್ಕತ್ತಾ,ಭುವನೇಶ್ವರ್ 25.10.2023 ದೆಹಲಿ,ಅಮೃತ್ಸರ್, ವೈಷ್ಣೋದೇವಿ, ಹರಿದ್ವಾರ್,ಅಯೋಧ್ಯಾ, ಕಾಶಿ,ಗಯಾ, ಕರ್ನಾಟಕ ಹೆರಿಟೇಜ್ ಟೂರ್ಸ್ (ಹನುಮಂತನಗರ) 9845035349, 9482435755

ಭವಿಷ್ಯ
Astrology

★ಒಂದೇ ಕರೆಯಲ್ಲಿ★ ಸ್ತ್ರೀಪುರುಷ ವಶೀಕರಣ,ಹಣಕಾಸು ಮನೆತನ, ಇನ್ನೂ ಯಾವುದೇ ಸಮಸ್ಯೆಗಳಿಗೆ 2ಗಂಟೆಯಲ್ಲಿ 100% ಪರಿಹಾರ. ನಾರಾಯಣ ಆಚಾರ್ಯ.9880811806



'ಎಕ್ಸ್'ನಲ್ಲಿ ಪ್ರಧಾನಿ ಮೋದಿ ಪೋಸ್ಟ್: ಮಹಾತ್ಮ ಗಾಂಧಿ ಕಾರ್ಯ ಪ್ರಸ್ತಾಪ

'ಮಾನವ ಕೇಂದ್ರಿತ ಪ್ರಗತಿಗೆ ದಾರಿ'

ನವದೆಹಲಿ(ಪಿಟಿಐ): 'ಮಾನವ ಕೇಂದ್ರಿತ ಹಾಗೂ ಎಲ್ಲರನ್ನು ಒಳಗೊಳ್ಳುವ ಅಭಿವೃದ್ಧಿಗೆ ಜಿ20 ಶೃಂಗಸಭೆಯು ಹೊಸ ದಾರಿಯನ್ನು ತೋರಲಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಹೇಳಿದ್ದಾರೆ.

ರಾಷ್ಟ್ರ ರಾಜಧಾನಿ ದೆಹಲಿಯ 'ಭಾರತ ಮಂಟಪ'ದಲ್ಲಿ ಶನಿವಾರ ಆರಂಭವಾಗಲಿರುವ ಎರಡು ದಿನಗಳ ಶೃಂಗಸಭೆ ಹಿನ್ನೆಲೆಯಲ್ಲಿ ಅವರು ಸಾಮಾಜಿಕ ಮಾಧ್ಯಮ 'ಎಕ್ಸ್'ನಲ್ಲಿ ಮಾಡಿರುವ ಪೋಸ್ಟ್‌ನಲ್ಲಿ ಈ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ನಿರ್ಗತಿಕರು, ಸಮಾಜದ ಕಟ್ಟಕಡೆಯಲ್ಲಿರುವ ವ್ಯಕ್ತಿಯ ಕಲ್ಯಾಣಕ್ಕೆ ಶ್ರಮಿಸಬೇಕು ಎಂಬ ಮಹಾತ್ಮ ಗಾಂಧಿ ಅವರ ಧ್ಯೇಯವನ್ನು ತಮ್ಮ ಪೋಸ್ಟ್‌ನಲ್ಲಿ ಪ್ರಸ್ತಾಪಿಸಿರುವ ಮೋದಿ, ಬರುವ ದಿನಗಳಲ್ಲಿ ಮಾನವ ಕೇಂದ್ರಿತ ಪ್ರಗತಿ ಸಾಧಿಸುವುದಕ್ಕೆ ಭಾರತ ಒತ್ತು ನೀಡಲಿದೆ ಎಂದಿದ್ದಾರೆ.

'ತಂತ್ರಜ್ಞಾನ ಆಧಾರಿತ ಪರಿವರ್ತನೆ, ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯದಂತಹ ಭವಿಷ್ಯದ ಕ್ಷೇತ್ರಗಳಿಗೆ ಹೆಚ್ಚು ಆದ್ಯತೆ ನೀಡಿದ್ದೇವೆ. ಲಿಂಗತ್ವ ಸಮಾನತೆ, ಮಹಿಳಾ ಸಬಲೀಕರಣ ಹಾಗೂ ವಿಶ್ವ ಶಾಂತಿಗಾಗಿ ಸಾಮೂಹಿಕ ಕೆಲಸ ಮಾಡಲಿದ್ದೇವೆ' ಎಂದು ಹೇಳಿದ್ದಾರೆ.

'ವಸುಧೈವ ಕುಟುಂಬಕಂ– ಒಂದು ಭೂಮಿ, ಒಂದು ಕುಟುಂಬ ಹಾಗೂ ಒಂದು ಭವಿಷ್ಯ ಎಂಬುದು ಜಿ20ರ ಪ್ರಸ್ತುತ ಧ್ಯೇಯವಾಕ್ಯ. ಈ ಮೌಲ್ಯಗಳು ನಮ್ಮ ಸಂಸ್ಕೃತಿಯ ವಿಶಿಷ್ಟ ಲಕ್ಷಣ. ವಿಶ್ವ ಕುರಿತ ನಮ್ಮ ದೃಷ್ಟಿಕೋನದಲ್ಲಿಯೂ ಇದು ಪ್ರತಿಧ್ವನಿಸುತ್ತದೆ' ಎಂದು ಮೋದಿ ವಿವರಿಸಿದ್ದಾರೆ.

'ವಿಶ್ವಬ್ಯಾಂಕ್ ವರದಿಯೇ ಸಾಕ್ಷಿ': 'ಡಿಜಿಟಲ್ ಸಾರ್ವಜನಿಕ ಮೂಲ ಸೌಕರ್ಯದ ಮೂಲಕ ವಿತ್ತೀಯ ಒಳಗೊಳ್ಳುವಿಕೆ ವಿಷಯದಲ್ಲಿ ಭಾರತ ಗಮನಾರ್ಹ ಪ್ರಗತಿ ಸಾಧಿಸಿದೆ. ವಿಶ್ವಬ್ಯಾಂಕ್ ಪ್ರಕಟಿಸಿರುವ ಜಿ20 ವರದಿ ಯಲ್ಲಿ ಈ ಬಗ್ಗೆ ಉಲ್ಲೇಖವಿದ್ದು, ಇದು ಈ ಕ್ಷೇತ್ರದಲ್ಲಿನ ಭಾರತದ ಪ್ರಗತಿಗೆ ಸಾಕ್ಷಿಯಾಗಿದೆ' ಮೋದಿ ಹೇಳಿದ್ದಾರೆ.

'ವಿತ್ತೀಯ ಒಳಗೊಳ್ಳುವಿಕೆಯ ಗುರಿ ಸಾಧನೆಗೆ 47 ವರ್ಷಗಳು ಬೇಕಿದ್ದವು. ಆದರೆ, ಭಾರತವು 6 ವರ್ಷಗಳಲ್ಲಿ ಈ ಗುರಿ ಸಾಧಿಸಿದೆ. ಇದನ್ನು ಸಾಧ್ಯವಾಗಿಸಿದ ಡಿಜಿಟಲ್ ಪಾವತಿ ವ್ಯವಸ್ಥೆ ಹಾಗೂ ಈ ವ್ಯವಸ್ಥೆಯನ್ನು ಬಳಸುತ್ತಿರುವ ಜನರಿಗೆ ಅಭಿನಂದನೆಗಳು' ಎಂದು ಬರೆದುಕೊಂಡಿದ್ದಾರೆ.

ಪ್ರಧಾನಿ ಹೇಳಿರುವುದೇನು?

- ಭಾರತೀಯರ ಆತಿಥ್ಯವನ್ನು ವಿದೇಶಿ ಗಣ್ಯರು ಸಂಭ್ರಮಿಸುತ್ತಾರೆ ಎಂಬ ನಂಬಿಕೆ ಇದೆ
- ಜಾಗತಿಕ ನಾಯಕರು ಭಾನುವಾರ ರಾಜಘಾಟ್‌ನಲ್ಲಿ ಮಹಾತ್ಮ ಗಾಂಧಿ ಅವರ ಸಮಾಧಿಗೆ ಗೌರವ ಸಲ್ಲಿಸುವರು
- ಜಿ20 ಧ್ಯೇಯವಾಕ್ಯ 'ಒಂದು ಭೂಮಿ, ಒಂದು ಕುಟುಂಬ ಹಾಗೂ ಒಂದು ಭವಿಷ್ಯ' ಕುರಿತು ಜಾಗತಿಕ ನಾಯಕರು ಸಮಾರೋಪ ಸಮಾರಂಭದಲ್ಲಿ ತಮ್ಮ ಮುನ್ನೋಟ ಹಂಚಿಕೊಳ್ಳುವರು



ಜಿ20 ಶೃಂಗಸಭೆಯ ಅಂಗವಾಗಿ ದೆಹಲಿಯ ಜಾಮಾ ಮಸೀದಿ ಬಳಿಯ ರಸ್ತೆಯನ್ನು ಅಲಂಕರಿಸಲಾಗಿದೆ –ಪಿಟಿಐ ಚಿತ್ರ

'ಮಂಟಪ'ದಲ್ಲಿ 'ಡಿಜಿಟಲ್ ಮೂಲಸೌಕರ್ಯ' ಪ್ರದರ್ಶನ

ನವದೆಹಲಿ(ಪಿಟಿಐ): ಜಿ20 ಶೃಂಗಸಭೆಗೆ 'ಭಾರತ ಮಂಟಪ' ಸಜ್ಜುಗೊಂಡಿದ್ದರೆ, ಬ್ಯಾಂಕಿಂಗ್, ಆರೋಗ್ಯ ಸೇವೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಭಾರತ ಅನುಷ್ಠಾನಗೊಳಿಸಿರುವ ಡಿಜಿಟಲ್ ಮೂಲಸೌಕರ್ಯಗಳ ಪ್ರದರ್ಶನಕ್ಕೂ ವ್ಯವಸ್ಥೆ ಮಾಡಲಾಗಿದೆ.

ಈ ವಿಷಯದಲ್ಲಿ ದೇಶದ ಸಾಧನೆಯನ್ನು ವಿಶ್ವನಾಯಕರ ಮುಂದಿಡುವ ಸಲುವಾಗಿ ಸಭಾಂಗಣ 4 ಮತ್ತು 14ರಲ್ಲಿ ಸ್ಥಾಪಿಸಿರುವ 'ಡಿಜಿಟಲ್ ಇಂಡಿಯಾ ಎಕ್ಸ್‌ಪೀರಿಯನ್ಸ್ ಝೋನ್' ಆಕರ್ಷಣೆಯ ತಾಣವೆನಿಸಿದೆ. ಜಿ20 ಸದಸ್ಯ ರಾಷ್ಟ್ರಗಳ ಪ್ರತಿನಿಧಿಗಳು ಹಾಗೂ ಇತರ ಅತಿಥಿಗಳು ಈ ತಾಣಕ್ಕೆ ಭೇಟಿ ನೀಡುತ್ತಿದ್ದು, 'ವರ್ಚುವಲ್ ರಿಯಾಲಿಟಿ' ವಿಧಾನದಲ್ಲಿ 'ಡಿಜಿಟಲ್ ಇಂಡಿಯಾ'ದ ಅನುಭವವನ್ನು ತುಂಬಿಕೊಳ್ಳುತ್ತಿದ್ದಾರೆ.

ಕೃತಕ ಬುದ್ಧಿಮತ್ತೆ (ಎಐ) ಆಧಾರಿತ ಭಾಷಾ ವೇದಿಕೆ 'ಭಾಷಿಣಿ', ಆಧಾರ್, ಡಿಜಿಲಾಕರ್, ದೀಕ್ಷಾ ಪೋರ್ಟಲ್‌ಗಳು ಗಮನ ಸೆಳೆಯುತ್ತಿವೆ.

'ಇ–ಸಂಜೀವಿನಿ'ಯು ಡಿಜಿಟಲ್ ತಂತ್ರಜ್ಞಾನ ಬಳಸಿ, ಆರೋಗ್ಯ ಸೇವೆ ಒದಗಿಸುತ್ತಿರುವ ಭಾರತದ ಪ್ರಯತ್ನವನ್ನು ತೆರೆದಿಟ್ಟಿದೆ.

'ಭಾರತ ಮಂಟಪ'ದಲ್ಲಿ ಪ್ರದರ್ಶಿಸಲಾಗುತ್ತಿರುವ ಈ ಡಿಜಿಟಲ್ ಮೂಲಸೌಕರ್ಯಗಳನ್ನು ವಿವರಿಸುವ ವಿಡಿಯೊವೊಂದನ್ನು 'ಎಕ್ಸ್'ನಲ್ಲಿ ಹಂಚಿಕೊಳ್ಳಲಾಗಿದೆ. ಇಲ್ಲಿ ವ್ಯವಸ್ಥೆ ಮಾಡಲಾಗಿರುವ ಪ್ರದರ್ಶನ ಕುರಿತು ಜಿ20 ಮುಖ್ಯ ಸಮನ್ವಯಾಧಿಕಾರಿ ಹರ್ಷವರ್ಧನ ಶ್ರಿಂಗ್ಲಾ ಅವರು ವಿವರಣೆ ನೀಡುತ್ತಿರುವುದನ್ನು ಸಹ ವಿಡಿಯೊ ಒಳಗೊಂಡಿದೆ.

15ಕ್ಕೂ ಹೆಚ್ಚು ಸಭೆಗಳಲ್ಲಿ ಮೋದಿ ಭಾಗಿ

ಜಿ20 ಶೃಂಗಸಭೆ ಸಂದರ್ಭದಲ್ಲಿಯೇ ವಿಶ್ವದ ಪ್ರಮುಖ ನಾಯಕರೊಂದಿಗೆ ಪ್ರಧಾನಿ ನರೇಂದ್ರ ಮೋದಿ ಅವರು 15ಕ್ಕೂ ಹೆಚ್ಚು ದ್ವಿಪಕ್ಷೀಯ ಸಭೆಗಳನ್ನು ನಡೆಸಲಿದ್ದಾರೆ.

ಬ್ರಿಟನ್, ಜಪಾನ್, ಜರ್ಮನಿ ಹಾಗೂ ಇಟಲಿ ನಾಯಕರೊಂದಿಗೆ ಮೋದಿ ಶನಿವಾರ ಸಭೆ ನಡೆಸುವರು. ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರನ್ ಅವರೊಂದಿಗೆ ಭಾನುವಾರ ಸಭೆ ನಡೆಸುವರು ಎಂದು ಮೂಲಗಳು ಹೇಳಿವೆ.

ಕೆನಡಾ, ಟರ್ಕಿ, ಯುಎಇ, ದಕ್ಷಿಣ ಕೊರಿಯಾ, ಐರೋಪ್ಯ ಒಕ್ಕೂಟ, ಬ್ರೆಜಿಲ್ ಹಾಗೂ ನೈಜೀರಿಯಾ ಮುಖಂಡರೊಂದಿಗೆ ಕೂಡ ಮೋದಿ ಪ್ರತ್ಯೇಕ ಸಭೆಗಳನ್ನು ನಡೆಸುವರು ಎಂದೂ ಹೇಳಿವೆ.



ಜಿ20 ಶೃಂಗಸಭೆಯಲ್ಲಿ ಭಾಗವಹಿಸಲು ಶುಕ್ರವಾರ ನವದೆಹಲಿಗೆ ಆಗಮಿಸಿದ ಬ್ರಿಟನ್ ಪ್ರಧಾನಿ ರಿಷಿ ಸುನಕ್ ಮತ್ತು ಅವರ ಪತ್ನಿ ಅಕ್ಷತಾ ಮೂರ್ತಿ ಅವರನ್ನು ಕೇಂದ್ರ ಪರಿಸರ ಖಾತೆ ರಾಜ್ಯ ಸಚಿವ ಅಶ್ವಿನಿ ಕುಮಾರ್ ಚೌಬೆ ವಿಮಾನ ನಿಲ್ದಾಣದಲ್ಲಿ ಸ್ವಾಗತಿಸಿದರು –ಪಿಟಿಐ ಚಿತ್ರ

ಮೋದಿ 'ಎಕ್ಸ್' ಖಾತೆ ಡಿಪಿಯಲ್ಲಿ 'ಭಾರತ ಮಂಟಪ' ಚಿತ್ರ

ನವದೆಹಲಿ(ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಸಾಮಾಜಿಕ ಮಾಧ್ಯಮ 'ಎಕ್ಸ್'ನಲ್ಲಿರುವ ತಮ್ಮ ಖಾತೆಯ 'ಡಿಪಿ'(ಡಿಸ್‌ಪ್ಲೆ ಪಿಕ್ಚರ್)ಯನ್ನು ಶುಕ್ರವಾರ ಬದಲಿಸಿದ್ದು, ಜಿ 20 ಶೃಂಗಸಭೆ ನಡೆಯುವ 'ಭಾರತ ಮಂಟಪ'ದ ಚಿತ್ರವನ್ನು ಅಳವಡಿಸಿದ್ದಾರೆ. ಅಲ್ಲದೇ, ತಮ್ಮ ಪ್ರೊಫೈಲ್ ಚಿತ್ರವನ್ನು ಬದಲಿಸಿರುವ ಅವರು, 'ನಮಸ್ಕಾರ' ಮಾಡುತ್ತಿರುವ ತಮ್ಮ ಚಿತ್ರವನ್ನು ಅಳವಡಿಸಿದ್ದಾರೆ.

ಕಲಾವಿದರಿಂದ ಸಂಗೀತ ರಸದೌತಣ

ಪ್ರಜಾವಾಣಿ ವಾರ್ತೆ

ನವದೆಹಲಿ: ಜಿ20 ಶೃಂಗಸಭೆಗೆ ಆಗಮಿಸಿರುವ ವಿವಿಧ ದೇಶಗಳ ಗಣ್ಯರಿಗೆ, ದೇಶದ ಶ್ರೀಮಂತ ಸಂಗೀತ ಪರಂಪರೆಯನ್ನು ಪರಿಚಯಿಸಲು ಆತಿಥೇಯ ಭಾರತ ಸಜ್ಜಾಗಿದೆ. ವಿವಿಧ ರಾಜ್ಯಗಳ ಸುಮಾರು 78 ಕಲಾವಿದರು ಸಂಗೀತದ ರಸದೌತಣವನ್ನು ಬಡಿಸಲಿದ್ದಾರೆ. 34 ಹಿಂದೂಸ್ತಾನಿ, 40 ಜನಪದ, 18 ಕರ್ನಾಟಕ ಸಂಗೀತ ವಾದ್ಯಗಳು ಬಳಕೆಯಾಗಲಿವೆ.

ಶೃಂಗಸಭೆಯ 20 ಸದಸ್ಯ ರಾಷ್ಟ್ರಗಳು ಹಾಗೂ ಆಹ್ವಾನಿತರಾಗಿರುವ ವಿವಿಧ ರಾಷ್ಟ್ರಗಳಿಂದ ಸುಮಾರು 400 ಅತಿಥಿಗಳು ಭೋಜನಕೂಟದ ಸಂದರ್ಭದಲ್ಲಿ ಸುಮಾರು ಮೂರು ಗಂಟೆ ಕಾಲ ಸುದೀರ್ಘ ಕಾರ್ಯಕ್ರಮಕ್ಕೆ ಸಾಕ್ಷಿ ಆಗಲಿದ್ದಾರೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಶನಿವಾರ ಗಣ್ಯರಿಗಾಗಿ ಆಯೋಜಿಸಿರುವ ಭೋಜನ ಕೂಟ ಇದಕ್ಕೆ ವೇದಿಕೆಯಾಗಲಿದೆ.

11 ಮಂದಿ ಮಕ್ಕಳು, 13 ಮಹಿಳೆಯರು, 6 ಮಂದಿ ಅಂಗವಿಕಲ ಕಲಾವಿದರು, 26 ಮಂದಿ ಪುರುಷರು ಹಾಗೂ 22 ಮಂದಿ ವೃತ್ತಿಪರಿರುವ ತಂಡ ಸಂಗೀತ ಪ್ರಸ್ತುತಪಡಿಸಲಿದೆ. ವಯೊಲಿನ್ ನುಡಿಸುವ ಆರು ವರ್ಷದ ರಕ್ಷಿತಾ ತಂಡದ ಕಿರಿಯ ಸದಸ್ಯೆಯಾಗಿದ್ದರೆ, ಧಂಗಲಿ ಕಲಾವಿದ, 56 ವರ್ಷದ ಸೋನು ಧವಲು ಮಾಸೆ ಹಿರಿಯ ಸದಸ್ಯರಾಗಿದ್ದಾರೆ.

ವಯೊಲಿನ್, ಕೊಳಲು, ಸರೋದ್, ತಬಲಾ, ಸಿತಾರ್, ಮೃದಂಗ, ಭಪಂಗ್, ದಿಲ್‌ರುಬಾ, ಜಲತರಂಗ್ ಬಳಕೆಯಾಗಲಿರುವ ಪ್ರಮುಖ ಸಂಗೀತ ವಾದ್ಯಗಳಾಗಿವೆ.

ಭೋಜನಕೂಟದ ಹಿನ್ನೆಲೆಯಲ್ಲಿ ಸಂಗೀತ ಕಾರ್ಯಕ್ರಮ ನಡೆಯಲಿದೆ. ದೇಶದ ವಿವಿಧ ರಾಜ್ಯಗಳ ಕಲಾವಿದರು, ಆಯಾ ನೆಲದ ಶ್ರೀಮಂತ ಸಂಗೀತ ಪರಂಪರೆಯ ಪರಿಚಯ ಮಾಡಿಕೊಡುವರು.

ಹಿಂದೂಸ್ತಾನಿ, ಕರ್ನಾಟಕ, ಜನಪದ, ಭಜನೆ ಒಳಗೊಂಡು ಎಲ್ಲ ಪ್ರಕಾರದ ಸಂಗೀತವು ಇರಲಿದೆ. ಅಲ್ಲದೆ, ಸಂಗೀತದ ಅಪರೂಪದ ವಾದ್ಯಗಳ ಪ್ರದರ್ಶನವು ಇರಲಿದೆ.

ಗಣ್ಯರಿಗೆ ಭೂರಿಭೋಜನ

ನವದೆಹಲಿ: ಶೃಂಗಸಭೆ ನಡೆಯುವ ಭಾರತ್ ಮಂಟಪದಲ್ಲಿ ವಿಶ್ವದ ನಾಯಕರಿಗೆ ವಿಶೇಷವಾಗಿ ತಯಾರಿಸಿದ, ಮಳೆಗಾಲದ ಭಾರತೀಯ ಆಹಾರ ಖಾದ್ಯಗಳು, ವಿವಿಧ ಬಗೆಯ ಸಿಹಿ ಭಕ್ಷ್ಯಗಳನ್ನು ಉಣಬಡಿಸಲಾಗುತ್ತಿದೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಶನಿವಾರ ಆಯೋಜಿಸಿರುವ ಔತಣಕೂಟದಲ್ಲಿಯೂ ಅತಿಥಿ ಗಣ್ಯರಿಗೆ ಭೂರಿಭೋಜನ ವ್ಯವಸ್ಥೆ ಮಾಡಲಾಗಿದೆ.

'ಶೃಂಗಸಭೆಯ ಔಪಚಾರಿಕ ಔತಣಕೂಟದಲ್ಲಿ ವಿಶೇಷವಾಗಿ ಈ ಸಂದರ್ಭಕ್ಕಾಗಿ ತಯಾರಿಸಿದ ಚಿನ್ನ, ಬೆಳ್ಳಿ ಲೇಪಿತ ಕಟ್ಲರಿಗಳಲ್ಲಿ ಆಹಾರ ಉಣ ಬಡಿಸಲಾಗುತ್ತದೆ. ಭಾರತದಲ್ಲಿ ಮಳೆಗಾಲದಲ್ಲಿ ಹೆಚ್ಚಾಗಿ ಸೇವಿಸುವ ಆಹಾರ ಭಕ್ಷ್ಯಗಳನ್ನು ಗಮನದಲ್ಲಿರಿಸಿಕೊಂಡು ವಿಶೇಷ ವಿಧಾನದಲ್ಲಿ ಆಹಾರ ಮೆನು ಸಿದ್ಧಪಡಿಸಿದ್ದೇವೆ. ಸಿರಿಧಾನ್ಯ ಆಧಾರಿತ ಭಕ್ಷ್ಯಗಳೂ ಈ ಮೆನುವಿನಲ್ಲಿ ಇರುತ್ತವೆ' ಎಂದು ಮೂಲಗಳು ತಿಳಿಸಿದೆ.

ಸಭೆಯ ಮೊದಲ ದಿನದ ಕೊನೆಯಲ್ಲಿ ಭಾರತ ಮಂಟಪದಲ್ಲಿ ರಾಷ್ಟ್ರಪತಿ ಅವರು ಗಣ್ಯರಿಗೆ ನೀಡಲಿರುವ ಭೂರಿಭೋಜನದ ಔತಣಕೂಟದಲ್ಲೂ ಎಂದೂ ಮರೆಯದಂತಹ ರುಚಿಕರವಾದ ಬಗೆಬಗೆಯ ಭಾರತೀಯ ಆಹಾರಗಳು ಇರಲಿವೆ. ಗುಲಾಬ್ ಜಾಮೂನ್, ರಸಮಲೈ, ಜಿಲೇಬಿಯಂತಹ ತರಹೇವಾರಿ ಸಿಹಿ ತಿನಿಸುಗಳನ್ನು ಬಡಿಸಲು ಯೋಜಿಸಲಾಗಿದೆ ಎಂದು ಅತಿಥಿ ಸತ್ಕಾರಕ್ಕೆ ನಿಯೋಜಿತವಾಗಿರುವ ಸಿಬ್ಬಂದಿ ತಿಳಿಸಿದರು.

ಜಿ20: ಸಹಮತದ ವಿಶ್ವಾಸ

ಒಂದನೇ ಪುಟದಿಂದ

'ನವದೆಹಲಿ ಘೋಷಣೆ ಕುರಿತ ಒಮ್ಮತಕ್ಕೆ ರಷ್ಯಾ–ಉಕ್ರೇನ್ ಬಿಕ್ಕಟ್ಟು ಅಡ್ಡಿಯಾಗಿದೆಯೇ' ಎಂಬ ಸುದ್ದಿಗಾರರ ಪ್ರಶ್ನೆಗೆ, 'ಈ ಘೋಷಣೆ ಬಗ್ಗೆ ಜಿ20ರ ಎಲ್ಲ ಸದಸ್ಯ ರಾಷ್ಟ್ರಗಳಿಂದ ಒಮ್ಮತ ಮೂಡುವುದು ಹಾಗೂ ಅಧಿಕೃತ ಪ್ರಕಟಣೆ ಹೊರಬೀಳುವ ಬಗ್ಗೆ ಭಾರತ ವಿಶ್ವಾಸ ಹೊಂದಿದೆ' ಎಂದು ವಿದೇಶಾಂಗ ಕಾರ್ಯದರ್ಶಿ ವಿನಯಮೋಹನ್ ಕ್ವಾತ್ರಾ ಪ್ರತಿಕ್ರಿಯಿಸಿದ್ದಾರೆ.

ರಷ್ಯಾ–ಉಕ್ರೇನ್ ಬಿಕ್ಕಟ್ಟಿನ ಪ್ರಸ್ತಾಪ: ಭಾರತವು ಜಿ20ರ ಅಧ್ಯಕ್ಷ ಸ್ಥಾನ ವಹಿಸಿಕೊಂಡಾಗಿನಿಂದಲೂ ರಷ್ಯಾ–ಉಕ್ರೇನ್ ನಡುವಿನ ಬಿಕ್ಕಟ್ಟು ಪ್ರಸ್ತಾಪಗೊಳ್ಳುತ್ತಲೇ ಇದೆ. ಆದರೆ, ಭಾರತವು ಈ ವಿಷಯಕ್ಕೆ ಮಹತ್ವ ಕೊಡದೇ, 'ಸುಸ್ಥಿರ ಅಭಿವೃದ್ಧಿ ಗುರಿ'ಗಳನ್ನು (ಎಸ್‌ಡಿಜಿ) ಸಾಧಿಸುವ ಕುರಿತು ಹೆಚ್ಚು ಒತ್ತು ನೀಡುತ್ತಾ ಬಂದಿದೆ.

'ನವದೆಹಲಿ ಘೋಷಣೆಗೆ ಸಂಬಂಧಿಸಿ ಒಮ್ಮತ ಮೂಡಲಿದೆಯೇ ಎಂಬುದನ್ನು ಊಹಿಸುವುದು ಕಷ್ಟ. ಆದರೆ, ಈ ನಿಟ್ಟಿನಲ್ಲಿ ಭಾರತದ ಪ್ರಯತ್ನಗಳಿಗೆ ಆಯೋಗ ಬೆಂಬಲ ನೀಡುವುದು' ಎಂದು ಐರೋಪ್ಯ ಆಯೋಗದ ಅಧ್ಯಕ್ಷ ಚಾರ್ಲ್ಸ್ ಮಿಷೆಲ್ ಅಭಿಪ್ರಾಯಪಟ್ಟಿದ್ದಾರೆ.

ರಷ್ಯಾ–ಉಕ್ರೇನ್ ಬಿಕ್ಕಟ್ಟು ವಿಚಾರವಾಗಿ 'ನವದೆಹಲಿ ಘೋಷಣೆ'ಯಲ್ಲಿ ಸಂಪೂರ್ಣ ಒಮ್ಮತ ಮೂಡಿಸುವುದು ಸವಾಲಿನದು' ಎಂದು ಅಮೆರಿಕದ ರಾಷ್ಟ್ರೀಯ ಭದ್ರತಾ ಸಲಹೆಗಾರ ಜೇಕ್ ಸಲಿವೆನ್ ಹೇಳಿದ್ದಾರೆ.

ಬಹುಭಾಷೆ, ವರ್ಣದಲ್ಲಿ ಸ್ವಾಗತ ಫಲಕ

ನವದೆಹಲಿ (ಪಿಟಿಐ): ಜರ್ಮನ್ ಭಾಷೆಯಲ್ಲಿ 'ವಿಲ್ಕೊಮೆನ್', ಫ್ರೆಂಚ್ ಭಾಷೆಯಲ್ಲಿ 'ಬೀನ್‌ವೆನ್ಯೂ', ಇಂಗ್ಲಿಷ್‌ನಲ್ಲಿ 'ವೆಲ್‌ಕಂ' ಹಾಗೂ ಹಿಂದಿಯಲ್ಲಿ 'ಸ್ವಾಗತ್'...

ಜಿ20 ಶೃಂಗಸಭೆಯಲ್ಲಿ ಭಾಗವಹಿಸುವ 20 ಸದಸ್ಯ ರಾಷ್ಟ್ರಗಳು, ಆಹ್ವಾನಿತ ರಾಷ್ಟ್ರಗಳ ಅಧಿಕೃತ ಭಾಷೆಗಳಲ್ಲೇ 'ಸ್ವಾಗತ' ಎಂದು ಬರೆಯಲಾದ ಬೃಹತ್ ಫಲಕ ರಾರಾಜಿಸುತ್ತಿದೆ. ಭಾರತ ಮಂಟಪ ಸಂಕೀರ್ಣದ ಹಾಲ್ ಸಂಖ್ಯೆ 14ರ ಬಳಿ ಇದನ್ನು ಅಳವಡಿಸಲಾಗಿದೆ. ಬಹು ಭಾಷೆ ಮತ್ತು ಬಹು ವರ್ಣಗಳಲ್ಲಿ ಬರೆಯಲಾದ ಫಲಕ, ಸ್ವಾಗತಿಸುವ ಸಂದರ್ಭಕ್ಕೆ ಆಕರ್ಷಕ ಹಿನ್ನೋಟವನ್ನು ಒದಗಿಸಿದೆ. ಜಿ20 ಮುಖ್ಯ ಸಮನ್ವಯಕಾರ ಹರ್ಷವರ್ಧನ್ ಶ್ರಿಂಘ್ಲಾ, ಆಹ್ವಾನಿತ ರಾಷ್ಟ್ರಗಳ ಅತಿಥಿಗಳಿಗೆ ಕಲ್ಪಿಸುವ ಸೌಲಭ್ಯ ಪರಿಚಯವನ್ನು ವಿಡಿಯೊದಲ್ಲಿ ನೀಡಿದ್ದಾರೆ.

ಉಕ್ರೇನ್–ರಷ್ಯಾ ನಡುವೆ ಶಾಂತಿಯ ಭರವಸೆ ತಕ್ಷಣಕ್ಕಿಲ್ಲ: ವಿಶ್ವಸಂಸ್ಥೆ

ನವದೆಹಲಿ (ಪಿಟಿಐ): 'ಸಂಘರ್ಷಪೀಡಿತ ಉಕ್ರೇನ್ ಮತ್ತು ರಷ್ಯಾ ನಡುವೆ ಶಾಂತಿ ಪರಿಹಾರದ ಭರವಸೆಯು ತಕ್ಷಣದಲ್ಲಿ ಗೋಚರಿಸುತ್ತಿಲ್ಲ' ಎಂದು ವಿಶ್ವಸಂಸ್ಥೆಯ ಮಹಾ ಪ್ರಧಾನ ಕಾರ್ಯದರ್ಶಿ ಆಂಟೋನಿಯೊ ಗುಟೆರಸ್ ಅವರು ಶುಕ್ರವಾರ ಹೇಳಿದ್ದಾರೆ. ಶೃಂಗಸಭೆಯ ಹಿನ್ನೆಲೆಯಲ್ಲಿ ಇಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಎರಡೂ ದೇಶಗಳು ಸದ್ಯಕ್ಕೆ ಸಂಘರ್ಷವನ್ನು ಕೊನೆಗೊಳಿಸುವ ಲಕ್ಷಣಗಳು ಕಾಣುತ್ತಿಲ್ಲ' ಎಂದರು.

ಔತಣಕೂಟಕ್ಕೆ ದೇವೇಗೌಡ, ಮನಮೋಹನ್ ಸಿಂಗ್ ಗೈರು

ಶೃಂಗಸಭೆ ಹಿನ್ನೆಲೆಯಲ್ಲಿ ಜಾಗತಿಕ ನಾಯಕರಿಗಾಗಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಶನಿವಾರ ಆಯೋಜಿಸಿರುವ ಔತಣಕೂಟದಲ್ಲಿ ಮಾಜಿ ಪ್ರಧಾನಿಗಳಾದ ಮನ ಮೋಹನ್ ಸಿಂಗ್, ಎಚ್.ಡಿ.ದೇವೇಗೌಡ ಪಾಲ್ಗೊಳ್ಳುತ್ತಿಲ್ಲ.

ಆರೋಗ್ಯ ಸಮಸ್ಯೆಯಿಂದಾಗಿ ಈ ಇಬ್ಬರು ಮಾಜಿ ಪ್ರಧಾನಿಗಳು ಔತಣಕೂಟದಲ್ಲಿ ಭಾಗಿಯಾಗುತ್ತಿಲ್ಲ ಎಂದು ಮೂಲಗಳು ಹೇಳಿವೆ.

ಜಿ20 ಶೃಂಗಸಭೆಗೆ ಯಶಸ್ಸು ಕೋರಿ ದೇವೇಗೌಡ ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್, ಪಂಜಾಬ್ ಮುಖ್ಯಮಂತ್ರಿ ಭಗವಂತ್ ಸಿಂಗ್ ಮಾನ್, ಹಿಮಾಚಲ ಪ್ರದೇಶ ಮುಖ್ಯಮಂತ್ರಿ ಸುಖ್ವಿಂದರ್ ಸಿಂಗ್ ಸುಖ್ಖು, ಬಿಹಾರ ಮುಖ್ಯಮಂತ್ರಿ ನಿತೀಶ್‌ಕುಮಾರ್ ಪಾಲ್ಗೊಳ್ಳುವರು. ಛತ್ತೀಸಗಢ ಮತ್ತು ರಾಜಸ್ಥಾನ ಮುಖ್ಯಮಂತ್ರಿಗಳು ಪಾಲ್ಗೊಳ್ಳುವುದು ಖಚಿತವಾಗಿಲ್ಲ. ಕರ್ನಾಟಕ ಮುಖ್ಯಮಂತ್ರಿ ಸಿದ್ದರಾಮಯ್ಯ ಪಾಲ್ಗೊಳ್ಳುತ್ತಿಲ್ಲ ಎಂದು ಅವರ ಆಪ್ತ ಮೂಲಗಳು ಹೇಳಿವೆ.

ಖರ್ಗೆಗೆ ನೀಡದ ಆಹ್ವಾನ: ರಾಹುಲ್ ಕಿಡಿ

